
ಲಂಕೇಶ್

ಜನವರಿ 28, 2009 ರೂ. 12/-



ರಹಸ್ಯ ದಾಖಲೆ ಪತ್ರ

ಮಾಲೆಗಾಂವ್-ಹುಬ್ಬಳ್ಳಿ ಬಾಂಬ್

ಬಿಜೆಪಿ ದುಡ್ಡು ಮುತಾಲಿಕ್ ಕೈ

ದಗ: ಮೋನ್ನಾ ಅಂದರ್ ಬಾಹರ್



ವಿದ್ಯಾರ್ಥಿಗಳಿಗೆ ಲಿಂಬಾವಳಿಯ ವಿಷಬೀಜ

IMA ಹಗರಣ

ಮಂಡ್ಯ ವಂಚಕ ವೈದ್ಯ ಸಿದ್ದೇಗೌಡ



ಸ್ಲಂ ಡಾಗ್ ಮಿಲಿಯನೇರ್

ಬೆಂಕಿಯಲ್ಲಿ ಅರಳಿದ ಹೂವು

ಮೋದಿ ದೇಶದ ಪ್ರಧಾನಿಯಾದರೆ?

ಗುಜರಾತ್ ಹತ್ಯಾಕಾಂಡ ನಡೆಯುತ್ತಿದ್ದಂತೆಯೇ 'ನಮ್ಮ ರಾಜ್ಯವನ್ನು ಗುಜರಾತ್ ಮಾಡುತ್ತೇವೆ' ಎಂದು ರಾಜಸ್ಥಾನದ ಬಿಜೆಪಿ ನಾಯಕ, ಉಪ ರಾಷ್ಟ್ರಪತಿ ಹಾಗೂ ಈಗ ಪ್ರಧಾನಿ ಹುದ್ದೆಗೆ ಹಾತೊರೆಯುತ್ತಿರುವ ಭೈರೋನ್ ಸಿಂಗ್ ಶೇಖಾವತ್ ಅರ್ಭಟಿಸಿದ್ದರು. ರೈತರಿಗೆ ಕನಿಷ್ಠ ಗೊಬ್ಬರ ಕೊಡಲಾಗದೇ ಗುಂಡೇಟು ಕೊಡುತ್ತಿರುವ ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರೂ 'ಕರ್ನಾಟಕವನ್ನು ಗುಜರಾತ್ ಮಾಡುತ್ತೇನೆ' ಎಂದು ಹೂಂಕರಿಸಿದ್ದರು. ಹೀಗೆ ಬೇರೆ ಬೇರೆ ರಾಜ್ಯಗಳಲ್ಲಿರುವ ಬಿಜೆಪಿಗರು ಗುಜರಾತನ್ನು ಒಂದು ಮಾದರಿಯನ್ನಾಗಿ, ಮೋದಿಯನ್ನು ಆದರ್ಶ ಮುಖ್ಯಮಂತ್ರಿಯಾಗಿ ಹಾಡಿಹೊಗಳುತ್ತಿರುವುದು ನಡೆದೇ ಇದೆ. ಈಗ ಅವರೆಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವ ದೇಶದ ಅತಿದೊಡ್ಡ ಉದ್ಯಮಿಗಳು 'ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿಯೇ ಭಾರತದ ಮುಂದಿನ ಪ್ರಧಾನಿಯಾಗಬೇಕು' ಎಂಬ ದೊಡ್ಡ ಲಾಬಿಯನ್ನು ಶುರು ಮಾಡಿಕೊಂಡಿದ್ದಾರೆ. ಮೊನ್ನೆ ಜನವರಿ 13ರಂದು ಅಹ್ಮದಾಬಾದಿನಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಅನಿಲ್ ಅಂಬಾನಿ, ಭಾರತಿ ಮಿತ್ತಲ್, ರತನ್ ಟಾಟಾ ಮತ್ತಿತರ ಘಟಾನುಘಟಿ ಉದ್ಯಮಿಗಳು ಮೋದಿಯೇ ಭಾರತದ



ಮೋದಿ ಮತ್ತು ಟಾಟಾ

ಪ್ರಧಾನಿಯಾಗಬೇಕೆಂದೂ, ಮೋದಿಯ ನೇತೃತ್ವದಲ್ಲಿಯೇ ಭಾರತ ಬಲಿಷ್ಠ ಕೈಗಾರಿಕಾ ಶಕ್ತಿಯಾಗಲಿದೆಯೆಂದೂ ಆಗ್ರಹಿಸಿದ್ದಾರೆ. "ಮೋದಿ ತನ್ನ ಆಯಸ್ಕಾಂತದಂತಹ ವ್ಯಕ್ತಿತ್ವದಿಂದ ಹಲವಾರು ಕಂಪನಿಗಳನ್ನು ಗುಜರಾತ್‌ನೆಡೆಗೆ ಸೆಳೆದುಕೊಂಡಿದ್ದಾರೆ.... ಸಿಇಓ ಆಗಿ ಕೇವಲ ಉದ್ಯಮ ವಲಯವನ್ನು ಮಾತ್ರವಲ್ಲ, ಇಡೀ ದೇಶವನ್ನೇ ಮುನ್ನಡೆಸುವ ಶಕ್ತಿ ಇರುವುದು ನರೇಂದ್ರ ಮೋದಿಗೆ ಮಾತ್ರ..." ಎಂದೆಲ್ಲಾ ಒಬ್ಬರಾದ ಮೇಲೊಬ್ಬರಂತೆ ಮೋದಿಯನ್ನು ಹೊಗಳಿ ಅಟ್ಟಕ್ಕೇರಿಸಿದ್ದಾರೆ.

ಕೇವಲ ಮೂರು ದಿನಗಳಲ್ಲಿ ಮೂರು ಸಾವಿರ ಮುಸ್ಲಿಮರನ್ನು ಮಕ್ಕಳು ಮರಿಗಳೆನ್ನದೇ ಹಾದಿಬೀದಿಯಲ್ಲಿ ಸುಟ್ಟು ಹಾಕಿದ ಮೋದಿಯಂಥ ನರಹಂತಕನೊಬ್ಬ ಬಿಜೆಪಿ ನಾಯಕರಿಗೆ, ಸಂಘಪರಿವಾರದ ರಕ್ತಪಿಪಾಸುಗಳಿಗೆ ಮಾದರಿಯಾಗುತ್ತಾನೆಂದರೆ ಅದರಲ್ಲೇನು ಆಶ್ಚರ್ಯವಿಲ್ಲ. ಆದರೆ, ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೂ ಮೋದಿಯ ಮೇಲೆ ಇಷ್ಟೊಂದು ಪ್ರೀತಿ ಬರುತ್ತದೆಂದರೆ? ಅದರಲ್ಲೂ ಆಶ್ಚರ್ಯಪಡುವಂಥದ್ದೇನಿಲ್ಲ. ಮೋದಿ ಸಂಘಪರಿವಾರದ ನಂಜುಕಾರಕ ಹಿಂದೂತ್ವ ಸಿದ್ಧಾಂತಕ್ಕೆಷ್ಟು ಸೇವೆ ಸಲ್ಲಿಸುತ್ತಿದ್ದಾನೋ ಅಷ್ಟೇ ಸೇವೆಯನ್ನು ಈ ದೇಶದ ದೊಡ್ಡ ಉದ್ಯಮಪತಿಗಳಿಗೂ ಸಲ್ಲಿಸುತ್ತಿದ್ದಾನೆ. ಮೋದಿ ಕೇವಲ ಗುಜರಾತ್ ಮುಖ್ಯಮಂತ್ರಿಯಾಗಿದ್ದರೆ ಆತನ ಸೇವೆಯನ್ನು ಕೇವಲ ಗುಜರಾತ್‌ನಲ್ಲಿ ಮಾತ್ರವೇ ಮಾಡಿಸಿಕೊಳ್ಳಬೇಕಾಗುತ್ತದೆ. ಅದೇ ಆತ ದೇಶದ ಪ್ರಧಾನಿಯಾಗಿಬಿಟ್ಟರೆ ಇಡೀ ಇಂಡಿಯಾದಲ್ಲಿ ಎಲ್ಲಿ ಬೇಕೋ ಅಲ್ಲಿ ಮೋದಿಯ ಸೇವೆಯನ್ನು ಪಡೆದುಕೊಳ್ಳಬಹುದಲ್ಲವೆ? ಈ ಆಸೆಯೇ ಈ ಉದ್ಯಮಪತಿಗಳನ್ನೆಲ್ಲಾ ಹುರಿದುಂಬಿಸಿದೆ. ಆದ್ದರಿಂದಲೇ ಮೋದಿ ದೇಶದ ಪ್ರಧಾನಿಯಾಗಬೇಕೆಂದು ಅವರೆಲ್ಲ ದೊಡ್ಡ ಲಾಬಿ ಶುರು ಮಾಡಿಕೊಂಡಿದ್ದಾರೆ.

ಮೋದಿ ದೊಡ್ಡ ದೊಡ್ಡ ಉದ್ಯಮಪತಿಗಳಿಗೆ ಹೇಗೆ ಸೇವೆ ಸಲ್ಲಿಸುತ್ತಿದ್ದಾನೆಂಬುದಕ್ಕೆ ಆತ ರತನ್ ಟಾಟಾನ ನ್ಯಾನೋ ಕಾರು ಘಟಕವನ್ನು ಗುಜರಾತ್‌ಗೆ ತಂದುಕೊಂಡ ರೀತಿಯೇ ಇತ್ತೀಚಿನ ಒಂದು ಉಜ್ವಲ ಉದಾಹರಣೆ. ರತನ್ ಟಾಟಾನ ಒಂದು ಲಕ್ಷ ರೂಪಾಯಿ ಅಗ್ಗದ ಕಾರು ಉತ್ಪಾದನಾ ಘಟಕವನ್ನು ಪಶ್ಚಿಮ ಬಂಗಾಳದ ರೈತರು ಒದ್ದು ಓಡಿಸಿದ ಮೇಲೆ ಅದನ್ನು ತಮ್ಮ ರಾಜ್ಯದಲ್ಲಿ ಸ್ಥಾಪಿಸಬೇಕೆಂದು ರೇಸಿಗೆ ಬಿದ್ದಿದ್ದ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳಲ್ಲಿ ಕರ್ನಾಟಕದ ಯಡಿಯೂರಪ್ಪ ಮತ್ತು ಗುಜರಾತ್‌ನ ನರೇಂದ್ರ ಮೋದಿ ಮುಂಚೂಣಿಯಲ್ಲಿದ್ದರು. ಟಾಟಾ ಕೂಡ ಯಾರು ಹೆಚ್ಚು ಪುಕ್ಕಟೆ ಸೌಲಭ್ಯಗಳನ್ನು ಕೊಡುತ್ತಾರೋ, ಯಾರು ಕಡಿಮೆ ಟ್ಯಾಕ್ಸ್ ವಿಧಿಸುತ್ತಾರೋ, ಯಾರು ಅತಿಹೆಚ್ಚು ವಿನಾಯ್ತಿಗಳನ್ನು ಕೊಡುತ್ತಾರೋ ಅಂತವರ ಬಳಿ ಹೋಗಲು ಕಾಯುತ್ತಿದ್ದ. ಕೊನೆಗೆ ನರೇಂದ್ರ ಮೋದಿ ಕೊಟ್ಟ ವಿನಾಯ್ತಿಗಳ ಸುರಿಮಳೆಯಿಂದ ಸಂತುಷ್ಟನಾಗಿ ಗುಜರಾತ್‌ಗೆ ತನ್ನ ಕಾರು ಘಟಕವನ್ನು ಸ್ಥಳಾಂತರಿಸಲು ಒಪ್ಪಿಕೊಂಡ.

ಮೊದಲನೆಯದಾಗಿ, ಗುಜರಾತ್‌ನಲ್ಲಿರುವ ತೆರಿಗೆ ನಿಯಮದ ಪ್ರಕಾರ ಟಾಟಾನ ಪ್ರತೀ ನ್ಯಾನೋ ಕಾರಿಗೆ ಹದಿನೈದು ಸಾವಿರ ರೂಪಾಯಿ ತೆರಿಗೆ ವಿಧಿಸಬೇಕಾಗುತ್ತದೆ. ಈ ಪ್ರಕಾರ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಟಾಟಾ ಕಮ್ಮಿಯೆಂದರೂ ಏಳೂವರೆ ಸಾವಿರ ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಬೇಕಿತ್ತು, ಅದನ್ನೆಲ್ಲಾ ನರೇಂದ್ರ ಮೋದಿ ಮಾಫಿ ಮಾಡಿದ್ದಾರೆ! ಎರಡನೆಯದಾಗಿ, ಮೋದಿ ಶೇ. 0.1 ರ ಬಡ್ಡಿದರಲ್ಲಿ ಟಾಟಾನಿಗೆ ಒಂಭತ್ತೂವರೆ ಸಾವಿರ ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟಿದ್ದಾರೆ. ಇದನ್ನು ಟಾಟಾ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಕಟ್ಟಿದರೆ ಸಾಕಂತೆ! ಮೂರನೆಯದಾಗಿ, ಮೋದಿ 400 ಕೋಟಿ ಮೌಲ್ಯದ 1,100 ಎಕರೆ ಭೂಮಿಯನ್ನು ಕೊಟ್ಟಿದ್ದಾನೆ. ಪಶುಸಂಗೋಪನಾ ಕೇಂದ್ರ ಸ್ಥಾಪನೆಗೆ ಮೀಸಲಾಗಿರಿಸಿದ್ದ ಆನಂದ್ ಕೃಷಿ ವಿಶ್ವವಿದ್ಯಾಲಯದ ಈ ಭೂಮಿ ಕಿತ್ತುಕೊಳ್ಳುವುದಕ್ಕೆ ಕನಿಷ್ಠ ಚರ್ಚೆಯನ್ನೂ ಮೋದಿ ಮಾಡಲಿಲ್ಲ, ಟಾಟಾ ಈ ಭೂಮಿಯ ಹಣವನ್ನು ಒಮ್ಮೆಗೆ ಕಟ್ಟಬೇಕಿಲ್ಲ! ಈ ಭೂಮಿ ವರ್ಗಾವಣೆಯಿಂದ ಟಾಟಾ ಸರ್ಕಾರಕ್ಕೆ ಸಲ್ಲಿಸಬೇಕಿದ್ದ ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕದಿಂದಲೂ ವಿನಾಯ್ತಿ ನೀಡಲಾಗಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಟಾಟಾನ ಈ ನ್ಯಾನೋ ಕಾರು ಘಟಕ ಯೋಜನೆಯ ಒಟ್ಟು ಮೊತ್ತ 2200 ಕೋಟಿ ರೂಪಾಯಿಯಾದರೆ ನರೇಂದ್ರ ಮೋದಿ ಟಾಟಾನಿಗೆ ಕೊಟ್ಟ ವಿನಾಯ್ತಿಗಳ ಮೊತ್ತ 31 ಸಾವಿರ ಕೋಟಿ! ಅಂದರೆ, ಟಾಟಾನಿಂದ ಸರ್ಕಾರಕ್ಕೆ ಬರಬೇಕಾಗಿದ್ದ (ಅರ್ಥಾತ್ ಜನರಿಗೆ ಸಲ್ಲಬೇಕಾಗಿದ್ದ) 31 ಸಾವಿರ ಕೋಟಿ ದುಡ್ಡನ್ನು ಪುಕ್ಕಟೆಯಾಗಿ ಬಿಟ್ಟುಕೊಟ್ಟ.

ನರೇಂದ್ರ ಮೋದಿ ಕೈಗಾರಿಕೋದ್ಯಮಿಗಳಿಗೆ ಈ ಪಾಟಿ ಸೇವೆ ಸಲ್ಲಿಸುತ್ತಾನೆಂದರೆ ಅವರೆಲ್ಲಾ ಮೋದಿಯನ್ನು ಮೆಚ್ಚಿಕೊಳ್ಳದಿರುತ್ತಾರೆಯೆ? ಮೋದಿಯೇ ಮುಂದಿನ ಪ್ರಧಾನಿಯಾಗಬೇಕೆಂದು ಒತ್ತಾಯಿಸದಿರುತ್ತಾರೆಯೆ? ಗುಜರಾತ್ ಮುಖ್ಯಮಂತ್ರಿಯಾಗಿ ರಾಜ್ಯದ ಸಂಪತ್ತನ್ನೆಲ್ಲಾ ಕೈಗಾರಿಕೋದ್ಯಮಿಗಳ ಪಾದಾರವಿಂದಗಳಿಗೆ ಅರ್ಪಿಸುತ್ತಿರುವ ಮೋದಿ ದೇಶದ ಪ್ರಧಾನಿಯಾದರೆ ಇಡೀ ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯಬಹುದೆಂಬ ಆಶೆ ಅವರಿಗೂ ಇರುತ್ತದಲ್ಲವೆ?

ದೇಶದ ವಿವಿಧ ರಾಜ್ಯಗಳಿಗೆ ಹೋಲಿಸಿದರೆ ಗುಜರಾತ್‌ನಲ್ಲಿ ಕೈಗಾರಿಕೆಗಳು ಹೆಚ್ಚು ಇರುವುದು ವಾಸ್ತವ. ಅಂದ ಮಾತ್ರಕ್ಕೆ ಅದು ಅಭಿವೃದ್ಧಿಗೊಂಡ ರಾಜ್ಯವೆಂದಾಗಲೀ, ಅಲ್ಲಿರುವ ಜನ ಉಳಿದ ರಾಜ್ಯಗಳಿಗಿಂತ ಸಾಪೇಕ್ಷವಾಗಿ ಉತ್ತಮ ಸ್ಥಿತಿಯಲ್ಲಿದ್ದಾರೆಂದಾಗಲೀ ಅಲ್ಲ, ಕೈಗಾರಿಕೆಗಳು ಹೆಚ್ಚಾಗಿರುವುದು ಕೈಗಾರಿಕೋಧ್ಯಮಿಗಳ ಸಂಪತ್ತನ್ನು ವೃದ್ಧಿಸಿದೆಯೇ ಹೊರತು ಜನಸಾಮಾನ್ಯರ ಬದುಕನ್ನಲ್ಲ, ರಾಜಧಾನಿ ಗಾಂಧಿನಗರವನ್ನು ಹೊರತುಪಡಿಸಿದರೆ ಗುಜರಾತ್‌ನ ಸೂರತ್, ಅಹ್ಮದಾಬಾದ್, ಬರೋಡಗಳಂಥ ಪ್ರಮುಖ ನಗರಗಳಿಗೆ ಒಮ್ಮೆ ಹೋಗಿ ಬಂದರೆ ಸಾಕು ಗುಜರಾತ್ ಅಭಿವೃದ್ಧಿಯ ದಿಗ್ದರ್ಶನವಾಗುತ್ತದೆ. ಗುಜರಾತಿನ ಗುಂಡಿಬಿದ್ದ ರಸ್ತೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಓಡಾಡುವ, ಯಾವುದೋ ಮ್ಯೂಸಿಯಂ ನಲ್ಲಿರಬೇಕಾಗಿದ್ದ ಬಸ್ಸುಗಳಲ್ಲಿ ಒಮ್ಮೆ ಪ್ರಯಾಣಿಸಿದರೆ ಸಾಕು ಗುಜರಾತ್‌ನ ಅಭಿವೃದ್ಧಿಯ ಅಂತರಾಳ ಅರ್ಥವಾಗುತ್ತದೆ. ಸೂರತ್‌ನ ಟೆಕ್ಸ್‌ಟೈಲ್ ಮಗ್ಗಗಳಲ್ಲಿ ದಿನಕ್ಕೆ ಹದಿನಾಲ್ಕು ಗಂಟೆ ದುಡಿಯುವ ಆಂಧ್ರದ, ಒರಿಸ್ಸಾದ ಕಾರ್ಮಿಕರ ಗುಡಿಸಲುಗಳಿಗೆ ಒಮ್ಮೆ ಹೋಗಿ ಬಂದರೆ ಮೋದಿ ನೇತೃತ್ವದ ಗುಜರಾತ್ ಕಾರ್ಮಿಕರಿಗೇನು ಕೊಟ್ಟಿದೆ ಎಂಬುದು ಗೊತ್ತಾಗುತ್ತದೆ.

ಇತ್ತೀಚಿನ ಅಧ್ಯಯನವೊಂದರ ಪ್ರಕಾರ ಇಡೀ ದೇಶದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಮಕ್ಕಳಲ್ಲಿ ಶೇ.66.66ರಷ್ಟು ಮಕ್ಕಳು ಒಂದನೇ ತರಗತಿಯ ಪುಸ್ತಕವನ್ನು ಓದಬಲ್ಲಷ್ಟು ಸಮರ್ಥರಾಗಿದ್ದಾರೆ. ಆದರೆ, ಗುಜರಾತ್‌ನಲ್ಲಿ ಇದರ ಪ್ರಮಾಣ ಕೇವಲ ಶೇ.59.66ರಷ್ಟು ಮಾತ್ರ ಇದೆ. International Food Policy Research Institute ನ ವರದಿಯ ಪ್ರಕಾರ 2008ರ ವಿಶ್ವ ಹಸಿವು ಕೋಷ್ಟಕದಲ್ಲಿ (Global Hunger Index) ಗುಜರಾತ್‌ಗೆ 69ನೇ ಸ್ಥಾನ ಸಿಕ್ಕಿದ್ದು ಇಲ್ಲಿ ಆಹಾರಕ್ಕಾಗಿ ದಂಗೆಗಳಾಗುವ ಸಂಭವವಿದೆ ಎಂಬ ಎಚ್ಚರಿಕೆ ನೀಡಿದೆ.

ಮೋದಿ ನೇತೃತ್ವದ ಗುಜರಾತ್‌ನಲ್ಲಿ ಪ್ರಜಾತಂತ್ರ, ಜಾತ್ಯತೀತತೆ, ಸೌಹಾರ್ದತೆ, ಸಹಬಾಳ್ವೆಗಳಂಥ ಮೌಲ್ಯಗಳಂತೂ ಮಣ್ಣುಪಾಲಾಗಿ ಹೋಗಿವೆ. ಅಲ್ಪಸಂಖ್ಯಾತರಂತೂ ನಿತ್ಯ ಆತಂಕದ ಕ್ಷಣಗಳಲ್ಲಿ ಬದುಕಬೇಕಾದ ಸ್ಥಿತಿಯಿದೆ. ಮೋದಿ ದೇಶದ ಪ್ರಧಾನಿಯಾದರೆ ಈ ಪರಿಸ್ಥಿತಿ ಕೇವಲ ಗುಜರಾತ್‌ನದ್ದಾಗಿ ಮಾತ್ರ ಉಳಿಯುವುದಿಲ್ಲ, ಇಡೀ ದೇಶದ್ದಾಗಿ ಪರಿವರ್ತನೆಯಾಗುತ್ತದಷ್ಟೆ. ಅದೇ ಹೊತ್ತಿನಲ್ಲಿ ಗುಜರಾತಿನಾದ್ಯಂತ ದೊಡ್ಡ ದೊಡ್ಡ ಉದ್ಯಮಗಳನ್ನು ಸ್ಥಾಪಿಸಿ ಕಾರ್ಮಿಕರ, ಜನರ ರಕ್ತಹೀರಿ ಕೊಬ್ಬಿರುವ ದೈತ್ಯ ಬಂಡವಾಳಿಗರು ಇಡೀ ದೇಶದ ಜನರ ರಕ್ತಹೀರುವ ಜಿಗಣೆಗಳಾಗುತ್ತಾರೆ. ■

ಸುತ್ತ ಮುತ್ತ

ಕುಮಾರ್ ಬುರಡಿಕಟ್ಟಿ



ಸೋಮಾಲಿಯದಿಂದ ಕಾಲ್ಕಿತ್ತ ಇಥಿಯೋಪಿಯ

ಕಳೆದೆರಡು ವರ್ಷಗಳಿಂದ ಸೋಮಾಲಿಯದ ಪ್ರಮುಖ ಭಾಗಗಳನ್ನು ಆಕ್ರಮಿಸಿಕೊಂಡಿದ್ದ ಇಥಿಯೋಪಿಯದ ಸಶಸ್ತ್ರ ಪಡೆಗಳು ಇದೇ ಜನವರಿ 13ರಿಂದ ಕಾಲ್ಕೀಯಲಾರಂಭಿಸಿವೆ. ಕಳೆದ ಹತ್ತಾರು ವರ್ಷಗಳಿಂದ ಕಿತ್ತು ತಿನ್ನುವ ಬಡತನ ಮತ್ತು ಯುದ್ಧಗಳಿಂದ ಜರ್ಝರಿತವಾಗಿರುವ ಆಫ್ರಿಕಾದ ಪುಟ್ಟ ದೇಶ ಸೋಮಾಲಿಯದಿಂದ ನೆರೆಯ ರಾಷ್ಟ್ರ ಇಥಿಯೋಪಿಯದ ಪಡೆಗಳು ವಾಪಾಸ್ಸು ಹೋಗಲಾರಂಭಿಸಿರುವುದರಿಂದ ಸೋಮಾಲಿಯನ್ನರಲ್ಲಿ ಒಂದು ರೀತಿಯ ಸಂತೋಷದ ವಾತಾವರಣ ಕಂಡುಬರುತ್ತಿದೆಯಾದರೂ ಸೋಮಾಲಿಯದ ವಿವಿಧ ಗುಂಪುಗಳ ನಡುವೆ ಅಧಿಕಾರಕ್ಕಾಗಿ ಮತ್ತೊಂದು ಅಂತರ್ಯುದ್ಧ ಪ್ರಾರಂಭವಾಗಬಹುದೆಂಬ ಆತಂಕವೂ ಇನ್ನೊಂದೆಡೆ ಮನೆ ಮಾಡಿದೆ.

ಇಥಿಯೋಪಿಯಾದ ಪಡೆಗಳು ಸೋಮಾಲಿಯಾದಿಂದ ಕಾಲ್ತೆಗೆಯುತ್ತಿರುವಂತೆ ಇದೇ ಜನವರಿ 26ರಂದು ಹೊಸ ನಾಯಕನನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಸೋಮಾಲಿಯ ಸಿದ್ಧವಾಗುತ್ತಿದೆ. ದೇಶದಲ್ಲಿ ಸುಭದ್ರತೆಯನ್ನು ಕಾಪಾಡುವಲ್ಲಿ ವಿಫಲರಾದ ಅಧ್ಯಕ್ಷ ಅಬ್ದುಲ್ಲಾ ಯೂಸೂಫ್ ಅವರು ಕಳೆದ ತಿಂಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರಿಂದ ಈಗ ಹೊಸ ನಾಯಕನ ಆಯ್ಕೆಯ ಪ್ರಕ್ರಿಯೆ ಪ್ರಾರಂಭವಾಗಿದೆ.

ಮೂಲಭೂತವಾಗಿ ಒಂದು ಇಸ್ಲಾಮಿಕ್ ದೇಶವಾದ ಸೋಮಾಲಿಯ ಅಂತರ್ಯುದ್ಧದಿಂದ ಝರ್ಝರಿತವಾದದ್ದು ನಿಜ. ಒಂದೆಡೆ ಮುಖ್ಯವಾಹಿನಿಯಲ್ಲಿರುವ ಸೌಮ್ಯವಾದಿ ನಾಯಕತ್ವ ಇನ್ನೊಂದೆಡೆ ಅಲ್-ಸಹಾಬ್ ಸಂಘಟನೆಯಂಥ ಕಟ್ಟರ್ ಇಸ್ಲಾಮಿಕ್ ನಾಯಕತ್ವಗಳ ನಡುವೆ ದಶಕಗಳಿಂದ ಅಧಿಕಾರಕ್ಕಾಗಿ ಕಿತ್ತಾಟಗಳು ನಡೆಯುತ್ತಿದೆ. ಅಲ್-ಸಹಾಬ್ ಸಂಘಟನೆ ತನ್ನದೇ ಆದ ಸಶಸ್ತ್ರ ಪಡೆಗಳನ್ನು ಹೊಂದಿರುವುದರಿಂದ ಅಮೆರಿಕ ಅದನ್ನು ಕಳೆದ ವರ್ಷ ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿದೆ. ಸೋಮಾಲಿಯದ ನೆರೆಯ ರಾಷ್ಟ್ರವಾದ ಇಥಿಯೋಪಿಯದಲ್ಲೂ ಅಲ್-ಸಹಾಬ್ ಸಂಘಟನೆಗೆ ಉತ್ತಮ ನೆಲೆಯಿರುವುದರಿಂದ ಅಮೆರಿಕದ ಬೆಂಬಲದೊಂದಿಗೆ ಆ ಸಂಘಟನೆಯನ್ನು ಮೂಲೋತ್ಪಾಟನೆ ಮಾಡುವುದಕ್ಕೆ ಇಥಿಯೋಪಿಯ ಪ್ರಯತ್ನಿಸುತ್ತಿದೆ.

ಸೋಮಾಲಿಯದಲ್ಲಿ ಅಲ್-ಸಹಾಬ್ ಸಂಘಟನೆಯನ್ನೂ ಒಳಗೊಂಡಂತೆ ಕಟ್ಟರ್ ಮತ್ತು ಸೌಮ್ಯವಾದಿ ಇಸ್ಲಾಮಿಕ್ ಗುಂಪುಗಳೆಲ್ಲವೂ ಸೇರಿಕೊಂಡು ರಚಿಸಿಕೊಂಡಿದ್ದ Union of Islamic Courts (UIC) ಎಂಬ ಮೈತ್ರಿಕೂಟವು 2006ರ ಜೂನ್‌ಲ್ಲಿ ಸೋಮಾಲಿಯದಲ್ಲಿ ಅಧಿಕಾರಕ್ಕೇರಿತ್ತು, UIC ಅಧಿಕಾರಕ್ಕೇರುತ್ತಿದ್ದಂತೆಯೇ ಅಮೆರಿಕವು UICಗೆ ಭಯೋತ್ಪಾಕ ಸಂಘಟನೆಗಳೊಂದಿಗೆ ಸಂಪರ್ಕವಿದೆ ಎಂದು ಆರೋಪಿಸಿತು. ಇದಾದ ಆರೇ ತಿಂಗಳಲ್ಲಿ ಅಮೆರಿಕವು ಸೋಮಾಲಿಯದ ಇಥಿಯೋಪಿಯವನ್ನು ಮೇಲೆ ಛೂ ಬಿಟ್ಟಿತು. ಇಥಿಯೋಪಿಯದ ಪಡೆಗಳು UIC ಯನ್ನು ಅಧಿ ಕಾರದಿಂದ ಕಿತ್ತೆಸೆಯುವಲ್ಲಿ ಯಶಸ್ವಿಯಾದವು. ನಂತರದಲ್ಲಿ UIC ಯು ಅನೇಕ ಗುಂಪುಗಳಾಗಿ ಒಡೆದುಹೋಯಿತು. 'ಸೌಮ್ಯವಾದಿ' ಎನ್ನಿಸಿಕೊಂಡ ವರು ವಿಶ್ವಸಂಸ್ಥೆ ನೇತೃತ್ವದ ಶಾಂತಿ ಮಾತುಕತೆಗಳಲ್ಲಿ ಸಕ್ರಿಯವಾಗಿ ಭಾಗವಹಿಸ ಲಾರಂಭಿಸಿದರೆ ಅಲ್-ಸಹಾಬ್‌ನಂತಹ ಮಿಲಿಟೆಂಟ್ ಗುಂಪುಗಳು ಇಥಿಯೋಪಿಯನ್ ಆಕ್ರಮಣಕಾರರನ್ನು ದೇಶದಿಂದ ಓಡಿಸುವುದಕ್ಕಾಗಿ ಸಶಸ್ತ್ರ ಸಂಘರ್ಷಕ್ಕಿಳಿದವು.



ಎರಡು ವರ್ಷಗಳ ಈ ಸಂಘರ್ಷದಿಂದಾಗಿ ಹದಿಮೂರು ಲಕ್ಷ ಸೋಮಾಲಿಯನ್ನರು ನಿರಾಶ್ರಿತರಾಗಿದ್ದಾರೆ ಎಂದೂ, ಸುಮಾರು 32 ಲಕ್ಷ ಜನಕ್ಕೆ (ಅಂದರೆ, ಸೋಮಾಲಿಯದ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗ) ಅವಶ್ಯ ತುರ್ತು ಸೌಲಭ್ಯಗಳನ್ನು ಒದಗಿಸುವ ಅವಶ್ಯಕತೆಯಿದೆ ಎಂದೂ ಖುದ್ದು ವಿಶ್ವಸಂಸ್ಥೆಯೇ ಹೇಳಿದೆ.

ಈಗ ಇಥಿಯೋಪಿಯನ್ ಪಡೆಗಳು ಸೋಮಾಲಿಯದಿಂದ ಕಾಲ್ಕಿತ್ತಿರುವುದರಿಂದ ಅಲ್-ಸಹಾಬ್ ಮತ್ತು ಸೌಮ್ಯವಾದಿ ನಾಯಕತ್ವಗಳ ನಡುವೆ ಅಧಿಕಾರಕ್ಕಾಗಿ ಅಂತರ್ಯುದ್ಧ ನಡೆಯುವ ಸಂಭವವಿದೆ. ಇಥಿಯೋಪಿಯನ್ ಪಡೆಗಳೊಂದಿಗೆ ಶಸ್ತ್ರಸಜ್ಜಿತವಾಗಿ ಹೋರಾಡಿದ ಅಲ್-ಸಹಾಬ್‌ಗೆ ಇಡಿ ಸೋಮಾಲಿಯಾದಾದ್ಯಂತ ಭಾರಿ ಜನಬೆಂಬಲವಿದೆ. ಹಾಗಾಗಿ, ಅದೇ ಸೋಮಾಲಿಯಾದಲ್ಲಿ ಅಧಿಕಾರಕ್ಕೇರುವ ಸಂಭವವಿದೆ. ಅತ್ತ ಇಥಿಯೋಪಿಯದ ಪ್ರಧಾನಮಂತ್ರಿ ಮೇಲ್ಸ್ ಜೆನಾವಿಯವರು "ಸೋಮಾಲಿಯಲ್ಲಿ ಅಲ್-ಸಹಾಬ್ ಬಲಿಷ್ಠಗೊಂಡರೆ ಮತ್ತೆ ತಮ್ಮ ಸಶಸ್ತ್ರ ಪಡೆಗಳನ್ನು ಕಳಿಸಿಕೊಡುತ್ತೇವೆ" ಎಂದು ಬೆದರಿಕೆಯೊಡ್ಡಿದ್ದಾರೆ. ಇದರರ್ಥವಿಷ್ಟೇ ಅಲ್-ಸಹಾಬ್ ಬಲಿಷ್ಠಗೊಂಡಿರುವುದೂ ನಿಜ, ಅದು ಅಧಿಕಾರಕ್ಕೇರುವ ಸಂಭವವಿರುವುದೂ



ನಿಜ. ಅಂತೆಯೇ ಮುಂದೊಂದು ದಿನ ಇಥಿಯೋಪಿಯ ಮತ್ತೆ ಸೋಮಾಲಿಯದ ಮೇಲೆ ಆಕ್ರಮಣ ಮಾಡುವುದೂ ನಿಜ. ಇದು ಇಲ್ಲಿಗೆ ನಿಲ್ಲುವ ಕತೆಯಲ್ಲ.

ಸೋಮಾಲಿಯದಲ್ಲಿ ಅಧಿಕಾರಕ್ಕಾಗಿ ಸದಾ ಅಂತರ್ಯುದ್ಧ ನಡೆಯುತ್ತಿದೆ ಎಂಬ ಕಾರಣಕ್ಕಾಗಿಯೋ ಅಥವಾ ಮಿಲಿಟೆಂಟ್ ಸಂಘಟನೆಗಳನ್ನು ಹತ್ತಿಕ್ಕಬೇಕೆಂಬ ನೆಪವೊಡ್ಡಿಯೋ ಇಥಿಯೋಪಿಯದಂಥ ಹೊರಗಿನ ದೇಶ ಅಮೆರಿಕದ ಬೆಂಬಲದೊಂದಿಗೆ ಅದರ ಮೇಲೆ ಆಕ್ರಮಣ ಮಾಡುವುದು, ಅದರ ಆಂತರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಸರಿಯಲ್ಲ. ಸೋಮಾಲಿಯದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿರುವ ಅಂತರ್ಯುದ್ಧ ಅದರ ಆಂತರಿಕ ವ್ಯವಹಾರ. ಅದನ್ನವರು ಯಾವುದೋ ರೀತಿಯಲ್ಲಿ ಬಗೆಹರಿಸಿಕೊಳ್ಳುತ್ತಾರೆ. ಅದನ್ನು ಬಗೆಹರಿಸುವುದಕ್ಕೆ ಸೋಮಾಲಿಯ ಬರುವ ಅವಶ್ಯಕತೆಯಿಲ್ಲ. ■

ರಂಜಿಸಿ|ಬೋಧಿಸಿ|ಪ್ರಚೋದಿಸಿ
ಲಂಕೇಶ್

ರೇಷ್ಮೆ ಸೀರೆ ನೇಕಾರನ ದುರಂತ ಬದುಕು



ಕಂಡಹಾಗೆ

■ ಗೌರಿ ಲಂಕೇಶ್

ಕಂಚಿ ರೇಷ್ಮೆ ಸೀರೆ. ದಟ್ಟ ಬಣ್ಣಗಳ, ಹೊಳೆಯುವ ಅಂಚಿನ, ಸುಂದರ ಚಿಹ್ನೆಗಳ ಸೆರಗಿನ ಕಂಚಿ ಸೀರೆ. ಮಹಿಳೆಯೂ ತನ್ನ ಬದುಕಿನ ಮುಖ್ಯ ಮತ್ತು ...ೋಷದ ಸಂದರ್ಭಗಳಲ್ಲಿ ಉಡಬೇಕೆಂದು ಬಯಸುವ, ...ಬರಾರು ರೂಪಾಯಿ ಬೆಲೆ ಬಾಳುವ ರೇಷ್ಮೆ ಸೀರೆ. ಆದರೆ ಇಂತಹ ಸುಂದರ ಸೀರೆಗಳನ್ನು ಹಲವು ...ಗಳುಗಳ ಕಾಲ ತಾಳ್ಮೆಯಿಂದ ಸೃಷ್ಟಿಸುವ, ತನ್ನ ಎಲ್ಲಾ ...ತ್ಮಕತೆಯನ್ನು ಆ ಸೀರೆಯಲ್ಲಿ ಬಿಂಬಿಸುವ, ಸೂರ್ಯನ ...ಿನಿಂದ ಹಿಡಿದು, ಸಮುದ್ರದ ನೀಲಿಯನ್ನು, ನವಿಲು, ... ಕುದುರೆ, ಇತರೆ ಪ್ರಾಣಿಪಕ್ಷಿಗಳ ಚಿತ್ರಗಳನ್ನು ...ವಿದನಂತೆ ಆ ಸೀರೆಯ ಅಂಚಿನಲ್ಲಿ, ಸೆರಗಿನಲ್ಲಿ ಸೆರೆಹಿಡಿ...ವ, ಸಾವಿರಾರು ರೂಪಾಯಿಗಳ ವಸ್ತುವನ್ನು ತಯಾರಿಸಿ ಕೇವಲ ನೂರೋ, ನೂರೈವತ್ತೋ ರೂಪಾಯಿಗಳನ್ನು ...ಯುವ ನೇಕಾರನಿದ್ದಾನಲ್ಲ... ಆತನ ಬದುಕು ...ಿರಬಹುದು?

...ನನ್ನಮ್ಮ ಇಂದಿರಾ 'ಮಯೂರ್ ಶಿಲ್ಪ' ಎಂಬ ... ಅಂಗಡಿ ನಡೆಸುತ್ತಿದ್ದಾಗ ರೇಷ್ಮೆ ಸೀರೆಗಳನ್ನು ...ೀದಿಸಲು ಆಕೆಯೊಂದಿಗೆ ಹಲವಾರು ಬಾರಿ ಕಂಚೀಪು...ಗೆ ಹೋಗಿದ್ದೇನೆ. ನೂರಾರು ವರ್ಷಗಳಿಂದ ತನ್ನ ...ಷ್ಮೆ ಸೀರೆಗೆ ಪ್ರಸಿದ್ಧವಾಗಿರುವ ಕಂಚೀಪುರಂ ಡಾಂಬರನ್ನೇ ...ಡದ, ಚಿಕ್ಕಪುಟ್ಟ ರಸ್ತೆಗಳನ್ನು ಹೊಂದಿರುವ ಗ್ರಾಮದಂತಹ ...ಣ. ಅಲ್ಲಿನ ಸಾಹುಕಾರರ ಮನೆಗಳಲ್ಲಿ, ದೊಡ್ಡ ...ಂಗಡಿಗಳಲ್ಲಿ ಈ ಬೆಲೆಬಾಳುವ ಸೀರೆಗಳು ಮಾರಾಟವಾಗು...ರೆ, ಅದೇ ಪಟ್ಟಣದ ಸಂದಿಗಳಲ್ಲಿ ಸಾವಿರಾರು ನೇಕಾರ ...ುಟುಂಬಗಳು ತಮ್ಮ ಮನೆಯಲ್ಲಿನ ಮಗ್ಗದಲ್ಲೇ ಈ ...ದರ ಸೀರೆಗಳನ್ನು ನೇಯುತ್ತಿರುತ್ತಾರೆ. ಕರ್ನಾಟಕದಿಂದ ...ರಾಜಾಗುವ ರೇಷ್ಮೆ ನೂಲು, ಗುಜರಾತಿನಿಂದ ಬರುವ ... ಇವೆರಡನ್ನು ಬಳಸಿ ಇಲ್ಲಿನ ಒಂದು ಲಕ್ಷಕ್ಕೂ ...ನ ಮಗ್ಗಗಳಲ್ಲಿ ಈ ಸೀರೆಗಳು ಸೃಷ್ಟಿಯಾಗುತ್ತವೆ. ...ದು ಅಂದಾಜಿನ ಪ್ರಕಾರ ಈ ಪಟ್ಟಣದ ರೇಷ್ಮೆ ಸೀರೆ ...ವಾಟು ವಾರ್ಷಿಕ 200 ಕೋಟಿ ರೂಪಾಯಿನದ್ದು. ...ರೆ ಇದನ್ನು ನೇಯುವ ಕುಟುಂಬದ ತಿಂಗಳ ಸರಾಸರಿ ...ಾಯ ಎರಡು ಸಾವಿರವನ್ನೂ ದಾಟುವುದಿಲ್ಲ.

... ಇಂತಹ ನೇಕಾರರ ಬದುಕನ್ನೇ ಆಧರಿಸಿ ಪ್ರಿಯದರ್ಶನ್ ...ುವವರು 'ಕಾಂಜೀವರಂ' ಎಂಬ ತಮಿಳು ಚಿತ್ರವನ್ನು ...ೇಶಿಸಿದ್ದಾರೆ. ಈ ಚಿತ್ರವನ್ನು ಇತ್ತೀಚಿಗಿನ ಗೋವಾ ...ತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ನೋಡಿದ ನನ್ನ ...ಿ ಬೇಬಿ (ಕವಿತಾ) ಅವಕಾಶ ಸಿಕ್ಕರೆ ನಾನು ಅದನ್ನು ...ೋಡಲೇಬೇಕೆಂದು ತಾಕೀತು ಮಾಡಿದ್ದಳು.

... ಈಗ ಬೆಂಗಳೂರಿನಲ್ಲಿ ನಡೆಯುತ್ತಿರುವ ಅಂತರ...ಷ್ಟ್ರೀಯ ಚಿತ್ರೋತ್ಸವದ ಅಂಗವಾಗಿ ಕಳೆದ ಶುಕ್ರವಾರ ...ಜೀವರಂ' ಚಿತ್ರದ ಪ್ರದರ್ಶನವಿತ್ತು, ಅಂದು ಚಿತ್ರದಲ್ಲಿ ...ಿರುವ ನನ್ನ ಬಹುಕಾಲದ ಮಿತ್ರ ಪ್ರಕಾಶ್ ರೈ ...ದ ಬಂದಿದ್ದ. ಇದು ಎಷ್ಟು ಅದ್ಭುತ ಚಿತ್ರವೆಂದರೆ ...ಸ್ಸಾತ್ ಅದನ್ನು ನೋಡುವ ಅವಕಾಶ ಸಿಕ್ಕರೆ ಖಂಡಿತ ...ಯೂ ನೋಡಿ.

1940ರ ದಶಕದಲ್ಲಿ ನಡೆಯುವ ಈ ಕತೆಯ ನಾಯಕ ...ಗಾಡಂ (ಪ್ರಕಾಶ್ ರೈ). ಈತ ಕಂಜೀವುರದಲ್ಲಿನ ಬಡ ...ಕಾರ ಕುಟುಂಬಕ್ಕೆ ಸೇರಿರುವ ನೇಕಾರ. ತಾನು ...ದುವೆಯಾದಾಗ ತನ್ನ ಪತ್ನಿಗೆ ರೇಷ್ಮೆ ಸೀರೆ ಉಡಿಸುತ್ತೇ...ದು ಹೇಳಿದ್ದ ವೆಂಗಾಡಂಗೆ ಅದು ಸಾಧ್ಯವಾಗದೆ ...ಯನ್ನು ಕಾಟನ್ ಸೀರೆಯಲ್ಲೇ ತನ್ನ ಮನೆಗೆ ಕರೆದುಕೊಂಡು ...ತ್ತಾನೆ. ಅದನ್ನು ನೋಡಿ ಊರಿನ ಮಂದಿ ವೆಂಗಾಡಂನ ...ತ್ಸಾಕಾಂಕ್ಷೆಯನ್ನು ಜರಿಯುತ್ತಾರೆ.

...ಷ್ಮೆ ಸೀರೆಗಳನ್ನು ನೇಯುವ ...ಗಾಡಂನ ತಂದೆ ತೀರಿಕೊಂಡಾಗ ...ನ ಅಂತ್ಯಸಂಸ್ಕಾರಕ್ಕೆ ಒಂದು ತುಂಡು ...ಷ್ಮೆ ಬಟ್ಟೆಯೂ, ಮನೆಯಲ್ಲಿರುವು... ಆಗ ರೇಷ್ಮೆ ದಾರವನ್ನು ಶವದ ...ನ ಬೆರಳಿಗೆ ಕಟ್ಟಿ ಅಂತ್ಯಸಂಸ್ಕಾರ...ನ್ನು ಮುಗಿಸುತ್ತಾರೆ.



ವೆಂಗಾಡಂನ ಪತ್ನಿ ಹೆಣ್ಣುಮಗುವಿಗೆ ಜನ್ಮ ನೀಡುತ್ತಾಳೆ. ಮಗುವಿನ ನಾಮಕರಣದ ದಿನದಂದು ಸಂಪ್ರದಾಯದಂತೆ ತಂದೆ ಮಗುವಿನ ಕಿವಿಯಲ್ಲಿ ಭರವಸೆಯೊಂದನ್ನು ಹೇಳಬೇಕು. ಆಗ ವೆಂಗಾಡಂ "ನಿನ್ನ ಮದುವೆಯನ್ನು ರೇಷ್ಮೆ ಸೀರೆಯೊಂದಿಗೆ ನಡೆಸಿಕೊಡುತ್ತೇನೆ" ಎಂದು ತನ್ನ ಕೂಸಿಗೆ ಹೇಳುತ್ತಾನೆ. ಬಡತನದ ಬೇಗೆಯಲ್ಲೇ ಬಸವಳಿವ ನೇಕಾರ ತಂದೆಯೋರ್ವ ಇಂತಹ ಅಸಾಧ್ಯವಾದ ಭರವಸೆಯನ್ನು ನೀಡುವುದೆಂದರೇನೆಂದು ಆತ ಹೆಂಡತಿ ಮತ್ತು ಕುಟುಂಬದವರು ಬೇಸರಪಡುತ್ತಾರೆ. "ನಮ್ಮ ಕೈಲಾಗದ ಭರವಸೆಯನ್ನು ಕೂಸಿಗೆ ಯಾಕೆ ನೀಡಿದೆ?" ಎಂದು ಹೆಂಡತಿ ಕೇಳುತ್ತಾಳೆ. ಆಗ ವೆಂಗಾಡಂ ತನ್ನ ಜೀವನದುದ್ದಕ್ಕೂ ಸಂಗ್ರಹಿಸಿರುವ ಹಣವನ್ನು ತೋರಿಸಿ "ಇಷ್ಟರಲ್ಲಿ ನಿನಗೆ ರೇಷ್ಮೆ ಸೀರೆ ಕೊಡಿಸಲಾಗಲಿಲ್ಲ, ಆದರೆ ನಾವು ಇನ್ನಷ್ಟು ಹಣವನ್ನು ಉಳಿಸಿದರೆ ಮಗಳ ಮದುವೆ ಹೊತ್ತಿಗೆ ಸಾಧ್ಯವಾಗುತ್ತದೆ" ಎನ್ನುತ್ತಾನೆ.

ಆದರೆ ಬಡವರ ಬದುಕು ಎಂದಾದರೂ ಅವರು ಆಶಿಸಿದಂತೆ, ಯೋಚಿಸಿದಂತೆ ನಡೆಯುತ್ತದೆಯೇ? ವೆಂಗಾಡಂನ ತಂಗಿಯ ಗಂಡ ವ್ಯಾಪಾರದಲ್ಲಿ ನಷ್ಟ ಅನುಭವಿಸಿ ತನ್ನ ಹೆಂಡತಿಯನ್ನು ತವರುಮನೆಯಲ್ಲೇ ಬಿಡುವುದಾಗಿ ಬೆದರಿಸುತ್ತಾನೆ. ತಂಗಿಯ ಬದುಕು ನಾಶವಾಗದಿರಲಿ ಎಂದು ವೆಂಗಾಡಂ ತನ್ನ ಮಗಳ ರೇಷ್ಮೆ ಸೀರೆಗೆಂದು ಉಳಿತಾಯ ಮಾಡಿದ್ದ ಹಣವನ್ನೆಲ್ಲ ಆತನಿಗೆ ಕೊಡುತ್ತಾನೆ.

ನೇಕಾರರಿಗೆ ಸೀರೆ ನೇಯಲು ನೂಲು ಕೊಟ್ಟರೆ ಅವರು ನೂಲನ್ನೇ ಕದಿಯುತ್ತಾರೆಂದು ಮಗ್ಗದ ಮಾಲೀಕರು ನೇಯುವ ಮಗ್ಗಗಳನ್ನು ಊರಿನ ದೇವಸ್ಥಾನದ ಆವರಣಕ್ಕೆ ವರ್ಗಾಯಿಸುತ್ತಾರೆ. ಇನ್ನು ಮುಂದೆ ನೇಕಾರರೆಲ್ಲರೂ ದೇವಸ್ಥಾನಕ್ಕೆ ಬಂದು ನೇಯಬೇಕೆಂದು ತಾಕೀತು ಮಾಡುತ್ತಾರೆ.

ಬೆಳೆಯುತ್ತಿರುವ ಮಗಳಿಗೆ ಹೇಗಾದರೂ ಮಾಡಿ ರೇಷ್ಮೆ ಸೀರೆಯನ್ನು ಸಿದ್ಧಪಡಿಸಬೇಕೆಂದು ನಿರ್ಧರಿಸುವ ವೆಂಗಾಡಂ ಗುಟ್ಟಾಗಿ ತನ್ನ ಮನೆಯ ಹಿತ್ತಲಿನಲ್ಲಿರುವ ಕೊಟ್ಟಿಗೆಯಲ್ಲಿ ಮಗ್ಗವೊಂದನ್ನು ನಿರ್ಮಿಸುತ್ತಾನೆ. ಪ್ರತಿದಿನ ತನಗೆ ನೀಡಿರುವ ನೂಲಿನ ಒಂದು ಪುಟ್ಟ ರೀಲನ್ನು ಬಾಯಲ್ಲಿ ತುರುಕಿಕೊಂಡು ಅದನ್ನು ಕದ್ದು ಮನೆಗೆ ತಂದು ಯಾರಿಗೂ ಗೊತ್ತಾಗದಂತೆ ಸೀರೆ ನೇಯಲು ಪ್ರಾರಂಭಿಸುತ್ತಾನೆ. ಹೀಗೆ ನಿಷ್ಠೆಯಿಂದ ಜೀವನ ಸಾಗಿಸುತ್ತಿದ್ದ ವ್ಯಕ್ತಿಯೊಬ್ಬ ಅಸಹಾಯಕತೆಯಿಂದ ಕಳ್ಳತನಕ್ಕೆ ಇಳಿಯುತ್ತಾನೆ.

ಒಂದು ದಿನ ಊರಲೆಲ್ಲ ಸಂಭ್ರಮ. ಕಾರಣ ಮಗ್ಗದ ಮಾಲೀಕ ಯಾರೂ ಕಂಡರಿಯದ ಪ್ರಥಮ ಮೋಟಾರ್ ಕಾರ್ ತಂದಿದ್ದಾನೆ. ಅದನ್ನು ನೋಡಲು ನೂಕುನುಗ್ಗಲು. ನುಗ್ಗಲಿನಲ್ಲಿ ವೆಂಗಾಡಂ ಪತ್ನಿ ಗಾಯಗೊಂಡು ಸಾವಿನ ಹೊಸ್ತಿಲಿನಲ್ಲಿ ನಿಲ್ಲುತ್ತಾಳೆ. ಆಕೆ ಕಣ್ಣುಮುಚ್ಚುವ ಮುನ್ನ ತಮ್ಮ ಮಗಳಿಗೆ ತಾನು ಸೀರೆ ನೇಯುತ್ತಿರುವ ಮಗ್ಗವನ್ನು ತೋರಿಸುತ್ತಾನೆ.

ಒಂದು ದಿನ ಕಾಂಜೀವರಂಗೆ ಅಪರಿಚಿತ ವ್ಯಕ್ತಿಯೊಬ್ಬ ಬರುತ್ತಾನೆ. ತಾನು ಬರಹಗಾರನೆಂದು ಹೇಳಿಕೊಳ್ಳುವ ಆತ ಉಳಿದುಕೊಳ್ಳಲು ಬಡ ನೇಕಾರರ ಕುಟುಂಬದಲ್ಲಿ ವೆಂಗಾಡಂ ಅವಕಾಶ ಕಲ್ಪಿಸಿಕೊಡುತ್ತಾನೆ. ಆದರೆ ವಾಸ್ತವದಲ್ಲಿ ಆ ಅಪರಿಚಿತ ಕಮ್ಯುನಿಸ್ಟ್ ಪಕ್ಷದವನಾಗಿರುತ್ತಾನೆ. ನೇಕಾರರ ಮೇಲೆ ಮಾಲೀಕರು ಮಾಡುತ್ತಿರುವ ದೌರ್ಜನ್ಯದ ಬಗ್ಗೆ ಆತ ಅವರಲ್ಲಿ ಅರಿವು ಮೂಡಿಸುತ್ತಾನೆ; ಅವರಲ್ಲಿ ಪ್ರತಿಭಟಿಸುವ ಕಿಚ್ಚನ್ನು ಹತ್ತಿಸುತ್ತಾನೆ. ಆದರೆ ಆತನ ಸುಳಿವು ಸಿಕ್ಕಿ ಪೊಲೀಸರು ಒಂದು ದಿನ ಊರಿಗೆ ಬಂದು ಆತನನ್ನು ಕೊಲ್ಲುತ್ತಾರೆ.

ಆದರೆ ಅಷ್ಟೊತ್ತಿಗಾಗಲೇ ತಮ್ಮ ಹಕ್ಕುಗಳಿಗಾಗಿ ಪ್ರಶ್ನಿಸುವ ದಿಟ್ಟತನವು ನೇಕಾರರಲ್ಲಿ ಬೆಳೆದಿದೆ. ಅವರೆಲ್ಲ ಒಂದು ಪತ್ರ ಬರೆದುಕೊಂಡು ತಮ್ಮ ವೇತನವನ್ನು ಹೆಚ್ಚಿಸಬೇಕೆಂದು ವಯಸ್ಸಾಗಿರುವ ನೇಕಾರರಿಗೆ ಮನೆಯಲ್ಲಿ ನೇಯುವ ಅವಕಾಶ ನೀಡಬೇಕೆಂದು, ಇಂತಹದ್ದೆ ಚಿಕ್ಕಪುಟ್ಟ ಬೇಡಿಕೆಗಳನ್ನು ಮಾಲೀಕರ ಮುಂದಿಡುತ್ತಾರೆ. ಆದರೆ ಧಿಮಾಕಿನ ಮಾಲೀಕ ಅವರ ಅಹವಾಲು ಪತ್ರವನ್ನು ಹರಿದು ವೆಂಗಾಡಂನ ಮುಖಕ್ಕೆ ಎಸೆದು ಹೊರಟು ಹೋಗುತ್ತಾನೆ.

ಕೆಲದಿನಗಳ ನಂತರ ದೊಡ್ಡ ಆರ್ಡರ್ ಒಂದು ಮಾಲೀಕನಿಗೆ ಸಿಗುತ್ತದೆ. ಈಗ ತಮ್ಮ ಬೇಡಿಕೆಗಳನ್ನು ಮತ್ತೆ ಮಂಡಿಸಲು ಸೂಕ್ತ ಸಮಯವೆಂದು ಅವರೆಲ್ಲ ವೆಂಗಾಡಂ ನೇತೃತ್ವದಲ್ಲಿ ಪ್ರಯತ್ನಿಸುತ್ತಾರೆ.

ಆಗಲೂ ಮಾಲೀಕನಿನಂದ ಅದೇ ಪ್ರತಿಕ್ರಿಯೆ ಬಂದಾಗ ಅವರೆಲ್ಲ ಕೆಲಸಕ್ಕೆ ಗೈರುಹಾಜರಾಗುವ ಮೂಲಕ ಪ್ರತಿಭಟನೆಗೆ ಇಳಿಯುತ್ತಾರೆ. ಇದರಿಂದ ಕ್ರುದ್ಧನಾದ ಮಾಲೀಕ ಮೈಸೂರಿನಿಂದ ನೇಕಾರರನ್ನು ಕರೆಸುವುದಾಗಿ ಬೆದರಿಸಿದಾಗ ಅವರೆಲ್ಲ ಮಗ್ಗಗಳ ಕಾಲು ಕೀಲಿಗಳನ್ನೇ ಕಿತ್ತುಹಾಕಿ ತಮ್ಮ ಪ್ರತಿಭಟನೆಯನ್ನು ಮುಂದುವರೆಸುತ್ತಾರೆ.

ಈ ಮಧ್ಯೆ ವೆಂಗಾಡಂನ ಪುತ್ರಿ ಮತ್ತು ಆತನ ಆಪ್ತ ಸ್ನೇಹಿತನ ಪುತ್ರನ ನಡುವೆ ಪ್ರೇಮಾಂಕುರವಾಗುತ್ತದೆ. ಏನೇ ಆದರೂ ತನ್ನ ಪುತ್ರನಿಗೆ ನೇಕಾರ ವೃತ್ತಿಯಿಂದ ಬಿಡುಗಡೆ ಸಿಗಬೇಕೆಂದು ವೆಂಗಾಡಂ ಸ್ನೇಹಿತ ತನ್ನ ಮಗನಿಗೆ ವಿದ್ಯಾಭ್ಯಾಸ ನೀಡಿರುತ್ತಾನೆ. ಸೈನ್ಯವನ್ನು ಸೇರಿರುವ ಆ ಯುವಕ ಕೆಲದಿನಗಳ ರಜೆಯ ಮೇಲೆ ಊರಿಗೆ ಬರುತ್ತಾನೆ. ಆತ ಸೈನ್ಯಕ್ಕೆ ಹಿಂದಿರುಗಿದರೆ ಮತ್ತೆ ಊರಿಗೆ ವಾಪಸ್ಸು ಬರುವುದು ಎಂದೋ, ಆದ್ದರಿಂದ ಕೂಡಲೇ ಅವರಿಬ್ಬರ ನಡುವೆ ಮದುವೆ ಏರ್ಪಡಿಸುವುದೆಂದು ಹಿರಿಯರು ನಿರ್ಧರಿಸುತ್ತಾರೆ. ಆಗ ನಿಶ್ಚಿತಾರ್ಥ ನಡೆದು ಮಗಳೊಂದಿಗೆ ಏನು ಕೊಡುತ್ತೀಯ ಎಂದು ಸ್ನೇಹಿತ ವೆಂಗಾಡಂನನ್ನು ಪ್ರಶ್ನಿಸುತ್ತಾನೆ. "ರೇಷ್ಮೆ ಸೀರೆ" ಎಂದು ವೆಂಗಾಡಂ ಹೇಳಿದಾಗ "ಕೈಲಾಗದ್ದನ್ನು ಏಕೆ ಹೇಳ್ತಿಯಾ ಬೇರೆ ಹೇಳು" ಎಂದು ಎಲ್ಲರೂ ವೆಂಗಾಡಂನನ್ನು ಅಣಕಿಸುತ್ತಾರೆ. ಆದರೆ ಆತ ಮತ್ತೆ ಅದನ್ನೇ ಹೇಳುತ್ತಾನೆ.

ನೇಕಾರರ ಪ್ರತಿಭಟನೆಗೆ ಮಣಿಯುವ ಮಾಲೀಕ ಅವರ ವೇತನವನ್ನು ಸ್ವಲ್ಪ ಹೆಚ್ಚಿಸುವುದಾಗಿಯೂ, ಅವರೆಲ್ಲ ಕೆಲಸಕ್ಕೆ ಬರಬೇಕೆಂದೂ ಹೇಳಿ ಕಳುಹಿಸುತ್ತಾನೆ. ಆದರೆ ಅದಕ್ಕೆ ಒಪ್ಪದ ವೆಂಗಾಡಂ ನೇತೃತ್ವದ ನೇಕಾರರು ತಮ್ಮ



ಪ್ರತಿಭಟನೆಯನ್ನು ಮುಂದುವರೆಸುತ್ತಾರೆ. ಒಂದೆರಡು ದಿನ, ಹೆಚ್ಚೆಂದರೆ ಒಂದು ವಾರದೊಳಗೆ ಎಲ್ಲಾ ಇತ್ಯರ್ಥವಾಗುತ್ತದೆ ಎಂದು ಭಾವಿಸಿದ್ದರೆ ಪ್ರತಿಭಟನೆ ಮೂರು ತಿಂಗಳ ಕಾಲ ಮುಂದುವರೆಯುತ್ತದೆ. ಮೊದಲೇ ಬಡ ಸಮುದಾಯ. ಈಗ ಪ್ರತಿಭಟನೆಯಿಂದಾಗಿ ಆದಾಯವೂ ಇಲ್ಲದೆ ಅದೆಷ್ಟೋ ಮನೆಗಳಲ್ಲಿ ಹಸಿವು ತಾಂಡವವಾಡುತ್ತಿದೆ. ಕೆಲ ಜನ ಸಾವಿಗೂ ಈಡಾಗುತ್ತಾರೆ. ಆದರೂ ತಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸಲೇಬೇಕೆಂಬ ನಿಲುವನ್ನು ವೆಂಗಾಡಂ ಬಿಟ್ಟುಕೊಡುವುದಿಲ್ಲ.

ಜಾಗತಿಕ ವಿದ್ಯಮಾನಗಳು ತನಗೆ ಸಂಬಂಧಿಸದೇ ಇರುವ ವ್ಯಕ್ತಿಯ ಮೇಲೂ ಪರಿಣಾಮ ಬೀರುತ್ತದಲ್ಲವೆ? ಹಾಗೆಯೇ ದೂರದ ಯೂರೋಪಿನಲ್ಲಿ ನಡೆಯುತ್ತಿರುವ ಎರಡನೆ ಮಹಾಯುದ್ಧ ವೆಂಗಾಡಂ ಬದುಕಿನ ಮೇಲೂ ತನ್ನ ಪರಿಣಾಮವನ್ನು ಬೀರುತ್ತದೆ. ಒಂದೆಡೆ ಯುದ್ಧದಿಂದಾಗಿ ಯಾವ ಕ್ಷಣದಲ್ಲಾದರೂ ವೆಂಗಾಡಂನ ಭಾವಿ ಅಳಿಯನನ್ನು ಸೈನ್ಯ ವಾಪಸ್ಸು ಕರೆಯಬಹುದು. ಇನ್ನೊಂದೆಡೆ ಯುದ್ಧದಲ್ಲಿ ಜರ್ಮನಿಯನ್ನು ರಷ್ಯಾ ಸೋಲಿಸಿದರೆ ಭಾರತದಲ್ಲೂ ಕಮ್ಯುನಿಸ್ಟ್ ಪಕ್ಷಕ್ಕೆ ಮಾನ್ಯತೆ ದೊರೆತು ತಮ್ಮ ಹೋರಾಟಕ್ಕೆ ಹೆಚ್ಚು ಬೆಂಬಲ ಸಿಗಬಹುದು. ಮತ್ತೊಂದೆಡೆ ಮಗಳ ಮದುವೆಯ ದಿನ ಹತ್ತಿರವಾಗುತ್ತಿದೆ; ಅವಳಿಗೆಂದು ಕದ್ದ ನೂಲಿನಿಂದ ಸಿದ್ಧಪಡಿಸುತ್ತಿದ್ದ ರೇಷ್ಮೆ ಸೀರೆ ಅರ್ಧಕ್ಕೆ ನಿಂತಿದೆ; ಅದನ್ನು ಪೂರ್ಣಗೊಳಿಸಲು ಅಗತ್ಯವಿರುವ ನೂಲು ಸಿಗಬೇಕೆಂದರೆ ವೆಂಗಾಡಂ ಪ್ರತಿಭಟನೆಯನ್ನು ತೊರೆದು ಕೆಲಸಕ್ಕೆ ಹಾಜರಾಗಬೇಕಿದೆ. ವೆಂಗಾಡಂ ಸಂಕಟದಲ್ಲಿ ಸಿಲುಕಿಕೊಳ್ಳುತ್ತಾನೆ. ಇತ್ತ ನೇಕಾರರ ಹಿತಾಸಕ್ತಿಯೂ ಬೇಕು, ಅತ್ತ ಮಗಳ ರೇಷ್ಮೆಸೀರೆಯನ್ನು ಸಂಪೂರ್ಣಗೊಳಿಸಬೇಕು.

ತನ್ನ ಜೀವನದ ಅತಿಮುಖ್ಯ ಗುರಿಯಾದ ರೇಷ್ಮೆಸೀರೆಗಾಗಿ ಆತ ಪ್ರತಿಭಟನಾ ನಿರತ ನೇಕಾರರ ಒಗ್ಗಟ್ಟನ್ನೇ ಮುರಿದು ಕೆಲಸಕ್ಕೆ ಹಾಜರಾಗುತ್ತಾನೆ. ಇದರಿಂದ ಕೆಲವು ನೇಕಾರರು ಆತನನ್ನು ದ್ರೋಹಿ ಎಂದು ಟೀಕಿಸುತ್ತಾರೆ. ಆದರೆ ಮಗಳು ರೇಷ್ಮೆಸೀರೆಗಾಗಿ ಕಾಯುತ್ತಿರುವುದರಿಂದ ಅವರ ಟೀಕೆಗಳನ್ನೆಲ್ಲ ನಿರ್ಲಕ್ಷಿಸುತ್ತಾನೆ. ಆದಷ್ಟು ಬೇಗ ಸೀರೆಯನ್ನು ಮುಗಿಸಬೇಕೆಂಬ ಆತುರದಲ್ಲಿ ಒಂದು ದಿನ ಆತ ಎರಡು ರೇಷ್ಮೆ ರೀಲುಗಳನ್ನು ಕದ್ದು ತನ್ನ ಬಾಯಿಗೆ ತುರುಕಿಕೊಳ್ಳುತ್ತಾನೆ. ಹೊರಗೆ ಬಂದಾಗ ಪ್ರತಿಭಟನಾನಿರತ ನೇಕಾರರು ಆತನೊಂದಿಗೆ ಜಗಳ ಪ್ರಾರಂಭಿಸಿ ಹಲ್ಲೆ ನಡೆಸುತ್ತಾರೆ. ಆಗ ಆತನ ಬಾಯಲ್ಲಿರುವ ನೂಲಿನ ರೀಲುಗಳು ನೆಲಕ್ಕೆ ಬಿದ್ದು ಸಿಕ್ಕಿಹಾಕಿಕೊಳ್ಳುತ್ತಾನೆ. ಆಗ ನೇಕಾರರೂ ಮತ್ತು ಮಗ್ಗದ ಮಾಲೀಕನ ಗೂಂಡಾಗಳು ಆತನಿಗೆ ಸಮಾ ಬಾರಿಸಿ ಜೈಲಿಗೆ ಅಟ್ಟುತ್ತಾರೆ.

ಹೀಗೆ ಜೈಲು ಪಾಲಾಗುವ ವೆಂಗಾಡಂಅನ್ನು ಎರಡು ದಿನಗಳ ಪರೋಲ್ ಮೇಲೆ ಇಬ್ಬರು ಪೇದೆಗಳ ಜೊತೆ ಕಾಂಜೀವರಂಗೆ ಕರೆತರಲಾಗುತ್ತದೆ. ವೆಂಗಾಡಂನ ಅನುಪಸ್ಥಿತಿಯಲ್ಲಿ ಏನಾಗಿರುತ್ತದೆಂದರೆ ಆತನ ಮಗಳು ನೀರು ತರಲೆಂದು ಹೋಗಿ ಜಾರಿ ಬಿದ್ದಿದ್ದಾಳೆ; ಬೆನ್ನುಮೂಳೆಯನ್ನು ಮುರಿದುಕೊಂಡು ತನ್ನ ದೇಹದ ಮೇಲೆ ಹತೋಟಿ ಕಳೆದುಕೊಂಡು ನಿಸ್ಸಾಹಾಯಕಳಾಗಿದ್ದಾಳೆ.

ವೆಂಗಾಡಂ ಬರುವವರೆಗೂ ಆಕೆಯನ್ನು ನೋಡಿಕೊಳ್ಳುತ್ತಿರುವ ಅವನ ತಂಗಿ ಇನ್ನು ತನ್ನ ಜವಾಬ್ದಾರಿ ಮುಗಿಯಿತೆಂದು ತನ್ನ ಮನೆಗೆ ಹೊರಟುನಿಂತಿದ್ದಾಳೆ. ಆದರೆ ಇನ್ನು ಒಂದು ದಿನದಲ್ಲಿ ವೆಂಗಾಡಂ ಜೈಲಿಗೆ ವಾಪಸ್ಸಾಗಬೇಕಿದೆ. "ನನ್ನ ಮಗಳನ್ನು ನೋಡಿಕೊಳ್ಳಲು ಯಾರೂ ಇರುವುದಿಲ್ಲ, ಆಕೆಯನ್ನು ನಿನ್ನ ಮನೆಗಾದರೂ ಕರೆದುಕೊಂಡು ಹೋಗು" ಎಂದು ಮೊರೆ ಇಡುತ್ತಾನೆ. ಆದರೆ ತಂಗಿಯ ಗಂಡ ಅದಕ್ಕೆ ಒಪ್ಪುವುದಿಲ್ಲ, "ಕಳ್ಳನೊಬ್ಬನ ಮಗಳನ್ನು ನನ್ನ ಮನೆಯಲ್ಲಿ ಇಟ್ಟುಕೊಂಡರೆ ನನ್ನ ಮಕ್ಕಳನ್ನು ಯಾರು ಮದುವೆಯಾಗುತ್ತಾರೆ" ಎಂದು ಪ್ರಶ್ನಿಸಿ ಹೊರಟೇಬಿಡುತ್ತಾರೆ. ನಿಸ್ಸಹಾಯಕಿಯಾಗಿರುವ ಮಗಳನ್ನು ನೋಡಿಕೊಳ್ಳಲು ಹೆಂಡತಿ ಇಲ್ಲ, ಸಂಬಂಧಿಕರಿಲ್ಲ, ತಾನೂ ಇರುವುದಿಲ್ಲ. ಆಗ ಆತ ಒಂದು ನಿರ್ಧಾರಕ್ಕೆ ಬರುತ್ತಾನೆ. ತನ್ನ ಮಗಳನ್ನು ಎತ್ತಿಕೊಂಡು, ಆಕೆಗಾಗಿ ತಾನು ನೇಯುತ್ತಿದ್ದ ರೇಷ್ಮೆಸೀರೆಯನ್ನು ತೋರಿಸುತ್ತಾನೆ, ತನ್ನ ಜೀವನದಲ್ಲಿ ಈ ಒಂದು ಸೀರೆಗಾಗಿ ಕಳ್ಳನಾಗಿದ್ದನ್ನು, ತನ್ನನ್ನು ನಂಬಿದ್ದ ಸ್ನೇಹಿತರಿಗೆ ದ್ರೋಹಿಯಾಗಿದ್ದನ್ನು ಹೇಳುತ್ತಾನೆ. ಅನಂತರ ಊಟದಲ್ಲಿ ಇಲಿ ಪಾಷಣ ಬೆರೆಸಿ ತನ್ನ ಕೈಯಿಂದಲೇ ಮಗಳಿಗೆ ತಿನ್ನಿಸಿ ಅವಳ ಸಾವಿಗೆ ಕಾರಣನಾಗುತ್ತಾನೆ.

ಮರುದಿನ ಆಕೆಯ ದೇಹವನ್ನು ಮನೆಯ ಅಂಗಳದ ಮೇಲೆ ತಂದಿಟ್ಟಾಗ ವೆಂಗಾಡಂಗೆ ಸೀರೆಯ ನೆನಪಾಗುತ್ತದೆ. ಸಾವಿನಲ್ಲಾದರೂ ತನ್ನ ಮಗಳು ರೇಷ್ಮೆಸೀರೆ ಹೊದೆಯಲಿ ಎಂದು ಅದನ್ನು ಮಗ್ಗದಿಂದ ಕತ್ತರಿಸಿ ಅವಳ ದೇಹದ ಮೇಲೆ ಅದನ್ನು ಹೊದಿಸುತ್ತಾನೆ. ಆದರೆ ವೆಂಗಾಡಂನ ಬದುಕಿನ ವಿಪರ್ಯಾಸ ಯಾವ ಮಟ್ಟದ್ದಾಗಿರುತ್ತದೆಂದರೆ ಆ ತುಂಡು ರೇಷ್ಮೆ ಬಟ್ಟೆಯಿಂದ ಆಕೆಯ ಮುಖವನ್ನು ಮುಚ್ಚಿದರೆ ಪಾದಗಳು ಕಾಣಿಸುತ್ತಿರುತ್ತದೆ; ಪಾದಗಳನ್ನು ಮುಚ್ಚಿದರೆ ಮುಖ ಕಾಣಿಸುತ್ತಿರುತ್ತದೆ. ತನ್ನ ಬದುಕಿನ ಆಶಯವಾಗಿದ್ದ ಆದರೆ ದುರಂತಕ್ಕೆ ಕಾರಣವಾದ ಆ ರೇಷ್ಮೆ ತುಂಡನ್ನು ಆತ ಜಗ್ಗಾಡುತ್ತಿರುವಾಗಲೇ ಪೊಲೀಸರು "ಸಾಕು, ನಡಿ" ಎನ್ನುತ್ತಾರೆ.

ಅಲ್ಲಿಗೆ ಚಿತ್ರ ಅಂತ್ಯಗೊಳ್ಳುತ್ತದೆ. ವೆಂಗಾಡಂ ಪಾತ್ರದಲ್ಲಿ ಪ್ರಕಾಶ್ ರೈ ಅದ್ಭುತವಾಗಿ ನಟಿಸಿದ್ದಾನೆ. ಬಡತನವೇ ಚಿತ್ರದ ಅಂತರಾಳವಾದರೂ ಪ್ರತಿ ಫ್ರೇಮ್ ಕಲಾಚಿತ್ರದಂತೆ ಕಂಗೊಳಿಸುತ್ತದೆ. ಬಿಗಿಯಾದ ಚಿತ್ರಕಥೆ, ಹಾಸ್ಯಮಿಶ್ರಿತ ಚುರುಕಾದ ಡೈಲಾಗ್‌ಗಳು, ಪ್ರಭಾವಶಾಲಿ ನಿರ್ದೇಶನ ಈ ಚಿತ್ರವನ್ನು ಅದ್ಭುತವಾಗಿ ರೂಪಿಸಿದೆ.


ಈಗಿನ ಕಾಂಚಿಪುರಂ ಗಬ್ಬು ಪಟ್ಟಣವಾಗಿರುವುದರಿಂದ ಕರ್ನಾಟಕದ ಮೇಲುಕೋಟೆಯಲ್ಲೇ ಇದನ್ನು ಚಿತ್ರೀಕರಿಸಲಾಗಿದೆ. ಇದು 40 ರ ದಶಕದಲ್ಲಿ ನಡೆಯಿತು ಎಂದು ನಿರ್ದೇಶಕ ಪ್ರಿಯದರ್ಶನ್ ಹೇಳಿದ್ದರೂ ಇವತ್ತಿಗೂ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಯಿಂದಾಗಿ ವೆಂಗಾಡಂನಂತೆಯೇ ಸಾವಿರಾರು ನೇಕಾರರು ಬಡತನದಲ್ಲಿ ನರಳುತ್ತಿದ್ದಾರೆ ಅಥವಾ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ನಮ್ಮ ದೇಶದಲ್ಲಿ ಕೃಷಿಯ ನಂತರ ಅತಿಹೆಚ್ಚು ಸಂಖ್ಯೆಯಲ್ಲಿ ನೇಕಾರ ವೃತ್ತಿಯಲ್ಲಿ ಜನ (2.5 ಮಿಲಿಯನ್) ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರೆಲ್ಲರ ವಾಸ್ತವ ಸ್ಥಿತಿಯನ್ನು ಅರಿಯಲಾದರೂ ಈ ಚಿತ್ರವನ್ನು ಒಮ್ಮೆ ನೋಡಲೇಬೇಕು. ■

ವೈದ್ಯರ ಸಂಘದ ಘನತೆ ಮಣ್ಣುಪಾಲು

ಕರ್ನಾಟಕದ IMA ಅಧ್ಯಕ್ಷ ಡಾ.ಸಿದ್ದೇಗೌಡನೇ ವಂಚಕ

ಡಾ.ಎಂ.ಎಸ್.ಸಿದ್ದೇಗೌಡನೆಂಬ ಮಂಡ್ಯ ಮೆಡಿಕಲ್ ಕಾಲೇಜಿನ ಪೆಥಾಲಜಿ ಅಸೋಸಿಯೇಟ್ ಪ್ರೊಫೆಸರ್ ಏಕಕಾಲದಲ್ಲಿ ಮೆಡಿಕಲ್ ಕಾಲೇಜಿಗೂ ಮತ್ತು ಭಾರತೀಯ ವೈದ್ಯರುಗಳ ಸಂಘ (ಐಎಂಎ)ದ ಕರ್ನಾಟಕ ವಿಭಾಗಕ್ಕೂ ಅಮರಿಕೊಂಡು ಅವುಗಳ ಘನತೆಯನ್ನು ಮಣ್ಣುಪಾಲು ಮಾಡಿರುವ ದುರಂತ ವೃತ್ತಾಂತವಿದು.



ಸರ್ಕಾರೀ ಆಸ್ಪತ್ರೆಗಳೆಂದರೆ ಭ್ರಷ್ಟಾಚಾರದ ಹಾಗೂ ಅವ್ಯವಸ್ಥೆಯ ಕೂಪಗಳೆಂತಲೂ, ಖಾಸಗಿ ಆಸ್ಪತ್ರೆಗಳೆಂದರೆ ಹಗಲು ದರೋಡೆಯ ಕೇಂದ್ರಗಳೆಂತಲೂ ಜಗಜ್ಜಾಹೀರಾಗಿರುವ ಈ ಕಾಲದಲ್ಲಿ ಕರ್ನಾಟಕದ ವೈದ್ಯರುಗಳ ಸಂಘದ ಅಧ್ಯಕ್ಷನೇ ಮಹಾನ್ ವಂಚಕನೆಂಬ ಸಂಗತಿ ಬೆಳಕಿಗೆ ಬಂದಿದೆ. ಇದು ಕರ್ನಾಟಕದ ವೈದ್ಯರು ತಲೆತಗ್ಗಿಸುವಂತೆ ಮಾಡಿದೆ.

ಡಾ.ಎಂ.ಎಸ್.ಸಿದ್ದೇಗೌಡನೆಂಬ ಮಂಡ್ಯ ಮೆಡಿಕಲ್ ಕಾಲೇಜಿನ ಪೆಥಾಲಜಿ ಅಸೋಸಿಯೇಟ್ ಪ್ರೊಫೆಸರ್ ಏಕಕಾಲದಲ್ಲಿ ಮೆಡಿಕಲ್ ಕಾಲೇಜಿಗೂ ಮತ್ತು ಭಾರತೀಯ ವೈದ್ಯರುಗಳ ಸಂಘ (ಐಎಂಎ)ದ ಕರ್ನಾಟಕ ವಿಭಾಗಕ್ಕೂ ಅಮರಿಕೊಂಡು ಅವುಗಳ ಘನತೆಯನ್ನು ಮಣ್ಣುಪಾಲು ಮಾಡಿರುವ ದುರಂತ ವೃತ್ತಾಂತವಿದು.

ಕಡುಬಡವರಿಗೆ ನೀಡುವ ಅಂತ್ಯೋದಯ ರೇಷನ್ ಕಾರ್ಡ್‌ನಿಂದ ಹಿಡಿದು ನೀವು ಯಾವುದೇ ಸರ್ಕಾರೀ ನೌಕರಿ ಪಡೆಯಲು ಅರ್ಜಿ ಸಲ್ಲಿಸುವವರೆಗೆ ನಿಮ್ಮ ಬಗ್ಗೆ ಹಲವು ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ ಕೊನೆಯಲ್ಲಿ 'ಇದರಲ್ಲಿ ಕಾಣಿಸಿರುವ ಯಾವುದೇ ಮಾಹಿತಿಗಳು ನನ್ನ ತಿಳಿವಳಿಕೆಯಲ್ಲಿ ಸಂಪೂರ್ಣ ಸರಿ ಇದೆ. ಒಂದು ವೇಳೆ ತಪ್ಪಾಗಿದ್ದರೆ ನನ್ನ ಮೇಲೆ ಕಾನೂನು ರೀತ್ಯಾ ಕ್ರಿಮಿನಲ್ ಮೊಕದ್ದಮೆ ಹೂಡಬಹುದು' ಎಂದು ಇರುತ್ತದೆ. ಆದರೆ ಸುಳ್ಳು ಸರ್ಟಿಫಿಕೇಟ್‌ಗಳ ರಾಶಿಯನ್ನೇ ಕೊಟ್ಟು ಮೆಡಿಕಲ್ ಕಾಲೇಜು ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಸಿದ್ದೇಗೌಡರ ಮೇಲೆ ಇಲ್ಲಿಯವರೆಗೆ ಯಾವ ಕ್ರಿಮಿನಲ್ ಮೊಕದ್ದಮೆಯನ್ನೂ ಹೂಡಿಲ್ಲ, ಬದಲಿಗೆ ಆತ ಕರ್ನಾಟಕದ ವೈದ್ಯರುಗಳ ಸಂಘದ ಅಧ್ಯಕ್ಷನಾಗಿ ಚುನಾಯಿತನಾಗಿದ್ದಾನೆ ಎಂದರೆ ಇದಕ್ಕೇನನ್ನೋಣ?

ಮಂಡ್ಯ ಮೆಡಿಕಲ್ ಕಾಲೇಜು ಸ್ಥಾಪನೆ ಸಂದರ್ಭದಲ್ಲಿ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ, ಮನಸೋಇಚ್ಛೆ ವರ್ತಿಸಿದ ಡಾ.ಚಿದಾನಂದ ಎಂಬಾತ ನಂತರ ಶಿವಮೊಗ್ಗ ಮೆಡಿಕಲ್ ಕಾಲೇಜಿಗೆ ವರ್ಗಾವಣೆಗೊಂಡ. ಅಲ್ಲಿಯೂ ತನ್ನ ದುರ್ವ್ಯವಹಾರಗಳನ್ನು ಮುಂದುವರೆಸಿದ ಚಿದಾನಂದ ಸಿಕ್ಕಿಬಿದ್ದ. ಆಗ ತಲೆ ತಪ್ಪಿಸಿಕೊಂಡು ತಿರುಗುತ್ತಿದ್ದ ಈತನನ್ನು ಪೊಲೀಸರು ಬೆನ್ನಟ್ಟಿ ಹಿಡಿದು ಬಂಧಿಸಿದರು. ಹಾಲಿ ಭಾರತೀಯ ವೈದ್ಯರುಗಳ ಸಂಘದ ಅಧ್ಯಕ್ಷ ಡಾ.ಎಂ.ಎಸ್. ಸಿದ್ದೇಗೌಡರನ್ನು ಮಂಡ್ಯ ಮೆಡಿಕಲ್ ಕಾಲೇಜಿಗೆ ಸೇರಿಸಿಕೊಂಡಿದ್ದು ಇದೇ ಚಿದಾನಂದ!

ಅಂದು ಚಿದಾನಂದನ ಬಗ್ಗೆ 'ಲಂಕೇಶ್' ವರದಿ ಮಾಡಿತ್ತು, ಈಗ ಸಿದ್ದೇಗೌಡರ ಸರದಿ.

ಸಂಬಳದೊಂದಿಗೆ ಗಿಂಬಳ


ಈ ಹಿಂದೆ ಸರ್ಕಾರೀ ಮೆಡಿಕಲ್ ಕಾಲೇಜು ಅಧ್ಯಾಪಕರುಗಳಿಗೆ ಕೊಡುತ್ತಿದ್ದ ಸಂಬಳ, ಯುಜಿಸಿ ಸ್ಕೇಲ್ ಸಂಬಳ ಪಡೆಯುತ್ತಿದ್ದ ಪದವಿ ಕಾಲೇಜುಗಳ ಅಧ್ಯಾಪಕರುಗಳಿಗಿಂತ ಕಡಿಮೆಯಿರುತ್ತಿತ್ತು. ಬಹುತೇಕ ಡಾಕ್ಟರುಗಳು ಹೊರಗಡೆಯೂ ಪ್ರಾಕ್ಟೀಸ್ ಮಾಡಿಕೊಂಡಿದ್ದು, ಅದರೊಂದಿಗೆ ಮೆಡಿಕಲ್ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಇತ್ಯಾದಿ ತಗುಲಿಸಿಕೊಂಡರೆ ತಮ್ಮ ಹೊರಗಿನ ವ್ಯಾಪಾರ ಜೋರಾಗೇ ಸಾಗುತ್ತದಾದ್ದರಿಂದ ಸರ್ಕಾರೀ ಮೆಡಿಕಲ್ ಕಾಲೇಜುಗಳಲ್ಲಿ ಕೆಲಸ ಮಾಡಲು ಮುಂದೆ ಬರುತ್ತಿದ್ದರು. ಈ ಎರಡು ರೀತಿಯ ಲಾಭವಿದ್ದುದರಿಂದ ಕಡಿಮೆ ಸಂಬಳದ ಬಗ್ಗೆ ದೊಡ್ಡ ತಕರಾರೇನೂ ಇರಲಿಲ್ಲ.

ಆದರೆ ಕಳೆದ 10 ವರ್ಷಗಳಲ್ಲಿ ಖಾಸಗಿ ಆರೋಗ್ಯ ಉದ್ಯಮ ಎಷ್ಟು ಭಯಂಕರವಾಗಿ ಬೆಳೆದಿದೆಯೆಂದರೆ, ತಿಂಗಳಿಗೆ 2ರಿಂದ 4 ಲಕ್ಷ ಸಂಪಾದಿಸುವ ದೊಡ್ಡ ಸಂಖ್ಯೆಯ ವೈದ್ಯರುಗಳು ಸೃಷ್ಟಿಯಾಗಿದ್ದಾರೆ. ಇದಲ್ಲದೆ ಹೊರದೇಶಗಳಲ್ಲಿ ವೃತ್ತಿಯನ್ನು ಹುಡುಕಿಕೊಂಡು ಹೋಗುವವರೂ ಹೆಚ್ಚಾಗಿದ್ದಾರೆ. ಹೀಗಾಗಿ ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಪಾಠ ಮಾಡಲು ವೈದ್ಯರುಗಳೇ ಇಲ್ಲವಾದರು.

ಈ ನಡುವೆ ಸರ್ಕಾರ ನಾಲ್ಕೈದು ಹೊಸ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಲು ನಿರ್ಧರಿಸಿದಾಗ, ಆ ಕಾಲೇಜುಗಳಲ್ಲಿ ಹಳೇ ಸಂಬಳಕ್ಕೆ ಪಾಠ ಮಾಡಲು ಯಾರೂ ಬರುವುದಿಲ್ಲ ಎಂದು ಗೊತ್ತಾಯಿತು. ಜೊತೆಗೆ ಭಾರತೀಯ ಮೆಡಿಕಲ್ ಕೌನ್ಸಿಲ್‌ನಿಂದ ಮಾನ್ಯತೆ ಪಡೆಯಬೇಕಾದರೆ ಇಂತಿಷ್ಟು ಅನುಭವವುಳ್ಳ ಅಧ್ಯಾಪಕರುಗಳು ಇರಲೇಬೇಕು ಎಂಬ ನಿಯಮವಿದೆ. ಅಷ್ಟು ಅನುಭವವುಳ್ಳ ಜನ ಬೇಕೆಂದರೆ ಹೆಚ್ಚು ಸಂಬಳ ಕೊಡಬೇಕೆಂದು ಸರ್ಕಾರ ನಿರ್ಧರಿಸಿತು. ಹೀಗಾಗಿ ಒಂದೇ ಸಾರಿಗೆ ಅಧ್ಯಾಪಕರುಗಳ ಸಂಬಳವನ್ನು ಎರಡು-ಮೂರು ಪಟ್ಟು ಹೆಚ್ಚಿಸಲಾಯಿತು. ಇಂದು ಅಸಿಸ್ಟೆಂಟ್ ಪ್ರೊಫೆಸರ್‌ಗೆ 40 ಸಾವಿರ, ಅಸೋಸಿಯೇಟ್ ಪ್ರೊಫೆಸರ್‌ಗೆ 59 ಸಾವಿರ ಮತ್ತು ಪ್ರೊಫೆಸರ್‌ಗೆ 70 ಸಾವಿರ ಸಂಬಳ ಸಿಗುತ್ತದೆ. ಇದರಲ್ಲಿ ನಾನ್ ಪ್ರಾಕ್ಟೀಸ್ ಅಲೋಯೆನ್ಸ್ ಕೂಡ ಸೇರಿರುತ್ತದೆ. ಇಷ್ಟೊಂದು ಸಂಬಳ ತೆಗೆದುಕೊಂಡ ಮೇಲೆ ನಿಯತ್ತಾಗಿ ಸರ್ಕಾರೀ ಆಸ್ಪತ್ರೆಯಲ್ಲಿ ಈ ವೈದ್ಯ ಮಹಾಶಯರು ದುಡಿಯಬೇಕಲ್ಲವೇ? ಕನಿಷ್ಠ ಆಸ್ಪತ್ರೆಯ ನಿಗದಿತ ಕೆಲಸದ ವೇಳೆಯಲ್ಲಾದರೂ? ಆದರೆ ಹೊರಗಡೆ ಪ್ರಾಕ್ಟೀಸ್ ಮಾಡದೆ ಸರ್ಕಾರಿ ಆಸ್ಪತ್ರೆಯಲ್ಲೇ ನಿಯತ್ತಿನಿಂದ ಕೆಲಸ ಮಾಡುವವರು ಬೆರಳೆಣಿಕೆಯಷ್ಟು ಜನ ಮಾತ್ರ.

ಇದರರ್ಥ ಸರ್ಕಾರೀ ಮೆಡಿಕಲ್ ಕಾಲೇಜುಗಳಲ್ಲಿ ಕೆಲಸ ಮಾಡಲು ಯಾರೂ ಮುಂದೆ ಬರುತ್ತಿಲ್ಲ ಎಂದಲ್ಲ, ಇಲ್ಲಿ ಕೆಲಸ ಮಾಡದೆ 50, 60 ಸಾವಿರ ಎಣಿಸಬಹುದಾದರೆ ಯಾಕೆ ಬೇಡಾ? ಇಲ್ಲಿ ಕೆಲಸ ಮಾಡಲು ನಕಲಿ ಸರ್ಟಿಫಿಕೇಟುಗಳನ್ನೂ ಸೃಷ್ಟಿಸಿಕೊಳ್ಳುತ್ತಾರೆಂದರೆ ನೀವೇ ಊಹಿಸಿ.

ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಬೋಧಕೇತರ ಸಿಬ್ಬಂದಿ ನೇಮಕದಲ್ಲಿ ಅಂದಿನ ನಿರ್ದೇಶಕ ಡಾ.ಚಿದಾನಂದ ನಡೆಸಿದ ಅವ್ಯವಹಾರದ ಕುರಿತಾಗಿಯೇ ಹಿಂದೆ 'ಲಂಕೇಶ್'ನಲ್ಲಿ ಬರೆದದ್ದು. ಆದರೆ ಈಗ ನಕಲಿ ಸರ್ಟಿಫಿಕೇಟ್‌ಗಳನ್ನು ನೀಡಿ ಅಸಿಸ್ಟೆಂಟ್ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್‌ಗಳಾದವರ ಇನ್ನೊಂದು ದೊಡ್ಡ ಹಗರಣ ಬಯಲಿಗೆ ಬಂದಿದೆ. ಈ ಅವ್ಯವಹಾರದಿಂದ ಅಸೋಸಿಯೇಟ್ ಪ್ರೊಫೆಸರ್ ಆದವರಲ್ಲಿ ಸಾಕ್ಷಾತ್ ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ವಿಭಾಗದ ನೂತನ ಅಧ್ಯಕ್ಷರೂ ಸೇರಿದ್ದಾರೆ.



ಮೆಡಿಕಲ್ ಕಾಲೇಜ್

ಸದರಿ ಸಿದ್ದೇಗೌಡ ಮೂಲತಃ ಕನಕಪುರ ತಾಲೂಕಿನವರು. ಗುಲ್ಬರ್ಗ ವಿಶ್ವವಿದ್ಯಾನಿಲಯದಿಂದ 1992ರಲ್ಲಿ ಎಂಡಿ ಪೆಥಾಲಜಿ ಪದವಿ ಪಡೆದುಕೊಂಡ ಈ ವ್ಯಕ್ತಿ 1994ನೇ ಇಸವಿಯಲ್ಲೇ ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯಲ್ಲಿ ಪೆಥಾಲಜಿಸ್ಟ್ ಆಗಿ ಕೆಲಸಕ್ಕೆ ಅಪಾಯಿಂಟ್ ಆದರು. ಮಂಡ್ಯ ತಾಲೂಕಿನ ಹೆಮ್ಮಿಗೆಯ ಅಳಿಯನಾದ ಸಿದ್ದೇಗೌಡ ಕಿದ್ವಾಯಿ ಸಂಸ್ಥೆಯ ಮಂಡ್ಯದ ಪೆರಿಫೆರಲ್ ವಿಭಾಗ ಸೇರಿಕೊಂಡು ಇಲ್ಲೇ ಸೆಟಲ್ ಆದರು. ಈಗ್ಗೆ ಕೆಲವು ವರ್ಷಗಳ ಕೆಳಗೆ ಮಂಡ್ಯದ ಘಟಾನುಘಟಿ ಡಾಕ್ಟರುಗಳು ಸೇರಿಕೊಂಡು ಆರಂಭಿಸಿದ ಮಂಡ್ಯ ಡಯಾಗ್ನೋಸ್ಟಿಕ್ ಸೆಂಟರ್‌ನ ಪಾಲುದಾರರಲ್ಲಿ ಒಬ್ಬರಾಗುವ ಮಟ್ಟಕ್ಕೆ ಮಂಡ್ಯದಲ್ಲಿ ದುಡ್ಡು ದುಡಿದುಕೊಂಡರು. ಈಗ ಇದೇ ಪೆರಿಫೆರಲ್ ವಿಭಾಗದಲ್ಲಿ ತಾನು ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಪಾಠ ಹೇಳಿ ದೊಡ್ಡವರನ್ನು ಮಾಡಿದ್ದೇನೆ ಎಂದು ನಕಲಿ ಸರ್ಟಿಫಿಕೇಟ್‌ಗಳನ್ನು ಒಂದಾದ ಮೇಲೊಂದರಂತೆ ಸೃಷ್ಟಿಸಿ, ಅಸಿಸ್ಟೆಂಟ್ ಪ್ರೊಫೆಸರ್ ಕೂಡಾ ಆಗದೆ ಏಕ್‌ದಂ ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿಬಿಟ್ಟಿದ್ದಾರೆ.

ಎಷ್ಟು ಜನ ಜೈಲಿಗೆ?

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಮೆಡಿಕಲ್ ಕಾಲೇಜಲ್ಲ. ಎಲ್ಲರಿಗೂ ಗೊತ್ತಿರುವಂತೆ ಅದು ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ನೀಡುವ ಆಸ್ಪತ್ರೆ. ಆದರೆ ಅಲ್ಲಿ ಸ್ನಾತಕೋತ್ತರ (ಪೋಸ್ಟ್ ಗ್ರಾಜುಯೇಟ್) ಕೋರ್ಸ್‌ಗಳು ನಡೆಯುತ್ತವೆ. ಹೀಗಾಗಿ ಮಂಡ್ಯದ ಪೆರಿಫೆರಲ್ ವಿಭಾಗದಲ್ಲೂ ಸಹ ಯಾವುದೇ ಪದವಿ (ಅಂದರೆ ಎಂಬಿಬಿಎಸ್) ವಿದ್ಯಾರ್ಥಿಗಳು ಕಲಿತಿಲ್ಲ. ರಾಜೀವ್‌ಗಾಂಧಿ ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅವರೇ ಈ ಮಾಹಿತಿಯನ್ನು ನೀಡಿದ್ದಾರೆ. ಬೆಳ್ಳೂರಿನ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಈ ಹಿಂದೆ ಮಂಡ್ಯ ಜಿಲ್ಲಾಸ್ಪತ್ರೆಗೆ ಕಲಿಯಲು ಬರುತ್ತಿದ್ದಾಗ ಈ ಸಿದ್ದೇಗೌಡ ಅವರಿಗೆ ಪಾಠ ಹೇಳಿದ್ದಾರಾ ಎಂದರೆ ಅದೂ ಇಲ್ಲ. ಸ್ವತಃ ಅದರ ಇನ್‌ಚಾರ್ಜ್ ವೈದ್ಯಾಧಿಕಾರಿ ಡಾ.ರಂಗನಾಥ್ ಅವರೇ ನೀಡಿರುವ ದಾಖಲೆ ಪ್ರಕಾರ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಿಂದ ಯಾವ ವಿದ್ಯಾರ್ಥಿಗಳನ್ನೂ ಇಲ್ಲಿಗೆ ಕಳಿಸಿಲ್ಲ. ಅಷ್ಟೇ ಅಲ್ಲ, ಸಿದ್ದೇಗೌಡ ಕಿದ್ವಾಯಿ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದಂದಿನಿಂದ ಕೆಲ ವರ್ಷಗಳ ಹಿಂದೆ ಮಂಡ್ಯ ಮೆಡಿಕಲ್ ಕಾಲೇಜನ್ನು ಸೇರಲು ಅಲ್ಲಿನ ಹುದ್ದೆಗೆ ರಾಜೀನಾಮೆ ನೀಡುವವರೆಗೆ ಎಲ್ಲೆಡೆ ಇರುವುದು ಅವರು ಪೆಥಾಲಜಿಸ್ಟ್ ಎಂದು ಮಾತ್ರವೇ.

ಆದರೆ ಇದೇ ಕಿದ್ವಾಯಿ ಆಸ್ಪತ್ರೆಯ ನಿರ್ದೇಶಕರಾಗಿದ್ದ ಪಿ.ಎಸ್.ಪ್ರಭಾಕರನ್ ಅವರು 2005ರ ಮಾರ್ಚ್ 17ರಂದು ಸಿದ್ದೇಗೌಡರು ತಮ್ಮ ಸಂಸ್ಥೆಯಲ್ಲಿ ಉಪನ್ಯಾಸಕ-ಸಹ ಪ್ರಾಧ್ಯಾಪಕರಾಗಿ 11 ವರ್ಷ ಕೆಲಸ ಮಾಡಿದ್ದಾರೆ ಎಂಬ ಸರ್ಟಿಫಿಕೇಟ್ ನೀಡಿದ್ದರು. ಆನಂತರ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿಯೂ ಆಗಿ ಕೆಲಸ ಮಾಡಿದ್ದ ಈ ಪ್ರಭಾಕರನ್ ಹಲವು ರೀತಿಯ ಗೋಲ್‌ಮಾಲ್‌ಗಳನ್ನು ನಡೆಸಿದ್ದರು ಎಂದು ಈಗ ಸಿ.ಬಿ.ಐ ತನಿಖೆ ನಡೆಯುತ್ತಿದೆ! ಇಂತಹ ಪ್ರಭಾಕರನ್‌ರಿಂದ ಸುಳ್ಳು ಸರ್ಟಿಫಿಕೇಟ್ ಪಡೆಯುವುದು ಕಷ್ಟದ ಕೆಲಸವಲ್ಲ!

ಇದೂ ಸಾಲದೆಂಬಂತೆ ಕಿದ್ವಾಯಿ ಆಸ್ಪತ್ರೆಗೆ 2006ರ ಆಗಸ್ಟ್‌ನಲ್ಲಿ ಪ್ರಭಾರಿ ನಿರ್ದೇಶಕರಾಗಿದ್ದ ಪಿ.ಪಿ.ಬ್ಯಾಪ್ಟಿಯವರಿಂದಲೂ ಸಿದ್ದೇಗೌಡ ಇನ್ನೊಂದು ಸರ್ಟಿಫಿಕೇಟ್ ಪಡೆದಿದ್ದಾರೆ. ಇವರು ಕನ್ಸಲ್ಟೆಂಟ್ ಪೆಥಾಲಜಿಸ್ಟ್ ಆಗಿ ಕಿದ್ವಾಯಿ ಆಸ್ಪತ್ರೆಯ ಪೆರಿಫೆರಲ್ ವಿಭಾಗದಲ್ಲಿ ಕೆಲಸ ಮಾಡಿದ್ದಾಗಿಯೂ, ಅವರಿಗೆ ಆದಿಚುಂಚನಗಿರಿ ಕಾಲೇಜಿನ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಬೋಧಿಸಿದ ಅನುಭವ ಇದೆಯೆಂದೂ ಅದರಲ್ಲಿ ಹೇಳಲಾಗಿದೆ.


ಈ ಹಗರಣವನ್ನು ಪ್ರಾಮಾಣಿಕವಾದ ತನಿಖೆಗೆ ಒಪ್ಪಿಸಿದರೆ ಎಷ್ಟು ಜನ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕಾಗುತ್ತದೆ ಗೊತ್ತೆ? ಸರಿಯಾಗಿ ಲೆಕ್ಕ ಹಾಕಿದರೆ, ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರಿಂದ ಹಿಡಿದು, ಮಾಜಿ ಉಪಕುಲಪತಿ ಪ್ರಭಾಕರನ್‌ವರೆಗೆ ಕನಿಷ್ಠ 15 ಜನ 'ಉನ್ನತ' ವೈದ್ಯರು ಮತ್ತು ಅಧಿಕಾರಿಗಳು ಇದೊಂದೇ ಪ್ರಕರಣದಲ್ಲಿ ಜೈಲಿಗೆ ಹೋಗಬೇಕಾಗುತ್ತದೆ. ಅಷ್ಟು ಸುಳ್ಳು ಸರ್ಟಿಫಿಕೇಟ್‌ಗಳನ್ನು ಸಿದ್ದೇಗೌಡ ಇವರುಗಳಿಂದ ಪಡೆದುಕೊಂಡಿದ್ದಾರೆ.

ಇವೆಲ್ಲಾ ಏತಕ್ಕೆ?


ಇಷ್ಟೆಲ್ಲಾ ಸರ್ಕಸ್‌ಅನ್ನು ಸಿದ್ದೇಗೌಡ ಮಾಡಿದ್ದು ಕೇವಲ ಅಸೋಸಿಯೇಟ್ ಪ್ರೊಫೆಸರ್ ಆಗಲಿಕ್ಕೆ ಅಲ್ಲ. ಈಗ ಮಿಮ್ಸ್‌ನ ಪೆಥಾಲಜಿ ವಿಭಾಗದಲ್ಲಿನ ಪ್ರೊಫೆಸರ್ ರಿಟೈರ್ ಆದರೆ ತಾನು ಆ ವಿಭಾಗದ ಮುಖ್ಯಸ್ಥನಾಗಬಹುದು; ಮಾತ್ರವಲ್ಲ ಆನಂತರ ಮಿಮ್ಸ್‌ಗೇ ನಿರ್ದೇಶಕನೂ ಆಗಬಹುದು ಎಂಬುದು ಸಿದ್ದೇಗೌಡರ ಲೆಕ್ಕಾಚಾರ. ಆದರೆ ನಿರ್ದೇಶಕನಾಗಬೇಕಾದರೆ ಕನಿಷ್ಠ ಪ್ರೊಫೆಸರ್ ಆಗಿರಬೇಕಾದ್ದರಿಂದ ಅದಕ್ಕೆ ಬೇಕಾದ ಎಲ್ಲಾ ದಾಖಲೆಗಳನ್ನೂ ಸೃಷ್ಟಿಸಿದ್ದಾರೆ.

▶▶▶

ನರಸತ್ತ ಜೆಡಿಎಸ್ ನಾಯಕರು, ನರವಿಲ್ಲದ ಉಸ್ತುವಾರಿ ಸಚಿವ



ಚಲುವರಾಯಸ್ವಾಮಿ



ರಾಮಚಂದ್ರೇಗೌಡ

ಮಂಡ್ಯಕ್ಕೆ ಮೆಡಿಕಲ್ ಕಾಲೇಜು ತಂದವರು ತಾವೆಂದು ಕೊಚ್ಚಿಕೊಳ್ಳುವವರು ಮಂಡ್ಯದ ಜೆಡಿಎಸ್ ನಾಯಕರು. ಜಿಲ್ಲೆಯ 7 ಕ್ಷೇತ್ರಗಳಲ್ಲಿ ನಾಲ್ವರು ಈಗಲೂ ಜೆಡಿಎಸ್‌ನವರೇ. ಇತ್ತೀಚೆಗೆ ಪ್ರತಿಷ್ಠಿತ ಉಪಚುನಾವಣೆಯಲ್ಲಿ ಗೆದ್ದ ಕೋಡು ಬೇರೆ ಇವರಿಗಿದೆ. ಸಾಲದ್ದಕ್ಕೆ ಹಿಂದೆ ಆರೋಗ್ಯ ಸಚಿವ, ಸಾರಿಗೆ ಸಚಿವ, ಇಲ್ಲಿನ ಉಸ್ತುವಾರಿ ಸಚಿವ ಎಲ್ಲವೂ ಆಗಿದ್ದ ಚಲುವರಾಯಸ್ವಾಮಿ ಇವತ್ತಿಗೂ ಪ್ರಭಾವಿ ನಾಯಕ. ಇಷ್ಟಿದ್ದೂ ಮೆಡಿಕಲ್ ಕಾಲೇಜು ಹಗರಣಗಳ ವಿರುದ್ಧ ಒಬ್ಬರಾದರೂ ಇದುವರೆಗೆ ತುಟಿ ಬಿಚ್ಚಿದ್ದರೆ ಕೇಳಿ. ಸ್ಥಳೀಯ ಶಾಸಕ ಎಂ.ಶ್ರೀನಿವಾಸ್‌ರಿಂದ ಹಿಡಿದು ಎಲ್ಲರೂ ತಮ್ಮ ಕ್ಯಾಂಡಿಡೇಟ್‌ಅನ್ನು ಒಳತೂರಿಸಲು ಪ್ರಯತ್ನ ಪಡುತ್ತಾರಷ್ಟೇ. ಮಂಡ್ಯದ ಜನತೆಯ ಪಾಲಿನ ಸಂಜೀವಿನಿಯಾಗಬೇಕಿದ್ದ ಮೆಡಿಕಲ್ ಕಾಲೇಜನ್ನು ಅಧ್ವಾನದ ಗುಂಡಿಯಿಂದ ಹೊರತರಲು ಇವರು ಏನೂ ಮಾಡುವುದಿಲ್ಲ ಎಂಬ ಆರೋಪಗಳಿವೆ.

ಈಗಿನ ಮಂಡ್ಯದ ಉಸ್ತುವಾರಿ ಸಚಿವ ರಾಮಚಂದ್ರೇಗೌಡರೇ ವೈದ್ಯಕೀಯ ಶಿಕ್ಷಣ ಸಚಿವರೂ ಆಗಿದ್ದಾರೆ. ಈ ಬೆಡ್ಡಿ ನಾಯಕನ ಬಳಿ ಇಲ್ಲಿನ ಹಗರಣಗಳ ಬಗ್ಗೆ ಯಾರಾದರೂ ಕೇಳಿದರೆ ಬಾಲಿಶವಾದ ಉತ್ತರಗಳು ಸಿಗುತ್ತವೆಯೇ ಹೊರತು ಬೇರೇನೂ ಸಿಗುವುದಿಲ್ಲ. ಒಂದು ಜಿಲ್ಲೆ ಬೇಡ ಒಂದು ಕಾಲೇಜನ್ನೂ ಸರಿಯಾಗಿ ನಡೆಸುವ ಛಾತಿಯಾಗಲೀ, ಜವಾಬ್ದಾರಿಯಾಗಲೀ ಇಲ್ಲದ ಈತನಿಗೆ ವೈದ್ಯಕೀಯ ಶಿಕ್ಷಣವೂ ಗೊತ್ತಿಲ್ಲ, ಜಿಲ್ಲಾ ಉಸ್ತುವಾರಿಯಂತೂ ಗೊತ್ತೇ ಇಲ್ಲ. ಇದುವರೆಗೆ ಮಂಡ್ಯ ಮೆಡಿಕಲ್ ಕಾಲೇಜನ್ನು ಸಮಗ್ರವಾಗಿ ವೀಕ್ಷಿಸಿ, ಅಲ್ಲಿನ ಬೇಕು ಬೇಡಗಳನ್ನು ಗಮನಿಸುವ ಕೆಲಸವನ್ನೇ ಈತ ಮಾಡಿಲ್ಲವೆಂದರೆ ಇನ್ನು ರಾಜ್ಯದ ಇತರ ಮೆಡಿಕಲ್ ಕಾಲೇಜುಗಳ ಗತಿಯೇನು ಹೇಳಿ? ■

...ಮಂಡ್ಯ ಮೆಡಿಕಲ್ ಕಾಲೇಜಿನ ಹಗರಣಗಳ ಕುರಿತಾಗಿ ...ಾಯುಕ್ತ ತನಿಖೆಯು ಆರಂಭವಾಗಿ ಆದಕ್ಕಾಗಿ ...ಡಿ.ಕೋಟೆಯ ವಿವೇಕಾನಂದ ಆರೋಗ್ಯ ಕೇಂದ್ರದ ...ಲಸುಬ್ರಹ್ಮಣ್ಯಂ ಅವರನ್ನು ನೇಮಿಸಲಾಗಿತ್ತು. ಮಿಕ್ಕಂತೆ ... ತಕರಾರುಗಳಿದ್ದರೂ ಕೈಶುದ್ಧ ಇಟ್ಟುಕೊಂಡಿರುವ ...ಲಸುಬ್ರಹ್ಮಣ್ಯಂ ಅವರ ತನಿಖೆಯಲ್ಲಿ ಸಿದ್ದೇಗೌಡರು ...ಕಿಕೊಳ್ಳುವುದು ಗ್ಯಾರಂಟಿ ಎಂದು ಎಲ್ಲರೂ ಎಣಿಸಿ ... ಆದರೆ ಅವರ ವರದಿಯಲ್ಲೂ ಈ ಸಿದ್ದೇಗೌಡರು ...ಾದರು. ಏಕೆಂದರೆ ಸ್ವತಃ ವೈದ್ಯಕೀಯ ಶಿಕ್ಷಣ ...ಯಿಂದ ನಡೆಸಿದ ತನಿಖೆಯಲ್ಲಿ ಸಿದ್ದೇಗೌಡರು ...ಗಿ ಬಟ್ಟಿದ್ದರು. ಆದರೆ ಈ ಇಲಾಖಾ ತನಿಖೆಯು ...ದುವ ರೀತಿ ನೋಡಿದರೆ ಸಿದ್ದೇಗೌಡರನ್ನು ಬಚಾವು ...ಲಿಕ್ಕೆಂದೇ ಅದು ನಡೆದಂತೆ ತೋರುತ್ತದೆ.

...ಕೆಂದರೆ ಈ ತನಿಖಾ ವರದಿಯಲ್ಲಿ ಸಿದ್ದೇಗೌಡರ ...ಕಾತಿಯನ್ನು ಭಾರತೀಯ ವೈದ್ಯಕೀಯ ಪರಿಷತ್ತು ...) ಸಹ ಅನುಮೋದಿಸಿದೆ ಎಂದು ಹೇಳಲಾಗಿದೆ. ...ನವರು ಮಿಮ್ಸ್‌ಗೆ ಬಂದಾಗ ಸಿದ್ದೇಗೌಡರ ಅರ್ಜಿ ... ಷರಾ ಬರೆದು 'ಈ ವ್ಯಕ್ತಿ ಅಸೋಸಿಯೇಟ್ ...ಸರ್ ಆಗಲು ಲಾಯಕ್ಕಿಲ್ಲ, ಒಂದು ವೇಳೆ ಸಂಸ್ಥೆ ಒಪ್ಪಿ ...ಸಿಸ್ಟೆಂಟ್ ಪ್ರೊಫೆಸರ್ ಆಗಿ ತೆಗೆದುಕೊಳ್ಳಬಹುದಷ್ಟೇ' ... ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾದರೆ ವೈದ್ಯಕೀಯ ... ಇಲಾಖೆಗೆ ಸಿದ್ದೇಗೌಡರ ನೇಮಕಾತಿಯನ್ನು ಮಾನ್ಯ ...ದ್ದ ಎಂಸಿಐನ ಸರ್ಟಿಫಿಕೇಟ್‌ಅನ್ನು ತಂದುಕೊಟ್ಟವರು ...ು? ಇದರ ಬಗ್ಗೆ ತನಿಖೆಯು ನಡೆಯಬೇಕಿದೆ.

ಎಂಡಿಸಿ ಉಳಿಸಲು ಸಿದ್ದೇಗೌಡರಿಗೆ ಸಾಥ್

ಈ ರೀತಿಯಾಗಿ ಸಿದ್ದೇಗೌಡರು ಲೋಕಾಯುಕ್ತ ತನಿಖೆ, ...ಖಾ ತನಿಖೆ ಎಲ್ಲದರಲ್ಲೂ ಬಚಾವಾಗಿದ್ದಾರೆಂದರೆ ...ಲ್ಲಿ ಬಹಳಷ್ಟು ಜನರು ಶಾಮೀಲಾಗಿದ್ದಾರೆ ಎಂದೇ ... ಮಿಮ್ಸ್‌ನ ನಿರ್ದೇಶಕರು ಸಹ ಕೈ ಮಿಲಾಯಿಸದೆ ... ನಡೆಯುವುದು ಸಾಧ್ಯವಿಲ್ಲ. ಅಪಾಯಿಂಟ್ ...ಕೊಂಡ ಡಾ.ಚಿದಾನಂದ ಹೇಗೂ ಪರಮಭ್ರಷ್ಟ ...ದ್ದು ಇವರ ಜೊತೆ ಸೇರಿದ್ರ. ನಂತರ ಬಂದ ...ಶಕರುಗಳು ಮಂಡ್ಯದ ಎಂಡಿಸಿ ಲಾಬಿಯ ಮುಂದೆ ... ಮಾಡಲಾಗದೆ ತೆಪ್ಪಗಾಗಿದ್ದಾರೆ. ಎಂಡಿಸಿಯ ...ದಾರರಲ್ಲಿ ಸಿದ್ದೇಗೌಡರ ಪತ್ನಿಯೂ ಒಬ್ಬರು. ಮಿಮ್ಸ್ ...ಯ ಕಥೆಯೇ ಹೀಗೆ. ಇಲ್ಲಿನ ರೇಡಿಯಾಲಜಿಸ್ಟ್‌ಗಳ ...ಂಗ್ ಸೆಂಟರ್ ಆಸ್ಪತ್ರೆಯ ಪಕ್ಕದಲ್ಲೇ ಇರುತ್ತದೆ. ... ಪೆಥಾಲಜಿಸ್ಟ್‌ಗಳ ಲ್ಯಾಬ್‌ಗಳೂ ಹತ್ತಿರವೇ ಇರುತ್ತವೆ. ... ಮೆಡಿಕಲ್ ಕಾಲೇಜು ಉದ್ಧಾರವಾಗಬೇಕು ಎಂದರೆ ... ಸಾಧ್ಯ? ಈ ಎಂಡಿಸಿಯ ಪಾಲುದಾರರಾದ ...ನುಘಟಗಳು ಸಿದ್ದೇಗೌಡರಿಗೆ ಸಾಥ್ ನೀಡಿದ್ದಾರೆ. ... ಪೆಥಾಲಜಿಸ್ಟ್ ಮುಂದುವರೆದು ಮಿಮ್ಸ್ ಅಧ್ವಾನದ ...ತಿಯಲ್ಲೇ ಸಾಗಿದರೆ ಎಂಡಿಸಿಗೆ ಏನು ಲಾಭ.

...ಳ್ಳು ಸರ್ಟಿಫಿಕೇಟ್‌ನ ಸಿದ್ದೇಗೌಡರೇ ಎಕ್ಸಾಮಿನರ್

...ದೇ ಜನವರಿ 19ರಿಂದ ಮಿಮ್ಸ್‌ನ ಎರಡನೇ ...ಬಿಎಸ್‌ನ ಪರೀಕ್ಷೆಗಳು ನಡೆಯಲಿವೆ. ಪ್ರೊಫೆಸರ್ ...ಮಾರ್‌ರ ಜೊತೆ ಎಕ್ಸಾಮಿನರ್ ಆಗಿ ಸಿದ್ದೇಗೌಡರನ್ನು ...ಸಿ ಆದೇಶ ಹೊರಡಿಸಲಾಗಿದೆ. ತಾನೇ ಸ್ವತಃ ಸುಳ್ಳು ...ಫಿಕೇಟ್ ಸಲ್ಲಿಸಿರುವ ಈ ಸಿದ್ದೇಗೌಡರು ಇನ್ನು ...ಬಿಎಸ್ ವಿದ್ಯಾರ್ಥಿಗಳನ್ನು ಯಾಪಾಟಿ ಪರೀಕ್ಷೆ ...ತಿಯಾರು? ಅಥವಾ ತಾವು ಯಾವ ಮಾರ್ಗದಲ್ಲಿ ...ೋಸಿಯೇಟ್ ಪ್ರೊಫೆಸರ್ ಆದರೋ ಅದೇ ...ರ್ಗವನ್ನು ವಿದ್ಯಾರ್ಥಿಗಳಿಗೂ ತೋರಿಸಿಯಾರೇನೋ?

ಐಎಂಎ ಘನತೆ ಉಳಿದೀತೆ?

...ಇಂತಿಪ್ಪ ಸಿದ್ದೇಗೌಡರು ಕಳೆದ ಜೂನ್‌ನಲ್ಲಿ ಐಎಂಎದ ...ಟಕ ವಿಭಾಗದ ಅಧ್ಯಕ್ಷರಾಗಿ ಆಯ್ಕೆಯಾದರು. ಜುಲೈ ...8ರ ಬೆಳಗಾವಿ ಅಧಿವೇಶನದಲ್ಲಿ ಅಧಿಕಾರ ...ಸಿದರು. ಐಎಂಎಯ ಅಧ್ಯಕ್ಷರಾದವರು ಪದನಿಮಿತ್ತ ...ವು ಸರ್ಕಾರೀ ಸಮಿತಿಗಳಲ್ಲೂ ಇರುತ್ತಾರೆ. ರಾಜೀವ್ ...ಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ...ಕೇಟ್‌ಗೂ ಸದಸ್ಯರಾಗುತ್ತಾರೆ. ಇಂದು ಅದೇ ...ವಿದ್ಯಾಲಯ ತನಿಖೆ ನಡೆಸಬೇಕೆಂದರೆ ಅಥವಾ ಕ್ರಮ ...ಳ್ಳಬೇಕೆಂದರೆ ತನ್ನ ಸಿಂಡಿಕೇಟ್ ಸದಸ್ಯನ ಮೇಲೆಯೇ ಕೈಗೊಳ್ಳಬೇಕಾಗುತ್ತದೆ.

...ಇದು ಯಾರಿಗಾದರೂ ಘನತೆ ತರುತ್ತದೆಯೇ? ...ಾದರೂ ವೈದ್ಯರು ನೀತಿಸಂಹಿತೆಯನ್ನು ಮೀರಿದರೆ, ...ಕೀಯ ಕ್ಷೇತ್ರದ ಘನತೆಯನ್ನು ಹಾಳು ಮಾಡಿದರೆ ...ಕಲ್ ಕೌನ್ಸಿಲ್‌ನ ಜೊತೆಗೆ ಐಎಂಎ ಸಹ ಅವರ ...ದ್ಧ ಮಾತನಾಡಬೇಕು. ಐಎಂಎದ ಮೂರು ಘೋಷಿತ ...ದೇಶಗಳಲ್ಲಿ 'ವೈದ್ಯಕೀಯ ವೃತ್ತಿಯ ಗೌರವ ಮತ್ತು ...ತೆಯನ್ನು ಕಾಪಾಡುವುದೂ' ಒಂದಾಗಿದೆ. ಈಗ ಆದರ ...ಕ್ಷರ ಸ್ಥಿತಿಯೇ ಹೀಗಾದರೆ ಇನ್ನು ಗೌರವ, ಘನತೆಯ ...ದೇನು?


■ ವರದಿಗಾರ

ಪ್ರತಾಪ-ಸಿಂಹರ ಸಿಂಹ-ಪ್ರಲಾಪ

ಸಮಕಾಲೀನ ಸಮಸ್ಯೆಯೊಂದರ ಬಗ್ಗೆ ರಾಜಧಾನಿಯ ಮತ್ತೊಂದು ಪತ್ರಿಕೆಯ ಮೈದಾನದಲ್ಲಿ ನಡೆಯುತ್ತಿದ್ದ ಜಗಳವನ್ನು ತಮ್ಮ ಪತ್ರಿಕೆಯ ರಣರಂಗಕ್ಕೆ ಆವಾಹನೆ ಮಾಡಿಕೊಂಡು ಪ್ರತಾಪ ಸಿಂಹರು ನನ್ನನ್ನು ಹಿಗ್ಗಾಮುಗ್ಗಾ ಜಾಡಿಸಿದ್ದಾರೆ. (ವಿ.ಕ. ಜನವರಿ 10)

* ನಾನು ಬರೆದ ಮೂರೇ ಮೂರು ವಾಕ್ಯಗಳು ನಮ್ಮ ಭಾರತೀಯ 'ವಿಚಾರವಂತ'ರನ್ನು ಇಷ್ಟು ಘಾಸಿಗೊಳಿಸಬಹುದೆಂದು ನನಗೆ ಅನ್ನಿಸಿರಲಿಲ್ಲ. 'ಮುಂಬೈಯ ಕಾಮಾಟಿಪುರದ ವಾಸನೆ' (ಎಂಬ ಶಬ್ದ) ಮೊದಲು ಬಂದದ್ದೇ ಶತಾವಧಾನಿ ಗಣೇಶ್ ಅವರ ಬಾಯಿಯಿಂದ. ಆ ಮಾತಿಗೆ ಬಂದ ಪ್ರಕ್ರಿಯೆಗಳ ಸರಣಿಯಲ್ಲಿ ನನ್ನಿಂದ ಅವರಿಗೆ 'ಕಾಮಾಟಿಪುರ ಗಣೇಶ್' ಎಂದು ನಾಮಕರಣವಾದದ್ದು. ಈಗ ಒಂದು what if. ಅವತ್ತು ಅವರ ಬಾಯಿಯಿಂದ ಆ ಮಾತು ಬಂದಿರದಿದ್ದರೇ?... ಏನೂ ಆಗುತ್ತಿರಲಿಲ್ಲ. ಬೆತ್ತಲೆ ಜಗತ್ತಿನ ಪ್ರತಾಪ-ಸಿಂಹರ ಸಿಂಹ-ಪ್ರಲಾಪವನ್ನು ನಾವು ಕೇಳುತ್ತಿರಲಿಲ್ಲ. ಗಣೇಶರ ಹೊಸ ನಾಮಧೇಯವು ಅವರ 'ಗೋರಿ' ಎಂದಾದರೆ ಅದನ್ನು ತೋಡಿಕೊಂಡವರು ಅವರೇ ಅಲ್ಲವೇ?

* 'ಇನ್ನು ಮುಂದಾದರೂ ಮಾತನಾಡುವ ಮೊದಲು ಯೋಚಿಸುವುದೊಳಿತು. ಅಷ್ಟಕ್ಕೂ ಇತರರನ್ನು ನಿಂದಿಸಿದರೆ ಅವರು ತಿರುಗಿ ಹೂವಿನ ಹಾರ ಹಾಕುವುದಿಲ್ಲ' ಎಂಬ ಪ್ರತಾಪ ಸಿಂಹರ ನೀತಿ ಮಾತು ಲಿಂಗ ಮೆಚ್ಚಿ ಅಹುದಹುದೆನ್ನುವ ಮಾತು! ಶತಾವಧಾನಿಗಳು ಇನ್ನು ಮುಂದಾದರೂ ಅವಧಾನಿಸಬೇಕು.



* ಚಿದಾನಂದಮೂರ್ತಿಗಳ 'ಎತ್ತರ'ದ ವಿಷಯ. ವಿಚಾರವಂತರ ವೇದಿಕೆಯಲ್ಲಿದ್ದವರೆಲ್ಲ 'ಸಮಾನ ಮನಸ್ಕರು' ಎಂದು ನನ್ನ ಅರ್ಥ. ನನ್ನ ವಾಕ್ಯವನ್ನು ಅವರವರಿಗೆ ಕಂಡಂತೆ ಗ್ರಹಿಸಬಹುದು. ಚಿಮೂ 'ಮಹಾನ್ ವಿದ್ವಾಂಸ' ಎಂದಾದರೆ ಉಳಿದವರೂ ಮಹಾನ್ ವಿದ್ವಾಂಸರೇ. ಚಿಮೂ 'ಕುಬ್ಜ-ಪಂಡಿತ' ಎಂದಾದರೆ ಉಳಿದವರೂ ಅವರೇ!

* ಪ್ರತಾಪ ಸಿಂಹರು 'ಇಂಗ್ಲಿಷ್ ಬೋರ್ಡ್ ಮೇಲೆ ಮೂತ್ರ ಮಾಡುವ ನಾಯಿಯ ಚಿತ್ರ ನೀಡಿದ್ದಾರೆ. ಅಷ್ಟು ಎತ್ತರದ ಬೋರ್ಡ್ ಮೇಲೆ ಬೀದಿಯ ಮೇಲಿನ ಒಂದು ಪ್ರಾಣಿ ಉಚ್ಚೆ ಹೊಯ್ಯುವುದೇ ಒಂದು ಅಸಂಬದ್ಧವಾದ, ಅದ್ಭುತ ಕಲ್ಪನೆ. ಇಂಥ 'ಪ್ರತಾಪ'ವನ್ನು ಸಿಂಹವೇ ಮಾಡಲಿ, ನಾಯಿಯೇ ಮಾಡಲಿ-ಅದು ನನ್ನದು ಅಂತ ಕ್ಲೈಮ್ ಮಾಡುವುದು ನನ್ನ ಭಾಗ್ಯ!

* ಪಾಪ, ನನ್ನ 'ಚಂಪಾ' ಎಂಬ ಹೆಸರು ಗಂಡೋ, ಹೆಣ್ಣೋ, ತಿಂಡಿಯೋ, ಜಿರಲೆ ಮದ್ದೋ ಎಂಬುದೇ ಗೊತ್ತಿಲ್ಲವಂತೆ! (ಇಂಥದೆಲ್ಲ ಪತ್ತೆ ಹಚ್ಚುವ ಜವಾಬ್ದಾರಿಯನ್ನು ತೀಕ್ಷ್ಣ ವಾಸನಾ-ಪ್ರಜ್ಞೆಯ ವಿಚಾರವಂತರಿಗೆ ವಹಿಸುವುದು ಒಳ್ಳೆಯದು). 'ಜಿರಲೆ ಮದ್ದು'-ಎಂಬ ಅರ್ಥ ಹೆಸರು ನನಗೆ ಪ್ರಿಯವಾಯಿತು. ನನ್ನ ಪ್ರಶ್ನೆ : ನಾನು 'ಮದ್ದು' ಆದರೆ 'ಜಿರಲೆ'ಗಳು ಯಾರ್‍ಯಾರು?

-ಚಂದ್ರಶೇಖರ ಪಾಟೀಲ

ಉಲ್ಲೇಖ: ವಿಜಯಕರ್ನಾಟಕ: 10 ಜನವರಿ 2009. ಪ್ರತಾಪ್ ಸಿಂಹರ ಅಂಕಣ-ಲೇಖನ: ಗಣೇಶ್ ಮಾತಾಡಿದರೆ ಚಂಪಾ ನಾಲಿಗೆಯೇಕೆ ತುರಿಸುತ್ತದೆ?

"ಪ್ರಗತಿ ಹೆಸರಲ್ಲಿ ಸೇಡಿನ ರಾಜಕಾರಣ ಮಾಡಬಾರ್ದು"

ಥೂತ್ತೇರಿ — ಯಾಹೂ

ಜನಾರ್ದನ ರೆಡ್ಡಿ ಎಂಬ ಗಣಿಕಳ್ಳ ಅನಂತಮೂರ್ತಿಯವರನ್ನೇ ಮೂರ್ಖ ಸಾಹಿತಿ ಎಂದು ಕರೆದಿರುವುದಕ್ಕೆ ಚೆಡ್ಡಿಗಳ ಒಡ್ಡೋಲಗ ಚಪ್ಪಾಳೆ ತಟ್ಟಿ ನಕ್ಕಿತಂತಲ್ಲಾ, ಇನ್ನು ರೆಡ್ಡಿ ಪ್ರಿಯ ಚೆಡ್ಡಿ ಪತ್ರಕರ್ತರು "ನಮ್ಮ ಜನಾರ್ದನ ರೆಡ್ಡಿಗಿರುವ ಧೈರ್ಯ ಕನ್ನಡದ ಯಾವ ಸಾಹಿತಿಗೂ ಇಲ್ಲ, ರೆಡ್ಡಿ ಎಂತಹ ಮಾತನಾಡಿದ್ದಾನೆ ನೋಡಿ. ಅನಂತಮೂರ್ತಿಯನ್ನು ಮೂರ್ಖ ಸಾಹಿತಿ ಎನ್ನಬೇಕಾದರೆ ಹಣಬಲದ ಶಕ್ತಿಯಿದ್ದವರು ಮಾತ್ರ ಹಾಗೆನ್ನಬಲ್ಲರು. ರೆಡ್ಡಿ ಮಾತನ್ನ ವಿಸ್ತರಿಸುವುದಾದರೆ ಅನಂತಮೂರ್ತಿ ರಚಿಸಿರುವುದು ಮೂರ್ಖ ಸಾಹಿತ್ಯ. ಅಲ್ರೀ ಸತ್ತ ವ್ಯಕ್ತಿಯ ಸಂಸ್ಕಾರ ಮಾಡುವುದನ್ನು ಬಿಟ್ಟು, ಶಾಸ್ತ್ರ ಕೇಳುತ್ತ ಕೂರುವುದನ್ನು ಎಲ್ಲಿಯಾದರೂ ನೋಡಿದ್ದೀರಾ? ಇಂತಹ ಕಾದಂಬರಿ ಬರೆದು ದೂರ್ವಾಸಪುರದ ಬ್ರಾಹ್ಮಣರ ಮಾನವನ್ನು ಹರಾಜು ಹಾಕಿದ್ದ ಅನಂತಮೂರ್ತಿಗೆ ಸರಿಯಾಗಿಯೇ ಇಕ್ಕಿದ್ದಾನೆ" ಎಂದು ಮೆಚ್ಚುಗೆಯಿಂದ ಮಾತನಾಡುತ್ತ ಗಣಿ ಕಳ್ಳನನ್ನು ಹುಡುಕುತ್ತ ಹೋದರಂತಲ್ಲಾ, ಥೂತ್ತೇರಿ!

* * * * * * *

ಈಗ ಹಾಲಿ ಸರ್ಕಾರದಲ್ಲಿರುವ ಮಂತ್ರಿಗಳಿಗೆ ನಾವು ಏನು ಹೇಳಿದರೂ ಅರ್ಥವಾಗುವುದಿಲ್ಲವೆಂದು ಖರ್ಗೆ ಹಲುಬಿದ್ದಾರಂತಲ್ಲಾ, ಖರ್ಗೆ ಮಾತನ್ನು ಕರ್ನಾಟಕದ ಜನತೆ ಸೂಕ್ಷ್ಮವಾಗಿ ಗಮನಿಸಲಾಗಿ ಅವರ ಮಾತು ನೂರಕ್ಕೆ ನೂರು ಸತ್ಯವಾಗಿದೆಯಂತಲ್ಲಾ, ಮುಖ್ಯವಾಗಿ ಎಡೂರಪ್ಪನ ಮಾತುಗಳೇ ಅರ್ಥವಾಗಲ್ಲ, ಅವು ಬಿಜೆಪಿಗಳಿಗೆ ಮಾತ್ರ ಅರ್ಥವಾಗುತ್ತವೆ. ಇನ್ನು ಗೃಹಮಂತ್ರಿಯ ಮಾತು ಗೊಣಗಾಟದಂತೆ ಕೇಳಿಸುವುದರಿಂದ ಪೊಲೀಸರು ಯಾರಿಗೂ ಕೇರ್ ಮಾಡುತ್ತಿಲ್ಲವಂತೆ. ಆಡಳಿತದ ಅನುಭವ ಇಲ್ಲದವರಿಗೆ ಭಾಷೆಯೂ ಗೊತ್ತಿರುವುದಿಲ್ಲ, ಅವರಿಗೆ ಗೊತ್ತಿರುವುದೆಲ್ಲಾ ಲಾಟ ಭಾಷೆ, ಬೆಂಕಿ ಭಾಷೆ ಮತ್ತು ಕಳ್ಳಭಾಷೆ ಎಂಬುದು ಚೆಡ್ಡಿ ವಿರೋಧಿಗಳ ವ್ಯಾಖ್ಯಾನವಾಗಿರುವಾಗಲೇ ನಮ್ಮ ಮಾಜಿ ಪ್ರಧಾನಿಗಳಾದ ದೇವೇಗೌಡರೂ ಯಾರ ಅರಿವಿಗೂ ಗೋಚರವಾಗದ ಮಾತನಾಡುತ್ತಿದ್ದಾರಂತಲ್ಲಾ, ಥೂತ್ತೇರಿ.

* * * * * * *

ಯಡಿಯೂರಪ್ಪ ಎಲ್ಲಾ ರೀತಿಯ ಪೂಜೆ, ಹವನ, ಹೋಮ, ತುಲಾಭಾರ ಮಾಡಿಕೊಂಡು ಗಟ್ಟಿಯಾಗಿರುವುದರಿಂದ "ಅಧಿವೇಶನದಲ್ಲಿ ಪ್ರತಿಪಕ್ಷದವರ ಭೂತ ಬಿಡಿಸುತ್ತಾರೆ ನೋಡುತ್ತಿರಿ" ಎಂದು ಮಾಜಿ ಪ್ರಧಾನಿಗಳು ಕೊಟ್ಟ ಹೇಳಿಕೆಯನ್ನು ಕೆಲ ಬಿಜೆಪಿಗಳು ಆಡಿಕೊಂಡರಂತಲ್ಲಾ, "ಅಲ್ರೀ, ರಾಜಕೀಯ ಶತ್ರುವಾಗಿ ಈ ದೇವೇಗೌಡ ಏನೇನು ಮಾಡುತ್ತಾರೂ ಅದನ್ನೆ ನಮ್ಮ ಯಡಿಯೂರಪ್ಪ ಮಾಡುತ್ತಾರೆ. ಇಂತಹ ಕಾರ್ಯದಲ್ಲಿ ದೇವೇಗೌಡರು ಮತ್ತು ಎಡೂರಪ್ಪ ಅಣ್ಣತಮ್ಮ ಇದ್ದಂತೆ. ವಸ್ತು ಸ್ಥಿತಿ ಹೀಗಿರುವಾಗ ಗೌಡರು ಆಡಿಕೊಳ್ಳುವುದು ಸರಿಯಲ್ಲ. ಬದಲಿಗೆ, ಇಂತಹ ಕ್ಷುದ್ರಶಕ್ತಿಗಳನ್ನು ಮೆಚ್ಚಿ ಮಾತನಾಡಬೇಕು" ಎಂದವಂತಲ್ಲಾ, ಥೂತ್ತೇರಿ!

* * * * * * *

ದಂಡಾವತಿ ಯೋಜನೆಯ ವಿರೋಧಿ ಧುರೀಣರು, ಮಾಜಿ ಬಿಜೆಪಿ ಸಂಸದರೂ ಆದ ಬಂಗಾರಪ್ಪನವರನ್ನು ಈ ಸಮಯದಲ್ಲಿ ಮಾತಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಿದರೆ ಸಿಕ್ಕೇಬಿಟ್ಟರು!

ರಿಂಗ್ ಟೋನ್: "ಯಾರೇ ಕೂಗಾಡಲಿ ಊರೇ ಹೋರಾಡಲಿ ನಿನ್ನ ನೆಮ್ಮದಿಗೆ ಭಂಗವಿಲ್ಲ ಎಮ್ಮೆ ನಿನಗೆ ಸಾ.....

"ಹಲೋ ಯಾರೂ?"

"ನಾನು ಸಾರ್ ಪತ್ರಕರ್ತ ಯಾಹೂ."

"ಯಾಹೂ ಅವ್ರುರೆ ಚೆನ್ನಾಗಿದ್ದೀರ? ಬನ್ನಿ ಇಲ್ಲಿಗೆ."

"ಎಲ್ಲಿದ್ದೀರ ಸಾರ್?"

"ಇನ್ನೆಲ್ಲಿರನಾ, ದಂಡಾವತಿ ಏರಿಯಾದಲ್ಲಿದ್ದಿನಿ."

"ಯೋಜನೆ ಕೆಲಸ ನಡೆಯುತ್ತ ಸಾರ್?"

"ಆ ಎಡೂರಪ್ಪ ತಿಪ್ಪರಲಾಗ ಹೊಡದ್ರೂ ದಂಡಾವತಿ ಯೋಜನೆ ನಡಿಯುವುದಿಲ್ಲ"

"ಯಾಕ್ ಸಾರ್?"

"ಅವನು ಮೂಲತಃ ದಡ್ಡ ಮತ್ತು ಪುಕ್ಕಲ."

"ಪುಕ್ಕಲ ಅಂತಿರಿ. ಆದರೆ ಅವರು ನಿಮ್ಮ ಕ್ಷೇತ್ರಕ್ಕೇ ಬಂದು ಶಿಲಾನ್ಯಾಸ ಮಾಡಿದರಲ್ಲ ಸಾರ್?"

"ಅದೇ ನೀವು ತಪ್ಪು ತಿಳಕೊಂಡಿರೋದು. ಎಡೂರಪ್ಪ ಶಿಲಾನ್ಯಾಸ ಮಾಡಿರೋದು ಪೊಲೀಸ್ ಸರ್ಪಗಾವಲಲ್ಲಿ ಕಂಡ್ರೀ. ಅದು ಯೋಜನೆ ಜಾಗದಲಲ್ಲ, ಇನ್ನೆಲ್ಲೋ ಮಾಡಿದಾರೆ. ಇಲ್ಲೇ ಗೊತ್ತಾಗುತ್ತೆ ಆತ ಎಷ್ಟು ಪುಕ್ಕಲ ಅಂತ. ಈತನಿಗಿಂತ ನಮ್ಮ ಮೊಯ್ಲಿನೆ ವಾಸಿ ಕಂಡ್ರಿ."

"ಹಂಗಂತೀರಾ?"

"ಹೌದು ಕಂಡ್ರಿ, ಮೂರ್ನಾಲ್ಕು ಜನ ರೌಡಿ ಶಾಸಕರು ಹೊಡೆಯಕ್ಕೋದ್ರು ಹೆದರದೆ ಅವರ ಚೇಂಬರ್‌ಗೆ ಹೋಗಿ ಬಾಗಲಾಯ್ಕಂಡಿದ್ರು. ಅದೇ ಈ ಎಡೂರಪ್ಪ ಸರ್ಪಗಾವಲಲ್ಲಿ ಶಿಲಾನ್ಯಾಸ ಮಾಡ್ತಾನೆ. ನನ್ನ ಎದುರುಸೋ ತಾಕತ್ತಿದೆಯೇನ್ರಿ. ಒಬ್ಬ ಅನಾಮಧೇಯ ಮಹಾಲಿಂಗಪ್ಪನ್ನ ಈತನ ಎದುರು ನಿಲ್ಸಿ ಸೋಲಿಸಿದ್ದೆ ಗೊತ್ತ?"

"ಅದು ಸರಿ, ಈಗ ನೀವೇ ಸೋತರಲ್ಲ ಹೇಳಿ."

"ನಾನು ಶಿಕಾರಿಪುರಕ್ಕೆ ಬರಿಗೈಲೋಗಿದ್ದೆ. ಎಡೂರಪ್ಪ ಅವನ ಮಕ್ಕಳು ಸುಮಾರು ಅರವತ್ತು ಕೋಟಿ ತಗಂಡು ಬಂದಿದ್ರು. ಮುಸ್ಲಿಮರು ಕೂಡ ಎಡೂರಪ್ಪನ ಪರ ಪ್ರಚಾರ ಮಾಡಿದ್ರು ಅಂದ್ರೆ ಇನ್ನೆಷ್ಟು ದುಡ್ಡು ಕೊಟ್ಟಿರಬವುದು ನೀವೆ ಲೆಕ್ಕಹಾಕಿ."

"ಲೆಕ್ಕ ಹಾಕಿದ್ದೊ ಸಾರ್. ಪ್ರತಿ ಮುಸ್ಲಿಂ ಲೀಡರ್ ಕೈಗೂ ಒಂದು ಲಕ್ಷ ಕೊಟ್ಟಿದ್ದರಂತೆ."

"ಮತ್ತೆ ನಾನು ಗೆಲ್ಲಕ್ಕಾಗತ್ತ? ಎಡೂರಪ್ಪನಿಗೆ ನನ್ನ ಮೇಲೆ ಎಷ್ಟು ಸೇಡಿದೆ ಅಂದ್ರೆ ಆ ಕಾರಣಕ್ಕೆ ಕಂಡ್ರಿ ಸಾರಾಯಿ ನಿಲ್ಸಿರೋದು. ಅದೂ ಹೋಗ್ಲಿ, ಶಿಕಾರಿಪುರದಲ್ಲಿ ಕಾಂಗ್ರೆಸ್‌ನವರ ಜಮೀನು ಹೋಗ್ಲಿ ಅಂತ ಹೇಳಿ ರಿಂಗ್‌ರೋಡು ಮಾಡಿಸಲು ಹೊರಟಿದ್ದ ಈ ರಣಹೇಡಿ. ಯಾವತ್ತು ಬಿಜೆಪಿಗಳ ಜಮೀನೂ ಹೋಗುತ್ತೆ ಅಂತ ಗೊತ್ತಾಯ್ತೋ ಆಗ ಸುಮ್ಮನಾಗಿದ್ದಾನೆ. ಯಾವತ್ತೂ ಪ್ರಗತಿ ಹೆಸರಲ್ಲಿ ಸೇಡಿನ ರಾಜಕಾರಣ ಮಾಡಬಾರ್ದು. ಲಿಂಗನಮಕ್ಕಿ ಹಿನ್ನೀರಿನ ಜನರ ಬವಣೆಗೆ ಇನ್ನೂ ನಮ್ಮ ಕಣ್ಣುಮುಂದಿದೆ. ವರಾಹಿ ಸಂತ್ರಸ್ತರ ಕತೆ ದಾರುಣವಾಗಿದೆ. ಈಗ ನನ್ನ ಕ್ಷೇತ್ರದ ಜನರನ್ನು ಒಕ್ಕಲೆಬ್ಬಿಸಕ್ಕೆ ಬಂದಿರೊ ಈ ಎಡೂರಪ್ಪನ್ನ ಒಕ್ಕಲೆಬ್ಬಿಸೋವರಿಗೂ ನಾನು ವಿಶ್ರಾಂತಿ ತಗೊಳಲ್ಲ."


"ಈಗ್ಲೂ ಆಗಾಗ್ಗೆ ವಿಶ್ರಾಂತಿ ತಗೋತೀರಂತಲ್ಲಾ ಸಾರ್?"

"ತಗೊಳ್ಳಬೇಕಲ್ಲ, ತಿರುಗಾಟ, ಭಾಷಣ, ನಿರಂತರವಾಗಿ ನಡೆದಿವೆ."


"ದಂಡಾವತಿ ಹೋರಾಟ ಎಲ್ಲಿವರೆಗೂ ನಡೆಯುತ್ತೆ ಸಾರ್?"

"ಈ ಯೋಜನೆಯಿಂದ ಒಬ್ಬ ರೈತನ ಆತ್ಮಹತ್ಯೆ ನಡೆದಿದೆ. ಈ ಎಡೂರಪ್ಪ ಆತ್ಮಹತ್ಯೆ ಮಾಡಿಕಳೋವರಿಗೂ ನಡೆಯುತ್ತೆ! ■

"ಥೂತ್ತೇರಿ!"



ಗದಗ: ನಟೋರಿಯಸ್ ಚೀಟರ್
ಮೋನ್ನಾ ಅಂದರ್-ಬಾಹರ್



ಮೋನ್ನಾ

ತೊಂಬತ್ತರ ದಶಕದ ಕಾಲದಲ್ಲಿ ಮುಂಬೈ ಕರ್ನಾಟಕ ಭಾಗದಲ್ಲಿ ಡಬ್ಲಿಂಗ್, ಚೀಟಿಂಗ್ ಸುಪಾರಿ ಕಿಲ್ಲಿಂಗ್ ಸಾಲದ್ದಕ್ಕೆ ಲೆಕ್ಕಕ್ಕೆ ಸಿಗದಷ್ಟು ರೇಪುಗಳ ದೊಡ್ಡ ಅಧ್ಯಾಯವನ್ನೇ ಸೃಷ್ಟಿಸಿಕೊಂಡಿದ್ದವನು ಬೆಳಗಾವಿಯ ಭೂಗತ ಪಾತಕಿ ಪ್ರವೀಣ ಶಿಂತ್ರೆ. ಈತ ಅರೆಸ್ಟು, ಜೈಲು, ಬೇಲು ಅಂತೆಲ್ಲಾ ಅಲೆದಾಡಿ ಕಡೆಗೆ ಪೊಲೀಸರ ಸುಳ್ಳು ಎನ್‌ಕೌಂಟರ್‌ನಲ್ಲಿ ಬಲಿಯಾಗಿ ಹೋದ. ಆದರೆ ಪಾಪಿ ಚಿರಾಯು ಎಂಬಂತೆ ತನ್ನ ಪಳಿಯುಳಿಕೆಯನ್ನಾಗಿ ನಟೋರಿಯಸ್ ಚೀಟರ್ ಕಿರಾತಕ ಮೋನ್ನಾನನ್ನು ಭೂಮಿ ಮೇಲೆ ಬಿಟ್ಟು ಹೋಗಿದ್ದ. ಅದೇ ಇವತ್ತು ದುರಂತವಾಗಿದೆ.


ಗುರುವಿನ ಕಾಯಕವನ್ನು ಯಥಾವತ್ತಾಗಿ ಮುಂದುವರೆಸಿರುವ ಮೋನ್ನಾ ಅಲಿಯಾಸ್ ಮೋಹನ ವಾಳ್ವೇಕರ್ ಗದಗವನ್ನೇ ತನ್ನ ಮೂಲ ಅಡ್ಡೆಯನ್ನಾಗಿಸಿಕೊಂಡು ಅಡ್ಡಕಸುಬುಗಳ ದೊಡ್ಡ ಜಾಲವನ್ನೇ ನಿರ್ಮಿಸಿಕೊಂಡಿದ್ದಾನೆ. ಉತ್ತರ ಕರ್ನಾಟಕದ ಬರೋಬ್ಬರಿ ಎಂಟು-ಹತ್ತು ಪೊಲೀಸ್ ರೆಕಾರ್ಡ್‌ಗಳಲ್ಲಿ ಖಾಯಂ ಪರಾರಿ ಎಂದು ರಿಪೋರ್ಟ್ ಹಾಕಿಸಿಕೊಂಡು ಖಾಕಿಗಳೊಂದಿಗೆ ಮಿಲಾಪಿ ಬಿಜಿನೆಸ್ ಪ್ರಾರಂಭಿಸಿದ್ದಾನೆ. ಆದರೆ ಈತ ತನ್ನ ಕಚ್ಚೆಹರುಕುತನದಿಂದ ಮೊನ್ನೆ ಗದುಗಿನ ಪೊಲೀಸರ ಗಾಳಕ್ಕೆ ಬಿದ್ದಿದ್ದಾನೆ. ಸದಾ ಹೆಣ್ಣಿಗಾಗಿ ಹಪಹಪಿಸುವ ಮೋನ್ನಾ ನಗರದ ತ್ರಿಮೂರ್ತಿ ಲಾಡ್ಜ್‌ನ ರೂಮ್ ನಂ.6ರಲ್ಲಿ ಧಾರವಾಡದ ಮುಸ್ಲಿಂ ಯುವತಿಯೊಂದಿಗಿದ್ದಾಗ ಗದುಗಿನ ಪೊಲೀಸರು ಅರೆಸ್ಟ್ ಮಾಡಿದ್ದಾರೆ. ಈ ಕಿರಾತಕನ ಮಾತಿನ ಮೋಡಿಗೆ ಮರುಳಾಗಿ ಆತನಿಗೆ ಹಣಕೊಟ್ಟು ಕೈ ಸುಟ್ಟುಕೊಂಡ ಅಮಾಯಕ ಜನರೇ ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಅವನನ್ನು ಪೊಲೀಸ್ ಅತಿಥಿಯನ್ನಾಗಿ ಮಾಡಿದ್ದಾರೆ. ಶಹರ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಸಿ. ಪ್ರಕಾಶ ಇದೊಂದು ಸುವರ್ಣಾವಕಾಶವೆಂದು ಮೋನ್ನಾ ಕೈಗೆ ಕೋಳ ಹಾಕಿದ್ದಾರೆ. ಆದರೆ ಪೊಲೀಸ್ ಠಾಣೆಯೆಂದರೆ ತನ್ನ ಸ್ವಂತ ಮನೆಯೆಂದೂ, ಕೋರ್ಟು ಎಂದರೆ ಬೀಗರ ಮನೆ ಎಂದೂ ತಿಳಿದುಕೊಂಡಿರುವ ಮೋನ್ನಾ ಅರೆಸ್ಟಾಗಿ ಅಂದರ್ ಆದ ಮೂರೇ ದಿನಕ್ಕೆ ಜೈಲಿಂದ ಬಾಹರ್ ಆಗಿದ್ದಾನೆ. ಪೀಡೆಯೊಂದು ತೊಲಗಿತು ಎಂದು ಗದುಗಿನ ಜನ ನಿಟ್ಟುಸಿರು ಬಿಡುವ ಮೊದಲೇ ಆತ ಬಾಹರ್ ಆಗಿದ್ದು ದುರಂತವೇ ಸರಿ.

ಯಾರೀ ಮೋನ್ನಾ?

ಮೂಲತಃ ಧಾರವಾಡದವನಾದ ಈ ಮೋನ್ನಾ ಒಂದು ಕಾಲಕ್ಕೆ ಅಲ್ಲಿಯ ಲಕ್ಷ್ಮೀ ಟಾಕೀಸ್ ಎದುರಿಗೆ ಒಂದು ಬೀಡಾ ಅಂಗಡಿ ಇಟ್ಟುಕೊಂಡಿದ್ದವನು. 1986ರಲ್ಲಿ ಚೆಡ್ಡಿಗಳೊಂದಿಗೆ ಸೇರಿಕೊಂಡು ರಷೀದ್ ಮತ್ತು ಬಷೀರ್ ಅಹಮದ್ ಎಂಬ ಮುಸ್ಲಿಂ ಯುವಕರೊಂದಿಗೆ ಜಗಳವಾಡಿ ಪೆಟ್ಟು ತಿಂದು ಅಲ್ಲಿಂದ ಜಾಗ ಖಾಲಿ ಮಾಡಿ ಗದುಗಿನ ಡಬ್ಲಿಂಗ್ ಡಾನ್ ಡಾ|| ಬಾಕಳೆನ ಹತ್ತಿರ ಕಾರ್ ಡ್ರೈವರ್ ಆಗಿ ವಕ್ಕರಿಸಿದ. ಅಲ್ಲಿದ್ದು ಕೊಂಡೇ ಬಾಕಳೆನ ಎಲ್ಲಾ ಹಲ್ಕಾ ದಂಧೆಗಳಲ್ಲಿ ಪದವಿ ಪಡೆದುಕೊಂಡು ಮುಂದೊಂದು ದಿನ ಬಾಕಳೆನ ಸೊಸೆಯ ಶೀಲಕ್ಕೆ ಕೈಹಾಕಿ ಒದೆ ತಿಂದು ಗದುಗಿನಿಂದ ಕಾಲ್ಕಿತ್ತು ಮತ್ತೆ ಧಾರವಾಡದಲ್ಲಿ ಠಿಕಾಣಿ ಹೂಡಿದ. ಬಾಕಳೇನ ವಿದ್ಯೆಗಳನ್ನು ಧಾರವಾಡ ಮತ್ತು ಹುಬ್ಬಳ್ಳಿಯ ಮಾರ್ವಾಡಿ ಗೋಲ್ಡ್ ಸ್ಮಿತ್‌ಗಳ ಮೇಲೆ ಪ್ರಯೋಗ ಮಾಡಿ ಕೆಲವೇ ದಿನಗಳಲ್ಲಿ ಸೈದಾಪುರ ಏರಿಯಾದಲ್ಲಿ ಆವತ್ತಿನ ಕಾಲದಲ್ಲಿ 30 ಲಕ್ಷ ಮೌಲ್ಯದ ಮನೆ ಕಟ್ಟಿಸಿದ್ದ. ಸಣ್ಣ ಪೇದೆಯಿಂದ ಹಿಡಿದು ಪೊಲೀಸ್ ಕಮೀಷನರ್‌ವರೆಗೆ ಹಣ, ಹೆಂಡ ಜೊತೆಗೆ ಹೆಣ್ಣು ಸಪ್ಲೈ ಮಾಡುತ್ತಾ ತನ್ನ ಹಲ್ಕಾ ದಂಧೆಗಳಿಗೆ ಅವರನ್ನೆಲ್ಲಾ ಸೆಕ್ಯೂರಿಟಿ ಗಾರ್ಡ್‌ಗಳಂತೆ ಇಟ್ಟುಕೊಂಡಿದ್ದ. ಕೇವಲ ಏಳನೇ ಕ್ಲಾಸ್ ಓದಿದ್ದ ಮೋನ್ನಾ ಮೂರ್ನಾಲ್ಕು ಭಾಷೆಗಳನ್ನು ಮಾತಾಡುವ ಅಗಾಧ ವಾಕ್‌ಚಾತುರ್ಯ ಬೆಳೆಸಿಕೊಂಡ. ನಕಲಿ ಬಂಗಾರವನ್ನು ಅಸಲಿ ಎಂದು ನಂಬಿಸಿ ಎಂಥವರನ್ನೂ ಯಾಮಾರಿಸುವಷ್ಟು ಚಾಲಾಕಿ ಖದೀಮನಾಗಿ ಬೆಳೆದ.

ಇವನ ಚಾಲಾಕಿತನಕ್ಕೆ ಯಾಮಾರಿಸಿ ಟೋಪಿ ಹಾಕಿಸಿಕೊಂಡವರ ಪಟ್ಟಿಯಲ್ಲಿ ಕೇವಲ ಅವಿದ್ಯಾವಂತ ಅಮಾಯಕರು ಮಾತ್ರ ಇಲ್ಲ, ಡಿಗ್ರಿ, ಮಾಸ್ಟರ್ ಡಿಗ್ರಿ ಪಡೆದುಕೊಂಡ ಅದೆಷ್ಟೋ ಬುದ್ಧಿವಂತ ಜನರೂ ಇವನಿಂದ ಮಕ್ಮಲ್ ಟೋಪಿ ಹಾಕಿಸಿಕೊಂಡಿದ್ದಾರೆ. ಹಣ ದುಪ್ಪಟ್ಟು ಮಾಡಿಕೊಡುವುದಾಗಿ ಧಾರವಾಡದ ಬೂದನಗೌಡ, ಹುಬ್ಬಳ್ಳಿಯ ಮೇತ್ರಾಣಿಗಳಂಥವರಿಗೂ ಲಕ್ಷಾಂತರ ರೂಪಾಯಿಗೆ ಪಂಗನಾಮವಿಟ್ಟದ್ದು, ತನ್ನ ಸ್ವಂತ ಮನೆಯನ್ನೇ ಮಾರುತ್ತಿದ್ದೇನೆಂದು ಹೇಳಿ ಇಚಲಕರಂಜಿಯ ದೀಪಕ್ ಪಟೇಲನಿಗೆ ಅನಾಮತ್ತು ಇಪ್ಪತ್ತು ಲಕ್ಷ ಟೋಪಿ ಹಾಕಿದ್ದು, ಬಂಗಾರ ನೀಡುವುದಾಗಿ ದಾವಣಗೆರೆಯ ಚಂದ್ರು ರಾಯ್ಕರ್‌ನ ನಾಲ್ಕು ಲಕ್ಷ ಗುಳುಂ ಮಾಡಿದ್ದು, ಮತ್ತ್ಯಾರಿಗೋ ರೈಸ್ ಪುಲ್ಲಿಂಗ್ ತೋರಿಸಿ, ಟ್ರೈಲರ್ ತೋರಿಸಿ ಭೂಮಿಯಿಂದ ಇದು ನಿಧಿ ಎಳೆಯಬಲ್ಲುದು ಎಂದು ಬೊಗಳೆ ಬಿಟ್ಟು 30 ಲಕ್ಷ ಯಾಮಾರಿಸಿದ್ದು - ಹೀಗೆ ಸ್ವಲ್ಪ ಕೆದಕಿದರೆ ಸಾಕು ಮೋನ್ನಾ ಟೋಪಿಯಿಟ್ಟ ಅದೆಷ್ಟೋ ಪ್ರಕರಣಗಳು ಕಣ್ಣಿಗೆ ರಾಚುತ್ತವೆ. ಚೀಟಿಂಗ್ ಅನ್ನೇ ಒಂದು ಫುಲ್ ಟೈಮ್ ದಂಧೆಯನ್ನಾಗಿ ಮಾಡಿ ಕೊಂಡಿದ್ದ ಈತ ಟೋಪಿ ಹಾಕಿಸಿ ಕೊಂಡವರ್ಯಾರಾದರೂ ಜಗಳಕ್ಕೆ ನಿಂತರೆ ಅಂಥವರನ್ನು ಸಂಭಾಳಿಸುವುದಕ್ಕೆಂದೇ ಇಸ್ಮಾಯಿಲ್ ಅಹಮದ್, ಜಾವಿಮೇಕರ್, ಇಕ್ಬಾಲ್ ಮುಕ್ತಿಯಾರ, ಬಕ್ಷ ಕಿಲ್ಲರ್ ಜಾವಿದ್‌ನಂಥ ಧಾರವಾಡದ ಪುಡಿ ರೌಡಿಗಳನ್ನು ಅನ್ನ-ನೀರು ಹಾಕಿ ಸಾಕಿಕೊಂಡಿದ್ದ. "ಒಂದು ರೂಪಾಯಿ ಕೊಟ್ಟರೆ ನೂರು ರೂಪಾಯಿ ಕೊಡ್ತೀನಿ, ಸಾವಿರ ಕೊಟ್ಟರೆ ಲಕ್ಷ ಕೊಡ್ತೀನಿ" ಎಂಬುದು ಇವನೇ ಸೃಷ್ಟಿಸಿಕೊಂಡ ಬಿಸಿನೆಸ್ ಸ್ಲೋಗನ್. ನೋಡು ನೋಡುತ್ತಿದ್ದಂತೆಯೇ ಹದಿನೈದು ವರ್ಷಗಳಲ್ಲಿ ಉತ್ತರ ಕರ್ನಾಟಕ, ಮಹಾರಾಷ್ಟ್ರ-ಆಂಧ್ರಗಳ ಗಡಿ ಜಿಲ್ಲೆಗಳಲ್ಲಿ ತನ್ನ ಚೀಟಿಂಗ್ ಸಾಮ್ರಾಜ್ಯ ವಿಸ್ತರಿಸಿಕೊಂಡು ಟೋಪಿ ದಂಧೆಯ ದೊರೆಯಾಗಿಬಿಟ್ಟ. ಎಲ್ಲಾ ಹಲ್ಕಾ ಕೆಲಸಗಳಿಗೆ ನಟೋರಿಯಸ್ ಕ್ರಿಮಿನಲ್‌ಗಳೊಂದಿಗೆ ನೆಟ್‌ವರ್ಕ್ ಸೃಷ್ಟಿಸಿಕೊಂಡಿದ್ದ ಮೋನ್ನಾ ಆ ಸಂಪರ್ಕಗಳನ್ನು ಬೆಳಗಾವಿ ಸುಪಾರಿ ಕಿಲ್ಲರ್ ಪ್ರವೀಣ ಶಿಂತ್ರೆ ಮೂಲಕ ಡೀಲ್ ಮಾಡಿಕೊಳ್ಳುತ್ತಿದ್ದ. ಜೊತೆಗೆ, ಕಳ್ಳಭಟ್ಟಿ ದೊರೆ ಗಂಡಗಾಳೇಕರ ಕೃಷ್ಣ ಕಮರಿಪೇಟೆಯ ಕಾಬವೇಗಳು ಈ ಚಪ್ಪರನ ಉರಿದಾಟಕ್ಕೆ ಹುಲ್ಲು ಹಾಕುತ್ತಿದ್ದರು.

■ ಹುರುಳಿಕುಪ್ಪಿ ವಿನಯ್



ಮುತಾಲಿಕ್



ಪ್ರವೀಣ್ ಶಿಂತ್ರೆ

ತೀರಾ ಹೆಂಗಸರ ಖಯಾಲಿ ಬೆಳೆಸಿಕೊಂಡಿರುವ ಮೋನ್ನಾ ಈಗಾಗಲೇ ಇಬ್ಬರು ಹೆಂಡಿರ ಮುದ್ದಿನ ಚೀಟರ್ ಆಗಿದ್ದಾನೆ. ತನ್ನ ತೀಟೆಗಾಗಿ ಆಗಾಗ್ಗೆ ಮಂಗಳೂರು, ಕೇರಳ, ಗೋವ ಸಮುದ್ರತೀರಗಳಲ್ಲಿ ಟೆಂಟ್ ಹಾಕುತ್ತಾನೆ. ಅಲ್ಲದೆ ಆರ್ಥಿಕವಾಗಿ ಕಂಗೆಟ್ಟ ಮನೆಗಳ ಹೆಣ್ಣುಮಕ್ಕಳಿಗೆ ಐಷಾರಾಮಿ ಜೀವನದ ಕನಸು ತೋರಿಸಿ ಅವರನ್ನು ತನ್ನ ಮಂಚಕ್ಕೆ ಸೆಳೆಯುವ ಈತನಿಂದಾಗಿ ಇವತ್ತು ನೂರಾರು ಹೆಣ್ಣುಮಕ್ಕಳು ಪುಣೆ, ಮುಂಬೈ, ಮಂಗಳೂರು, ಗೋವಾ ಘರವಾಲಿಗಳ ಅಡ್ಡೆಗಳಲ್ಲಿ ಈತನನ್ನು ಶಪಿಸುತ್ತಾ ಮೈಮಾರಿಕೊಂಡು ನರಳುತ್ತಿದ್ದಾರೆ.

ಒಮ್ಮೆ ಧಾರವಾಡದ ಸೌಭಾಗ್ಯ ಎಂಬುವವರ ಮಗಳಾದ ಶಿಲ್ಪಾ ಎಂಬ ಯುವತಿ ವಿಜಯ ಎಂಬ ಯುವಕನನ್ನು ಪ್ರೀತಿಸಿ ಮನೆಬಿಟ್ಟು ಗಾಯಬ್ ಆದಾಗ ಸೌಭಾಗ್ಯ ಅವರು ತಮ್ಮ ಮಗಳನ್ನು ಹುಡುಕಿ ತಂದೊಪ್ಪಿಸಲು ಮೋನ್ನಾ ನೊಂದಿಗೆ ಡೀಲ್ ಕೊಟ್ಟಿದ್ದರು. ಇದೊಂಥರಾ ಕುರಿಮರಿಯನ್ನು ಹಿಡಿದುಕೊಡುವ ಜವಾಬ್ದಾರಿಯನ್ನು ತೋಳನಿಗೆ ವಹಿಸಿದಂತಿತ್ತು, ಕಾಮುಕ ಮೋನ್ನಾ ಶಿಲ್ಪಾಳನ್ನು ಹುಡುಕಿಕೊಂಡು ಬಂದು ಸೌಭಾಗ್ಯರಿಗೆ ಒಪ್ಪಿಸದೇ ತನ್ನ ಮನೆಯಲ್ಲಿಯೇ ತಿಂಗಳುಗಟ್ಟಲೇ ಇಟ್ಟುಕೊಂಡು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ ಎಂದು ಜನ ಇಂದಿಗೂ ಆಡಿಕೊಳ್ಳುತ್ತಾರೆ. ಹೋಳಿ ಹಬ್ಬದ ದಿನ ಅಕ್ಕಪಕ್ಕದ ಮನೆ ಹೆಂಗುಸರಿಗೆ ಬಣ್ಣ ಹಚ್ಚಲು ಹೋಗಿ ಅದೆಷ್ಟು ಬಾರಿ ಈತ ಒದೆ ತಿಂದಿದ್ದಾನೋ ಪ್ರಾಯಶಃ ಖುದ್ದು ಮೋನ್ನಾನಿಗೂ ನೆನಪಿರಲಿಕ್ಕಿಲ್ಲ.


ಮೋನ್ನಾ ಈ ಹಿಂದೆ ಹುಬ್ಬಳ್ಳಿಯ ಕಾಲೇಜೊಂದರ ಯುವತಿಯನ್ನು ಫಿಲ್ಮ್ ಹೀರೋಯಿನ್ ಮಾಡ್ತೀನಿ ಎಂದು ನಂಬಿಸಿ ಅವಳನ್ನು ಮೈಮಾರುವ ದಂಧೆಗಾಗಿ ಬಾಂಬೆ ರೆಡ್‌ಲೈಟ್ ಏರಿಯಾಕ್ಕೆ ಮಾರಿದ್ದ. ಆವತ್ತೇ ಅಂದಿನ ಪೊಲೀಸ್ ಕಮೀಷನರ್ ಗಗನದೀಪ್ ಮತ್ತು ಡಿಸಿಪಿ ರವಿಕಾಂತೇಗೌಡರ ಜೋಡಿ ಇವನನ್ನು ಸರಿಯಾಗಿ ತದುಕಿ, ನರ ಕತ್ತರಿಸಿ ಶಾಶ್ವತವಾಗಿ ಧಾರವಾಡ ಜಿಲ್ಲೆಯಿಂದ ಗಡೀಪಾರು ಮಾಡಿಸಿಟ್ಟಿತ್ತು. ಅಲ್ಲಿಂದ ಮತ್ತೆ ಗದುಗಿಗೇ ಬಂದು ತಳವೂರಿರುವ ಮೋನ್ನಾ ಗದಗವನ್ನೇ ತನ್ನ ಅಡ್ಡೆಯ ರಾಜಧಾನಿ ಮಾಡಿಕೊಂಡಿದ್ದ. ಈಗ ಥೇಟ್ ಅಂಥದ್ದೇ ತೀಟೆ ಕೇಸಿಗೆ ಕೈಹಾಕಿ ಧಾರವಾಡದ ಮುಸ್ಲಿಂ ಯುವತಿ ಸಲ್ಮಾ ಎಂಬುವವಳನ್ನು ವೇಶ್ಯಾವೃತ್ತಿಗೆ ತಳ್ಳುತ್ತಿದ್ದ ಸಂದರ್ಭದಲ್ಲಿ ಬೆತ್ತಲೆಯಾಗಿಯೇ ಅರೆಸ್ಟ್ ಆಗಿದ್ದಾನೆ.



ಸಿಪಿಐ ಪ್ರಕಾಶ್



ಟಿ.ಆರ್. ಸುರೇಶ್



ರವಿಕಾಂತೇಗೌಡ

ಚೆಡ್ಡಿಗಳ ಗಾಡ್‌ಫಾದರ್ಸ್!

ಇನ್ನೊಂದು ವಿಚಾರವನ್ನಿಲ್ಲಿ ಹೇಳಲೇಬೇಕು. ಮೋನ್ನಾ ಮಾಡಿದ ಪಾಪಕ್ಕೆ ಆತ ಯಾವತ್ತೋ ಹಿಂಡಲಗಾ ಜೈಲಿನ ಕೋಣೆಯೊಂದರಲ್ಲಿ ಕಾಯಂ ಫಿಕ್ಸ್ ಆಗಬೇಕಿತ್ತು. ಆದರೆ, ಅವನನ್ನು ಗೂಳಿಯಂತೆ ತಿರುಗಾಡಿ ಜನರಿಗೆ ಟೋಪಿ ಹಾಕುವ ಕೆಲಸಕ್ಕೆ ಬಿಟ್ಟ ಕೀರ್ತಿ ಒಂದೆಡೆ ಖಾಕಿ ಪೊಲೀಸರಿಗೆ ಮತ್ತೊಂದೆಡೆ ದೇಶಭಕ್ತ ಸಂಘಪರಿವಾರಿಗಳಿಗೇ ಸಲ್ಲಬೇಕು. ಏಕೆಂದರೆ, ಒಂದೆಡೆ ದೇಶಭಕ್ತ (!) ಸಂಘಪರಿವಾರಿಗಳಿಗೆ ಇವನು ಗಾಡ್‌ಫಾದರ್ ಥರ ಇದ್ದು ಇವರಿಗೆ ಆಶ್ರಯ ಕೊಟ್ಟು ಬೆಳೆಸಿದ್ದರೆ ಇನ್ನೊಂದೆಡೆ ಕಾನೂನಿನಿಂದ ತಪ್ಪಿಸಿ ಕೊಳ್ಳಲು ಪೊಲೀಸರು ಈತನ ಬಾಡಿಗಾರ್ಡ್ ಗಳಂತೆ ಕೆಲಸ ಮಾಡಿದ್ದಾರೆ. ಮೊದಲು ಭಜರಂಗದಳ ಅಂತ, ಈಗ ಶ್ರೀರಾಮ ಸೇನೆ ಅಂತ ಮಂಗಗಳ ಸೇನೆ ಕಟ್ಟಿಕೊಂಡು ರಕ್ತ ಕಾರುವುದನ್ನೆ ಫುಲ್ ಟೈಮ್ ಕೆಲಸ ಮಾಡಿಕೊಂಡಿರುವ ರಕ್ತಪಿಪಾಸು ಪ್ರಮೋದ್ ಮುತಾಲಿಕನ ಪರಮ ಶಿಷ್ಯ ಈ ಮೋನ್ನ. ಅಷ್ಟೇ ಅಲ್ಲದೇ ಈತ ಈಗಲೂ ಶ್ರೀರಾಮ ಸೇನೆಯೆಂಬ ಕಪಿಸೈನ್ಯದ ಅಧಿಕೃತ ಫೈನಾನ್ಶಿಯರ್ ಕೂಡ. ಅಷ್ಟೇ ಏಕೆ, ಬೆಳಗಾವಿಯ ಕೇಸರಿ ತುಕಡಿ ಪವಾರ್, ಹುಬ್ಬಳ್ಳಿಯ ರಾಮಭಕ್ತ ನತ್ತುಪ್ರಿಯ ಸಂಗು ಹುಂಡೇಕಾರನಂಥ ದೇಶಭಕ್ತರೂ ಈತನಿಗೆ ಬಾಡಿಗಾರ್ಡ್‌ಗಳಾಗಿದ್ದಾರೆ. ಮೋನ್ನಾ ಮೊನ್ನೆ ಅರೆಸ್ಟ್ ಆಗಿದ್ದೂ ಕೂಡ ಸಂಘಪರಿವಾರಿಗಳ ಪಾಪದ ಅಡ್ಡೆಯಾಗಿರುವ ಸ್ಟೇಷನ್ ರೋಡಿನ ತ್ರಿಮೂರ್ತಿ ಲಾಡ್ಜ್‌ನಲ್ಲಿಯೇ. ಅಂದರೆ, ಈ ಪರಮ ಪಾಪಿಗೂ ಸಂಘಪರಿವಾರಕ್ಕೂ ಎಷ್ಟರಮಟ್ಟಿಗೆ ನಂಟಿದೆ ಎಂಬುದು ಅರ್ಥವಾಗದಿರದು. ಈಗ ಸಿಪಿಐ ಪ್ರಕಾಶರ ದಿಟ್ಟ ನಿರ್ಧಾರದಿಂದಾಗಿ ಇಂದು ತ್ರಿಮೂರ್ತಿ ಲಾಡ್ಜ್‌ನ ಚೆಡ್ಡಿ ಮಾಲಿಕ ಮತ್ತಾತನ ಸಿಬ್ಬಂದಿಗಳೂ ಚೀಟರ್ ಮೋನ್ನಾನೊಂದಿಗೆ ಅಂದರ್ ಆಗಿದ್ದಾರೆ.

ಖಾಕಿ ಖದೀಮರು ಬಾಡಿಗಾರ್ಡ್ಸ್!

ಮೋನ್ನಾ ಈ ಹೊತ್ತು ದಗಲ್ಬಾಜಿ ದಂಧೆಯ ಸಾಮ್ರಾಜ್ಯಕ್ಕೆ ದೊರೆಯಾಗಿದ್ದಾನೆಂದರೆ, ಅದರಲ್ಲಿ ಖಾಕಿ ಖದೀಮರ ಪಾತ್ರವೂ ಸಂಘಪರಿವಾರಿಗಳ ಪಾತ್ರದಷ್ಟೇ ಹಿರಿದಾಗಿದೆ. ಧಾರವಾಡದಲ್ಲಿ ಡಬ್ಲಿಂಗ್ ದಂಧೆ ರಾಜಾರೋಷವಾಗಿ ನಡೆಯುತ್ತಿದ್ದಾಗ ಅಲ್ಲಿಯ ಪೊಲೀಸರಾದ ಪಾಟೀಲ್, ತಿರುಮಲೆ ಮತ್ತು ಪಠಾಣನಂತವರು ಮೋನ್ನಾನ ಹಿಂದೆ ಕಾವಲುಗಾರನಂತೆ ಎಂಜಲು ಕಾಸಿಗಾಗಿ ಬಾಯ್ತೆರೆದು ನಿಲ್ಲುತ್ತಿದ್ದರು. 90ರ ದಶಕದಲ್ಲಿ ಈ ಬಕನಾಸಿ ಹಾಕುವ ಬಿಸ್ಕತ್ತಿಗೆ ಹಸಿದ ನಾಯಿಗಳ ಥರ ರಾತ್ರಿ ತನಕ ಇವನ ಮನೆ ಕಾಯ್ದ ಪೊಲೀಸರು ಇಂದು ಕೋಟಿ ಕೋಟಿ ವೀರರಾಗಿದ್ದಾರೆ. ಬೆಳಗಾವಿಯ ಕುಖ್ಯಾತ ರೌಡಿಗಳಾದ ಪ್ರವೀಣ ಶಿಂತ್ರೆ, ಸಂಜಯ ಶೇಡಕರ್, ಸಂಜಯ ಸುಂಟಕರ್ ಸೇರಿದಂತೆ ಅನೇಕ ಕೊಲೆ ಪಾತಕಿಗಳು ಅಲ್ಲಿಯ ಪೊಲೀಸರ ಕಾಟ ಹೆಚ್ಚಾದಾಗಲೆಲ್ಲಾ ಆಶ್ರಯ ಪಡೆದಿದ್ದು ಸೈದಾಪೂರ ನಗರದ ಈ ಮೋನ್ನಾನ ನಿವಾಸದಲ್ಲೇ. ಆಗಲೂ ಅವರಿಗೆ ಎಲ್ಲಾ ರೀತಿಯ ಸಪ್ಲೈಗಳನ್ನು ಮತ್ತು ಸೆಕ್ಯೂರಿಟಿಯನ್ನು ಕೊಟ್ಟದ್ದು ಮೋನ್ನಾ ಸಾಕಿದ ಖಾಕಿ ಖದೀಮರೆ!

ಈ ಹಿಂದೆ ಹುಬ್ಬಳ್ಳಿ ಧಾರವಾಡ ಪೊಲೀಸ್ ಕಮೀಷನರ್ ಆಗಿದ್ದ ಬಸವಪ್ರಭು ಕೊಕಟ್‌ನೂರ ಹಾಗೂ ಡಿಸಿಪಿ ಟಿ.ಆರ್. ಸುರೇಶ ಇವನ ಮನೆಯ ಮೇಲೆ ದಾಳಿ ಮಾಡಿದಾಗ ಒಂದು ಡೈರಿ ಸಿಕ್ಕಿತ್ತು. ಅದರಲ್ಲಿ ಯಾವ ಪೊಲೀಸ್ ಅಧಿಕಾರಿಗೆ ಎಷ್ಟೆಷ್ಟು ಮಾಮೂಲಿ, ಯಾವಾಗ ಎಷ್ಟೆಷ್ಟು ಕೊಟ್ಟಿದ್ದ ಎಂಬ ದಾಖಲೆಯಿತ್ತು. ಆದರೆ ತನಿಖೆ ಕೈಗೊಂಡ ಆಗಿನ ಪೊಲೀಸ್ ಅಧಿಕಾರಿ ತಿನ್ನಬಾರದಷ್ಟು ತಿಂದು ಅದನ್ನೆಲ್ಲ ಮುಚ್ಚಿಹಾಕಿಬಿಟ್ಟ. ಈ ವಿಷಯ ಬಹಿರಂಗವಾದರೆ ಪೊಲೀಸ್ ಇಲಾಖೆಯ ಮಾನ, ಮರ್ಯಾದೆ ಹರಾಜಾಗುತ್ತೆಂದು ಮೇಲಧಿಕಾರಿಗಳೂ ಇದು ಹೊರಬರದಂತೆ ನೋಡಿಕೊಂಡರು. ಆದರೆ ಆನಂತರ ಬಂದ ಪೊಲೀಸ್ ಕಮೀಷನರ್ ಗಗನದೀಪ್ ಅವರು ಗುಪ್ತ ತಂಡ ರಚಿಸಿ ಮೋನ್ನಾನ ಸಹಚರರಾದ ಕೃಷ್ಣಾ ಶಲವಡಿ, ಮುಕ್ತಿಯಾರ ಪಠಾಣ, ಖಲಂದರ ತಿರ್ಲಾಪುರ ರನ್ನು ಬಂಧಿಸಿ, ಮೋನ್ನಾನ ಸೊಂಟ ಮುರಿದು ಗದುಗಿನತ್ತ ಗಡೀಪಾರು ಮಾಡಿದ್ದರು. ಆದರೆ ಅಲ್ಲೂ ಹಸಿದುಕೊಂಡೇ ಕುಳಿತಿದ್ದ ಪೊಲೀಸ್ ಅಧಿಕಾರಿಗಳೊಂದಿಗೆ ಭರ್ಜರಿ ರೇಟು ಫಿಕ್ಸ್ ಮಾಡಿಕೊಂಡು ತನ್ನ ದಂಧೆ ಶುರುಹಚ್ಚಿಕೊಂಡ. ಆದರೆ ಈಗ ಬಂದಿರುವ ಸಿ.ಪಿ.ಐ ಪ್ರಕಾಶ್ ಚೀಟರ್ ಮೋನ್ನಾನ ಕಾಲರ್ ಪಟ್ಟಿ ಹಿಡಿದಿದ್ದಾರೆ. ಇದು ಗದುಗಿನ ಜನಕ್ಕೆ ಸ್ವಲ್ಪ ನೆಮ್ಮದಿ ತರುವಂತಾಗಿದೆ. ಆದರೆ ಜೈಲಿಗೆ ಅಂದರ್ ಆಗುವುದು, ಅಲ್ಲಿಂದ ಬಾಹರ್ ಆಗುವುದು ಮೋನ್ನಾನಿಗೆ ನೀರು ಕುಡಿದಷ್ಟು ಸಲೀಸು. ಗದುಗಿನ ಜನರ ತಾಳ್ಮೆಗೂ ಒಂದು ಮಿತಿಯಿದೆ. ಈಗಲೂ ಮೋನ್ನಾನಿಗೆ ರಕ್ಷಣೆ ಕೊಟ್ಟರೆ ಪೊಲೀಸರನ್ನೂ, ಸಂಘಪರಿವಾರಿಗಳನ್ನೂ ಒಳಗೊಂಡಂತೆ ಮೋನ್ನಾನನ್ನು ಗದುಗಿನ ಬೀದಿಯಲ್ಲಿ ಬಟ್ಟೆ ಬಿಚ್ಚಿ ಬಾರಿಸುವುದು ಗ್ಯಾರಂಟಿ.



ರಿಲ್ಯಾಕ್ಸ್ ರಾಮುಲುನ ರೆಸ್ಟ್ ಎಂಡ್ ಯಾವಾಗ..?

ಮೂವತ್ತು ಕ್ರಿಮಿನಲ್ ಕೇಸುಗಳ ಬೀದಿರೌಡಿ ಶ್ರೀರಾಮುಲು ಅದ್ಯಾವ ಗಳಿಗೆಯಲ್ಲಿ ಗದಗದ ಉಸ್ತುವಾರಿ ಮಂತ್ರಿಯಾದನೋ ಅಂದಿನಿಂದಲೇ ಜಿಲ್ಲೆಯ ಕ್ರಿಮಿನಲ್ಲುಗಳೆಲ್ಲಾ ಚಿಗಿತುಕೊಂಡುಬಿಟ್ಟಿದ್ದಾರೆ. ಇಲ್ಲಿನ ಕಚ್ಚೆಹರುಕ ಬುದ್ಧಿಯ ಚೆಡ್ಡಿಗಳು ಲಾಡಿ ಬಿಚ್ಚಿಕೊಂಡು ಓಡಾಡಲಿ ಅಂತಲೇ ನರಸತ್ತ ಪೊಲೀಸ್ ಅಧಿಕಾರಿಗಳನ್ನು ಗದುಗಿಗೆ ತಂದು ಕೂರಿಸಿದ್ದಾನೆ. ಇಲ್ಲಿ ನಿತ್ಯ ನಡೆಯುವ ಕ್ರೈಂ ಬಗ್ಗೆ ಯಾರಾದರೂ ಪ್ರಶ್ನಿಸಿದರೆ 'ಸರಿ ಚೇಸೋಣ ಬಿಡಿ' ಅಂತ ತೆನ್ನಡದಲ್ಲಿ (ತೆಲುಗು ಮಿಕ್ಸ್ಡ್ ಕನ್ನಡ) ಗೊಣಗುತ್ತಾನೆ.

ಮೊನ್ನೆ ಅರೆಸ್ಟಾದ ಲಾಡಿದೊರೆ, ಚೀಟರ್ ಮೋನ್ನಾ ಬಿಜೆಪಿಗೆ ಕಾಯಂ ಆಗಿ ಫಂಡು ಕೊಡುವ ಫೈನಾನ್ಶಿಯರ್. ಅಲ್ಲದೇ ಪ್ರಭಾವಿ ರಾಜಕಾರಣಿಗಳು ತನ್ನ ಹಲ್ಕಟ್ ದಂಧೆಯ ರಕ್ಷಣೆಗಿರಲಿ ಎಂದು ಆಗಾಗ ಅವರೆಲ್ಲರಿಗೆ ಗುಂಡು ಪಾರ್ಟಿ ಕೊಡುತ್ತಿರುತ್ತಾನೆ. ಅವನ ಮನೆಯ ಗೋಡೆಗಳ ಮೇಲೆ ಶ್ರೀರಾಮುಲು, ಬಸವರಾಜ ಬೊಮ್ಮಾಯಿಯಂಥಾ ಮಂತ್ರಿಗಳ ಫೋಟೋ ನೇತಾಡುತ್ತಿವೆ.


ರಾಮನ ಸಂತಾನಿಗಳಂತೆ ಪೋಜು ಕೊಡುವ ಇವರೆಲ್ಲ ಅದೆಷ್ಟು ಪವಿತ್ರ ಕಾರ್ಯಗಳನ್ನು ಮಾಡುತ್ತಿದ್ದಾರೆಂಬುದು ತ್ರಿಮೂರ್ತಿ ಲಾಡ್ಜಿನಲ್ಲಿ ಮೋನ್ನಾನನ್ನು ಅರೆಸ್ಟ್ ಮಾಡಿ ಬಾರಿಸಿದಾಗಲೇ ಗದುಗಿನ ಜನ ಅರ್ಥಮಾಡಿಕೊಂಡಿದ್ದಾರೆ. ಜಿಲ್ಲೆಯ ಉಸ್ತುವಾರಿ ಎಂದು ಹೇಳಿಕೊಳ್ಳುವ ಮಂತ್ರಿ ಶ್ರೀರಾಮುಲು ಇನ್ನಾದರೂ ಗದುಗಿನ ಕಡೆ ನೋಡುತ್ತಾರಾ?

...ವಿದ್ಯಾರ್ಥಿಗಳ ತಲೆಗೆ ...ಲಿಂಬಾವಳಿಯ ವಿಷಬೀಜ

■ ರಾ. ಸೋಮನಾಥ್

...ಭಯೋತ್ಪಾದನೆಯ ವಿರುದ್ಧ ಮಿಲಿಟರಿ ಮತ್ತು ...ಸರಷ್ಟೇ ಅಲ್ಲ, ಈಗ ರಾಜ್ಯದ ವಿದ್ಯಾರ್ಥಿಗಳೂ ...ಡಿಸಬೇಕಂತೆ. ಅಪರಿಚಿತ ಆಗಂತುಕರಿಗೆ ತಮ್ಮ ...ನ್ನು ಬಾಡಿಗೆಗೆ ಕೊಡುವ ಮುನ್ನ ಪೊಲೀಸರಿಗೆ ...ಮುಟ್ಟಿಸುವ ಹೊಣೆಯನ್ನು ವಿದ್ಯಾರ್ಥಿಗಳೇ ಹೊರ ...ತೆ. ಜೊತೆಗೆ ಆಯಾ ಕಾಲೇಜುಗಳ ಪ್ರಿನ್ಸಿಪಾಲರು, ...ಗಳೆಲ್ಲ ಭಯೋತ್ಪಾದನೆಯ ... ಪ್ರತಿ ತಾಲ್ಲೂಕಿನಲ್ಲೂ ...ಣಿಗೆ ಏರ್ಪಡಿಸಬೇಕಂತೆ. ... ಮೆರವಣಿಗೆಯ ಜೊತೆಗೆ ...ತ್ಪಾದನೆಯ ವಿರುದ್ಧ 'ಮ್ಯಾರ ... ಓಟಗಳನ್ನೂ ಓಡಬೇಕಂತೆ.

...ತಿ ಕಾಲೇಜು, ವಿಶ್ವವಿದ್ಯಾ...ದಲ್ಲೂ ಭಯೋತ್ಪಾದನೆಯ ... ವಿಚಾರ ಸಂಕಿರಣ, ಬೀದಿ ... ಡಾಕ್ಯುಮೆಂಟರಿ ...ಣ, ಸಾಕ್ಷ್ಯ ಚಿತ್ರಗಳ ವೀಕ್ಷಣೆ ... ಮನರಂಜನೆ ಕಾರ್ಯ...ಳನ್ನು ಸ್ವಾಮಿ ವಿವೇಕಾ... ಜನ್ಮ ದಿನಾಚರಣೆ ಪ್ರಯು...ಹಮ್ಮಿಕೊಳ್ಳಬೇಕಂತೆ!



...ದು ಉನ್ನತ ಶಿಕ್ಷಣ ಮಂತ್ರಿ ...ದ ಲಿಂಬಾವಳಿ ಸಾಹೇ... ಇತ್ತೀಚೆಗಷ್ಟೇ ಸಮಸ್ತ ...ಳು ಮತ್ತು ಕಾಲೇಜು ... ಇಲಾಖೆಯ ಮುಖ್ಯಸ್ಥರನ್ನು ಕರೆದು ಹೊರಡಿಸಿದ ...ನು. ಈಗಾಗಲೇ 'ಭಯೋತ್ಪಾದನಾ ವಿರೋಧಿ ...ರ್ಥಿ ಜಾಗೃತಿ ಅಭಿಯಾನ'ದ ಥರೇವಾರಿಯ ...ರಾತುಗಳು ವಿವಿಧ ಪತ್ರಿಕೆಗಳಲ್ಲಿ ಅಚ್ಚಾಗುತ್ತಿವೆ. ... ಜನವರಿ 12 ರಂದು ವಿವೇಕಾನಂದರ ಜಯಂತಿ ...ಕ್ತ ಮಂಗಳೂರಿನಲ್ಲಿ ಉದ್ಘಾಟನೆಗೊಂಡ 'ಭಯೋ... ವಿರುದ್ಧದ ವಿದ್ಯಾರ್ಥಿ ಜಾಗೃತಿ ಅಭಿಯಾನ'ದ ...: ಉದ್ದೇಶ ನಿಜಕ್ಕೂ ಭಯೋತ್ಪಾದನೆಯೇ ಅಥವಾ ...ಬರುವ ಲೋಕಸಭಾ ಚುನಾ...ವಣೆ?

...ರಾಜ್ಯದ ವಿದ್ಯಾರ್ಥಿಗಳ ಪಾಲಿಗೆ ...ಕ್ಕಿಂತಲೂ ಭಯೋತ್ಪಾದನೆಯೊಂದೇ ಮಹಾನ್ ...ವೇ? ಮಿಲಿಟರಿ, ಪೊಲೀಸರು, ಗುಪ್ತಚರ ಇಲಾಖೆ ... ಇದ್ದೂ ವಿದ್ಯಾರ್ಥಿಗಳು ಮಾತ್ರ ತಮ್ಮ ಓದನ್ನೂ ...ಟ್ಟು ಭಯೋತ್ಪಾದಕರ ಬೆನ್ನಿಗೆ ಬೀಳಬೇಕೆ? ತಮ್ಮ ...ನ್ನು ಯಾರಿಗೆ ಬಾಡಿಗೆಗೆ ಕೊಡಬೇಕು ಎಂಬುದನ್ನು ...ರಿಸುವುದು ವಿದ್ಯಾರ್ಥಿಗಳಾ ಅಥವಾ ಆವರ ಅಪ್ಪ...ಂದಿರಾ? ಮಾರುಕಟ್ಟೆ ದರಕ್ಕಿಂತಲೂ ಹೆಚ್ಚಿನ ರೇಟಿಗೆ ...ಬ ಆಸ್ತಿ ಖರೀದಿಸುತ್ತಾರೋ ಅಂಥವನೇ ಭಯೋ...ತ್ಪಾದಕನೆಂದು ವಿದ್ಯಾರ್ಥಿಗಳು 'ನಿರ್ಧರಿಸಿ ಪೊಲೀಸರಿಗೆ ... ಮುಟ್ಟಿಸುತ್ತಾ ಕೂತರೆ ಓದುವುದು ಯಾವಾಗ?

...ಇಂಥ ಹುಚ್ಚಾಟಗಳೆಲ್ಲದರ ಒಟ್ಟೂ ಮೊತ್ತದಂತಿರುವ ...ಯೋತ್ಪಾದನಾ ವಿರೋಧಿ ವಿದ್ಯಾರ್ಥಿ ಜಾಗೃತಿ ...ಯಾನ'ಕ್ಕೆ ಹೆಸರಿಗಷ್ಟೇ ಅರವಿಂದ ...ಾವಳಿ ತಂದೆ. ಬಸಿರೆಲ್ಲ ಆರೆಸ್ಸೆಸ್ ಧೂರ್ತ ... ಕೃಷ್ಣಭಟ್ಟನದು. ಇನ್ನಾರು ತಿಂಗಳೊಳಗೆ ...ಕಸಭಾ ಚುನಾವಣೆ ಗ್ಯಾರಂಟಿ. ಹೇಗೆ ...ದ್ರ ಮೋದಿ ಕಳೆದ ಗುಜರಾತ್ ...ವಣೆಗೂ ಮುನ್ನ ಇಂಥದ್ದೇ ಶೈಲಿಯ ...ರ್ಥಿ ಬ್ರೈನ್‌ವಾಷ್' ಕಾರ್ಯಕ್ರಮ ...ವನ್ನು ಸೃಷ್ಟಿಸಿ ಅಧಿಕಾರಕ್ಕೆ ಬಂದನೋ ...ದ್ದೇ ವಿಷಬೀಜ ಬಿತ್ತುವ ಪ್ರಯೋಗ ...ವನ್ನು ಬಿಜೆಪಿ ಸರ್ಕಾರ ಕೈಗೆತ್ತಿಕೊಂಡಿದೆ. ...ಬ ಸರ್ಕಾರಿ ದುಡ್ಡಿನಲ್ಲೇ, ಸರ್ಕಾರಿ ...ರ್ಯಕ್ರಮದ ಸೋಗಿನಡಿ....?



...ದುರಂತವೆಂದರೆ ರಥಯಾತ್ರೆ, ದತ್ತಪೀಠ, ಗುಜರಾತ್ ...ಸರಿಯ ಇಂಥ ಪಾಷಾಣ ಪ್ರಯೋಗವೊಂದನ್ನು ... ವಿವೇಕಾನಂದರ ಜನ್ಮದಿನಾಚರಣೆಯ ಹೆಸರಲ್ಲಿ ...ಸುವ ದುಸ್ಸಾಹಸಕ್ಕೆ ಕೇಸರಿ ಕ್ರಿಮಿಗಳು ಕೈಯಿಟ್ಟಿರು... ಮತ್ತು ಇದಕ್ಕೆಂದೇ ರಾಜ್ಯ ಬೊಕ್ಕಸದ ಹದಿನಾರು ...ಟಿಯಷ್ಟು ದುಡ್ಡನ್ನು ಪೋಲು ಮಾಡುತ್ತಿರುವುದು. ...ರಾಜ್ಯದ ನೂರಾರು ಕಾಲೇಜುಗಳಲ್ಲಿ ಇವತ್ತಿಗೂ ...ಗೆ ಪಾಠ ನಡೆಯುತ್ತಿಲ್ಲ, ಮೊದಲೇ ಅಧ್ಯಾಪಕರ ... ಪ್ರಯೋಗಾಲಯಗಳಿಗೆ ಪರಿಕರಗಳು, ಸುಸಜ್ಜಿತ ಕಟ್ಟಡ, ಕಂಪ್ಯೂಟರ್, ಅಧ್ಯಾಪಕರ ಸಂಬಳ ಇತ್ಯಾದಿ ಸಮಸ್ಯೆಗಳಿಗೆ ಯಾವತ್ತೂ ತಲೆ ಕೆಡಿಸಿಕೊಳ್ಳದ ಮಂತ್ರಿ ಲಿಂಬಾವಳಿ ಇಲ್ಲಿಗೆ 15 ದಿನಗಳ ಹಿಂದೆ ವಿಧಾನಸೌಧದ ತಮ್ಮ ಕೊಠಡಿ ಸಂಖ್ಯೆ 318 ರಲ್ಲಿ ಏಕಾಏಕಿ ಸಭೆಯೊಂದನ್ನು ಕರೆಯುತ್ತಾರೆ. ನೆಪಕ್ಕಷ್ಟೇ ಅದು ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ ಕುರಿತ ಸಭೆಯಾಗಿತ್ತು. ಅಸಲೀ ಹುನ್ನಾರ ಮಾತ್ರ ಕೋಮು ದ್ವೇಷ ಬಿತ್ತುವುದು.

ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತೆ ನಾಗಲಾಂಬಿಕಾ ದೇವಿ, ಜಂಟಿ ನಿರ್ದೇಶಕ ಈರಣ್ಣ, ಆಯ್ದ ಕಾಲೇಜುಗಳ ಪ್ರಿನ್ಸಿಪಾಲರು ಮತ್ತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸುರಂಜನ್ ಸೇರಿದಂತೆ ಮಂತ್ರಿ ಲಿಂಬಾವಳಿ ಭಾಗವಹಿಸಿದ್ದ ಈ ಸಭೆಯಲ್ಲಿ ವಿದ್ಯಾರ್ಥಿ ಸಂಘಟನೆಗಳ ಲೆಕ್ಕಕ್ಕೆ ಇದ್ದ ಏಕೈಕ ಪಟಾಲಮ್ಮೆಂದರೆ ಅದು ಎಬಿವಿಪಿ?

ಸಂಘ ಪರಿವಾರದ ವಿದ್ಯಾರ್ಥಿ ಘಟಕವಾದ ಎಬಿವಿಪಿಯ ಹೊರತಾಗಿ ಅನಾದಿಕಾಲದಿಂದಲೂ ನಾಡಿನ ವಿದ್ಯಾರ್ಥಿಗಳ ಪರವಾಗಿ ಹೋರಾಡುತ್ತಲೇ ಬಂದ ಎಸ್‌ಎಫ್‌ಐ, ಎನ್‌ಎಸ್‌ಯುಐ, ಎಐಡಿಎಸ್‌ಓ, ಎಐಎಸ್‌ಎಫ್, ವಿದ್ಯಾರ್ಥಿ ಜನತಾದಳ, ಬಹುಜನ ವಿದ್ಯಾರ್ಥಿ ಒಕ್ಕೂಟ, ದಲಿತ ವಿದ್ಯಾರ್ಥಿ ಒಕ್ಕೂಟ ಇತ್ಯಾದಿ ಬೇರಾವುದೇ ವಿದ್ಯಾರ್ಥಿ ಸಂಘಟನೆಗಳಿಗೆ ಆಹ್ವಾನವಿರಲಿಲ್ಲ.

.ಕೇಸರಿ ಕ್ರಿಮಿಗಳೇ ಸೃಷ್ಟಿಸಿದ್ದ ಇಂಥ 'ಭಯೋತ್ಪಾದನಾ ವಿರೋಧಿ ವಿದ್ಯಾರ್ಥಿ ಅಭಿಯಾನ'ಕ್ಕೆಂದು ಆಮತ್ತು ರಚಿಸಲ್ಪಟ್ಟ ರಾಜ್ಯ ಸಮಿತಿಯಲ್ಲಿರುವವರಾದರೂ ಯಾರು?


ಆರೆಸ್ಸೆಸ್‌ನ ರಾಜ್ಯ ನಾಯಕರಲ್ಲೊಬ್ಬನಾದ ಬಿ.ವಿ. ಕೃಷ್ಣಭಟ್ಟನೇ ಸದರಿ ಅಭಿಯಾನದ ಪ್ರಧಾನ ಸಂಚಾಲಕ. ಎಬಿವಿಪಿಯ ಖತರ್‌ನಾಕ್ ಪ್ರೇಂಪ್ರಸಾದ್ ಶೆಟ್ಟಿ ಮತ್ತು ಸೋಕಾಲ್ಡ್ ಭಜರಂಗಿ ಪ್ರವೀಣ್ ಮಾನೆ ಎಂಬಿಬ್ಬರು ಸಂಚಾಲಕರಲ್ಲದೇ ಉನ್ನತ ಶಿಕ್ಷಣ ಮಂತ್ರಿ, ಲಿಂಬಾವಳಿ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಕಾರ್ಯಕಾರಿ ಸಮಿತಿ. ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕ, ಬೆಂಗಳೂರು ನಗರದ ಪೊಲೀಸ್ ಆಯುಕ್ತರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ, ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಸೇರಿದಂತೆ ಅನೇಕ ಇಲಾಖೆಗಳ ನಿರ್ದೇಶಕರನ್ನೊಳಗೊಂಡ ರಾಜ್ಯ ಮಟ್ಟದ ಕಾರ್ಯಕಾರಿ ಸಮಿತಿಯ ಮಾರ್ಗಸೂಚಿಯೊಂದೇ ಇಡೀ ಅಭಿಯಾನದ ಅಸಲೀ ಹುನ್ನಾರವನ್ನು ಸಾರಿ ಹೇಳುತ್ತದೆ.

ಪ್ರತಿಯೊಂದು ಕಾಲೇಜಿನ ಮಟ್ಟದಲ್ಲೂ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲೊಂದು ಕಾರ್ಯಕಾರಿ ಸಮಿತಿ. ಆಯಾ ಕಾಲೇಜುಗಳಲ್ಲಿ ಭಯೋತ್ಪಾದನೆಯ ವಿರುದ್ಧ ಪ್ರಬಂಧ, ಕಿರುನಾಟಕ, ಭಾಷಣ ಸ್ಪರ್ಧೆಗಳು. ದೇಶಭಕ್ತರು ಅರ್ಥಾತ್ ಆರೆಸ್ಸೆಸ್ ನಾಯಕರನ್ನು ಕರೆಸಿ ಭಾಷಣ ಏರ್ಪಡಿಸಬೇಕು. ತಾಲ್ಲೂಕು ಮಟ್ಟದಲ್ಲೂ ಆಯಾ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ ಮತ್ತು ಜಾಥಾ, ಸಮಾವೇಶ, ಭಯೋತ್ಪಾದನೆ ವಿರುದ್ಧ ಸಾಮೂಹಿಕ ಓಟಗಳನ್ನು ಏರ್ಪಡಿಸಬೇಕು.

ಇನ್ನು ಜಿಲ್ಲಾ ಮಟ್ಟಕ್ಕೆ ಬಂದರೆ ಆಯಾ ಜಿಲ್ಲಾ ಉಸ್ತುವಾರಿ ಮಂತ್ರಿಯ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಲೋಕಸಭಾ ಸದಸ್ಯರು ಸೇರಿದಂತೆ ಎಲ್ಲಾ ಇಲಾಖೆಗಳೂ ಭಯೋತ್ಪಾದನಾ ವಿರೋಧಿ ಅಭಿಯಾನದಲ್ಲಿ ಭಾಗವಹಿಸಲೇಬೇಕು. ಇಷ್ಟಲ್ಲದೇ ಆಯಾ ವಿಶ್ವವಿದ್ಯಾಲಯಗಳ ಮಟ್ಟಕ್ಕೆ ಕುಲಪತಿಗಳೇ ಮುಖ್ಯಸ್ಥರಾಗಿರುವ ಪ್ರತ್ಯೇಕ ಕಾರ್ಯಕಾರಿ ಸಮಿತಿ!

ಇದರರ್ಥ ಹೋಬಳಿ ಮಟ್ಟದ ಮಾಮೂಲಿಯ ಪಿಯೂಸಿ ಕಾಲೇಜಿನಿಂದ ಹಿಡಿದು ವೀವಿಗಳು ಮತ್ತು ಜಿಲ್ಲಾಮಟ್ಟದವರೆಗೂ ಪ್ರತಿಯೊಬ್ಬ ವಿದ್ಯಾರ್ಥಿಯೂ ಭಯೋತ್ಪಾದನೆ ವಿರೋಧಿ ಅಭಿಯಾನದಲ್ಲಿ ಭಾಗವಹಿಸುವುದು ಕಡ್ಡಾಯ. ಆಯಾ ವಿವಿಗಳ ಪ್ರತಿಯೊಬ್ಬ ಪ್ರಾಧ್ಯಾಪಕನೂ ಚಾಚೂತಪ್ಪದೇ ಕೇಸರಿ ವೀರರ ಆದೇಶ ಪಾಲಿಸತಕ್ಕದ್ದು.

ತಾಲ್ಲೂಕಿನಿಂದ ಹಿಡಿದು ರಾಜಧಾನಿಯ ತನಕ ಉನ್ನತ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿಗಳೇ ಇಡೀ ಅಭಿಯಾನದ ಸೂತ್ರಧಾರರು. ಇಂಥ ನೋಡಲ್ ಅಧಿಕಾರಿಗಳಿಗೆ ಕಾರ್ಯಕ್ರಮದ ರೂಪುರೇಷೆಯ ಆದೇಶ ನೀಡುವವರು ಆಯಾ ತಾಲ್ಲೂಕು ಜಿಲ್ಲಾ ಕೇಂದ್ರಗಳ ಆರೆಸ್ಸೆಸ್ ಕ್ರಿಮಿಗಳು!


ಲಿಂಬಾವಳಿ

ಅಂದರೆ ಯಾರನ್ನು ಕಾನೂನು ಕೋಮುವಾದಿ ಗೂಂಡಾ ಎಂದು ಸಮಾಜ ಭಾವಿಸುತ್ತದೆಯೋ ಆತನ ಅಣತಿಯನ್ನು ಈ ರಾಜ್ಯದ ಪ್ರಜ್ಞಾವಂತ ವಿದ್ಯಾರ್ಥಿಗಳು, ಪ್ರಾಧ್ಯಾಪಕರೆಲ್ಲ ಪಾಲಿಸಬೇಕು. ಎಂಥಾ ಗತಿ ಬಂತು ರಾಜ್ಯಕ್ಕೆ?

ಇನ್ನು ಸೋಕಾಲ್ಡ್ ಭಯೋತ್ಪಾದನಾ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನವೆಂದರೆ ಏನು ಗೊತ್ತೆ?

ಪ್ರತಿ ಕಾಲೇಜಿನಲ್ಲೂ ಆರೆಸ್ಸೆಸ್ ಪಂಡಿತರೇ ನಿರ್ಮಿಸಿದ ಕೋಮು ಪ್ರಚೋದಕ ಸಾಕ್ಷ್ಯ ಚಿತ್ರಗಳನ್ನು ಪ್ರದರ್ಶಿಸಬೇಕು. ಇಂಥ ಥರೇವಾರಿಯ ಸಾವಿರಾರು ಸೀಡಿಗಳನ್ನು ಸರ್ಕಾರಿ ವೆಚ್ಚದಲ್ಲೇ ಆಯಾ ಕಾಲೇಜುಗಳಿಗೆ ಪೂರೈಸಲಾಗುತ್ತದೆ. ಇಂಥ ಪ್ರತಿ ಸೀಡಿಯಲ್ಲೂ ಮುಖ್ಯಮಂತ್ರಿ ಯಡಿಯೂರಪ್ಪನವರ ಟೆರರಿಸ್ಟ್ ಶೈಲಿಯ ಭಾಷಣದೊಂದಿಗೆ ಚಿತ್ರ ಶುರುವಾಗುತ್ತದೆ.

ಮೊದಲಿಗಷ್ಟೇ ಸ್ವಾಮಿ ವಿವೇಕಾನಂದರ ಚಿತ್ರವಿದೆ. ಮಧ್ಯಕ್ಕೊಮ್ಮೆ ವಿವೇಕಾನಂದರ ಎರಡನೇ ಚಿತ್ರ ಬರುತ್ತದೆ. ಒಂದೋ ಅಥವಾ ಎರಡು ಸೆಕೆಂಡಷ್ಟೇ ಬಂದುಹೋಗುವ ಸ್ವಾಮಿ ವಿವೇಕಾನಂದರ ನೆಪಮಾತ್ರದ ಚಿತ್ರಕ್ಕೂ ಇಡೀ ಸೀಡಿಯ ಚಿತ್ರಕತೆಗೂ ಏನೇನೂ ಸಂಬಂಧವಿಲ್ಲ.

ಸ್ವಾಮಿ ವಿವೇಕಾನಂದರ ಬದುಕು, ಬೋಧನೆ ಯಾವುದನ್ನೂ ವಿವರಿಸದ ಸೀಡಿಗಳು ಪ್ರತಿ ಕ್ಷಣಕ್ಕೊಮ್ಮೆ ಒಸಾಮಾ ಬಿನ್ ಲಾಡೆನ್, ಮುಂಬಯಿಯ ಸ್ಫೋಟ ಇತ್ಯಾದಿ ಬಾಂಬ್ ದಾಳಿಗಳನ್ನು ತೋರಿಸುತ್ತವೆ. ಹೆಣಗಳ ರಾಶಿ, ಸ್ಫೋಟದ ದೃಶ್ಯಾವಳಿ, ಅನಾಥ ಮಗು, ಸತ್ತವರ ಸಂಬಂಧಿಗಳ ಆಕ್ರಂದನದ ಹಿನ್ನೆಲೆಯಲ್ಲಿ ಮುಸ್ಲಿಮನೊಬ್ಬ ನಮಾಜು ಮಾಡುವಂತೆ ನೆರಳೊಂದನ್ನು ಪದೇಪದೇ ತೋರಿಸಲಾಗುತ್ತದೆ.

ಮಿಕ್ಕಂತೆ ಮಿಲಿಟರಿ ಸೈನಿಕರು ಯುದ್ಧ ಮಾಡುವ ದೃಶ್ಯಗಳು ಸೀಡಿಗಳಲ್ಲಿವೆ. ನಡುನಡುವೆ ಲಿಂಬಾವಳಿ, ವಿಶ್ವೇಶ್ವರ ಹೆಗಡೆ ಕಾಗೇರಿ, ರಾಮಚಂದ್ರೇಗೌಡರ ಭಾಷಣಗಳು ಮತ್ತು ಬಿಜೆಪಿ ರಾಷ್ಟ್ರನಾಯಕ ಲಾಲ್‌ಕೃಷ್ಣ ಅಡ್ವಾಣಿಯ ಮುಖಾರವಿಂದ!

ಇದು ಭಯೋತ್ಪಾದನೆ ವಿರೋಧಿ ಜಾಗೃತಿಯೇ ಅಥವಾ ಮುಂಬರುವ ಲೋಕಸಭಾ ಚುನಾವಣೆಗೆಂದು ಬಿಜೆಪಿಯ ಕೋಮು ಷಡ್ಯಂತ್ರವೇ? ಮೋದಿಯಂತೆ ಮುಸ್ಲಿಂ ದ್ವೇಷ ಬಿತ್ತಲು ಬಿಜೆಪಿಗೆ ಭಯೋತ್ಪಾದನೆಯೆಂಬ ನೆಪಸಿಕ್ಕಿದೆ. ಸೀಡಿಯಲ್ಲಿ ಎಲ್ಲೂ ಸಾಧ್ವಿ ಪ್ರಜ್ಞಾ, ಮಾಲೇಗಾಂವ್ ಸ್ಫೋಟದ ಪ್ರಸ್ತಾಪವಿಲ್ಲ. ಭಯೋತ್ಪಾದಕರೆಂದರೇನೇ ಮುಸ್ಲಿಮರು. ಭಯೋತ್ಪಾದನೆಯ ವಿರೋಧವೆಂದರೆ ಅದು ಮುಸ್ಲಿಂ ದ್ವೇಷ. ಬಿಜೆಪಿಯೊಂದೇ ಭಯೋತ್ಪಾದಕರ ವಿರುದ್ಧ ಹೋರಾಡುವ ಪಕ್ಷ. ಲಾಲ್ ಕೃಷ್ಣ ಅಡ್ವಾಣಿಯೇ ಭಯೋತ್ಪಾದನೆಯ ಧಮನಕ್ಕೆ ಬ್ರಹ್ಮಾಸ್ತ್ರ ಇತ್ಯಾದಿ ವಿಕೃತವಾದವೊಂದನ್ನು ರಾಜ್ಯದ ವಿದ್ಯಾರ್ಥಿಗಳ ತಲೆಗೆ ತುಂಬುವುದೇ ಈ ಅಭಿಯಾನದ ಹುನ್ನಾರ.

ಇಂಥದೊಂದು ಬಿಜೆಪಿ ಕಾರ್ಯಕ್ರಮಕ್ಕೆ ರಾಜ್ಯ ಬೊಕ್ಕಸದ ಕೋಟಿಗಟ್ಟಲೇ ದುಡ್ಡು ಪೋಲಾಗಬೇಕೆ? ಭಯೋತ್ಪಾದನೆಯೊಂದೇ ವಿದ್ಯಾರ್ಥಿಗಳ ಜ್ವಲಂತ ಸಮಸ್ಯೆಯೇ? ಭಯೋತ್ಪಾದನೆಯ ವಿರುದ್ಧದ ಹೋರಾಟವೆಂದರೆ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಸಾಮೂಹಿಕ ಓಟ ಓಡುವುದೆ? ಓಟ ಓಡಿ, ಮೆರವಣಿಗೆ ಮಾಡಿದರೆ ಭಯೋತ್ಪಾದನೆ ನಿಲ್ಲುತ್ತದಾ? ಇದಕ್ಕೂ ಸ್ವಾಮಿ ವಿವೇಕಾನಂದರಿಗೂ ಏನು ಸಂಬಂಧ?

ಭಯೋತ್ಪಾದನೆಯ ವಿರುದ್ಧ ಬೊಬ್ಬೆ ಹಾಕುತ್ತಿರುವ ಈ ಬಿಜೆಪಿಗಳ ಪೈಕಿ ಯಾರಾದರೂ ಒಬ್ಬ ತನ್ನ ಮಕ್ಕಳಲ್ಲಿ ಓರ್ವನನ್ನಾದರೂ ಸೈನ್ಯಕ್ಕೆ ಕಳಿಸಿ ಏಕೆ ದೇಶ ರಕ್ಷಣೆ-ರಾಷ್ಟ್ರಭಕ್ತಿ ಮೆರೆಯುತ್ತಿಲ್ಲ? ■

ಅವಿವೇಕದ ಸೀಡಿಯ ಯಡವಟ್ಟು

ಉನ್ನತ ಶಿಕ್ಷಣ ಮಂತ್ರಿ ಲಿಂಬಾವಳಿಯ ಆದೇಶದ ಪ್ರಕಾರ ಆರೆಸ್ಸೆಸ್ ನಿರ್ಮಿತ ಭಯೋತ್ಪಾದನಾ ವಿರೋಧಿ ಸೀಡಿಯೊಂದನ್ನು ರಾಜ್ಯದ ಪ್ರತಿಯೊಬ್ಬ ವಿದ್ಯಾರ್ಥಿಯೂ ನೋಡಲೇಬೇಕಂತೆ.


ಪುರೋಹಿತ್

ಹಾಗಂತ ಈ ಸರ್ಕಾರಿ ಸೀಡಿಯೊಳಗೇನಿದೆ ಅಂಥ ನೋಡ ಹೊರಟರೆ; ಅದೇ ಸಿಎನ್‌ಎನ್, ಆಜ್‌ತಕ್, ಎನ್‌ಡಿ ಟೀವಿಗಳಿಂದ ಕಾಪಿ ಹೊಡೆದ ಟೆರರ್ ಆಟ್ಯಾಕ್‌ನ ಹಸಿಬಿಸಿ ದೃಶ್ಯಾವಳಿಗಳ ಹೊರತಾಗಿ ಹೊಸದೇನೂ ಇಲ್ಲ. ಭಯೋತ್ಪಾದನೆ ಅಳಿಸಿ ದೇಶ ಉಳಿಸಿ ಎಂಬ ಘೋಷಣೆಯೊಂದಿಗೆ ಶುರುವಾಗುವ ದೃಶ್ಯ ಪದೇಪದೇ 'ಬೆಂಕಿಬಿದ್ದಿದೆ ಭಾರತಕ್ಕೆ' ಎಂಬ ಬಾಲಿಶ ಗೀತೆಯೊಂದನ್ನು ಬಿತ್ತರಿಸುತ್ತದೆ. ಕೆಲವೊಮ್ಮೆ ಅದು ಪುರೋಹಿತಶಾಹಿಯ ಆಕ್ರಂದನದಂತೆ ಕೇಳಿಸುತ್ತದೆ.


ಇಸ್ರೇಲ್‌ನ ಬಾಂಬ್ ದಾಳಿಗೆ ಛಿದ್ರಗೊಂಡ ಪ್ಯಾಲಸ್ತೇನ್ ಮಕ್ಕಳ ರಕ್ತಸಿಕ್ತ ದೇಹಗಳನ್ನು ತೋರಿಸಿ ಅದನ್ನೇ ಭಾರತದಲ್ಲಾದ ಘಟನೆಯೆಂಬಂತೆ ಚಿತ್ರಿಸಿದ್ದು, ಮುಸ್ಲಿಮರೆಲ್ಲರೂ ಭಯೋತ್ಪಾದಕರು ಎಂಬಂತೆ ಸೂಕ್ಷ್ಮವಾಗಿ ದೃಶ್ಯ ಪೋಣಿಸಿರುವುದು, ವಿದ್ಯಾರ್ಥಿಗಳಲ್ಲೂ ಭಯೋತ್ಪಾದಕರಿದ್ದಾರೆ ಎಂದು ಲಿಂಬಾವಳಿಯೇ ಭಾಷಣ ಮಾಡಿ ಮುಸ್ಲಿಂ ವಿದ್ಯಾರ್ಥಿಗಳ ಬಗ್ಗೆ ಜಾಗೃತರಾಗಿರಿ ಎಂಬರ್ಥದ ಸಂದೇಶ ಕೊಡುವುದು; ಆರೆಸ್ಸೆಸ್ ಕುತಂತ್ರವಲ್ಲದೇ ಮತ್ತೇನು?


ಪ್ರಗ್ಯಾ

ದೇಶದ ಎಲ್ಲೆಲ್ಲಿ ಟೆರರ್ ಆಟ್ಯಾಕ್‌ಗಳಾದವು ಎಂಬ ಪಟ್ಟಿಯೊಂದನ್ನು ಕೊಟ್ಟು ಗೋಧ್ರಾದಲ್ಲಿ 28 ಮಂದಿ ಬಲಿಯಾದರೆಂದು ವಿವರಿಸುತ್ತಾರೆಯೇ ಹೊರತು ಗೋಧ್ರಾ ನಂತರ ಗುಜರಾತ್‌ನಲ್ಲಿ ನಡೆದ ಮುಸ್ಲಿಮರ ಮಾರಣಹೋಮ ಮತ್ತು ಸತ್ತ 2000 ಕ್ಕೂ ಅಧಿಕ ಮುಗ್ಧರ ಹತ್ಯೆಗೆ ಯಾವ ಭಯೋತ್ಪಾದನೆ ಕಾರಣ ಎಂಬ ಬಗ್ಗೆ ವಿವರಣೆಯಿಲ್ಲ.

ಮಾಲೇಗಾಂವ್ ಸ್ಫೋಟದಲ್ಲಿ 37 ಮಂದಿ ಸತ್ತರೆಂಬ ವಿವರಣೆಯಿದೆ. ಆದರೆ ಇದೇ ಬಿಜೆಪಿಯ ಬೇರುಗಳಂತಿರುವ ಪ್ರಜ್ಞಾಸಿಂಗ್, ಪಾಂಡೆ, ಲೆಫ್ಟಿನೆಂಟ್ ಪುರೋಹಿತ್, ಚತುರ್ವೇದಿ ಹಾಗೂ ಕುಲಕರ್ಣಿಯ ಬಗ್ಗೆ ಅಪ್ಪಿತಪ್ಪಿಯೂ ವಿವರಣೆಯಿಲ್ಲ. ವಿಕಟವೆಂದರೆ ಸ್ವತಃ ಕರ್ನಾಟಕ ಸರ್ಕಾರದ ಲಾಂಛನದಡಿಯಲ್ಲಿ ಉನ್ನತ ಶಿಕ್ಷಣ ಇಲಾಖೆಯೇ ಸೃಷ್ಟಿಸಿದ ಸೀಡಿಯ ತುಂಬ ವ್ಯಾಕರಣ ದೋಷಪೂರಿತ ತಪ್ಪುತಪ್ಪಾದ ಕನ್ನಡದಲ್ಲಿ ವಿವರಣೆಯಿದೆ. ಕೇವಲ ಮುಸ್ಲಿಮರಷ್ಟೇ ಭಯೋತ್ಪಾದಕರೆಂದು ಬಿಂಬಿಸುವ ಅವಸರಕ್ಕೆ ಬಿದ್ದಾಗ ತಾನೇ ಇತರೇ ವಿವರಗಳತ್ತ ಶ್ರದ್ಧೆ ಕುಂದುವುದು?


ಇದು ಮುಂಬರುವ ಚುನಾವಣೆಯ ಗಾಬರಿಯಲ್ಲಿ ಸೃಷ್ಟಿಯಾದ ಯಡವಟ್ಟಲ್ಲದೇ ಮತ್ತೇನು?



ರಹಸ್ಯ ದಾಖಲೆ ಪತ್ತೆ

ಮಾಲೆಗಾಂವ್-ಹುಬ್ಬಳ್ಳಿ ಬಾಂಬ್

ಬಿಜೆಪಿ ದುಡ್ಡು ಮುತಾಲಿಕ್ ಕೈ





-ಪಾರ್ವತೀಶ್, ಬಾಗಲಕೋಟೆ-ಮೇಘರಾಜ್, ಗದಗ-ವಿನಯ ಹುರಳಿಕುಪ್ಪಿ
ದಾವಣಗೆರೆ-ಚಂದ್ರಶೇಖರ ತೋರಣಘಟ್ಟ

ತೌನು ಕಳ್ಳ, ಪರರ ನಂಬ ಎಂಬುವರ ದುಷ್ಟ ಕೃತ್ಯವಿದು.

2008 ರ ಮೇ 10 ರಂದು ಹುಬ್ಬಳ್ಳಿ ಸೆಷನ್ಸ್ ಕೋರ್ಟ್‌ನೊಳಗೆ ನಡೆದ ಬಾಂಬ್ ಸ್ಫೋಟದ ಹಿಂದೆ ಸಂಘ ಪರಿವಾರಿಗಳ ಶ್ರೀರಾಮ ಸೇನೆಯ ಕೈವಾಡ ಇತ್ತೆಂಬುದು ಈಗ ಬಯಲಾಗಿದೆ. ಈ ಸ್ಫೋಟದ ಆರಂಭಿಕ ತನಿಖೆ ಶುರುವಾಗುವ ಮೊದಲೇ ಬಿಜೆಪಿಗಳು, ಪೊಲೀಸರು ಹಾಗೂ ಮೀಡಿಯಾಗಳು ಅದನ್ನು ಮುಸ್ಲಿಮರ ತಲೆಗೇ ಕಟ್ಟಿಬಿಟ್ಟಿದ್ದವು. ಆದರೀಗ ಎಲ್ಲವೂ ತಲೆಕೆಳಗಾಗಿವೆ. ಪ್ರಮೋದ್ ಮುತಾಲಿಕನ ಖಾಸಾ ಬಂಟ ನಾಗರಾಜ ಜಂಬಗಿ ಮತ್ತವನ ಇನ್ನೂ ಎಂಟು ಜೊತೆಗಾರರು ಬಾಂಬ್ ಸ್ಫೋಟಿಸಿದ್ದರೆಂಬ ಸಂಗತಿ ಈಗ ಗೊತ್ತಾಗಿದೆ. ಅಷ್ಟೇ ಅಲ್ಲ ಹಗಲು ಹೊತ್ತಿನಲ್ಲಿ ಹಿಂದೂ ಧರ್ಮೋದ್ಧಾರಕ್ಕೆ ಶ್ರೀರಾಮ ಸೇನೆಯ ಕೆಲಸ ಮಾಡುತ್ತಾ ರಾತ್ರಿ ಹೊತ್ತು ಕೊಲೆ-ದರೋಡೆ ನಡೆಸಲು ಈ ಕೇಸರಿ ಪಡೆ 'ಟೈಗರ್ ಗ್ಯಾಂಗ್' ಎಂಬ ಗುಂಪು ಕಟ್ಟಿಕೊಂಡಿದ್ದರೆಂಬುದೂ ಈಗ ಗೊತ್ತಾಗಿದೆ.

ಕನಿಷ್ಠ ಎಂದರೂ 16 ಅಮಾಯಕರನ್ನು ಈ ಸಂಘ ಪರಿವಾರಿಗಳು ಕೊಂದಿದ್ದಾರೆ. 20 ಲಕ್ಷ ರೂಪಾಯಿ ತನಕ ಹಣ ದೋಚಿದ್ದಾರೆ. ಇದೆಲ್ಲಕ್ಕಿಂತ ಆಶ್ಚರ್ಯದ ಸಂಗತಿ ಏನೆಂದರೆ ಇದೇ ಕೇಸರಿ ಕ್ರಿಮಿನಲ್‌ಗಳ ನಾಯಕ ಪ್ರಮೋದ್ ಮುತಾಲಿಕ್ 'ನನಗೂ ಇದಕ್ಕೂ ಸಂಬಂಧವಿಲ್ಲ' ಎಂದು ಜಾರಿಕೊಂಡಿದ್ದಾನೆ. ಕರ್ನಾಟಕ ಪೊಲೀಸರೂ ಸಂತೋಷದಿಂದ ಮುತಾಲಿಕನ ಮಾತಿಗೆ ಸಮ್ಮತಿಸಿರುವಂತೆ ಭಾಸವಾಗುತ್ತಿದೆ.

ಆದರೆ ಮತ್ತೊಂದೆಡೆ ಇದೇ ಮುತಾಲಿಕ್ ನಾಗರಾಜ ಜಂಬಗಿಯ ಗ್ಯಾಂಗ್ ಕೇವಲ ಹುಬ್ಬಳ್ಳಿ ಸ್ಫೋಟ ಮಾತ್ರವಲ್ಲದೇ 2006 ರಲ್ಲಿ ನಡೆದ ಮಾಲೇಗಾಂವ್ ಸ್ಫೋಟದಲ್ಲೂ ಕೈಜೋಡಿಸಿರುವ ಅನುಮಾನ ಮಹಾರಾಷ್ಟ್ರ ಪೊಲೀಸರಿಗೆ ಬಂದಿದೆ. ಅಲ್ಲಿನ Anti Terrorist Squad (ATS)ನವರು ಎಬಿವಿಪಿಯ ಸಾಧ್ವಿ ಪ್ರಗ್ಯಾಸಿಂಗ್‌ಳೊಂದಿಗೆ ಸಂಪರ್ಕವಿತ್ತನ್ನಲಾದ ಇಪ್ಪತ್ತೈದು ವರ್ಷದ ಪ್ರವೀಣ್ ಮುತಾಲಿಕನಿಗಾಗಿ ಈಗ ಹುಡುಕಾಡುತ್ತಿದ್ದಾರೆ.

ಇವನು ಕರ್ನಾಟಕದವನು!

ಹೀಗೆ ಮಹಾರಾಷ್ಟ್ರದ ವಿಶೇಷ ತನಿಖಾ ತಂಡದ ಪೊಲೀಸರು 2006 ರ ಮಾಲೇಗಾಂವ್ ಸ್ಫೋಟ, 2007 ಹೈದರಾಬಾದಿನ ಮೆಕ್ಕಾ ಮಸೀದಿ ಸ್ಫೋಟ ಹಾಗೂ 2008 ರ ಹುಬ್ಬಳ್ಳಿ ಕೋರ್ಟ್ ಬಾಂಬ್ ಸ್ಫೋಟಗಳ ನಡುವೆ ಇರುವ ಹೋಲಿಕೆಗಳ ಬಗ್ಗೆ ಮತ್ತು ಅದರಲ್ಲಿ ಕೇಸರಿ ಟೆರರಿಸ್ಟರ ಕೈವಾಡದ ಬಗ್ಗೆ ವಿಚಾರಣೆ ನಡೆಸುತ್ತಿದ್ದರೆ ಇತ್ತ ಕರ್ನಾಟಕ ಪೊಲೀಸರು ಕನಿಷ್ಠ ಪಕ್ಷ ಪ್ರಮೋದ್ ಮುತಾಲಿಕ್‌ನನ್ನು ಕರೆಸಿ ಒಮ್ಮೆಯೂ ವಿಚಾರಿಸಿಲ್ಲ.

ಉತ್ತರ ವಲಯ ಐಜಿಪಿ ರಾಘವೇಂದ್ರ ಔರಾದ್‌ಕರ್ ಮತ್ತವರ ಪೊಲೀಸ್ ಟೀಂ ಆಗಿದ್ದ ಬಾಗಲಕೋಟೆ ಎಸ್‌ಪಿ ಹರಿಹರನ್, ಸವದತ್ತಿ ಸಿಪಿಐ ನಾರಾಯಣ ಭರಮನಿ, ಗೋಕಾಕದ ತುಳಸಿಗೇರಿ, ಬಾದಾಮಿಯ ಚಿದಂಬರರ ಕೈಯಿ-ಬಾಯನ್ನು ಆಳುವ ಬಿಜೆಪಿ ಸರ್ಕಾರ ಕಟ್ಟಿ ಹಾಕಿದೆ. ಗೃಹ ಸಚಿವ ಆಚಾರ್ಯ ಪೊಲೀಸರ ತನಿಖೆ ಆ ದಿಕ್ಕಿನತ್ತ ಹೋಗದಂತೆ ಅಡ್ಡಗಾಲಾಕಿದ್ದಾರೆ.

ಹುಬ್ಬಳ್ಳಿ ಬಾಂಬ್ ಸ್ಫೋಟದ ಹಿಂದೆ ಕೇವಲ ಶ್ರೀರಾಮ ಸೇನೆ ಮಾತ್ರವಲ್ಲ RSS ಹಾಗೂ ಬಿಜೆಪಿಗಳ ಪ್ರಚೋದನೆಯೂ ಇತ್ತೆಂಬ ರಹಸ್ಯ ಬಯಲಾಗದಿರಲೆಂದು ಆಚಾರ್ಯ ಡ್ಯಾಮೇಜ್ ಕಂಟ್ರೋಲ್ ಮಾಡಲು ಹೊರಟಿದ್ದಾರೆ.

ಬಿಜೆಪಿ ದುಡ್ಡು

ಅಸಲಿಗೆ ಈ ಶ್ರೀರಾಮ ಸೇನೆಯ ಮೂಲ ಯಾವುದು? ಅದರ ಕಾರ್ಯಕರ್ತರ್ಯಾರೆಂಬುದನ್ನು ತಿಳಿಯಲು ಅಷ್ಟು ಕಷ್ಟಪಡಬೇಕಿಲ್ಲ.

ಪ್ರಮೋದ್ ಮುತಾಲಿಕ್ ಶ್ರೀರಾಮ ಸೇನೆ ಹಾಗೂ ರಾಷ್ಟ್ರೀಯ ಹಿಂದೂ ಸೇನೆಯ ಅಧ್ಯಕ್ಷನೆಂದು ಈಗಲೂ ಹೇಳಿಕೊಳ್ಳುತ್ತಿದ್ದಾನೆ. ಅದಕ್ಕೂ ಮೊದಲು ಭಜರಂಗದಳದ ದಕ್ಷಿಣ ಭಾರತದ ಸಂಚಾಲಕನಾಗಿದ್ದವನು ಇದೇ ಮುತಾಲಿಕ್. ಆಗಲೇ ಹಿಂದೂ ಸಂಘಟನೆಗಳ ಭೂಗತ ನಾಯಕರು ಮುತಾಲಿಕನನ್ನು ಶಿವಸೇನೆ, ಶ್ರೀರಾಮ ಸೇನೆ ಕಟ್ಟುವ ಸಲುವಾಗಿ ಭಜರಂಗ ದಳದಿಂದ ಬೇರ್ಪಡಿಸಿ ಕಳುಹಿಸಿದ್ದರು. ದಲಿತರು-ಮುಸಲ್ಮಾನರು-ಕ್ರಿಶ್ಚಿಯನ್ನರ ವಿರುದ್ಧ ನೇರವಾದ ಹಿಂಸಾತ್ಮಕ ಕೃತ್ಯವೆಸಗಲು ಈ ಹೊಸ ಸಂಘಟನೆಗಳನ್ನು ಅಸ್ತಿತ್ವಕ್ಕೆ ತರಲಾಗಿತ್ತು. ಅದರಂತೆ ಮುತಾಲಿಕ್ 2005 ರ ಸೆಪ್ಟೆಂಬರ್‌ನಲ್ಲಿ ಶಿವಸೇನೆ ಶುರು ಮಾಡಿದನಾದರೂ ಕೆಲವು ಕನ್ನಡ ಸಂಘಟನೆಗಳ ಪ್ರತಿರೋಧದಿಂದಾಗಿ ಇಲ್ಲಿ ಶಿವಸೇನೆ ತಲೆ ಎತ್ತಲಾಗಲಿಲ್ಲ.

ಆ ಹಂತದಲ್ಲೇ ಬಿಜೆಪಿ ಹಾಗೂ RSS ನ ಕೆಲ ನಾಯಕರು ಬೆಂಗಳೂರಿನಲ್ಲಿ ಮುತಾಲಿಕನಿಗೆ ಒಟ್ಟು 18 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಭಯೋತ್ಪಾದನೆಯ ಉದ್ದೇಶಕ್ಕಾಗಿಯೇ ಸರಬರಾಜು ಮಾಡಲಾದ ಹಣ ಅದು. ಬೆಂಗಳೂರಿನ ಚಿಕ್ಕಪೇಟೆಯ ಕುಂಚಿಟಿಗರ ಭವನದಲ್ಲಿ 28.4.2005 ರಂದು ನಡೆದ ಒಂದು ರಹಸ್ಯ ಸಭೆಯಲ್ಲಿ ಮುತಾಲಿಕನ ಶಿವಸೇನೆ ಹಾಗೂ ಶ್ರೀರಾಮ ಸೇನೆಯ ಮುಂದಿನ ಕಾರ್ಯಚಟುವಟಿಕೆಗಳ ಬಗ್ಗೆಯೂ ವಿವರವಾಗಿ ಚರ್ಚಿಸಲಾಗಿತ್ತು.

ವಿಲಾಸರಾವ್ ಪವಾರ್, ಮನೋಜ್ ಹಾನಗಲ್ (ಗಂಗೂಬಾಯಿ ಹನಗಲ್‌ರ ಮೊಮ್ಮಗ) ಮುಂತಾದವರೂ ಭಾಗವಹಿಸಿದ್ದ ಆ ಸಭೆಯಲ್ಲಿ ಸಂತೋಷ್ ಕೂಡ ಇದ್ದ.

ಇವನ್ಯಾರು ಗೊತ್ತೆ?


ಈಗಿನ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ!

ರಘು ಎಂಬುವನೂ ಇದ್ದ ಇವನು ಈಗ ಬೆಂಗಳೂರು ನಗರ ಬಿಜೆಪಿ ಕಾರ್ಯದರ್ಶಿಯಾಗಿದ್ದಾನೆ. ಅವತ್ತು ಮುತಾಲಿಕನಿಗೆ ಹಣ ಕೊಟ್ಟವರಲ್ಲಿ ಬಿಜೆಪಿ ನಾಯಕರಾದ ಈಶ್ವರ್, ಕುಮಾರ್, ಹಯವದನ ರಾವ್, ರಘು, ಅನಿಲ್ ಮುಂತಾದವರು ಇದ್ದರು. ಇದನ್ನು ಸಾಬೀತು ಪಡಿಸುವ ದಾಖಲೆಯನ್ನೂ ಇಲ್ಲಿ ಪ್ರಕಟಿಸಲಾಗಿದೆ.


ಹೀಗೆ ಬಿಜೆಪಿಗಳಿಂದ ಲಕ್ಷಾಂತರ ರೂಪಾಯಿ ಹಣ ಪಡೆದುಕೊಂಡ ಮುತಾಲಿಕ್ ಶಿವಸೇನೆಯ ಬದಲಾಗಿ ಶ್ರೀರಾಮ ಸೇನೆ ಲಾಂಚ್ ಮಾಡಿದ. ಇವನಿಗೆ ಮೊದಲಿನಿಂದಲೂ ಉತ್ತರ ಕರ್ನಾಟಕದ ಕೆಲ ಭಜರಂಗಿಗಳ ಸಂಪರ್ಕವಿತ್ತು, ಈಗ ಬಂಧಿತನಾಗಿರುವ ನಾಗರಾಜ ಜಂಬಗಿಯೂ ಅಂತವರಲ್ಲೊಬ್ಬ, ಚಡ್ಡಿಗಳು ಬೋಧಿಸುವ ಹಿಂದೂ ರಾಷ್ಟ್ರದ ಅಮಲನ್ನು ನೆತ್ತಿಗೇರಿಸಿಕೊಂಡಿದ್ದ ಜಂಬಗಿ ಅತೀ ಬೇಗನೆ ತನ್ನ ಪರಿಚಯದ ರಮೇಶ್ ಪವಾರ್, ಡಿಗ್ಗಿ, ಜಾಲಗಾರ, ಬಂಜವಾಡಗಿ, ಗೋವಿಂದಕರ ಹಾಗೂ ಬಸವರಾಜ ರೂಗಿ ಮುಂತಾದವರನ್ನು ಶ್ರೀರಾಮ ಸೇನೆಗೆ ಕರೆತಂದ.

"ಯಾರ ತಲೆ ಬೇಕಾದರೂ ಒಡೆದು ಹಿಂದೂ ರಾಷ್ಟ್ರ ಕಟ್ಟಲು ಹಣ ತನ್ನಿ" ಎಂದೇ ಪ್ರಚೋದಿಸುತ್ತಿದ್ದ ಮುತಾಲಿಕನ ಮಾತಿನಂತೆ ಇವರು ಹಣ ಸಂಗ್ರಹಿಸಲು ನೇರವಾಗಿ ಕೊಲೆ ದರೋಡೆಗಳಿಗೇ ಇಳಿದುಬಿಟ್ಟರು.

ಈಗ 'ನನಗೇನೂ ಗೊತ್ತಿಲ್ಲ' ಎಂದೇ ನಾಟಕವಾಡುತ್ತಿರುವ ಮುತಾಲಿಕ್ ಬಾಂಬ್ ಸ್ಫೋಟದ ಆರೋಪಿ ನಾಗರಾಜ ಜಂಬಗಿಯ ಹೆಗಲ ಮೇಲೆ ಕೈಯಿಟ್ಟು



ಬಿಜೆಪಿ ನಾಯಕರು ಮುತಾಲಿಕನಿಗೆ ಹಣ ನೀಡಿರುವ ದಾಖಲೆ



ಹುಬ್ಬಳ್ಳಿ ಸ್ಫೋಟದ ದೃಶ್ಯ

"ಇವರೆಲ್ಲಾ ಹಿಂದೂ ಧರ್ಮದ ಉದ್ಧಾರಕ್ಕಾಗಿ ಜನ್ಮವೆತ್ತಿರುವ ಅವತಾರ ಪುರುಷರು. ಆರೆಸ್ಸೆಸ್-ಬಿಜೆಪಿಯೊಂದಿಗೆ ಗುಪ್ತ ಸಂಬಂಧವಿರಿಸಿಕೊಂಡಿದ್ದ ದೇಶಭಕ್ತರು. ಪ್ರಮೋದ್ ಮುತಾಲಿಕ್‌ನ ಶಿವಸೇನೆಯೊಂದಿಗಿದ್ದವರು. ಆಮೇಲೆ ಮುತಾಲಿಕನ ಶ್ರೀರಾಮ ಸೇನೆ ಸೇರಿ ಸಮಾಜ ವಿರೋಧಿ ಕೆಲಸ ನಡೆಸುತ್ತಿದ್ದವರು. ಟೈಗರ್ ಗ್ಯಾಂಗ್ ಇವರ ಬ್ರಾಂಡ್ ನೇಮ್.

ಕೇಸರಿ ಉಗ್ರರ ಕೊಲೆ, ಡಕಾಯಿತಿಗಳು

ಕಳೆದ ಮೂರು ವರ್ಷಗಳಿಂದ ಹಿಂದೂ ಧರ್ಮದ ಹೆಸರಿನಲ್ಲಿ ಇವರು ನಡೆಸುತ್ತಾ ಬಂದಿದ್ದ ಕೊಲೆ, ದಕಾಯಿತಿ, ಕಿಡ್ನ್ಯಾಪ್‌ಗಳ ವಿವರಗಳನ್ನು ನೋಡಿದರೆ ಎದೆ ನಡುಗಿಹೋಗುತ್ತದೆ.

2008ರ ಮೇ 10ರಂದು ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿದ್ದು ಕೇಸರಿ ಉಗ್ರರೆಂಬುದು ಈಗ ಗೊತ್ತಾಗಿದೆಯಷ್ಟೇ. ಆದರೆ ಅದಕ್ಕೂ ಹಿಂದೆ ಮುತಾಲಿಕನ ಈ ಟೈಗರ್ ಗ್ಯಾಂಗ್ ಕನಿಷ್ಠ 16 ಜನರ ಕೊಲೆ ಮಾಡಿದೆ. ಈಗ ಅರೆಸ್ಟ್ ಆಗಿರುವುದರಿಂದ ಇನ್ನೂ ಹಲವರು ಕೊಲೆ, ದರೋಡೆಗೆ ಬಲಿಯಾಗುವುದು ತಪ್ಪಿಹೋಗಿದೆ. ಈ ಕ್ರಿಮಿನಲ್ ಕೃತ್ಯಗಳ ನಾಯಕ ನಾಗರಾಜ ಜಂಬಗಿ ಪ್ರಮೋದ್ ಮುತಾಲಿಕ್‌ನ ಖಾಸಾ ಮನುಷ್ಯ. ಬೀಳಗಿಯ ಹೆಗ್ಗೂರಿನವನು. ಜಂಬಗಿ ಗಾಣಿಗ ಜಾತಿಯವನಾಗಿದ್ದು ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ 30 ಸಾವಿರದಷ್ಟು ಗಾಣಿಗ ಮತದಾರರಿದ್ದ ಕಾರಣ ಈಗಿನ ಕೈಗಾರಿಕಾ ಸಚಿವ ಬಿಜೆಪಿಯ ಮುರುಗೇಶ್ ನಿರಾಣಿ ಎಲೆಕ್ಷನ್‌ನಲ್ಲಿ ಜಂಬಗಿಯನ್ನು ಸಾಕಷ್ಟು



ತುಳಸಿಗೇರಿ

ಬಳಸಿಕೊಂಡಿದ್ದ. ಆದರೆ ಗೆದ್ದನಂತರ ಜಂಬಗಿಯನ್ನು ನಿರ್ಲಕ್ಷಿಸಿಬಿಟ್ಟ. ಆಮೇಲೆ ಕೆಲಸವಿರದ ಜಂಬಗಿ ಮಾಡಲು ಬೇರೇನೂ ಇರದೆ ಬಾಗಲಕೋಟೆಗೆ ಬಂದು ಹಳೇ ಐಬಿ ಹತ್ತಿರ ಬೋಂಡಾ-ವಡೆ ಮಾರಲು ತೊಡಗಿದ. ಅಲ್ಲೇ ಓಸಿ ದಂಧೆಯೂ ನಡೆಯುತ್ತಿತ್ತು. ಈ ಜಂಬಗಿ ಮೇಲ್ನೋಟಕ್ಕೆ ಕ್ರೂರಿಯಂತಿದ್ದ. ಆದರೆ ಮಾತು ಮಾತ್ರ ಅತೀ ವಿನಯ... ಎಲ್ಲಾ ಆರೆಸ್ಸೆಸಿಗರಂತೆ!

ಜಂಬಗಿಗೆ ಬಸವರಾಜ ಡಿಗ್ಗಿ (22 ವರ್ಷ) ಪರಿಚಯವಾಗಿದ್ದು ಅಲ್ಲಿ. ಬಾಗಲಕೋಟೆಯ ವಾಟರ್ ಟ್ಯಾಂಕ್ ಹತ್ತಿರದ ಸ್ಲಂ ಪ್ರದೇಶ ಕಳ್ಳಭಟ್ಟಿ ಸಾರಾಯಿ, ಮಟ್ಕಾ ದಂಧೆಗೆ ಮೊದಲಿನಿಂದಲೂ ಕೇಂದ್ರಸ್ಥಳ. ಈ ಹಂತದಲ್ಲೇ ಮುತಾಲಿಕ್‌ನೊಂದಿಗಿನ ಇವರ ಒಡನಾಟ ಇನ್ನೂ ಹೆಚ್ಚಾಯಿತು. ಹಿಂದೂ ರಾಷ್ಟ್ರ ಕಟ್ಟಲು, ಶ್ರೀರಾಮ ಸೇನೆ ಬೆಳೆಸಲು ಹಣ ಬೇಕಲ್ಲ... ಅದಕ್ಕಾಗಿ ಈ ಘಟಿಂಗರು ಬಿಜೆಪಿಯಿಂದ ಗೆದ್ದಿದ್ದ ಜಮಖಂಡಿಯ ಸಿದ್ದು ಸವದಿಗೆ ಹಾಗೂ ಬೀಳಗಿಯ ಹೊತ್ತಿಗೆ ಮುರುಗೇಶ ನಿರಾಣಿಗೆ ತಲಾ 50 ಲಕ್ಷ ಕೊಡುವಂತೆ ಪೀಡಿಸಿದರು. ಆದರೆ ಅವರಿಬ್ಬರೂ ಕೇರ್ ಮಾಡಲಿಲ್ಲ. ಆಗಲೇ ಈ ಹಿಂದೂ ವೀರರ ತಂಡ ಕೊಲೆ-ಡಕಾಯಿತಿಗಳ ಸ್ಕೆಚ್ ಹಾಕಿದ್ದು. ಅಷ್ಟು ಸಕ್ರಿ ಕಾಲೇಜಿನ ಜವಾನ ರಮೇಶ ಪವಾರ, ಲಿಂಗರಾಜ ಜಾಲಗಾರ, ಮಂಜುನಾಥ ಬಂಜವಾಡಗಿ, ದೀಪಕ್ ಗೋವಿಂದಕರ ಮುಂತಾದ ಮುತಾಲಿಕ್‌ನ ಶಿಷ್ಯಪಡೆ ಒಂದೇ ಗುಂಪಾಗಿ ಸೇರಿಕೊಂಡಿದ್ದರು.

ಈ ಗ್ಯಾಂಗ್ ಮೊಟ್ಟಮೊದಲಿಗೆ ಗೋಕಾಕ್‌ನಲ್ಲಿ ಒಂದು ಮನೆ ಕಳ್ಳತನಕ್ಕೆ ಯತ್ನಿಸಿ ವಿಫಲವಾಯಿತು. ಆಮೇಲೆ ಮಹಾರಾಷ್ಟ್ರ ಗಡಿಯ ಸೋಲಾಪುರಕ್ಕೆ ಹೋಗಿ ಒಂದು ಟಾಟಾ ಸುಮೋ ಬಾಡಿಗೆಗೆ ತಗೊಂಡು ಗಡಹಿಂಗಜಗೆ ಕರೆತಂದು ಡ್ರೈವರ್‌ನನ್ನು ಕೊಂದು, ದೇಹ ಸುಟ್ಟಿದ್ದಾರೆ. ಕದ್ದ ಗಾಡಿಯಲ್ಲೇ ಓಡಾಡುತ್ತಾ ಒಮ್ಮೆ ಲಿಫ್ಟ್ ನೀಡುವುದಾಗಿ ದಂಪತಿಗಳಿಬ್ಬರನ್ನು ನಂಬಿಸಿ ಸುಮೋಗೆ ಹತ್ತಿಸಿಕೊಂಡು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅವರ ಕತ್ತು ಹಿಸುಕಿ ಕೊಂದಿದ್ದಾರೆ. ಆದರೆ ಅಲ್ಲಿ ಸಿಕ್ಕ ಹಣ ಮುನ್ನೂರು ರೂ. ಮಾತ್ರ. ಜೊತೆಗೆ 4 ತೊಲ ಬಂಗಾರವಿತ್ತು, ಆಮೇಲೆ 3 ದಿನ ಅದೇ ಸುಮೋದಲ್ಲೇ ಓಡಾಡಿಕೊಂಡಿದ್ದು ಕೊನೆಗೆ ಪೊಲೀಸರಿಗೆ ಹೆದರಿ ಗಾಡಿಗೆ ಬೆಂಕಿ ಹಾಕಿ ಮತ್ತೆ ಈ ಗ್ಯಾಂಗ್ ಗೋಕಾಕ್‌ಗೆ ಬಂದಿಳಿಯಿತು. ಅದು 2006ರ ಸಮಯ. ಹಾಗೆ ಗೋಕಾಕ್‌ಗೆ ಬಂದು ಸ್ಥಳೀಯ ಮಾರ್ವಾಡಿ ವ್ಯಾಪಾರಿ ಶ್ರೀಪಾದ ಶಹಾ ಎಂಬುವನಿಗೆ 2 ಲಕ್ಷ ಕೊಡುವಂತೆ ಬೆದರಿಸಿ, ಅವನು ಜಗ್ಗದಿದ್ದಾಗ ಆ್ಯಸಿಡ್ ಸುರಿದಿದ್ದಾರೆ. ಈ ವಿಚಾರ ಹೇಗೋ ಪೊಲೀಸರಿಗೆ ಗೊತ್ತಾಗಿ, ಸಿಪಿಐ ತುಳಸಿಗೇರಿ ಒಂದು ಪ್ಲಾನ್ ಮಾಡಿ "ಕಾಟನಹಳ್ಳಿ ಡಾಬಾಗೆ ಬಂದರೆ ಹಣ ಕೊಡುವುದಾಗಿ" ಶ್ರೀಪಾದನ ಸೋದರ ಮನೋಹರ ಶಹಾ ಮೂಲಕ ಕೇಸರಿ ಉಗ್ರರಿಗೆ ಮೆಸೇಜ್ ಕಳಿಸಿ ತಾವೇ ಕಾವಲು ಕೂತರು. ಮುತಾಲಿಕ್‌ನ ಇನ್ನೊಬ್ಬ ಶಿಷ್ಯ ಜಾಧವ (ಈಗಲೂ ಸೆರೆ ಸಿಕ್ಕಿಲ್ಲ) ಅಲ್ಲಿಗೆ ಬಂದು 'ಪೈಸಾ ಲಾಯಾ ಕ್ಯಾ' ಎಂದು ಕೇಳುತ್ತಿದ್ದಂತೆ ತುಳಸಿಗೇರಿ ತಂಡ ದಾಳಿ ಮಾಡಿತಾದರೂ ಜಾಧವ ಓಡಿಬಿಟ್ಟ. ಉಳಿದವರು ಡಾಬಾ ಬಳಿ ಬರದೆ ದೂರದಲ್ಲಿದ್ದ ಕಾರಣ ಪೊಲೀಸರಿಗೆ ಅವತ್ತು ಜಂಬಗಿ ಸಿಗಲಿಲ್ಲ. ಈ ಅಚಾತುರ್ಯದಿಂದಾಗಿ ಮುಂದೆ ಇನ್ನಷ್ಟು ಜನ ಕೊಲೆಗೀಡಾದರು. ಇದೇ ಸುಮಾರಿಗೆ ಗಣೇಶ ಹಬ್ಬಕ್ಕೆ ಹಣ ವಸೂಲಿ ಮಾಡಲು ಹೋಗಿ ಕೆಲವರು ಕೊಡಲಿಲ್ಲವೆಂದು ಗೋಕಾಕದ ಕಪಡಾ ಬಜಾರಿಗೆ ಜಂಬಗಿ ಗ್ಯಾಂಗ್ ಬೆಂಕಿ ಹಚ್ಚಿತ್ತು. ಇದು ಮುಸ್ಲಿಮರ ಕೈವಾಡ ಎಂದು ಪತ್ರಿಕೆಗಳು ಹಾಗೂ ಪೊಲೀಸರು ಬಿಂಬಿಸಿದ್ದರು. ಈ ಮಧ್ಯೆ ಜಾಧವನೇನಾದರೂ ಪೊಲೀಸರಿಗೆ ಸಿಕ್ಕಿಬಿದ್ದರೆ ಎಲ್ಲಿ ತನ್ನ ಗುಟ್ಟು ಬಯಲಾಗುತ್ತದೋ ಎಂದು ಹೆದರಿದ ಜಂಬಗಿ ಒಂದು ಸಾರಿ ಜಾಧವನ ಮೋಟಾರ್

ಮ್ಮೆಯಿಂದ ತೆಗೆಸಿಕೊಂಡಿರುವ ಫೋಟೋ ವೆಯಲ್ಲ ಅದಕ್ಕೇನು ಹೇಳುತ್ತಾನೆ?

ಹುಬ್ಬಳ್ಳಿ ಕೋರ್ಟಿನಲ್ಲಿ ಬಾಂಬ್ ಸ್ಫೋಟಿಸಿದ್ದು ಸಿಮಿಯ ಶಂಕಿತ ಉಗ್ರರನ್ನು ಕೊಲ್ಲಲು ಎಂದು ಈಗ ಪೊಲೀಸರು ಕತೆ ಕಟ್ಟುತ್ತಿದ್ದಾರೆ!

ಇದಲ್ಲವಾ ಅಸಲಿ ತಮಾಷೆ?


ಹುಬ್ಬಳ್ಳಿ ಸ್ಫೋಟವಾಗಿದ್ದು 2008ರ ಮೇ ರಂದು ಶನಿವಾರ ಬೆಳಗ್ಗೆ 12.30 ಗಂಟೆಗೆ. ಮತ್ತು ಕೋರ್ಟಿಗೆ ರಜೆಯಿತ್ತು, ಅಷ್ಟೇ ಅಲ್ಲ ಮಿ ಶಂಕಿತರ ವಿಚಾರಣೆಯಿದ್ದದ್ದು ಸ್ಫೋಟವಾದ ಎರಡು ದಿನದ ನಂತರ, ಅಂದರೆ ಮೇ 12 ರಂದು.

ಹಾಗಾದರೆ, ಸಿಮಿಯ ಜನ ಈ ಸ್ಫೋಟದ ಟಾರ್ಗೆಟ್ ಅಲ್ಲವಾದರೆ ಅಸಲಿಗೆ ಈ ಬಾಂಬ್ ಮೇ 10 ರಂದು ಸ್ಫೋಟಿಸಿತಾದರೂ ಏಕೆ?

ಎಲೆಕ್ಷನ್ ಕಾರಣಕ್ಕೆ!

ಬಜೆಪಿ ಪರ ಸಿಂಪಥಿ ಗಳಿಸಲಿಕ್ಕೆ!

ಮೇ 10 ರಂದು ದಕ್ಷಿಣ ಕರ್ನಾಟಕ ಜಿಲ್ಲೆಗಳ 89 ಕ್ಷೇತ್ರಗಳಲ್ಲಿ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಬಜೆಪಿ ಹೆಚ್ಚು ಸ್ಥಾನ ಗೆಲ್ಲಲಾರದೆಂಬ ವಾಸ್ತವ ಸ್ವತಃ ಬಜೆಪಿಗಳಿಗೇ ತಿಳಿದಿತ್ತು. ಮತ್ತು ಟೆರರಿಸಂ ವಿಚಾರ ಮತದಾನದಲ್ಲಿ ಪ್ರಮುಖ ವಿಚಾರವಾಗಿರಲೂ ಇಲ್ಲ, ಹಾಗಾಗಿ ಮೇ 16 ಮತ್ತು



ಬಿದಾವಕರ್

ರಮೇಶ್ ಹರಿಹರ್

ಚಿದಂಬರಂ

ರೆಡಿಯಾಗಿದ್ದ ಮತ್ತೆರಡು ಬಾಂಬ್ ಹಾಗೂ ಮದ್ಯ-ಗುಂಡು ಪೊಲೀಸರಿಗೆ ಸಿಕ್ಕಿವೆ..

ಆದರೆ ಇವರ ಜೊತೆಗಾರ ಬಿ. ಶಿವಕುಮಾರ ಎಂಬುವವನು ತಲೆ ಮರೆಸಿ ಕೊಂಡಿದ್ದಾನೆ. ಬಾಂಬ್ ಸ್ಫೋಟದಲ್ಲಿ ಅವನ ಕೈವಾಡವಿದೆ. ಈ ಬಾಂಬ್‌ಗಳಲ್ಲಿ ನಿಯೋಜೆಲ್ ಹಾಗೂ ಪವರ್ ಜೆಲ್, ಅಮೋನಿಯಂ ನೈಟ್ರೇಟ್ ರಾಸಾಯನಿಕಗಳನ್ನು ಬಳಸಲಾಗಿದೆ ಎಂದು ಫೊರೆನ್ಸಿಕ್ ತಜ್ಞ ಪಿ.ಆರ್. ಜಯರಾಂ ಹೇಳಿದ್ದಾರೆ. ಅತ್ತ ಮಾಲೇಗಾಂವ್ ಸ್ಫೋಟ ದಲ್ಲೂ ಇದೇ ರಾಸಾಯ್ನನಿಕ ಬಳಕೆಯಾಗಿದೆ. ಬಹಳ ಮುಖ್ಯವಾಗಿ ಸಾಧ್ವಿ ಪ್ರಗ್ಯಾ ಹಾಗೂ ಕರ್ನಲ್ ಪುರೋಹಿತರ ಕೇಸರಿ ಟೆರರಿಸ್ಟ್ ಗುಂಪಿಗೆ ಕರ್ನಾಟಕದಿಂದಲೇ 20 ಲಕ್ಷ ರೂಪಾಯಿ ಸರಬರಾಜಾಗಿತ್ತೆಂದು ಮಹಾರಾಷ್ಟ್ರ ಪೊಲೀಸರು ಶಂಕಿಸುತ್ತಿದ್ದಾರೆ. ಪ್ರಮೋದ್ ಮುತಾಲಿಕನ ನೆಂಟ ಪ್ರವೀಣ್ ಮುತಾಲಿಕನ ಕೈವಾಡವೂ ಮಾಲೇಗಾಂವ್ ಸ್ಫೋಟದಲ್ಲಿರುವ ಬಗ್ಗೆ ಸಾಕ್ಷ್ಯ ದೊರೆತಿದೆ.

ಇದೆಲ್ಲಾ ಕರ್ನಾಟಕ ಪೊಲೀಸರ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ. ಹುಬ್ಬಳ್ಳಿ ಸ್ಫೋಟವಾದಾಗ ಹಿಂದೆಮುಂದೆ ಯೋಚಿಸದೆ ಅಸಾದುಲ್ಲಾ ಅಬೂಬಕರ್, ಮೊಹಮದ್ ಆಸೀಫ್, ಅದ್ನಾನ್, ಶಬೀರ್, ಅಲ್ಲಾ ಭಕ್ಷ್, ಮಹಮದ್ ಗೌಸ್ ಮುಂತಾದ ಒಟ್ಟು 12 ಮಂದಿಯನ್ನು ಪೊಲೀಸರು



ಭಯೋತ್ಪಾದಕ ಜಂಬಗಿ ತಂಡದೊಂದಿಗೆ ಮುತಾಲಿಕ್

ರ ಎರಡನೇ ಮತ್ತು ಮೂರನೇ ಹಂತದ ಚುನಾವಣೆಯ ಳಿಗೆ ಬಜೆಪಿ ಪರ ಭಾರಿ ಅಲೆ ಎಬ್ಬಿಸುವಂತಹ ಒಂದು ಘಟನೆ ಘಟಿಸಬೇಕಿತ್ತು, ಸಂಘ ಪರಿವಾರಿಗಳಿಗೆ. ಗ ಉತ್ತರ ಕರ್ನಾಟಕದ 135 ಕ್ಷೇತ್ರಗಳ ಮತದಾನ ಕಿ ಇತ್ತು. ಹುಬ್ಬಳ್ಳಿ ಸ್ಫೋಟ ನಡೆದದ್ದು ಆಗಲೇನೆ!

ಮೊದಲಿಗೆ ಮುತಾಲಿಕನ ಶಿವಸೇನೆ-ಶ್ರೀರಾಮ ಸೇನೆಗೆ ಕ್ಷಾಂತರ ರೂಪಾಯಿ ಹಣ ನೀಡಿ ಪ್ರೋತ್ಸಾಹಿಸಿದ್ದು ಬಜೆಪಿಗಳೇ.

ಅದರ ಸಾಕ್ಷಿ ಇಲ್ಲಿ ಪ್ರಕಟಿಸಿದೆ. ಈಗ ನಾಗರಾಜ ಜಂಬಗಿ ಸ್ವತಃ ಹುಬ್ಬಳ್ಳಿ ಕೋರ್ಟಿನಲ್ಲಿ ಹಾಗೂ ನ್ಯಾಷನಲ್ ಹೈವೇ ನಾಲ್ಕರ ವೆಂಕಟಾಪುರ ಸೇತುವೆ ಕೆಳಗೆ ಬಾಂಬ್ ಇರಿಸಿ ಸ್ಫೋಟಿಸಿದ್ದು ಶ್ರೀರಾಮ ಸೇನೆಯವರೇ ಎಂದು ಒಪ್ಪಿಕೊಂಡಿರುವುದು ಮೇಲೆ ಹೇಳಲಾದ ಅನುಮಾನಗಳಿಗೆ ಇನ್ನಷ್ಟು ಸಮರ್ಥನೆ ನೀಡುತ್ತಿದೆ. ಜೊತೆಗೆ ಜಂಬಗಿ ಬಳಿ

ಪೆದ್ದುಪೆದ್ದಾಗಿ ಅರೆಸ್ಟ್ ಮಾಡಿದ್ದರು. ಇವರೆಲ್ಲಾ ಈಗಲೂ ಹಿಂಡಲಗಾ ಜೈಲಿನಲ್ಲಿದ್ದಾರೆ. ಇವರು ನಿರ್ದೋಷಿಗಳಾ ಎಂಬುದನ್ನು ರಾಜ್ಯ ಪೊಲೀಸರು ಈಗಲಾದರು ಪರಿಶೀಲಿಸಬೇಕಿದೆ.


ಬಹಳ ಮುಖ್ಯವಾಗಿ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕನನ್ನು ಹಿಡಿದು ಬಜೆಪಿಗಳಿಂದ ಹಣ ಪಡೆದಿರುವ ಬಗ್ಗೆ ಹುಬ್ಬಳ್ಳಿ ಸ್ಫೋಟದಲ್ಲಿ ಅವನ ಕೈವಾಡ ಎಷ್ಟೆಂಬ ಬಗ್ಗೆ, ಮಾಲೇಗಾಂವ್ ಸ್ಫೋಟ, ಬೆಂಗಳೂರಿನ ಸ್ಫೋಟಗಳಿಗೂ ಶ್ರೀರಾಮ ಸೇನೆಗೂ ಇರಬಹುದಾದ ಲಿಂಕ್‌ಗಳ ಬಗ್ಗೆ ತನಿಖೆ ನಡೆಸುವ ಧೈರ್ಯ ಪ್ರದರ್ಶಿಸಬೇಕಿದೆ.

ಕರ್ನಾಟಕದ ಜನತೆ ಈಗಲಾದರೂ ಕೇಸರಿ ಸಂಘಟನೆಗಳ ಅಸಲಿ ಮುಖ ಏನೆಂಬುದನ್ನು ಅರಿತರಂತೂ ಅದಕ್ಕಿಂತ ದೊಡ್ಡದು ಬೇರೊಂದಿಲ್ಲ.

ಮುತಾಲಿಕನ 'ರಾಷ್ಟ್ರ ರಕ್ಷಾ ಸೇನೆ' ದೇಶೋದ್ಧಾರಕ್ಕಲ್ಲ, ದೇಶ ವಿನಾಶಕ್ಕೆ

ಪ್ರಮೋದ್ ಮುತಾಲಿಕ್ ಎಂಬ ಚೆಡ್ಡಿ ಮತ್ತೊಮ್ಮೆ ತನ್ನ ಮಂಗಾಟವನ್ನು ಪ್ರಾರಂಭಿಸಿದ್ದಾನೆ. ಆದರೆ ಈ ಬಾರಿ ಅದು ಹಾಸ್ಯಾಸ್ಪದವಾಗಿರದೆ ಆತಂಕಕಾರಿಯಾಗಿದೆ.

ಮೊನ್ನೆ ಜನವರಿ 12 ರಂದು ದಾವಣಗೆರೆಯಲ್ಲಿ ಮುತಾಲಿಕ್ ತನ್ನ 'ರಾಷ್ಟ್ರ ರಕ್ಷಾ ಸೇನೆ'ಯನ್ನು ಪ್ರಾರಂಭಿಸಿದ್ದಾನೆ. ಆದರೆ ಹಿಂದಿನ ದಿನವಷ್ಟೆ ಹುಬ್ಬಳ್ಳಿಯ ಕೋರ್ಟಿನಲ್ಲಿ ಬಾಂಬ್ ಸಿಡಿಸಿದ ಕೇಸಿನಲ್ಲಿ ಬಾಗಲಕೋಟೆ ಪೊಲೀಸರು ಒಂಭತ್ತು ಮಂದಿ ಹಿಂದೂ ಉಗ್ರಗಾಮಿ ಗಳನ್ನು ಬಂಧಿಸಿದ್ದರು. ಈ ಒಂಭತ್ತು ಮಂದಿಯಲ್ಲಿ ಪ್ರಮುಖ ಮೂರು ಮಂದಿ ಪ್ರಮೋದ್ ಮುತಾಲಿಕ್‌ನ 'ಶ್ರೀರಾಮ ಸೇನೆ'ಯ



ಶ್ರೀರಾಮಸೇನೆಯ ಕರಪತ್ರದಲ್ಲಿ ಪ್ರಕಟಿಸಿರುವ ಶಸ್ತ್ರಾಸ್ತ್ರ ತರಬೇತಿ ದೃಶ್ಯ

ಕಾರ್ಯಕರ್ತರು. ಇನ್ನುಳಿದ ಆರು ಮಂದಿಯೂ ಸಹ ಹಿಂದೂ ಸಂಘಟನೆಗಳಿಗೆ ಸೇರಿದವರೆಂದು ಪೊಲೀಸರೇ ಹೇಳಿದ್ದಾರೆ. ಅದನ್ನು ಬಂಧಿತರ ಹತ್ತವರೂ ದೃಢಪಡಿಸಿ ದ್ದಾರೆ.

ಇಷ್ಟೆಲ್ಲಾ ಆಗಿದ್ದರೂ ಜಿಲ್ಲಾಡಳಿತ ಮುತಾಲಿಕ್‌ನ ಸೇನಾ ಸಮಾರಂಭಕ್ಕೆ ಅವಕಾಶ ನೀಡಿದೆ. ಮೆರವಣಿಗೆಯನ್ನು ನಿಷೇಧಿಸಿದ್ದರೂ ಇವನ ಕಡೆಯವರು ಮೆರವಣಿಗೆ ಮಾಡಿದ್ದಾರೆ. ಸಂಘ ಪರಿವಾರದ ಶನಿಸಂತಾನಗಳಂತಿರುವ ಕೆಲವು ಸ್ವಾಮೀಜಿಗಳು ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಅಂದಿನ ಕಾರ್ಯಕ್ರಮದಲ್ಲಿ 10,000 ಯುವ ಯೋಧರು ರಾಷ್ಟ್ರೀಯ ರಕ್ಷಾ ಸೇನೆ ಸೇರಲು ಮುಂದಾಗುತ್ತಾರೆ ಎಂದು ಮುತಾಲಿಕ್ ಬುಕಾಯಿಸಿದ್ದ. ಆದರೆ ಅಂದು ಈತನ ಸೇನೆಯನ್ನು ಸೇರಿದವರು ಕೇವಲ ನೂರು ಮಂದಿ ಮಾತ್ರ.

ಅಂದಿನ ಸಭೆಯಲ್ಲಿ ಭಾಗವಹಿಸಿದ್ದ ವೀರಶೈವ ಪಂಚಮಸಾಲಿ ಮಠದ ಸಿದ್ದಲಿಂಗೇಶ್ವರ ಸ್ವಾಮಿ 'ದೇಶದ ರಕ್ಷಣೆಗಾಗಿ ಹುಟ್ಟಿಕೊಂಡಿರುವ ರಾಷ್ಟ್ರ ರಕ್ಷಾ ಸೇನೆಗೆ ಸಮಾಜ ನೈತಿಕ ಬೆಂಬಲ ನೀಡಬೇಕು, ಈ ಯೋಧರನ್ನು ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಸಹ ಸಮಾಜವೇ ನಿರ್ವಹಿಸಬೇಕು' ಎಂದು ಫರ್ಮಾನು ಹೊರಡಿಸಿದರು. ಸಂಯುಕ್ತ ಕರ್ನಾಟಕ ಪತ್ರಿಕೆಯು 'ರಾಷ್ಟ್ರ ರಕ್ಷಾ ಸೇನೆ ನಾಡಿಗೆ ಸಮರ್ಪಣೆ' ಎಂಬ ಹೆಡ್‌ಲೈನ್ ಕೊಟ್ಟು ವರದಿ ಮಾಡಿದರೆ, 'ನೂರು ಜನ ಕಪ್ಪು ಸಮವಸ್ತ್ರಧಾರಿ ರಾಷ್ಟ್ರ ರಕ್ಷಾ ಸೇನಾದ ಯೋಧರು ಶಿಸ್ತಿನ ಸಿಪಾಯಿ ಗಳಂತಿದ್ದು, ಕಾರ್ಯಕ್ರಮಕ್ಕೆ ಗಾಂಭೀರ್ಯವನ್ನು ತಂದು ಕೊಟ್ಟರು' ಎಂದು ಕನ್ನಡ ಪ್ರಭ ಪತ್ರಿಕೆ ಬರೆಯಿತು. ಇತರ ಕೆಲ ಪತ್ರಿಕೆಗಳೂ ಸಹ ಈ ಜನ ವಿರೋಧಿ ಕಾರ್ಯಕ್ರಮವನ್ನು ಜನೋಪಕಾರಿ ಕಾರ್ಯಕ್ರಮ ಎಂಬಂತೆ ಬಿಂಬಿಸಿದವು.

ರಾಷ್ಟ್ರೀಯ ರಕ್ಷಾ ಸೇನೆಯು ಭಯೋತ್ಪಾದನೆ ತಡೆಯುವಲ್ಲಿ ಭಾರತೀಯ ಸೇನೆ ಹಾಗೂ ಸರ್ಕಾರಕ್ಕೆ ಸಹಕಾರಿಯಾಗಿರುತ್ತದೆ. ತನ್ನ ಸೇನೆ ಈಗ ಶಸ್ತ್ರಾಸ್ತ್ರ ಹಿಡಿದಿಲ್ಲವಾದರೂ ಸಂದರ್ಭ ಬಂದರೆ ಶಸ್ತ್ರಾಸ್ತ್ರ ಹಿಡಿಯಲು ಹಿಂಜರಿಯುವುದಿಲ್ಲ, ಕೇಂದ್ರ ಸರ್ಕಾರವು ಒಂದು ತಿಂಗಳೊಳಗೆ ಬಾಂಗ್ಲಾ ದೇಶದ ವಲಸಿಗರನ್ನು ಭಾರತದಿಂದ ಓಡಿಸದಿದ್ದರೆ ಈ ಕೆಲಸವನ್ನು ತನ್ನ ಸೇನೆಯೇ ಮಾಡುತ್ತದೆ. 1500 ವರ್ಷಗಳ ಹಿಂದೆ ಇರದಿದ್ದ ಕೋಮೊಂದರಿಂದ ಈಗ ಭಯೋತ್ಪಾದನೆ ನಡೆಯುತ್ತಿದೆ, ಇದೇ ಮುಸ್ಲಿಂರೆಲ್ಲರೂ ದೇಶ ದ್ರೋಹಿಗಳು -ಎಂದೆಲ್ಲಾ ಎಂಬಂತೆ ಮುತಾಲಿಕ್ ಪ್ರಚೋದನಾಕಾರಿಯಾಗಿ ಅಂದು ಮಾತನಾಡಿದ. ಜೊತೆಗೆ ಈ ಕಾರ್ಯಕ್ರಮದ ಮಲ್ಟಿ ಕಲರ್ ಕರಪತ್ರದಲ್ಲಿ 'ಭಾರತದ ಮುಸ್ಲಿಮರೆಲ್ಲರೂ ಭಯೋತ್ಪಾದಕರೇ' ಎಂದೇ ಪ್ರಕಟಿಸಿದ್ದ. ಇದೇ ಕರಪತ್ರದಲ್ಲಿ ಶ್ರೀರಾಮ ಸೇನೆಯವರು ಶಸ್ತ್ರಾಸ್ತ್ರ ತರಬೇತಿ ಪಡೆಯುತ್ತಿರುವ ಚಿತ್ರವೂ ಇದೆ. ಕೇವಲ ಈ ಕರಪತ್ರವನ್ನಾಧರಿಸಿಯೇ ಪೊಲೀಸರು ಮುತಾಲಿಕ್‌ನ ಮೇಲೆ ಸಾಕಷ್ಟು ಕೇಸುಗಳನ್ನು ಜಡಿಯಬಹುದು.

ಎನ್.ಎಸ್.ಜಿ. ಕಮಾಂಡೋಗಳಂತೆ ಕಪ್ಪು ಸಮವಸ್ತ್ರವನ್ನು ಧರಿಸಿರುವ ಮುತಾಲಿಕ್‌ನ ಸೇನೆಯು ಯಾರ ವಿರುದ್ಧ ಯುದ್ಧ ಮಾಡಲು ಸಜ್ಜಾಗಿದೆ ಎಂದು ಎಲ್ಲರಿಗೂ ಸ್ಪಷ್ಟವಾಗಿದೆ. ಆದರೂ ಪೊಲೀಸರು ಸುಮ್ಮನಿದ್ದಾರೆ. ಅಕಸ್ಮಾತ್ ಇಂತಹದ್ದೇ ಸೇನೆಯನ್ನು ಮತ್ತ್ಯಾವುದೇ ಅಲ್ಪಸಂಖ್ಯಾತ ಕೋಮಿನವರು ಸ್ಥಾಪಿಸಿದ್ದರೆ ಪೊಲೀಸರು, ಸರ್ಕಾರ ಮತ್ತು ಮಾಧ್ಯಮಗಳು ಸುಮ್ಮನಿರುತ್ತಿದ್ದವೆ? ಸಂಘ ಪರಿವಾರದವರಂತೂ ಅಂತಹ ಸೇನೆಯ ವಿರುದ್ಧ ತಮ್ಮ ಚೆಡ್ಡಿ ಹರಿಯುವಂತೆ ಕುಣಿಯುತ್ತಿರಲಿಲ್ಲವೇ?

ಈಗಾಗಲೇ ಹಲವು ಪ್ರಗತಿಪರ ಸಂಘಟನೆಗಳು ಮುತಾಲಿಕ್‌ನ ಶ್ರೀರಾಮ ಸೇನೆ ಮತ್ತು ರಾಷ್ಟ್ರ ರಕ್ಷಾ ಸೇನೆಯನ್ನು ನಿಷೇಧಿಸಬೇಕು, ಉದ್ರೇಕಕಾರಿ ಕರಪತ್ರ ಮುದ್ರಿಸಿರುವುದರ ವಿರುದ್ಧ ಕ್ರಮ ಕೈಗೊಳ್ಳಬೇಕು, ಮುತಾಲಿಕ್‌ನನ್ನು ಬಂಧಿಸಬೇಕೆಂದು ಆಗ್ರಹಿಸಿವೆ. ಯಾಕೆಂದರೆ ಮುತಾಲಿಕ್‌ನ ವಿಧ್ವಂಸಕ ಚಟುವಟಿಕೆಗಳನ್ನು ಹೀಗೆಯೇ ಬೆಳೆಯಲು ಬಿಟ್ಟರೆ ಈತನ 'ರಾಷ್ಟ್ರೀಯ ರಕ್ಷಾ ಸೇನೆ'ಯು ಮುಂದೊಂದು ದಿನ ದೇಶದ ವಿನಾಶಕ್ಕೆ ಕಾರಣವಾಗುತ್ತದೆ. ■

ಟ್ಟಿಕೆಗೆ ಬಾಂಬ್ ಫಿಕ್ಸ್ ಮಾಡಿದ್ದ. ಆದರೆ ಹಿಂದೂ ವೀರ ಜಾಧವ ಮಾತ್ರ 'ಹಿಂದೂ ಹೋರಾಟಗಾರನಾದ ನನ್ನನ್ನು ಸಾಯಿಸಲು ಮುಸ್ಲಿಮರು ನಡೆಸಿದ ಸಂಚು' ಎಂದಿದ್ದ.

ಹೀಗೆ ಎಲ್ಲೂ ಹಣ ಸಿಗದೆ ಹತಾಶೆಯಿಂದ ಮತ್ತೆ ಬಾಗಲ ಕೋಟೆಗೆ ಬಂದಿಳಿದ ಜಂಬಗಿಯ ತಂಡ ಅಲ್ಲಿನ ಶ್ರೀಮಂತ ವ್ಯಾಪಾರಿ ಗಳ ಚಲನವಲನ ಗಮನಿಸಲು ಶುರು ಮಾಡಿತು. ಹಸು ಮಾರಿ ಹಣ ತರುತ್ತಿದ್ದ ರೈತನೊಬ್ಬನ ಮೇಲೆ ದಾಳಿ ಮಾಡಿ ಹಣ ಕಸಿಯಿತು. ಮರಬದ ಬಾಣೆ ವ್ಯಾಪಾರಿ ಯೊಬ್ಬನ ಮೇಲೆ ದಾಳಿ ನಡೆಸಿತಾ ದರೂ ಹಣ ಸಿಗಲಿಲ್ಲ. ಆಗಲೇ ರಾಟಿ ದಂಪತಿ ಕೊಲೆ ನಡೆದದ್ದು. ರಾಟಿಯವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ ಬಸವರಾಜ ನೀಡಿದ ಮಾಹಿತಿಯಂತೆ ಕೊರಿಯರ್ ನೀಡುವವರಂತೆ ಹೋಗಿ ಮನೆಗೆ ನುಗ್ಗಿ ಆ ವೃದ್ಧ ದಂಪತಿಗಳ ಕೊಲೆ ಮಾಡಿಬಿಟ್ಟರು ಮುತಾಲಿಕ್‌ನ ಬಂಟರು. ಶ್ರೀರಾಮ ಸೇನೆಯವರಿಗೆ ಅಲ್ಲಿ ಮೊದಲ ಬಾರಿಗೆ ದೊಡ್ಡ ಮೊತ್ತದ ಹಣ-ಬಂಗಾರ ಸಿಕ್ಕಿತು. ಈ ಹಂತದಲ್ಲೇ ಅವರಿಗೆ ಇಂಡಿ ತಾಲ್ಲೂಕಿನ ಹಿಂದೂ ಸಂಘಟನೆಯ ಹನುಮಂತ ಸೈನಸಾಲಿ ಹಾಗೂ ಚನ್ನಬಸಪ್ಪ ಹುಣಸಗಿಯ ಲಿಂಕ್ ಸಿಕ್ಕಿತು. ಪ್ರಮೋದ್ ಮುತಾಲಿಕ್ ಇವರನ್ನೆಲ್ಲಾ ಹಿಂದೂ ಧರ್ಮದ



ಹತ್ಯೆಯಾದ ಕಿರಣ ಕಮಟಗಿ

ಉದ್ಧಾರಕ್ಕೆಂದು ಬೇರೆ ಬೇರೆ ಸಂದರ್ಭದಲ್ಲಿ ಬಳಸಿಕೊಂಡಿದ್ದ. ಆ ಒಡನಾಟದಲ್ಲಿ ಇವರೆಲ್ಲರಿಗೂ ಪರಸ್ಪರ ಮುಖ ಪರಿಚಯವಿತ್ತು.

ಒಮ್ಮೆ ಇವರೆಲ್ಲರೂ ಹಂಪಿಗೆ ಹೋಗಿ ಹಿಂದೂ ರಾಷ್ಟ್ರ ಹೇಗೆ ಕಟ್ಟಬೇಕು ಎಂಬ ಬಗ್ಗೆ, ಹೊಸ ಹಿಂದೂ ಮಠ ಸ್ಥಾಪಿಸುವ ಬಗ್ಗೆ ಹಾಗೂ ಅದಕ್ಕಾಗಿ ಯಾವ ಮಾರ್ಗವಾದರೂ ಸರಿ ಹಣ ಸಂಗ್ರಹಿಸಬೇಕೆಂದು ಚರ್ಚಿಸಿ ಬಂದಿದ್ದಾರೆ.

ಹಗಲೆಲ್ಲ ಹಿಂದೂ ಹೋರಾಟ ನಡೆಸುತ್ತಾ ರಾತ್ರಿಯಾದರೆ ಕೊಲೆ-ದರೋಡೆಗಿಳಿಯುತ್ತಿದ್ದ ಈ ಗ್ಯಾಂಗ್ ಮೂಲತಃ ದಕಾಯಿತರಲ್ಲ, ಬದಲಾಗಿ ಹಿಂದೂ ಕಾರ್ಯಕರ್ತರೇ ಆಗಿದ್ದರು.

ನಂತರ ಇಂಡಿ ಶಹರದ, ಆಯಿಲ್ ವ್ಯಾಪಾರಿಯ ದರೋಡೆ ಮಾಡಿದಾಗ 6 ಲಕ್ಷ ಸಿಕ್ಕಿತಾದರೂ ಅದರಲ್ಲಿ ಜಂಬಗಿ 4 ಲಕ್ಷ ಎತ್ತಿಟ್ಟುಕೊಂಡು ಉಳಿದ 2 ಲಕ್ಷವನ್ನು 6 ಜನ ಹಂಚಿಕೊಳ್ಳಲು ಹೇಳಿದಾಗ ಜಗಳವಾಗಿದೆ. ಆಗ ಗಲಾಟೆ ಮಾಡಿದ ತಂಡದ ಸದಸ್ಯ ಲಕ್ಷ್ಮಣ ಈವಷ್ಟ ಬಂಡಿವಾಡರ ಎಂಬ ಶ್ರೀರಾಮ ಸೈನಿಕನನ್ನೇ ಈ ಗುಂಪು ಕದಾಂಪುರ ಬಳಿ ಹತ್ಯೆ ಮಾಡಿ ದೇಹವನ್ನು ಗುರುತು ಸಿಗದಂತೆ ಸುಟ್ಟು ಹಾಕಿದೆ. ಆಮೇಲೆ ನಡೆದದ್ದೇ ಬಾಗಲಕೋಟೆಯ ಟಿವಿಎಸ್ ಶೋರೂಂ ಮಾಲೀಕ ಕಿರಣ ಕಮಟಗಿ ಹತ್ಯೆ. 2007ರ ಅಕ್ಟೋಬರ್ 29ರ ರಾತ್ರಿ ಕಮಟಗಿಯ ಮನೆ ಹತ್ತಿರವೇ ಅವನ ಕಾರ್ ನಿಲ್ಲಿಸಿ ಕತ್ತುಕತ್ತರಿಸಿ 10 ಲಕ್ಷ ರೂಪಾಯಿ ದೋಚಿಕೊಂಡು ಹೋಗಿತ್ತು, ಶ್ರೀರಾಮ ಸೇನೆಯ ಜಂಬಗಿ ಗ್ಯಾಂಗ್. ರಾಟಿ ದಂಪತಿ ಕೊಲೆಯಾದಾಗಲೇ ಪೊಲೀಸರಿಗೆ ನಾಗರಾಜ ಜಂಬಗಿ ಮೇಲೇ ಅನುಮಾನ ಬಂದಿತ್ತು, ಆಶ್ಚರ್ಯ ಅಂದರೆ ಆಗಲೂ ಈ ಜಂಬಗಿ ಪ್ರಮೋದ್ ಮುತಾಲಿಕ್‌ನೊಂದಿಗೆ ಓಡಾಡಿಕೊಂಡಿದ್ದ. ಆದರೆ ಕಿರಣ ಕಮಟಗಿಯ ಭಯಾನಕ ಹತ್ಯೆ ನಡೆದಾಗ ಪೊಲೀಸರು ವಿಶೇಷ ತಂಡ ರಚಿಸಿ ತನಿಖೆ ಶುರುವಿಟ್ಟರು. ಕಮಟಗಿಯ ಮೊಬೈಲ್‌ಗೆ ಬಂದಿದ್ದ ಫೋನ್ ಕರೆಗಳ ಬೆನ್ನತ್ತಿ ಕೊನೆಗೂ ಈ ಕ್ರಿಮಿನಲ್ ಹಿಂದೂ ಕಾರ್ಯಕರ್ತರನ್ನು ಬಂಧಿಸಿದ್ದಾರೆ.



ಶ್ರೀರಾಮಸೇನೆಯ ಶಸ್ತ್ರಾಸ್ತ್ರಗಳು

ಈ ನಾಗರಾಜ ಜಂಬಗಿಗೆ ನೆನಪಿನ ಶಕ್ತಿ ಕಡಿಮೆಯಿರುವ ಕಾರಣದಿಂದ ಅವನು ತಾವು ನಡೆಸಬೇಕಾದ ಹಿಂದೂ ಧರ್ಮೋದ್ಧಾರದ, ಕೊಲೆ ದಕಾಯಿತಿಗಳ ಅನೇಕ ವಿವರಗಳನ್ನು ತನ್ನ ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದ. ಅದೀಗ ಪೊಲೀಸರಿಗೆ ಸಿಕ್ಕಿದೆ.

ಈ ಗ್ಯಾಂಗ್‌ನ ಮುಂದಿನ ಟಾರ್ಗೆಟ್ ಆಗಿ ಶಾಸಕ ಚರಂತಿಮಠನ ಮಗ ನವೀನ್, ಆಭರಣ ವ್ಯಾಪಾರಿ ದಿನೇಶ್ ಪಾರ್ಸಿ, ಸೋಮನಾಥ್ ಜುವೆಲ್ಲರ್‌ನ ರವಿಕೊಡೇಕರ, ಗುಳೇದ ಗುಡ್ಡ ಏರ್‌ಟೆಲ್ ವಿತರಕ ರಾಧೇಶ್ಯಾಂ ಚಂದರ್, ಮಾಜಿ ಶಾಸಕ ಪೂಜಾರರ ಕಿಡ್ನ್ಯಾಪ್, ಕೊಲೆ ಮುಂತಾದವು ಇದ್ದವು.

ಶ್ರೀರಾಮ ಸೇನೆಯ ಸಕ್ರಿಯ ಕಾರ್ಯಕರ್ತರಾಗಿ ದ್ದುಕೊಂಡು, ಪ್ರಮೋದ್ ಮುತಾಲಿಕ್‌ನ ಅನುಯಾಯಿ ಗಳಾಗಿ ಓಡಾಡಿಕೊಂಡಿದ್ದ ಈ ಕ್ರಿಮಿನಲ್‌ಗಳೇನೋ ಈಗ ಸಿಕ್ಕಿಬಿದ್ದಿದ್ದಾರೆ. ಆದರೆ ಪೊಲೀಸರ್ಯಾಕೆ ಮುತಾಲಿಕ್‌ನನ್ನೂ ಇನ್ನೂ ಬಂಧಿಸಿಲ್ಲ?

ರಾಟಿ ದಂಪತಿ ಕೊಲೆ ಹಾಗೂ ಕಿರಣ ಕಮಟಗಿ ಕೊಲೆ ಮಾಡಿ ದೋಚಿದ 16 ಲಕ್ಷ ರೂ. ನಲ್ಲಿ ಒಂದು ಭಾಗ ಪ್ರಮೋದ್ ಮುತಾಲಿಕನಿಗೂ ತಲುಪಿರುವ ಸಾಧ್ಯತೆ ಬಹಳವಿದೆ.

ಪೊಲೀಸರು ಈ ಬಗ್ಗೆ ವಿಚಾರಿಸಲಿ. ■



ದರುಶನ ದೋ ಘನಶ್ಯಾಮ್...?

'ಸ್ಲಂ ಡಾಗ್ ಮಿಲಿಯನೇರ್' ಚಿತ್ರವನ್ನು ಪೂರ್ತಿ ನೋಡಿದ ನಂತರವೂ ಮನಕಲಕುವುದು ಅರವಿಂದ್ ಎಂಬ ಅನಾಥ ಬಾಲಕನ ಪಾತ್ರ. ಚಿತ್ರದಲ್ಲಿ ಎರಡೋ ಅಥವಾ ಮೂರು ಬಾರಿಯಷ್ಟೇ ಮಿಂಚಿ ಮರೆಯಾಗುವ ಅರವಿಂದ್ ಓರ್ವ ಅನಾಥ ಬಾಲಕ. ತನ್ನ ಸುಶ್ರಾವ್ಯ ಕಂಠವೇ ತನ್ನ ದುರಂತದ ಮೂಲವೆಂಬುದು ಆತನಿಗೆಲ್ಲಿ ಗೊತ್ತಾಗಬೇಕು? ದರುಶನ ದೋ ಘನಶ್ಯಾಮ್ ನಾಥಮೋರೀ... ಅಖಿಯಾ ಪ್ಯಾಸಿ ರೇ.. ಎಂದು ಪಾತಕಿ ಮಮೋನ್‌ನ ಮುಂದೆ ನಿಂತು ಪಾಠ ಒಪ್ಪಿಸುತ್ತಾನೆ. ಚೆನ್ನಾಗಿ ಹಾಡಿದಷ್ಟೂ ಶಾಬಾಷ್‌ಗಿರಿ ಸಿಕ್ಕುತ್ತದೆಯೆಂಬುದು ಆ ಮುಗ್ಧ ಬಾಲಕನ ಲೆಕ್ಕಾಚಾರ. ಆದರೆ ಅದೇ ಆತನಿಗೆ ಮುಳುವಾಗುತ್ತದೆ. ಆತನನ್ನು ಎರಡನೇ ಬಾರಿ ಕರೆಸಿ ಭಜನೆ ಕೇಳುವ ಮಮೋನ್ ಕ್ಲೋರೋಫಾರ್ಮ್‌ನಿಂದ ಆತನ ಪ್ರಜ್ಞೆ ತಪ್ಪಿಸಿ ಕಟ್ಟೆಯೊಂದರ ಮೇಲೆ ಮಲಗಿಸಿ ಕಣ್ಣಿಗೆ ಕಾದ ಎಣ್ಣೆ ಸುರಿಯುತ್ತಾನೆ. ಅಷ್ಟೇ, ಅರವಿಂದ್ ಇನ್ನು ಮುಂದೆ ಶಾಶ್ವತ ಕುರುಡ!

ಮೂರನೇ ಬಾರಿ ಅರವಿಂದ್ ಸುರಂಗಮಾರ್ಗದಲ್ಲಿ ಕುರುಡು ಭಿಕ್ಷುಕನಾಗಿ ಸುಶ್ರಾವ್ಯವಾಗಿ ಹಾಡುತ್ತಾ ನಿಂತಿದ್ದಾಗಲೇ ಜಮಾಲ್ ಕಣ್ಣಿಗೆ ಬೀಳುತ್ತಾನೆ. ಎಷ್ಟೋ ವರ್ಷಗಳಾಗಿವೆ. ಅರವಿಂದ್ ಈಗ ಮಗುವಲ್ಲ, ಹದಿನೆಂಟರ ಬಾಲಕ. ಜಮಾಲ್ ನೂರು ಡಾಲರ್‌ನ ಭಿಕ್ಷೆ ಹಾಕಿದ್ದನ್ನು ತಿಳಿದೇ 'ಜಮಾಲ್ ನಿನ್ನ ಬಗ್ಗೆ ನನಗೆ ಹೆಮ್ಮೆಯಿದೆ. ನೀನೇನೋ ಬಚಾವಾದೆ. ಆದರೆ ನನಗದು ಸಾಧ್ಯವಾಗುತ್ತಲೇ ಇಲ್ಲ, ನನಗೂ ನಿನಗೂ ಅಷ್ಟೇ ವ್ಯತ್ಯಾಸ' ಎನ್ನುವ ಅರವಿಂದ್ ಜಮಾಲ್‌ಗೆ ಲತಿಕಾಳ ಬಗ್ಗೆ ಮಾಹಿತಿ ಕೊಡುತ್ತಾನೆ. ಮಮೋನ್‌ನ ಕ್ರೌರ್ಯದ ಬಗ್ಗೆಯೂ ಎಚ್ಚರಿಕೆ ಕೊಟ್ಟು ಕಳಿಸುವ ಅರವಿಂದ್ ತನ್ನ ದೈನೇಸಿ ಮತ್ತು ಸುಶ್ರಾವ್ಯ ಕಂಠದಿಂದ ದರುಶನ ದೋ ಘನಶ್ಯಾಮ್ ಎಂದು ಹಾಡುತ್ತಾನೆ ನಿಜ. ಆದರೆ ದರುಶನಕ್ಕೆ ಕಣ್ಣುಗಳೇ ಇಲ್ಲ....!

ಸ್ಲಂ ಡಾಗ್ ಮಿಲಿಯನೇರ್

ಬೆಂಕಿಯಲ್ಲಿ ಅರಳಿದ ಹೂವು

■ ರಾ. ಸೋಮನಾಥ್


ಭಾಗ್ಯವಂತರ ಕಣ್ಣಿಗೆ ಆತ ನಿಕೃಷ್ಟ. ಮುಂಬಯಿಯ ಕೊಳಕಲು ಕೊಂಪೆಯೊಂದರ ಅನಕ್ಷರಸ್ಥ ಪೋರನೊಬ್ಬ ಏಕಾಏಕಿ 'ಕೌನ್ ಬನೇಗಾ ಕರೋಡ್‌ಪತಿ'ಯಂಥ ಪ್ರತಿಷ್ಠಿತ ಟೀವಿ ಷೋನ ಫೈನಲ್ ತಲುಪುತ್ತಾನೆಂದರೆ ಯಾರಿಗೆ ತಾನೇ ಗುಮಾನಿ ಹುಟ್ಟುವುದಿಲ್ಲ?

ಸ್ವತಃ ಷೋ ನಡೆಸಿಕೊಡುವ ಅಮಿತಾಬ್ ಬಚ್ಚನ್ ಪಾತ್ರಧಾರಿ ಅನಿಲ್‌ಕಪೂರ್‌ಗೇ ಆ ಥರದ ಗುಮಾನಿಯೊಂದು ಶುರುವಾಗಿದೆ. ಕೌನ್ ಬನೇಗಾ ಕರೋಡ್‌ಪತಿ ಷೋನ ಹಾಟ್‌ಸೀಟನಲ್ಲಿ ಕೂತ ಜಮಾಲ್ ಮಲಿಕ್ ಹೇಳಿಕೇಳಿ ಕೊಳಗೇರಿಯ ಕುನ್ನಿ. ಮುಂಬಯಿಯಲ್ಲಿ ಬೀದಿ ಸುತ್ತಿ ಟೀ ಮಾರುವ ಆತನ ಬುದ್ಧಿಗೆ ನಿಲುಕದ



ಆದೆಂಥದ್ದೇ ಕ್ಲಿಷ್ಟ ಪ್ರಶ್ನೆಗಳನ್ನು ಹಾಕಿದಾಗಲೂ ಸಲೀಸಾಗಿ ಉತ್ತರ ಕೊಟ್ಟು ದುಡ್ಡು ಗೆಲ್ಲುತ್ತಿದ್ದಾನೆಂದರೆ ಏನೋ ಗೋಲ್‌ಮಾಲ್ ನಡೆದಿರಬೇಕು. ಬಹುಶಃ ಷೋನ ಕಂಪ್ಯೂಟರ್ ತಜ್ಞರನ್ನೇ ಬುಟ್ಟಿಗೆ ಹಾಕಿಕೊಂಡು ಮೊದಲೇ ಪ್ರಶ್ನೆಗಳನ್ನು ಉತ್ತರಗಳನ್ನು ತಿಳಿದಿರಬೇಕು. ಮಿಕ್ಕಿರುವುದು ಒಂದೇ ಪ್ರಶ್ನೆ. ಜಮಾಲ್ ಅದಕ್ಕೂ ನಿಖರ ಉತ್ತರ ಕೊಟ್ಟನೆಂದರೆ ಆತ ಸಲೀಸಾಗಿ ಎರಡು ಕೋಟಿಯ ಅಂದರೆ ಇಪ್ಪತ್ತು ಮಿಲಿಯನ್ ರೂಪಾಯಿಗಳ ಒಡೆಯನಾಗುತ್ತಾನೆ.

ಅದಕ್ಕೂ ಮುನ್ನ ಜಮಾಲ್‌ನನ್ನು ಪೊಲೀಸರಿಗೆ ಹಿಡಿದು ಕೊಡುವುದು ಷೋನ ರೂವಾರಿ ಅನಿಲ್ ಕಪೂರ್‌ನ ದುರಾಶೆ. ಇಪ್ಪತ್ತು ಮಿಲಿಯನ್ ಅಂದರೆ ಎರಡು ಕೋಟಿ ಗೆಲ್ಲುವುದಕ್ಕಿನ್ನೂ ಒಂದು ಪ್ರಶ್ನೆ ಬಾಕಿಯಿರುವಂತೆಯೇ ಕಾರ್ಯಕ್ರಮದ ಅವಧಿ ಮುಗಿಯುತ್ತದೆ. ಜಮಾಲ್‌ನನ್ನು ಉಪಾಯವಾಗಿ ಕರೆತಂದು ಮುಂಬಯಿಯ ಕ್ರೈಂ ಬ್ರಾಂಚ್ ಪೊಲೀಸರಿಗೊಪ್ಪಿಸುತ್ತಾನೆ. ಪೊಲೀಸ್ ಇನ್ಸ್‌ಪೆಕ್ಟರ್ ಪಾತ್ರಧಾರಿ ಇರ್ಫಾನ್ ಖಾನ್‌ಗೆ ಮರುದಿನ ಎಪಿಸೋಡ್ ಪ್ರಾರಂಭವಾಗುವುದಕ್ಕೂ ಮೊದಲೇ ಜಮಾಲ್‌ನ ಬಾಯಿ ಬಿಡಿಸಿ ವಂಚನೆಯನ್ನು ಬಯಲಿಗೆಳೆಯುವ ಹುಮ್ಮಸ್ಸು. ಈ ಇನ್ಸ್‌ಪೆಕ್ಟರ್‌ಗೊಬ್ಬ ದಢೂತಿ ಕಾನ್ಸ್‌ಟೇಬಲ್ ಸಹಾಯಕ. ಆತನ ಹೆಸರು ಶ್ರೀನಿವಾಸ್.



ಚಿತ್ರದ ಕಥೆ ಶುರುವಾಗುವುದೇ ಪೊಲೀಸ್ ಲಾಕಪ್ಪಿನ ಟಾರ್ಚರ್ ಛೇಂಬರಿನಲ್ಲಿ. ಜಮಾಲ್ ಮಲ್ಲಿಕ್‌ನನ್ನು ಏರೋಪ್ಲೇನೆತ್ತಿ, ಕಾಲಿಗೆ ವಿದ್ಯುತ್ ತಂತಿಯ ಕ್ಲಿಪ್ಪು ಸಿಕ್ಕಿಸಿ ಶಾಕ್ ಕೊಟ್ಟರೂ ಜಮಾಲ್ ಬಾಯಿ ಬಿಡುತ್ತಿಲ್ಲ, ಏಕೆಂದರೆ ಆತ ವಂಚಕನಲ್ಲ, ಕೌನ್ ಬನೇಗಾ ಕರೋಡ್‌ಪತಿ ಅಂದರೆ **'Who wants to be a Millionaire'** ಸ್ಪರ್ಧೆಯಲ್ಲಿ ಏನೆಲ್ಲಾ ಪ್ರಶ್ನೆಗಳನ್ನು ಆತ ಎದುರಿಸಿದ್ದನೋ ಆತನ ಬದುಕೇ ಅದಕ್ಕೆ ಉತ್ತರವಾಗಿತ್ತು.

ಇನ್ಸ್‌ಪೆಕ್ಟರ್ ಇರ್ಫಾನ್ ಖಾನ್ ಇಡೀ ಷೋನ ರೆಕಾರ್ಡೆಡ್ ಸೀಡಿ ತರಿಸಿಕೊಂಡು ಈತನಕ ಜಮಾಲ್ ಉತ್ತರಿಸಿದ ಒಂದೊಂದೇ ಪ್ರಶ್ನೆಗಳ ಬಗ್ಗೆ ತನಿಖೆ ಆರಂಭಿಸಿದ್ದಾನೆ. ಮೊದಲ ಪ್ರಶ್ನೆ ಹಿಂದಿಯ ಝಂಜೀರ್ ಚಿತ್ರದ ಹೀರೋ ಯಾರು? ಎಂದರೆ ಜಮಾಲ್ ಅದಕ್ಕೆ ಅಮಿತಾಬ್ ಬಚ್ಚನ್ ಎಂದು ಉತ್ತರಿಸಿದ್ದಾನೆ. ಹೀಗೆ ಷೋನ ಒಂದೊಂದೇ ಪ್ರಶ್ನೆಗೆ ಜಮಾಲ್ ಕೊಟ್ಟ ಉತ್ತರದ ಅಸಲಿಯತ್ತಿನ ಬಗ್ಗೆ ಪೊಲೀಸರು ಬಾಯಿಬಿಡಿಸಲು ಚಿತ್ರಹಿಂಸೆ ನೀಡುತ್ತಿದ್ದಂತೆಯೇ ಕತೆಯ ಫ್ಲ್ಯಾಷ್‌ಬ್ಯಾಕ್ ತೆರೆದುಕೊಳ್ಳುತ್ತದೆ.

ಅದು ಮುಂಬಯಿಯ ಪರಮ ಕುಖ್ಯಾತ ಕೊಳಗೇರಿ. ಪಕ್ಕದ ವಿಮಾನ ನಿಲ್ದಾಣದ ರನ್‌ವೇ ಅನ್ನೇ ತಮ್ಮ ಕ್ರಿಕೆಟ್ ಮೈದಾನವನ್ನಾಗಿ ಹಾವಳಿಯಿಟ್ಟ ಕೊಳಕು ಸ್ಲಂ ಮಕ್ಕಳ ಪೈಕಿ ಜಮಾಲ್ ಮತ್ತು ಆತನ ಅಣ್ಣ ಸಲೀಮ್ ಪ್ರಮುಖರು. ಇಡೀ ಕೊಳಗೇರಿ ಇರುವುದೇ ಮುಂಬಯಿಯ ಬೃಹತ್ ಕಸದ ತಿಪ್ಪೆಯ ಮಧ್ಯೆ. ಶೂಟಿಂಗ್‌ಗೆಂದು ಅಮಿತಾಭ್ ಬಚ್ಚನ್‌ನ ಹೆಲಿಕಾಪ್ಟರ್ ಸ್ಲಮ್ಮಿಗೆ ಬಂದಿಳಿಯುತ್ತಿದ್ದಂತೆ ಅಣ್ಣ ಸಲೀಂ ಜಮಾಲ್‌ನನ್ನು ಮರದ ಪಟ್ಟಿಗಳಿಂದ ನಿರ್ಮಿಸಿದ್ದ ಪಾಯಿಖಾನೆಯೊಳಕ್ಕೆ ಕೂಡಿಟ್ಟು ಶೂಟಿಂಗ್ ನೋಡಲು ಓಡುತ್ತಾನೆ.

ಆದರೆ ಜಮಾಲ್ ಪಾಯಿಖಾನೆಯ ತೆರೆದ ಮಲದ ಗುಂಡಿಯೊಳಕ್ಕೇ ಧುಮುಕುತ್ತಾನೆ. ಮೈ ತುಂಬ ಮಲ-ಮೂತ್ರ ಮೆತ್ತಿಕೊಂಡು ಶೂಟಿಂಗ್ ನೋಡಲು ಕಿಕ್ಕಿರಿದ ಜನಜಂಗುಳಿಯನ್ನೇ ಭೇದಿಸಿಕೊಂಡು ಅಮಿತಾಬ್‌ನ ಆಟೋಗ್ರಾಫ್ ಗಿಟ್ಟಿಸುವ ಜಮಾಲ್ ಕೊಳಗೇರಿಯ ಅದಮ್ಯ ಮನುಷ್ಯ ಚೈತನ್ಯದ ಸಂಕೇತವಾಗುತ್ತಾನೆ.



ಕೌನ್ ಬನೇಗಾ... ಷೋನಲ್ಲಿ ಅನಿಲ್‌ಕಪೂರ್ ಕೇಳಿದ ಮೊದಲ ಪ್ರಶ್ನೆಗೆ ಆತನಷ್ಟೇ ಏಕೆ ಅಮಿತಾಬ್‌ನ ಪ್ರತಿಯೊಬ್ಬ ಅಭಿಮಾನಿಯೂ ಉತ್ತರ ಕೊಡಲೇಬೇಕು.

ಆದರೆ ಎರಡನೇ ಪ್ರಶ್ನೆಗೆ ಜಮಾಲ್ ಪ್ರೇಕ್ಷಕರ ಆಯ್ಕೆಯ ಲೈಫ್‌ಲೈನ್ ಬಳಸುತ್ತಾನೆ. ಮೂರು ಸಿಂಹಗಳ ರಾಷ್ಟ್ರ ಲಾಂಛನದ ಕೆಳಗೆ ಸತ್ಯಮೇವ ಜಯತೇ ಎಂದು ಘೋಷವಾಕ್ಯವಿರುವುದು ಆತನಿಗೆ ಗೊತ್ತಿಲ್ಲ. ಮೂರನೇ ಪ್ರಶ್ನೆಯೇ ಹಿಂದೂ ದೇವರಾದ ರಾಮನ ಕೈಯಲ್ಲಿ ಏನಿದೆ?

ಅದು ಮುಂಬಯಿಯ ಕೋಮು ದಳ್ಳುರಿಯ ಕತೆ ಹೇಳುತ್ತದೆ. ಏಕಾಏಕಿ ಮುಸ್ಲಿಂ ಕೊಳಗೇರಿಯ ಮೇಲೆ ದಾಳಿ ನಡೆಸುವ ಹಿಂದೂ ಮತಾಂಧರ ಹಿಂದಿಗೆ ಜಮಾಲ್‌ನ ತಾಯಿ ಬಲಿಯಾಗುತ್ತಾಳೆ. ಪ್ರಾಣ ಉಳಿಸಿಕೊಳ್ಳಲು ಕಂಗಾಲಾಗಿ ಓಡುವ ಜಮಾಲ್ ಮತ್ತು ಸಲೀಮ್ ಕಣ್ಣಿಗೆ ಪುಟ್ಟ ಮುಸ್ಲಿಂ ಬಾಲಕನೊಬ್ಬ ತನ್ನ ಪ್ರಾಣ ಉಳಿಸಿಕೊಳ್ಳಲು ಶ್ರೀರಾಮಚಂದ್ರನ ವೇಷ ಧರಿಸಿ ಕೈಯಲ್ಲಿ ಬಿಲ್ಲುಬಾಣ ಹಿಡಿದು ನಿಂತ ದೃಶ್ಯ ಕಣ್ಣಿಗೆ ರಾಚುತ್ತದೆ. ಅದೇ ಟೀವಿ ಷೋನ ಮೂರನೇ ಪ್ರಶ್ನೆಗೆ ಉತ್ತರವಾಗುತ್ತದೆ.

ಕೊಳಗೇರಿಯ ಮುಸ್ಲಿಂ ಪೋರನೊಬ್ಬನಿಗೆ ಹಿಂದೂ ದೇವರಾದ ಶ್ರೀರಾಮಚಂದ್ರನ ಕೈಯಲ್ಲಿರುವುದು ಬಿಲ್ಲುಬಾಣ ಎಂಬುದಕ್ಕೆ ಉತ್ತರ ಗೊತ್ತಿರಲಾರದೆಂದೇ ಲೆಕ್ಕಹಾಕಿದ ಅನಿಲ್‌ಕಪೂರ್‌ಗೆ ಅಚ್ಚರಿ ಮತ್ತು ನಿರಾಶೆ!

ಅದು ಕೌನ್ ಬನೇಗಾ ಕರೋಡ್ ಪತಿ ಕಾರ್ಯಕ್ರಮದ ಮರ್ಮ ಕೂಡ. ಎಂತೆಂಥದೋ ಡಿಗ್ರಿ ಪಡೆದ ವಿದ್ಯಾವಂತರು ಕೂಡ ಮೂರೋ ನಾಲ್ಕೋ ಪ್ರಶ್ನೆಗಳಿಗೆ ಸುಸ್ತು ಹೊಡೆದು ಹಾಟ್‌ಸೀಟ್‌ನಿಂದ ನಿರ್ಗಮಿಸುತ್ತಿರುವಾಗ ಕೊಳಗೇರಿಯ ಕುನ್ನಿ ಜಮಾಲ್ ತನ್ನ ಬುದ್ಧಿಮತ್ತೆಗೆ ನಿಲುಕದ ಉತ್ತರ ಕೊಡುತ್ತಿದ್ದಾನೆ. ಅದನ್ನೇ ಕೆದಕಿದ ಪೊಲೀಸರಿಗೂ ಜಮಾಲ್ ಹೇಳುತ್ತಾನೆ 'ಅದು ರಾಮನೇ ಇರಲಿ ಅಲ್ಲಾಹನೇ ಆಗಿರಲಿ ಯಾರೂ ನನ್ನ ತಾಯಿಯ ಪ್ರಾಣ ಉಳಿಸಲಿಲ್ಲ!'

ಮನುಕುಲದ ಕಠೋರವಾಸ್ತವವೊಂದು ಈ ಮೂಲಕ ಜಮಾಲ್‌ನ ಬಾಯಿಂದ ಹೊರಬರುತ್ತದೆ.



ಕನಿಷ್ಠ ನಾಲ್ಕನೇ ಪ್ರಶ್ನೆಗಾದರೂ ಜಮಾಲ್‌ನನ್ನು ಹಾಟ್‌ಸೀಟ್‌ನಿಂದ ನಿಕಾಲಿ ಮಾಡುವುದು ಪ್ರಶ್ನೆ ಕೇಳುವ ಅನಿಲ್‌ಕಪೂರ್ ಮತ್ತು ಪ್ರಶ್ನೆಗಳನ್ನು ಹಾಕುವ ಕಂಪ್ಯೂಟರ್ ಆಪರೇಟರುಗಳ ಹುನ್ನಾರ. ಮುಸ್ಲಿಂ ಅನಕ್ಷರಸ್ಥನೊಬ್ಬನಿಗೆ 'ದರುಶನ ದೋ ಘನಶ್ಯಾಮ್' ಎಂಬ ಭಜನೆಯ ಗಂಧಗಾಳಿಯಿರಲಿಕ್ಕಿಲ್ಲ ಎಂದೇ ಲೆಕ್ಕಹಾಕಿ ಪ್ರಶ್ನೆ ಹಾಕುತ್ತಾರೆ.

ಕತೆ ಮತ್ತೆ ಫ್ಲ್ಯಾಷ್‌ಬ್ಯಾಕಿಗೆ ಹೋಗುತ್ತದೆ. ಕೋಮುಗಲಭೆಗೆ ಸಿಲುಕಿದ ಇಡೀ ಕೊಳಗೇರಿಯೇ ಸುಟ್ಟು ಕರಕಲಾಗಿದೆ. ಇದ್ದೊಬ್ಬಳೇ ತಾಯಿ ಕೋಮು ಹಿಂಸೆಗೆ

ಮುಸ್ಲಿಮರ ದುರಂತವೂ, ಅಮಿತಾಬ್‌ನ ಆತಂಕವೂ....!

2008ರ ನವೆಂಬರ್ ತಿಂಗಳಲ್ಲಿ ಅಮೆರಿಕದಲ್ಲಿ ತೆರೆಕಂಡ 'ಸ್ಲಂಡಾಗ್ ಮಿಲಿಯನೇರ್' ...ನಕ 64 ಪ್ರಶಸ್ತಿಗಳನ್ನು ಗೆದ್ದಿದೆ. ಈ ಪೈಕಿ ಅತ್ಯಂತ ಪ್ರತಿಷ್ಠಿತವಾದದ್ದು ಬ್ರಿಟಿಷ್ ಚಿತ್ರರಂಗ ...ವ ಗೋಲ್ಡನ್ ಗ್ಲೋಬ್ ಪುರಸ್ಕಾರ. ಒಂದಲ್ಲ ನಾಲ್ಕು ಗೋಲ್ಡನ್ ಗ್ಲೋಬ್ ಪ್ರಶಸ್ತಿಗಳು. ...ತ್ತಮ ಚಿತ್ರಕ್ಕೊಂದು, ಅತ್ಯುತ್ತಮ ನಿರ್ದೇಶನಕ್ಕೆಂದು ಡ್ಯಾನಿ ಬಾಯ್ಲ್‌ಗೆ ಮತ್ತೊಂದು, ...ಮ ಚಿತ್ರಕಥೆಗಾಗಿ ಸೈಮನ್ ಬ್ಯೂಫಾಯ್‌ಗೆ, ಮಗದೊಂದು ಮತ್ತು ವಿಶಿಷ್ಟ ಸಂಗೀತಕ್ಕಾಗಿ ...ರ್. ರೆಹಮಾನ್‌ಗೆ ಇನ್ನೊಂದು... ಹೀಗೆ ನಾಲ್ಕು ಗೋಲ್ಡನ್‌ಗ್ಲೋಬ್ ಪ್ರಶಸ್ತಿಗಳನ್ನು ...ಸಿದ ಸ್ಲಂಡಾಗ್ ಸದ್ಯ ಆಸ್ಕರ್ ಹಣಾಹಣಿಯ ಮುಂಚೂಣಿಯಲ್ಲಿದೆ.


ಇತ್ತೀಚೆಗಷ್ಟೇ ಬೂಕರ್ ಪ್ರಶಸ್ತಿ ಗಿಟ್ಟಿಸಿದ ವೈಟ್ ಟೈಗರ್ ಕೃತಿ ಹೇಗೆ ಭಾರತದ ...ತನವನ್ನೂ ಭ್ರಷ್ಟಾಚಾರವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿತ್ತೋ ಅದೇ ಕಾರಣಕ್ಕೆ 'ಸ್ಲಂಡಾಗ್...' ...ಕ್ಕೂ ಪಾಶ್ಚಾತ್ಯ ಪ್ರಶಸ್ತಿಗಳು ಬರುತ್ತಿವೆ ಎಂಬ ಆರೋಪ ಕೇಳಿ ಬರುತ್ತಿವೆ. ಸ್ವತಃ ...ತಾಬ್ ಬಚ್ಚನ್ 'ಸ್ಲಂಡಾಗ್...' ಚಿತ್ರವನ್ನು ಖಂಡಿಸಿ ಭಾರತದ ವಿರುದ್ಧ ಅಪಪ್ರಚಾರಕ್ಕೆಂದೇ ...ಟ್ಟಿಕೊಂಡ ಚಿತ್ರವಿದು ಎಂದು ಟೀಕಿಸಿದ್ದಾರೆ.

ಹಾಗಾದರೆ ಭಾರತದ ಅಸಲೀ ಚಿತ್ರಣವಾದರೂ ಏನು? ಟಾಟಾ, ಬಿರ್ಲಾ ಇನ್‌ಫೋಸಿಸ್ ನಾರಾಯಣಮೂರ್ತಿಯಂಥವರು ಸುಖವಾಗಿದ್ದಾರೆಂಬ ಮಾತ್ರಕ್ಕೆ ಭಾರತದಲ್ಲಿ ಬಡತನ, ಭ್ರಷ್ಟಾಚಾರ, ಭಿಕ್ಷುಕರು, ವೇಶ್ಯೆಯರು, ಕಳ್ಳರು, ಹಂತಕರು ಇಲ್ಲವೆಂದು ಅರ್ಥವೇ? ಹಾಗೊಮ್ಮೆ ಇದ್ದುದ್ದೇ ಆಗಿದ್ದರೆ ಆ ಬಗ್ಗೆ ವಿಶ್ವಕ್ಕೆ ಗೊತ್ತಾದರೆ ತಪ್ಪೇನಿದೆ? ಭಾರತದ ನಿಜವಾದ ಪರಿಸ್ಥಿತಿಯನ್ನು ಮುಚ್ಚಿಟ್ಟು ಯಾವ ಚಿತ್ರಣವನ್ನು ವಿಶ್ವಕ್ಕೆ ಕೊಟ್ಟರೆ ಯಾರಿಗೆ ಲಾಭ?

ಅಷ್ಟಕ್ಕೂ ಶೋಷಿತ ವರ್ಗದ ವಾಸ್ತವ ಸ್ಥಿತಿಗತಿಗಳು ವಿಶ್ವಕ್ಕೆ ಗೊತ್ತಾದರೆ ಅಮಿತಾಬ್ ಬಚ್ಚನ್‌ಗಾಗಲಿ, ಸಂಘಪರಿವಾರಕ್ಕಾಗಲಿ ಆಗುವ ನಷ್ಟವಾದರೂ ಏನು? 'ಸ್ಲಂಡಾಗ್..'ನ ಪಾತ್ರಗಳೆಲ್ಲವೂ ಮುಸ್ಲಿಮರೇ ಆಗಿದ್ದದ್ದು ಭಾರತದಲ್ಲಿ ಮುಸ್ಲಿಮರ ದುರ್ಗತಿಯನ್ನು 'ಸ್ಲಂಡಾಗ್...' ಚಿತ್ರ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದು ಪಟ್ಟಭದ್ರ ಹಿತಾಸಕ್ತ ಗುಂಪೊಂದಕ್ಕೆ ಕಹಿಯಾಗಿದೆಯೇ?

ಅದು ಬಚ್ಚನ್ ಹೇಳಿಕೆಯ ಮೂಲಕ ವ್ಯಕ್ತವಾಗುತ್ತಿದೆಯೇ?

ಹಾಗಾದರೆ ಅಮಿತಾಬ್‌ನ ಕೂಲಿ, ಶೋಲೆ, ಝಂಜೀರ್, ಮುಕದ್ದರ್ ಕಾ ಸಿಕಂದರ್, ಮರ್ದ್ ಮುಂತಾದ ಚಿತ್ರಗಳ ಪಾತ್ರಕ್ಕೂ 'ಸ್ಲಂಡಾಗ್...' ಚಿತ್ರದ ಜಮಾಲ್ ಮತ್ತು ಸಲೀಂ ಪಾತ್ರಕ್ಕೂ ಏನು ವ್ಯತ್ಯಾಸ?



...ಗಿದ್ದಾಳೆ. ಅಣ್ಣ ಸಲೀಂ ಮತ್ತು ಜಮಾಲ್‌ರಂತೆಯೇ ...ಬಿದ್ದವಳು ಲತಿಕಾ ಎಂಬ ಬಾಲೆ. ಮೂವರೂ ...ಶಿಗಳ ಮಧ್ಯೆ ಚಿಂದಿ ಆಯ್ದು ಬದುಕುತ್ತಿರುವಾ...ಲ್ಲಿಗೆ ಇಬ್ಬರ ಪ್ರವೇಶವಾಗುತ್ತದೆ.

...ಖ್ಯಾತ ಪಾತಕಿ ಮಮೋನ್. ಇನ್ನೊಬ್ಬ ಆತನ ...ಫ್ರೆಂಡ್ ಪನ್ನೂಸ್. ಅನಾಥ ಮಕ್ಕಳನ್ನು ಹಿಡಿದು ...ಅವರ ಕೈಕಾಲು ಊನಗೊಳಿಸಿ ಭಿಕ್ಷೆಗೆ ಇಳಿಸಿ ...ಮಾಡುವ ಮಮೋನ್ ಕಣ್ಣಿಗೆ ಬಿದ್ದ ಸಲೀಂ, ... ಮತ್ತು ಲತಿಕಾ ಈಗ ಭಿಕ್ಷೆ ಬೇಡಿ ಬದುಕಬೇಕು. ... ಭಿಕ್ಷೆಯನ್ನೆಲ್ಲ ತಂದು ಮಮೋನ್‌ನ ಕೈಗಿಡಬೇಕು. ...ದು ಮಮೋನ್ ಭಜನೆ ಹೇಳಿಕೊಡುತ್ತಾನೆ. ಅದು ...ದು ಸಂತಸೂರದಾಸರ ದರುಶನ ದೋ ...ಮ್....!

...ಾಗಿ ನಿಲ್ಲಿಸಿ ಒಂದೊಂದೇ ಮಗುವನ್ನು ಕರೆದು ...ಮು ಕಂಠಪಾಠ ಆಲಿಸುವ ಮಮೋನ್‌ನ ಮುಂದೆ ...ಕರ್ಕಶವಾಗಿ ಭಜನೆ ಹೇಳುತ್ತಾನೆ. ಅದನ್ನು ಕೇಳಿ ...ತಿಕಾಳನ್ನು ಆತನ ಎದುರೇ ಹೊಡೆಯುತ್ತಾನೆ. ...ನ್ ಬಂಟ ಪನ್ನೂಸ್ ಜಗಳ ಬಿಡಿಸಲು ಹೋಗಿ ...ನ್ನು ನೂಕಿ ಎಸೆದರೆ–ಬಾಲಕ ಸಲೀಂ 'ಸಾಲೇ ... ಹಾತ್ ನಹಿ ಲಗಾನಾ ಮುಜೇ....' ಎಂದು ...ಿಯಂತೆ ಆಜಾನುಬಾಹು ಪನ್ನೂಸ್‌ನ ಮೇಲೇ ...ತೋಗುತ್ತಾನೆ.

...ಿಗೆ ಮಮೋನ್‌ಗೆ ಸಲೀಂ ಇವತ್ತಲ್ಲ ನಾಳೆ ...ವಾಗುವುದು ಗ್ಯಾರಂಟಿ ಎಂಬುದು ಅರ್ಥವಾಗುತ್ತದೆ. ... ಹಾಡುವ ಅನಾಥ ಮಗುವಾಗಿದ್ದರೆ ಅದರ ...ಳೆದು ಭಿಕ್ಷುಕನನ್ನಾಗಿ ಮಾಡುವುದು. ದಷ್ಟ ಮಕ್ಕಳ ...ನ್ನೋ ಕಾಲನ್ನೋ ಕತ್ತರಿಸಿ ಭಿಕ್ಷೆಗೆ ನೂಕುವುದು. ...ಗಿದ್ದರೆ ಪಿಕ್‌ಪಾಕೆಟ್‌ಗೆ ಇಳಿಸುವುದು ...ಹೊಡೆದಾಡುವ ಛಾತಿಯಿದ್ದ ಮಕ್ಕಳನ್ನು ...ಯಿ ಅಂಡರ್‌ವರ್ಲ್ಡ್‌ಗೆ ಬಿಡುವುದು ...ೕನ್‌ನ ಚಾಳಿ.

...ಗ ಆಯ್ಕೆಯ ಕಾಲ. ತಮ್ಮ ...ನ ಒಂದು ಕೈಯನ್ನು ಕತ್ತರಿಸಿ ತೆಗೆದು ...ಷನಲ್ ಭಿಕ್ಷುಕನನ್ನಾಗಿ ಮಾಡಲು ...ೕನ್ ನಿರ್ಧರಿಸಿದ್ದಾನೆ. ಜಮಾಲ್‌ನನ್ನು ...ತರುವಂತೆ ಅಣ್ಣ ಸಲೀಂಗೆ ಆದೇಶಿಸಿ ...ಲತಿಕಾಳ ಜೊತೆ ಆಟವಾಡಿಕೊಂಡಿದ್ದ ...ನನ್ನು ಕರೆತಂದು ಮಮೋನ್‌ನ ... ನಿಲ್ಲಿಸುತ್ತಾನೆ. ಇನ್ನೇನು ತಮ್ಮನ ಕೈ ...ಬೇಕೆನ್ನುವಷ್ಟರಲ್ಲಿ ಸಲೀಂ ಕಟುಕ ...ನ ಮುಖಕ್ಕೆ ಆಸಿಡ್ ಎರಚುತ್ತಾನೆ. ... ಜಮಾಲ್ ಮತ್ತು ಲತಿಕಾ ಮೂವರು ...ೕನ್‌ನ ಅಡ್ಡೆಯಿಂದ ಪರಾರಿಯಾಗಿ ಓಡುವ ...ಂದನ್ನು ಸಮೀಪಿಸುತ್ತಾರೆ. ಆದರೆ ಲತಿಕಾ ಮಾತ್ರ ...ಗದೇ ಪುನಃ ಕಟುಕರ ಕೈಗೆ ಸಿಕ್ಕಿಬೀಳುತ್ತಾಳೆ.

...ದೇ 'ಸ್ಲಂ ಡಾಗ್ ಮಿಲಿಯನೇರ್' ಚಿತ್ರದ ಲವ್ ... ದರುಶನ ದೋ ಘನಶ್ಯಾಮ್ ಭಜನೆಯನ್ನು ...ದ್ದು ಸೂರ್‌ದಾಸ್ ಎಂಬ ನಿರರ್ಗಳ ಉತ್ತರ ಕೊಟ್ಟ ... ಹುಡುಗ ಜಮಾಲ್‌ಗೆ ಈ ಬಾರಿ ಅನಿಲ್‌ಕಪೂರ್ ...ಕ್ಷ ಪ್ರಶ್ನೆಯೊಂದನ್ನು ಹಾಕುತ್ತಾನೆ. ಅದು 100 ...ಗಳ ನೋಟಿನ ಮೇಲೆ ಅಮೆರಿಕದ ಯಾವ ...ನ ಚಿತ್ರವಿದೆ? ಎಂಬ ಐದನೇ ಪ್ರಶ್ನೆ ಕ್ಷಣ ಹೊತ್ತೂ ...ಚಿಸದೇ, ಬೆಂಜಮಿನ್ ಫ್ರಾಂಕ್ಲಿನ್ ಎಂಬ ಉತ್ತರ ...ತ್ತಾನೆ ಜಮಾಲ್.

...ನಿಜಿಗೆ ನಿಂತ ಇನ್ಸ್‌ಪೆಕ್ಟರ್ ಇರ್ಫಾನ್ ಖಾನ್‌ಗೂ ... ಸಾವಿರ ರೂಪಾಯಿಯ ನೋಟಿನ ಮೇಲಿರುವ ...ತ್ಮಾಗಾಂಧಿಯ ಚಿತ್ರವನ್ನೇ ಗುರುತಿಸಲಾಗದ ...ವ್ ಹೇಗೆ 100 ಅಮೆರಿಕನ್ ಡಾಲರ್‌ನ ನೋಟಿನ ...ಷ್ಣ ಬೆಂಜಮಿನ್ ಫ್ರಾಂಕ್ಲಿನ್ ಚಿತ್ರವನ್ನು ಗುರುತಿಸಿದ?

ಕತೆ ಮತ್ತೆ ಗತಕಾಲಕ್ಕೆ ಬರುತ್ತದೆ. ಆವತ್ತು ಮಮೋನ್‌ನ ನರಕದಿಂದ ಬಚಾವಾದ ಸಲೀಂ ಮತ್ತು ಜಮಾಲ್ ಈಗ ಸಣ್ಣಮಟ್ಟದ ಕಳ್ಳತನಕ್ಕಿಳಿದಿದ್ದಾರೆ. ರೈಲುಗಳಲ್ಲಿ ತಿಂಡಿ ಕದಿಯುವುದು, ತಾಜ್‌ಮಹಲ್ ವೀಕ್ಷಣೆಗೆಂದು ಬರುವ ಪ್ರವಾಸಿಗರ ಚಪ್ಪಲಿ ಕದಿಯುವುದು ಅವರ ಸದ್ಯದ ಹೊಟ್ಟೆಪಾಡು. ವಿದೇಶಿ ಪ್ರವಾಸಿಗನೊಬ್ಬ ಕೊಟ್ಟ ನೂರು ಡಾಲರ್ ನೋಟನ್ನು ಜಮಾಲ್ ಸುರಂಗಮಾರ್ಗದಲ್ಲಿ ಸುಶ್ರಾವ್ಯವಾಗಿ ಹಾಡುತ್ತಾ ಭಿಕ್ಷೆ ಬೇಡುವ ಕುರುಡ ಬಾಲಕನೊಬ್ಬನಿಗೆ ಕೊಡುತ್ತಾನೆ. ಆತ ಜಮಾಲ್ ಜೊತೆಗೇ ಮಮೋನ್‌ನ ಕೂಡುದೊಡ್ಡಿಯಲ್ಲಿದ್ದು ಕಣ್ಣು ಕೀಳಲ್ಪಟ್ಟ ಅರವಿಂದ್!

ನೂರ್ ಡಾಲರ್ ಎಂದಾಕ್ಷಣವೇ 'ಕ್ಯಾ ಉಲ್ಲೂ ಬನಾತೇ ಹೋ ಸಾಬ್' ಎಂದು ಅರವಿಂದ್ ಹೀಯಾಳಿಸಿದ್ದಕ್ಕೆ, ಜಮಾಲ್ 'ಇಲ್ಲ ಅದು ಅಸಲೀ ನೋಟು' ಎನ್ನುತ್ತಾನೆ. ಹಾಗಾದರೆ ಅದರ ಮೇಲೆ ಯಾರ ಚಿತ್ರವಿದೆ ಹೇಳು ನೋಡೋಣ ಎಂದು ಅರವಿಂದ್ ಪ್ರಶ್ನೆ ಹಾಕುತ್ತಾನೆ. ಅದಕ್ಕೆ ಜಮಾಲ್ 'ಅಕ್ಕರೆಯ ಮುದುಕ' ಎಂಬ ವಿವರಣೆ ಕೊಡುತ್ತಿದ್ದಂತೆಯೇ ಕುರುಡ ಅರವಿಂದ್ 'ಓ... ಬೆಂಜಮಿನ್ ಫ್ರಾಂಕ್ಲಿನ್!' ಎಂಬ ಉದ್ಗಾರ ತೆಗೆಯುತ್ತಾನೆ.

ಇದು ಜಮಾಲ್‌ನ ಸ್ಮೃತಿಪಟಲದಲ್ಲಿದ್ದುದರಿಂದಲೇ ಆತ ಟಿವಿ ಷೋನ ಹಾಟ್‌ಸೀಟಿನಲ್ಲಿ ಕೂತು ಐದನೇ ಪ್ರಶ್ನೆಗೆ ಬೆಂಜಮಿನ್ ಫ್ರಾಂಕ್ಲಿನ್ ಎಂಬ ಉತ್ತರ ಕೊಡುವುದು.

ಮುಂದಿನ ಪ್ರಶ್ನೆಯೇ **Who invented the revolver?** ಅಂದರೆ ರಿವಾಲ್ವರ್ ಕಂಡುಹಿಡಿದದ್ದು ಯಾರು? ಅದಕ್ಕೆ ಕಿಂಚಿತ್ತೂ ಯೋಚಿಸದೇ ಜಮಾಲ್ ಸಾಮ್ಯುಯೆಲ್ ಕೋಲ್ಟ್ ಎಂದು ಉತ್ತರಿಸುತ್ತಾನೆ. ಆತ ಮೊದಲ ಬಾರಿಗೆ ರಿವಾಲ್ವರ್ ಕಂಡಿದ್ದೇ ಅಣ್ಣ ಸಲೀಂ



ಕೈಯಲ್ಲಿ. ಸುರಂಗಮಾರ್ಗದ ಕುರುಡ ಅರವಿಂದ್‌ನಿಂದ ಲತಿಕಾಳ ಬಗ್ಗೆ ಮಾಹಿತಿ ಪಡೆದ ಜಮಾಲ್ ಅಣ್ಣ ಸಲೀಂನೊಂದಿಗೆ ಮುಂಬಯಿಯ ಕುಖ್ಯಾತ ಕಾಮಾಟಿಪುರದ 'ಪೀಲಾ ಸ್ಟ್ರೀಟ್'ಗೆ ಬರುತ್ತಾನೆ.

ಅಲ್ಲಿನ ಅಸಂಖ್ಯಾತ ವೇಶ್ಯೆಯರ ಮಧ್ಯೆ ಲತಿಕಾಳನ್ನು ಅದೇ ಮಮೋನ್ ಪಳಗಿಸುತ್ತಿದ್ದಾನೆ. ಆಕೆಗೆ ಡ್ಯಾನ್ಸ್ ಕಲಿಸಲೆಂದೇ ಮಾಸ್ಟರ್‌ಜಿಯೊಬ್ಬನನ್ನು ನೇಮಿಸಿದ್ದಾನೆ. ಲತಿಕಾಳನ್ನು ಕಂಡಿದ್ದೇ ಏಕಾಏಕಿ ನುಗ್ಗುವ ಬಾಲಕರಿಬ್ಬರನ್ನೂ ಮತ್ತದೇ ಮಮೋನ್ ತಡೆಯುತ್ತಾನೆ. ಆದರೆ ಅಣ್ಣ ಸಲೀಂ ತನ್ನ ಸೊಂಟದ ಹಿಂಬದಿಯಿಂದ ರಿವಾಲ್ವರ್ ತೆಗೆಯುತ್ತಾನೆ. ಅಲ್ಲೇ ಮಮೋನ್ ತಲೆಗೆ ಗುಂಡು ಹಾರಿಸಿ ಆತನನ್ನು ಕೊಂದು ಲತಿಕಾಳ ಸಮೇತ ಅಣ್ಣತಮ್ಮಂದಿರಿಬ್ಬರೂ ಪರಾರಿಯಾಗುತ್ತಾರೆ.

ಮುಂದೆ ಅಣ್ಣನೇ ಜಮಾಲ್ ವಿರುದ್ಧ ತಿರುಗಿಬೀಳುತ್ತಾನೆ. ಅದೂ ಲತಿಕಾಗಾಗಿ. ಲತಿಕಾಳನ್ನು ತನ್ನೊಂದಿಗೆ ರೂಮಿನಲ್ಲಿ ಇಟ್ಟುಕೊಳ್ಳುವ ಸಲೀಂ ತಮ್ಮನನ್ನು ಹೊರದಬ್ಬುತ್ತಾನೆ. ಲತಿಕಾಳ ಕಾರಣಕ್ಕೆ ಸ್ವಂತ ಅಣ್ಣನಿಂದಲೇ ಕೊಲೆ ಬೆದರಿಕೆಗೀಡಾಗಿ ಬೀದಿಗೆ ಬಿದ್ದ ಜಮಾಲ್‌ಗೆ ರಿವಾಲ್ವರನ್ನು ಕಂಡುಹಿಡಿದದ್ದು ಸಾಮ್ಯುಯೆಲ್ ಕೋಲ್ಟ್ ಎಂಬ ಉತ್ತರ ಆತನ ಬದುಕಿನ ಪುಟದಲ್ಲೇ ಅಡಗಿದ್ದು ಪ್ರಶ್ನೆ ಕೇಳುವ ಅನಿಲ್ ಕಪೂರ್‌ಗಾಗಲಿ, ಪೊಲೀಸ್ ಇನ್ಸ್‌ಪೆಕ್ಟರ್‌ಗಾಗಲಿ ಹೇಗೆ ಗೊತ್ತಾಗಲು ಸಾಧ್ಯ?

ಲತಿಕಾ ಆತನ ಬಾಲ್ಯದ ಗೆಳತಿ. ಆಕೆಯನ್ನು ಮಮೋನ್‌ನ ನರಕದಿಂದ ಬಚಾವು ಮಾಡಿಕೊಂಡು ಬಂದ ನಂತರವೂ ಸ್ವಂತ ಅಣ್ಣನೇ ಆಕೆಯನ್ನು ಬಳಸಿಕೊಂಡಿದ್ದು ಜಮಾಲ್‌ಗೆ ಚೆನ್ನಾಗಿ ಗೊತ್ತಿದೆ. ಸಲೀಂ ಮುಂದೆ ಮುಂಬಯಿ ಅಂಡರ್‌ವರ್ಲ್ಡ್‌ನ 'ಭಾಯಿ' ಒಬ್ಬನಾದ ಜಾವಿದ್‌ಬಂಟನಾಗಿ ಲತಿಕಾಳನ್ನು ಆತನ ವಶಕ್ಕೊಪ್ಪಿಸುತ್ತಾನೆ. ಲತಿಕಾಳಿಗಾಗಿ ಅಲ್ಲಿಗೂ ಹುಡುಕಿ ಬರುತ್ತಾನೆ ಜಮಾಲ್. ಕೊನೆಗೆ ಅಣ್ಣ ಸಲೀಂನೇ ಜಾವಿದ್ ವಿರುದ್ಧ ತಿರುಗಿಬಿದ್ದು ಲತಿಕಾಳನ್ನು ತಮ್ಮನ ಜೊತೆಗೂಡಿಸಲು ನೆರವಾಗುತ್ತಾನೆ. ಜಾವಿದ್‌ನನ್ನೇ ಕೊಂದು ಕೊನೆಗೆ ಆತನ ಗ್ಯಾಂಗಿನಿಂದಲೇ ಹತನಾಗುವ ಸಲೀಂನ ಪಾತ್ರವೇ ಇಡೀ ಚಿತ್ರದ ಮೈಲಿಗಲ್ಲು!

ಇನ್ನೇನು ಜಮಾಲ್ ಎರಡು ಕೋಟಿ ಗೆಲ್ಲುತ್ತಾನೆಂಬುದು ಖಾತರಿಯಾಗುತ್ತಿದ್ದಂತೆ ಷೋ ನಡೆಸುವ ಅನಿಲ್‌ಕಪೂರ್ ಖುದ್ದಾಗಿ ಜಮಾಲ್‌ನ ದಿಕ್ಕುತಪ್ಪಿಸಲು ಯತ್ನಿಸುತ್ತಾನೆ. ಆದರೆ ಆ ಹೊತ್ತಿಗಾಗಲೇ ಜಮಾಲ್‌ಗೆ ಷೋನ ಪ್ರಶ್ನೆಗಳ ಮರ್ಮ ಗೊತ್ತಾಗಿರುತ್ತದೆ. ಕೊನೆಗೂ ಪೊಲೀಸ್ ತನಿಖೆಯನ್ನು ಪೂರೈಸಿ ಅಂತಿಮ ಪ್ರಶ್ನೆಯನ್ನೂ ಗೆಲ್ಲುವ ಜಮಾಲ್ ಕೋಟ್ಯಾಧಿಪತಿಯಾಗುವುದಕ್ಕೂ ಆತನ ಅಣ್ಣ ಸಲೀಂ ಮತ್ತು ಡಾನ್ ಜಾವಿದ್ ಪರಸ್ಪರ ಗುಂಡಿಗೆ ಆಹುತಿಯಾಗುವುದಕ್ಕೂ ಮತ್ತು ಲತಿಕಾ-ಜಮಾಲ್ ಒಂದಾಗುವುದಕ್ಕೂ ಸರಿಹೋಗುತ್ತದೆ.

ಇದು ಸ್ಲಂ ಡಾಗ್ ಮಿಲಿಯನೇರ್ ಚಿತ್ರದ ತಿರುಳು. ವಿಕಾಸ್ ಸ್ವರೂಪ್ ಎಂಬ ವಿದೇಶಾಂಗ ಖಾತೆಯ ಅಧಿಕಾರಿಯೊಬ್ಬರು ಬರೆದ Q&A ಕಾದಂಬರಿಯನ್ನು ಆಧರಿಸಿ ಬ್ರಿಟಿಷ್ ಚಿತ್ರ ನಿರ್ದೇಶಕ ಡ್ಯಾನಿ ಬಾಯ್ಲ್ ಹೆಣೆದ ಈ ಚಿತ್ರದ ಕತೆಯಷ್ಟೇ ಮುಖ್ಯವೆನಿಸುವುದು ರೆಹಮಾನ್ ಸಂಗೀತ. ಎಲ್ಲಕ್ಕೂ ಮಿಗಿಲಾಗಿ ಸೈಮನ್ ಬ್ಯೂಫಾಯ್ ಬರೆದ ಚಿತ್ರಕತೆಯೇ ಇಡೀ ಚಿತ್ರದ ಜೀವಾಳದಂತಿದೆ. ಕೌನ್ ಬನೇಗಾ ಕರೋಡ್‌ಪತಿಯಂಥ ಪ್ರಶ್ನಾವಳಿ ಕಂಟೆಸ್ಟ್‌ನ ಮೋಸ, ಪ್ರತಿಯೊಂದು ಪ್ರಶ್ನೆಗೂ ನೀಡಿದ ಉತ್ತರದ ಸತ್ಯಾಸತ್ಯತೆಯನ್ನು ಬಾಯಿಬಿಡಿಸುವ ಪೊಲೀಸರ ಚಿತ್ರಹಿಂಸೆ ಮತ್ತು ಪ್ರತಿ ಪ್ರಶ್ನೆಗೂ ಜಮಾಲ್ ನೀಡಿದ ಉತ್ತರಗಳಲ್ಲೇ ಅಡಗಿದ ಆತನ ಬದುಕು; ವಿಚಿತ್ರ ಜಗತ್ತೊಂದನ್ನು ಬಿಚ್ಚಿಕೊಡುತ್ತದೆ.

ಮುಂಬಯಿಯ ಕೊಳಗೇರಿಯ ಕೊಂಪೆಗಳಲ್ಲಿನ ಕ್ರಿಮಿಸದೃಶ ಬದುಕು, ಅಲ್ಲಿನ ಕೋಮುಗಲಭೆ, ತನ್ಮೂಲಕ ಬೀದಿ ಪಾಲಾಗುವ ಅನಾಥ ಮಕ್ಕಳು, ಅಂಥ ಮಕ್ಕಳನ್ನೇ ಅಂಗವಿಕಲರನ್ನಾಗಿ ಮಾಡಿ ಭಿಕ್ಷಾಟನೆಗೆ ದೂಡುವ ಮಾಫಿಯಾ, ಕಾಮಾಟಿಪುರದ ಅಸಹ್ಯದ ವೇಶ್ಯಾವಾಟಿಕೆ ಅಲ್ಲಿನ ಕಿತ್ತು ತಿನ್ನುವ ಬಡತನ, ಮುಂಬಯಿಯ ರಕ್ತದಾಹಿ ಅಂಡರ್‌ವರ್ಲ್ಡ್ ಮತ್ತು ಇಂಥ ಕ್ರೌರ್ಯದ ಬೆಂಕಿಯಲ್ಲೇ ಅರಳುವ ಮನುಷ್ಯ ಸಂಬಂಧಗಳು. ಇವೆಲ್ಲವನ್ನೂ ಸ್ಲಂ ಹುಡುಗನೊಬ್ಬ ಕೌನ್ ಬನೇಗಾ ಕರೋಡ್‌ಪತಿ ಸ್ಪರ್ಧೆಯ ಹಾಟ್‌ಸೀಟಿನಲ್ಲಿ ಕೂತು ಎದುರಿಸುವ ಪ್ರಶ್ನೆಗಳ ಮೂಲಕ ಅನಾವರಣಗೊಳಿಸುತ್ತಾ ಹೋಗುತ್ತಾರೆ ಡ್ಯಾನಿ ಬಾಯ್ಲ್. ಬಹುಶಃ ಮೀರಾ ನಾಯರ್‌ರ ಸಲಾಂ ಬಾಂಬೆ ಚಿತ್ರಕ್ಕಿಂತಲೂ ಪರಿಣಾಮಕಾರಿಯಾಗಿದೆ ಸ್ಲಂ ಡಾಗ್ ಮಿಲಿಯನೇರ್.

ಅದು ಭವ್ಯ ಭಾರತದ ಅಸಲೀ ಮುಖವನ್ನು ಇಡೀ ಜಗತ್ತಿಗೆ ಬಿಚ್ಚಿಡುತ್ತದೆ.

ಇದೇ ನಿಜವಾದ ಭಾರತ!

'ಸ್ಲಮ್‌ಡಾಗ್ ಮಿಲಿಯನೇರ್' ಅತ್ತ ಬ್ರಿಟನ್ ಮತ್ತು ಅಮೆರಿಕಗಳಲ್ಲಿ ಭಾರೀ ಮೆಚ್ಚುಗೆ ಪಡೆಯುತ್ತಿದ್ದಂತೆಯೇ ಇತ್ತ ಭಾರತದಲ್ಲಿ ಅನೇಕರು ಅದರ ಬಗ್ಗೆ ಅಪಸ್ವರವೆತ್ತಲಾರಂಭಿಸಿದ್ದಾರೆ. "ಭಾರತದಲ್ಲಿನ ಬಡತನ, ದಾರಿದ್ರ್ಯ, ನಿರುದ್ಯೋಗ, ಕೊಳಚೆ, ಭ್ರಷ್ಟತೆಗಳನ್ನೇ ಸಿನೆಮಾದಲ್ಲಿ ಎತ್ತಿತೋರಿಸುವ ಮೂಲಕ ಭಾರತವನ್ನು ತೃತೀಯ ಜಗತ್ತಿನ ಕೊಳಕು ಎಂಬಂತೆ ಚಿತ್ರಿಸಲಾಗಿದೆಯೇ ಹೊರತು ಭಾರತದ ಇನ್ನೊಂದು ಮುಖವಾದ ಅದರ ಅಭಿವೃದ್ಧಿ, ದಕ್ಷತೆಗಳನ್ನು ಮರೆಮಾಚ




ಲಾಗಿದೆ. ಇದರಿಂದ ರಾಷ್ಟ್ರೀಯವಾದಿಗಳಿಗೆ, ದೇಶಪ್ರೇಮಿಗಳಿಗೆ ನೋವುಂಟು ಮಾಡಿದೆ" ಎಂಬುದು ಅಪಸ್ವರಗಳ ಸಾರಾಂಶ.

ದುರಂತ ಏನೆಂದರೆ ಭಾರತ ಇರುವುದೇ ಹಾಗೇ ಎಂಬ ಕಟು ವಾಸ್ತವವನ್ನು 'ಪ್ರಕಾಶಿಸುತ್ತಿರುವ ಭಾರತ'ದ **Elite** ಜನರಿಂದ ಅರಗಿಸಿಕೊಳ್ಳಲಾಗುತ್ತಿಲ್ಲ. ದೇಶದ ಶೇ.80ರಷ್ಟು ಜನರ ಪ್ರತಿದಿನದ ಆದಾಯ 80 ರೂಪಾಯಿಗಿಂತ ಕಡಿಮೆ ಇದೆ. ಅವರಲ್ಲಿ ಅರ್ಧದಷ್ಟು ಜನರ ಆದಾಯ 40 ರೂಪಾಯಿಗಿಂತ ಕಡಿಮೆಯಿದೆ. ವಿಶ್ವದ ಅತಿಹೆಚ್ಚು ಬಡವರಲ್ಲಿ ಮೂರನೇ ಒಂದರಷ್ಟು ಜನ ಭಾರತೀಯರೇ ಆಗಿದ್ದಾರೆ. ಅಪೌಷ್ಟಿಕತೆಯಿಂದ ನರಳುತ್ತಿರುವ ವಿಶ್ವದ ಒಟ್ಟು ಮಕ್ಕಳಲ್ಲಿ ಶೇ.40ರಷ್ಟು ಭಾರತೀಯ ಕಂದಮ್ಮಗಳಾಗಿದ್ದಾರೆ. ಭಾರತದಲ್ಲಿ ಎರಡು ಕೋಟಿ ಕುರುಡರಿದ್ದಾರೆ. ಚಿತ್ರದ ಮುಖ್ಯ ಪಾತ್ರಧಾರಿಯಾದ ಮುಂಬಯಿ ನಗರವೊಂದರಲ್ಲೇ ಇಪ್ಪತ್ತಾರು ಲಕ್ಷ ಜನ ಬೀದಿಗಳಲ್ಲೋ, ಮನುಷ್ಯ ವಾಸಕ್ಕೆ ಯೋಗ್ಯವಿರದ, ಕೊಚ್ಚೆಗುಂಡಿಯಂತಿರುವ ಸ್ಲಮ್ಮುಗಳಲ್ಲೋ ವಾಸಿಸುತ್ತಿದ್ದಾರೆ. ಮುಂಬಯಿಯೊಂದರಲ್ಲೇ ನಾಲ್ಕು ಲಕ್ಷ ಮಹಿಳೆಯರು ತಮ್ಮ ಮೈಮಾರಿ ಬದುಕುವ ಹೀನ ಪರಿಸ್ಥಿತಿಯಲ್ಲಿದ್ದಾರೆ. ಇವ್ಯಾವೂ ಅಪಸ್ವರ ಎತ್ತುತ್ತಿರುವವರಿಗೆ ಕಾಣುವುದಿಲ್ಲ. ಕೇವಲ ಮೇಲ್ಮಧ್ಯಮ ವರ್ಗದ ಅಥವಾ ಶ್ರೀಮಂತರ ಕತೆಗಳನ್ನೇ ಹೊಂದಿರುವ ಬಾಲಿವುಡ್ ಚಲನಚಿತ್ರಗಳಲ್ಲೂ ಈ ದರಿದ್ರ ಜನಕ್ಕೆ ಜಾಗವಿಲ್ಲ.

ಈ ಹಿಂದೆ ದಕ್ಷಿಣ ಆಫ್ರಿಕಾದ ಡರ್ಬನ್‌ನಲ್ಲಿ ಜನಾಂಗೀಯವಾದ ಕುರಿತ ಸಮಾವೇಶದಲ್ಲಿ ಭಾರತದಲ್ಲಿನ ಕ್ರೂರ ಅಸ್ಪೃಶ್ಯತೆ ಪದ್ಧತಿಯನ್ನು ಜಗತ್ತಿಗೆ ದಿಗ್ದರ್ಶನ ಮಾಡಿಸುವುದಕ್ಕೆ ಕೆಲವು ದಲಿತ ಸಂಘಟನೆಗಳು ಪ್ರಯತ್ನಿಸಿದಾಗಲೂ ದೇಶದ ಪ್ರಧಾನಮಂತ್ರಿಯಾದಿಯಾಗಿ "ಜಾತಿಯತೆಯನ್ನು, ಅಸ್ಪೃಶ್ಯತೆಯನ್ನು ಜನಾಂಗೀಯವಾದಕ್ಕೆ (**Racism**) ಹೋಲಿಸುವುದು ಸರಿಯಲ್ಲ"ವೆಂದು ಅಪಸ್ವರವೆತ್ತಿದ್ದರು.


ಬಡತನ, ದಾರಿದ್ರ್ಯ, ಅಸ್ಪೃಶ್ಯತೆ, ಭ್ರಷ್ಟಾಚಾರ, ಶೋಷಣೆಗಳಿಂದ ನಿತ್ಯನರಕವಾಗಿರುವ ನೈಜ ಭಾರತವನ್ನು, ಅವಕಾಶವಂಚಿತ ಜನಸಮುದಾಯಗಳ ನೈಜ ಚಿತ್ರಣವನ್ನು ಜಗತ್ತಿನ ಮುಂದಿಟ್ಟರೆ ಆಗರ್ಭ ಶ್ರೀಮಂತರಿಗೆ ತಮ್ಮ ಮಾನ ಮರ್ಯಾದೆ ಹರಾಜಾಗುತ್ತದೆಂಬ ಭಾವನೆ ಮೂಡುತ್ತದೆ. ಹಾಗಿದ್ದ ಮೇಲೆ, ಈ ಅನಿಷ್ಟಗಳನ್ನು ತೊಡೆದುಹಾಕುವುದಕ್ಕಾದರೂ ಅಂಥವರು ಮುಂದೆ ಬರುತ್ತಾರಾ ಎಂದರೆ ಅದೂ ಇಲ್ಲ. ಅನಿಷ್ಟಗಳು ಬೇಕಾದರೆ ಇರಲಿ, ಆದರೆ ಅದು ಹೊರಜಗತ್ತಿಗೆ ಗೊತ್ತಾಗುವುದು ಬೇಡ ಎಂಬ ಬೇಜವಾಬ್ದಾರಿ ನಿಲುವದು.

ಕೊಡೆಕಲ್ ದುರದುಂಡೇಶ್ವರ ಮಠದಲ್ಲೊಬ್ಬ ಕಾಮುಕ ಸ್ವಾಮಿ!



ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಕೊಡೇಕಲ್ ಗ್ರಾಮವು ಮೇಲುನೋಟಕ್ಕೆ ಏನೂ ಆಗಿಲ್ಲದಂತೆ ಕಂಡರೂ ಒಳಗೊಳಗೆ ಅದು ಬೂದಿ ಮುಚ್ಚಿದ ಕೆಂಡವಾಗಿದೆ. ಇಲ್ಲಿನ ದುರದುಂಡೇಶ್ವರ ಮಠದ 36ರ ಹರೆಯದ ಶಿವಕುಮಾರ ದೇವರು ಅಕಸ್ಮಾತ್ ಎದುರಿಗೆ ಕಂಡರೆಂದರೆ ಇಲ್ಲಿನ ಜನ ಆತನನ್ನು ಬೀದಿ ಬೀದಿಗಳಲ್ಲಿ ಅಟ್ಟಾಡಿಸಿ ಹೊಡೆಯಲು ಸಜ್ಜಾಗಿದ್ದಾರೆ. ಇದಕ್ಕೆ ಕಾರಣ ಅತ್ಯಂತ ಸಣ್ಣ ಅಂದರೆ ಕೇವಲ 7-8 ವರ್ಷಗಳ ಮಕ್ಕಳ ಮೇಲೆ ಶಿವಕುಮಾರ ದೇವರು ವಿಕೃತ ಕಾಮ ಲೀಲೆಗಳನ್ನು ನಡೆಸಿರುವುದು.





ನಿಂಗಯ್ಯಮಠ ಅವರ ಕುಲಪುತ್ರನಾದ ಈ ಶಿವಕುಮಾರ ದೇವರು ಸ್ವತಃ ಇದೇ ಊರಿನವನು. ಕೆಲವು ವರ್ಷಗಳವರೆಗೆ ಸಜ್ಜಲಗುಡ್ಡದ ಶಾಲೆಯಲ್ಲಿ ಆನಂತರ ಕೊಪ್ಪಳದ ಗವಿಸಿದ್ದೇಶ್ವರ ಮಠದಲ್ಲಿ ಓದು ಮುಗಿಸಿದವ. ಸಂಸ್ಕಾರವೇನೋ ಚೆನ್ನಾಗಿಯೆ ಇತ್ತು. ಆದ್ದರಿಂದ ಈತ ಕೊಡೆಕಲ್ಲಿನ ತನ್ನ ಸ್ವಗ್ರಾಮಕ್ಕೆ ಬರುತ್ತಲೆ ಹಾಳುಬಿದ್ದ ತನ್ನ ಮಠವನ್ನು ಒಂದಷ್ಟು ಥಾಕು-ಠೀಕುಗೊಳಿಸಿದ. ಬಸವಾದಿ ಶರಣರ ವಿಚಾರಗಳ ಪ್ರಭಾವವೋ! ಅಥವಾ ಇಂಥ ಗಿಮಿಕ್ ಮೂಲಕ ತನ್ನ ಇಮೇಜನ್ನು ಬೆಳೆಸಿಕೊಳ್ಳುವ ಹುನ್ನಾರವೋ? ಎಂಬಂತೆ ಹಲವಾರು ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳನ್ನು ಜನಗಳ ಸಹಾಯದಿಂದಲೇ ನಡೆಸಿ ಎಲ್ಲರಿಂದಲೂ ಸೈ ಅನ್ನಿಸಿಕೊಂಡ.

ಶರಣ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಗೋ.ರು. ಚನ್ನಬಸಪ್ಪ ಅವರನ್ನು ಕರೆಸಿ ಕೊಡೆಕಲ್ ಗ್ರಾಮವೇ ಬೆಕ್ಕಸಬೆರಗಾಗುವಂತೆ 'ಶರಣ ಸಾಹಿತ್ಯ ಸಮ್ಮೇಳನ'ವನ್ನು ಅದ್ದೂರಿಯಾಗಿ ನಡೆಸಿದ. ಈ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ರಂಜಾನ್ ದರ್ಗಾ ಎಂಬ ಬಸವತತ್ವ ಪ್ರೇಮಿಗೆ ವಹಿಸುವ ಮೂಲಕ ತನ್ನ ಜಾತ್ಯತೀತ ಹಾಗೂ ಶರಣ ತತ್ವ ಪ್ರೇಮವನ್ನು ಮೆರೆದ. ಲಿಂಗಣ್ಣ ಸತ್ಯಂಪೇಟೆ ಅವರಂಥ ನಿಷ್ಠುರ ಬಸವಪ್ರೇಮಿಯನ್ನು ಸತ್ಕರಿಸುವ ಮೂಲಕ ತಾನೊಬ್ಬ ವಿಶಿಷ್ಟ ಸ್ವಾಮಿ ಅನಿಸಿಕೊಂಡ. ಸುಭಾಷ ಪಾಳೇಕರ್ ಅವರ 'ನೈಸರ್ಗಿಕ ಕೃಷಿ'ಯ ಬಗ್ಗೆ ಪ್ರಾತ್ಯಕ್ಷತೆಯನ್ನು ಹಮ್ಮಿಕೊಂಡು ತಾನು 'ರೈತ ಪ್ರೇಮಿ'ಯೂ ಆಗಿ ಕಂಗೊಳಿಸಿದ. ಈ ಮಧ್ಯೆ ಶಿವಕುಮಾರ ದೇವರು ಸಣ್ಣ ಮಕ್ಕಳಿಗಾಗಿಯೆ ಶಾಲೆಯನ್ನು ತೆರೆದ. ಇದೆಲ್ಲ ಕೇವಲ ಮೂರ್ನಾಲ್ಕು ವರ್ಷಗಳಲ್ಲಿ.

ಇದೆಲ್ಲಕ್ಕೆ ತಕ್ಕಂತೆ ಸುರಪುರ ಮತಕ್ಷೇತ್ರದ ಶಾಸಕ ರಾಜುಗೌಡ ತನ್ನ ಸ್ವಗ್ರಾಮದ ಸ್ವಾಮಿ ಮಾಡುತ್ತಿರುವ ಸಾಂಸ್ಕೃತಿಕ, ಆಧ್ಯಾತ್ಮಿಕ ಚಟುವಟಿಕೆಗಳಿಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ. ಸುರಪುರ ಮತಕ್ಷೇತ್ರದ ಶಾಸಕನೆ ಸ್ವತಃ ತನ್ನ ಬೆಂಗಾವಲಿಗೆ ನಿಂತು ತಾನು ಕಣ್ಣಲ್ಲಿ ತೋರಿಸಿದ್ದನ್ನು ಓಡಾಡಿ ಮಾಡುತ್ತಿರುವಾಗ ಬೇರೆ ಇನ್ನೊಬ್ಬ ಭಕ್ತ ಈ ಶಿವಕುಮಾರ ದೇವರ ಕಣ್ಣಿಗೆ ಕಾಣಿಸದಾದ.

ಯಾವಾಗ ಈ ಸ್ವಾಮಿಯ ಕಣ್ಣಿಗೆ ಅಹಂಕಾರದ ಪೊರೆ ಬಂದು ಕುಳಿತುಬಿಟ್ಟಿತೋ ಆವಾಗ ಈತನ ತಾಮಸ ಗುಣಗಳು ಒಂದೊಂದಾಗಿ ಪ್ರಕಟವಾಗತೊಡಗಿದವು. ಊರಿನ ಭಕ್ತರು ಈ ಸ್ವಾಮಿಯನ್ನು ಹುಡುಕಿಕೊಂಡು ಮಠಕ್ಕೆ ಹೋದರೂ ಅವರನ್ನು ಮಠದೊಳಗೆ ಕರೆದುಕೊಂಡು ಹೋಗಿ ಮಾತನಾಡಿಸದೇ ಮಠದ ಪ್ರಾಂಗಣದಲ್ಲಿಯೇ ನಿಲ್ಲಿಸಿ ಮಾತಾಡಿಕಳಿಸುವುದನ್ನು ಪ್ರಾರಂಭಿಸಿದ.

ಇದೇ ವೇಳೆಗೆ ತಾನು ಮಠದೊಳಗೆ ಆರಂಭಿಸಿದ್ದ ಶಾಲೆಯಲ್ಲಿ ಮಕ್ಕಳಿಗೆ ಪಾಠ ಹೇಳಲು ಕಾರವಾರ ಮೂಲದ ಇಬ್ಬರು ಶಿಕ್ಷಕಿಯರನ್ನು ಕರೆಯಿಸಿಕೊಂಡ. ಜೊತೆಗೆ ಸರಕಾರದ ಬಿಸಿಯೂಟದ ಯೋಜನೆಯನ್ನು ಇತರ 48 ಶಾಲೆಗಳಿಗೂ ವಿಸ್ತರಿಸುವ ಕಾರ್ಯಕ್ಕೂ ಮುಂದಾದ. ಹಿಂದೊಮ್ಮೆ ಯಾರೂ ಇಲ್ಲದೆ ಬಿಕ್ಕೋ ಎನ್ನುತ್ತಿದ್ದ ಮಠದ ತುಂಬೆಲ್ಲ ಅಕ್ಕಿ ಹಸನು ಮಾಡುವ ಮಹಿಳೆಯರ ಬಳೆಗಳ ಸದ್ದು ಶಾಲೆಯಲ್ಲಿ ಪಾಠ ಮಾಡುವ ಮೇಡಂಗಳ ಮುಗುಳ್ನಗೆಗಳು ಕಾಣಲಾರಂಭಿಸಿದರು.

ಮಠದ ಪ್ರಾಂಗಣದಲ್ಲಿ ಯಾವಾಗ ಬಳೆಗಳ ಸದ್ದು ಜೋರಾಗತೊಡಗಿದವೋ ಈತನ ಒಳಮನಸ್ಸಿನ ಧಮನಿ ಧಮನಿಗಳೂ ಅದರ ರಿಂಗುಣತವನ್ನು ಕಂಡುಕೊಂಡವು. ಆದರೆ ತನ್ನ ಈ ಕಳವಿನ ಹಾದರ ಯಾರಿಗೂ ಗೊತ್ತಾಗಬಾರದೆಂಬ ಕಾರಣಕ್ಕೆ ಅದುವರೆಗೆ ಮಠದ ಪಟ್ಟಾ ಶಿಷ್ಯರಾಗಿದ್ದ ಭಕ್ತರನ್ನು ಕಡೆಗಣಿಸಿದ. ತನ್ನ ಶಾಲೆಗೆ ಬರುವ 4-6 ವರ್ಷಗಳ ಎಳೆಯ ಬಾಲೆಯರನ್ನು ತನ್ನ ವಿಕೃತ ಮನಸ್ಥಿತಿಗೆ ಬಳಸಿಕೊಂಡ. ಇಂತಹ ವರ್ತನೆ ಮೊದಲು ಒಂದಿಬ್ಬರೊಂದಿಗೆ ಪ್ರಾರಂಭವಾಗಿ ಕ್ರಮೇಣ ಎಲ್ಲರೊಂದಿಗೂ ಶುರುವಾಯಿತು.

ಜನವರಿ ತಿಂಗಳ 14ರ ಸಂಕ್ರಮಣದಂದು ಇದು ಸ್ಫೋಟಗೊಂಡಿತು. ಇಡೀ ಗ್ರಾಮ ಮಠದ ಮೇಲೆ ದಾಳಿಯಿಟ್ಟಿತು. ಬಿಸಿಯೂಟಕ್ಕೆಂದು ಮಠದಲ್ಲಿ ಇಟ್ಟಿದ್ದ ಸುಮಾರು 98 ಕ್ವಿಂಟಾಲ್ ಅಕ್ಕಿ ಚೆಲ್ಲಾಪಿಲ್ಲಿಯಾಯಿತು. ಬಿಸಿಯೂಟಕ್ಕಾಗಿ ಇರುವ ಪಾತ್ರೆ ಪಗಡೆಗಳೆಲ್ಲ ನುಚ್ಚು ನೂರಾದವು. ಇನ್ನೇನು ಇಡೀ ಮಠಕ್ಕೆ ಬೆಂಕಿ ಸ್ಪರ್ಶ ಆಗಬೇಕು...

ಆಗ ಸ್ಥಳಕ್ಕೆ ಧಾವಿಸಿದ ಶಾಸಕ ರಾಜುಗೌಡ ಎಲ್ಲರನ್ನೂ – ಎಲ್ಲವನ್ನೂ ಹತೋಟಿಗೆ ತಂದ. ಆದರೆ ಜನಗಳ ಆಕ್ರೋಶ ಮುಗಿಲೆತ್ತರಕ್ಕೆ ... ಆ ಭರಾಟೆಯಲ್ಲಿಯೆ ... "ನಮ್ಮ ಮಕ್ಕಳೊಂದಿಗೆ ನಡ... ಕೃತ್ಯ ನಿಮ್ಮ ಮಗಳೊ... ಆಗಿದ್ದರೆ? ನೀವು ಹೇಗೆ ಸ... ತ್ತಿದ್ದೀರಿ?" ಎಂಬ ಪ್ರಶ್ನೆಗೆ ... ನಿರುತ್ತರನಾದ. ಅವರ ಸಹಜ... ಆಕ್ರೋಶಕ್ಕೆ ಶಾಸಕನ ಕಣ್ಣೂ ನಿ... ದವು.

"ಕುರುಡಿಯು ಹಾ... ಊರೆಲ್ಲ ನಿದ್ದೆಗೇಡು" ಎ... ಸ್ವಾಮಿಯ ಅಡ್ನಾಡಿ ದ... ಕೊಡೆಕಲ್ಲ ಬಸವಣ್ಣನಂಥ ... ಜ್ಞಾನಿಯ ತಲೆ ಬಗ್ಗಿಸಿಕೊಂಡು ... ದ್ದಾನೆ. ಇದೇ ಗ್ರಾಮದ ಮ... ಮಠದ ಸ್ವಾಮಿಗಳು ತಲೆತಗ್ಗಿಸಿ... ತಾಯಿಯ ಮೊಲೆ ಹಾಲೇ ನಂಜಾಗಿ ಕೊಲ್ಲುವಡೆ ಇನ... ದೂರುವೆನಯ್ಯಾ ಎಂದು ಭಕ್ತರು ಕಂಗಾಲಾಗಿ... ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆಗೆ ಹೋಗಿರುವ ಶಿವಕು... ದೇವರನ್ನು ಆದರದಿಂದ ಸ್ವಾಗತಿಸಲು ಕೆಲವರು ಪೊ... ಹಿಡಿದುಕೊಂಡು ಸಜ್ಜಾಗಿದ್ದಾರೆ!

■ ವಿಶ್ವಾರಾಧ್ಯ ಸತ್ಯಂಪೇ...

ಅದ್ಯಾವ ಪುಣ್ಯಾತ್ಮ ಹೇಳಿದನೋ! ಕೆಲಸಕ್ಕೆ ಬಾರದ ಅದಾವ ಖೊಟ್ಟಿ ಧರ್ಮಗ್ರಂಥ ಹೇಳಿತೋ ... ಗೊತ್ತಿಲ್ಲ, ಸ್ವಾಮಿ ಆಗಬೇಕೆಂದವರು ಹೆಣ್ಣನ್ನು ತ್ಯಜಿಸಲೇಬೇಕು ಎಂಬ ಅಲಿಖಿತ ನಿಯಮವೆ ಜಾರಿ... ಬಂದು ಬಿಟ್ಟಿದೆ. ಇದರಿಂದ ಸಮಾಜದಲ್ಲಿ ಇದುವರೆಗೆ ನಡೆದ ಬಾರಾಬಾನಗಡಿಗಳಿಗೆ ಲೆಕ್ಕವೆ ಇ...

ಇತಿಹಾಸ-ಪುರಾಣದ ಪುಟಗಳಿಂದ ಹೆಕ್ಕಿತೆಗೆದರೂ ವಿಶ್ವಾಮಿತ್ರನಂತಹ ಉಗ್ರ ತಪಸ್ವಿಯೆ ಹೆ... ಕೈಬಳೆಯ ಕಿಂಕಿಣಿ ನಾದಕ್ಕೆ ಸೋತು ಹೋಗಿದ್ದಾನೆ. ಹಾಗಾಗಿಯೆ ಬಹುತೇಕರು 'ಹೆಣ್ಣು ಮಾಯೆ... ಅಂದರು. ಆದರೆ ಹನ್ನೆರಡನೆಯ ಶತಮಾನದ ಶರಣರು ಮಾತ್ರ 'ಮನದ ಮುಂದಣ ಆಸೆ... ಮಾಯೆ' ಎಂದರು. ಹೆಣ್ಣಿಗೆ ಗಂಡು – ಗಂಡಿಗೆ ಹೆಣ್ಣು ಆಸೆಯಾಗಿ ಕಾಡುವುದು ಸಹಜ ಎಂ... ಒಪ್ಪಿಕೊಂಡರು.

ಊಟ, ನಿದ್ದೆ, ನೀರಡಿಕೆ ದೇಹಕ್ಕೆ ಎಷ್ಟು ಅವಶ್ಯಕವೊ ಹಾಗೆಯೆ ಮೈಥುನವೂ ಕೂಡ ಸಹ... ಕ್ರಿಯೆ ಎಂದೆ ಅವರೆಲ್ಲ ಪ್ರತಿಪಾದಿಸಿದರು. "ಇಂದ್ರಿಯ ನಿಗ್ರಹವ ಮಾಡಿದಡೆ ಮುಂದೆ ಬಂ... ಕಾಡುವವು ಪಂಚೇಂದ್ರಿಯಗಳು!" ಎಂಬ ಬಸವಣ್ಣನವರ ವಚನದ ಸಾಲು ಇದನ್ನು ಪುಷ್ಟೀಕರಿಸುತ್ತ... ಇನ್ನೊಬ್ಬ ವಚನಕಾರ್ತಿ "ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೆಣ್ಣಿಗೂ ಲಿಂಗಕ್ಕೂ ವೈರವ... ಗಂಡು ಬಿಟ್ಟು ಲಿಂಗವನೊಲಿಸಬೇಕೆಂಬರು. ಗಂಡಿಗೂ ಲಿಂಗಕ್ಕೂ ವೈರವೆ?" ಎಂದು ಪ್ರಶ್ನಿಸುತ್ತಾ...

ಸ್ವತಃ ಬಸವಣ್ಣನವರೆ "ಹೆಣ್ಣಿನೊಳಗೆ ಮನವಾದರೆ ಲಗ್ನವಾಗಿ ಕೂಡುವುದು" ಎಂದು ಹೇಳುತ್ತಾ... ಈ ಮಾತಿಗೆ ಅಪವಾದವೆಂಬಂತೆ ಅಲ್ಲಮಪ್ರಭು, ಚೆನ್ನಬಸವಣ್ಣ, ಅಕ್ಕಮಹಾದೇವಿ, ಸೊನ್ನಲಿ... ಸಿದ್ಧರಾಮ ಮುಂತಾದವರು ಇದ್ದರಾದರೂ ಶರಣ ಸಮೂಹಕ ಬಹುತೇಕರು ಅನುರೂಪದ, ಆದರ್ಶ... ದಾಂಪತ್ಯ ಜೀವನ ನಡೆಸಿದವರೇ ಆಗಿದ್ದಾರೆ.

ಹೀಗೆಲ್ಲ ಇತಿಹಾಸದ ಸ್ಪಷ್ಟ ಚಿತ್ರ ನಮ್ಮ ಕಣ್ಣ ಮುಂದೆ ಇರುವಾಗಲೂ ನಾವು ಇಂದಿಗೂ ಹು... ಬ್ರಹ್ಮಚರ್ಯವನ್ನು ಪೋಷಿಸುವುದು. ಅದಕ್ಕೆ ಮರ್ಯಾದೆ ಕೊಡುವುದು, ಆಮೇಲೆ ಗುಲ್ಲೆಬ್ಬಿಸುವುದು ... ಎಷ್ಟು ಸರಿ?

ಹುಬ್ಬಳ್ಳಿ: ರಾಧಕ್ಕ-ಜಾಧವ್ ಜೋಡಿಯ ರಿಯಲ್‌ಎಸ್ಟೇಟ್ ದಂಧೆ

ಹುಬ್ಬಳ್ಳಿ-ಧಾರವಾಡಗಳ ಅರ್ಧದಷ್ಟು ಜನ ವಾಸಿಸುತ್ತಿರುವುದು ಮನುಷ್ಯರು ವಾಸಮಾಡಲು ಲಾಯಕ್ಕಾಗಿರದ ಸ್ಲಮ್ಮುಗಳಲ್ಲೇ. ಈ ಅವಳಿ ನಗರಗಳಲ್ಲಿ ಏನಿಲ್ಲವೆಂದರೂ 125ಕ್ಕೂ ಹೆಚ್ಚು ಸ್ಲಮ್‌ಗಳಿವೆ. ಕಾಂಗ್ರೆಸ್, ಬಿಜೆಪಿಯಾದಿಯಾಗಿ ಎಲ್ಲ ಪಕ್ಷಗಳಿಗೂ ಈ ಸ್ಲಮ್ಮುಗಳಲ್ಲಿ ವಾಸಿಸುವ ಜನರ ಓಟುಗಳು ಬೇಕು. ಆದರೆ ಅವರ ಅಭಿವೃದ್ಧಿ ಮಾತ್ರ ಬೇಡ. ಇಲ್ಲಿನ ಜನ ಮಹಾನಗರಪಾಲಿಕೆಗೆ ತಪ್ಪದೇ ತೆರಿಗೆ ಕಟ್ಟಬೇಕು. ಆದರೆ ಕನಿಷ್ಠ ಮನುಷ್ಯ ವಾಸಿಸಲು ಯೋಗ್ಯವಾದ ಪರಿಸರವನ್ನು ಅವರಿಗೆ ಒದಗಿಸುತ್ತಿಲ್ಲ, ಅದರಲ್ಲೂ ಹಳೇ ಹುಬ್ಬಳ್ಳಿಯಲ್ಲಿರುವ ದಲಿತರು, ಮುಸ್ಲಿಮರೇ ಹೆಚ್ಚಾಗಿ ವಾಸಿಸುವ ಶಿವಸೋಮೇಶ್ವರ ನಗರ, ಈಶ್ವರ ನಗರ, ಟೀಪೂ ನಗರ, ಬಾಣತಿ ಕಟ್ಟೆ, ಶರಾವತಿ ನಗರ, ಹೂಗಾರ ಪ್ಲಾಟ್, ಜವಳಿ ಪ್ಲಾಟ್, ನೂರಾನಿ ಪ್ಲಾಟ್, ರಣದಮ್ಮ ಕಾಲೋನಿ, ಸದಾಶಿವನಗರ, ಅಲ್ತಾಫ್ ನಗರಗಳಂಥ ಸ್ಲಮ್ಮುಗಳ ಪರಿಸ್ಥಿತಿಯನ್ನಂತೂ ಕೇಳಲೇ ಬೇಡಿ. ಈ ಸ್ಲಮ್ಮುಗಳನ್ನು ಈ ಪಾಟ ಉದ್ಧಾರ ಮಾಡಿದ್ದಕ್ಕೋ ಏನೋ ಮಹಾನಗರ ಪಾಲಿಕೆಯ ಅಧಿಕಾರಿಗಳು ಈ ಜನರಿಂದ ತಪ್ಪದೇ ಟ್ಯಾಕ್ಸ್ ಕಟ್ಟಿಸಿಕೊಳ್ಳುತ್ತಾರೆ.


ರಾಧಕ್ಕ


ಅಶೋಕ್ ಜಾಧವ್

ಹಳೇ ಹುಬ್ಬಳ್ಳಿಯಲ್ಲಿರುವ ಈ ಸ್ಲಮ್ ಜನರ ಮಕ್ಕಳಿಗಾಗಿಯೇ ಸುಮಾರು 20 ಶಾಲೆಗಳಿದ್ದು ಏನಿಲ್ಲವೆಂದರೂ ಹತ್ತು ಸಾವಿರಕ್ಕೂ ಅಧಿಕ ಬಡ ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ. ದುರಂತವೆಂದರೆ ಈ ಯಾವ ಶಾಲೆಗೂ ಒಂದು ಆಟದ ಮೈದಾನ ಅಂತ ಇಲ್ಲ, ಕೆಲವು ರಾಜಕಾರಣಿಗಳು ತೋರಿಕೆಗಾದರೂ ಸ್ಲಮ್ಮುಗಳನ್ನು ಅಭಿವೃದ್ಧಿ ಮಾಡುತ್ತೇವೆ ಎನ್ನುತ್ತಾರೆ. ಆದರೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ರಾಧಕ್ಕ ತಾನೂ ಕೂಡ ಇಂತಹುದ್ದೇ ಒಂದು ಸ್ಲಮ್ಮಿನಿಂದ ಬಂದವರು ಎಂಬುದನ್ನು ಮರೆತು ನಾಚಿಕೆ ಬಿಟ್ಟು "ಸ್ಲಮ್ ಮಕ್ಕಳಿಗೇಕೆ ಆಟದ ಮೈದಾನ?" ಎಂದು ಪ್ರಶ್ನಿಸುತ್ತಾರೆ. ಇದು ಸ್ಲಮ್ ಮಕ್ಕಳ ಬಗ್ಗೆ ರಾಧಕ್ಕನಿಗಿರುವ ಅಸಡ್ಡೆ ಅಲ್ಲ, ಬದಲಿಗೆ, ಹಳೇ ಹುಬ್ಬಳ್ಳಿಯಲ್ಲಿರುವ ಅತ್ಯಮೂಲ್ಯ ಜಾಗವನ್ನು ಆಟದ ಮೈದಾನ ಮಾಡುವ ಬದಲು ರಿಯಲ್ ಎಸ್ಟೇಟ್ ಕುಳಗಳಿಗೆ ಅರ್ಪಿಸಿದರೆ ಕೈತುಂಬ ಕಮಾಯಿ ಸಿಗುತ್ತದೆಂಬ ಜಾಣತನದ ಲೆಕ್ಕಾಚಾರ.

ಒಂದು ಉದಾಹರಣೆಯನ್ನೇ ನೋಡಿ. ಹಳೇ ಹುಬ್ಬಳ್ಳಿಯ ಅಯೋಧ್ಯ ಗ್ರಾಮ ಸರ್ವೇ ನಂಬರ್ 35ರಲ್ಲಿ ಇಪ್ಪತ್ತು ಎಕರೆಯಷ್ಟು ಜಾಗವಿದೆ. ಈಗಾಗಲೇ ಇದರ ಐದಾರು ಎಕರೆಯಷ್ಟು ಜಮೀನಿನಲ್ಲಿ ಅನಧಿಕೃತ ಕಟ್ಟಡಗಳು ತಲೆಯೆತ್ತಲು ರಾಧಕ್ಕ ಮತ್ತು ಸಭಾನಾಯಕ ಅಶೋಕ ಜಾಧವ್ ಅವರೇ ಅವಕಾಶ ಮಾಡಿಕೊಟ್ಟಾಗಿದೆ. ಈಗ ಉಳಿದ ಜಾಗದಲ್ಲಾದರೂ ಸ್ಲಮ್ ಶಾಲಾ ಮಕ್ಕಳಿಗೊಂದು ಆಟದ ಮೈದಾನವಿರಲಿ ಎಂದರೆ ಅದಕ್ಕೂ ಅಡ್ಡಗಾಲು ಹಾಕಲು ಪ್ರಾರಂಭಿಸಿದ್ದಾರೆ.

ಕ್ರೀಡೆಯಲ್ಲಿ ಆಸಕ್ತಿಯಿರುವ ಅಲ್ತಾಫ್ ನವಾಜ ಕಿತ್ತೂರ್ ಎಂಬುವವರು ಒಂದು ಸ್ಪೋರ್ಟ್ಸ್ ಕ್ಲಬ್ ಸ್ಥಾಪಿಸಿಕೊಂಡಿದ್ದು ಇದೇ ಜಾಗದಲ್ಲಿ ಶಾಲಾ ಮಕ್ಕಳಿಗೊಂದು ಆಟದ ಮೈದಾನ ನಿರ್ಮಿಸುವಂತೆ, ಜನರ ನೀರಿನ ಬವಣೆ ನೀಗಿಸಲು ನೀರಿನ ಟ್ಯಾಂಕ್ ಕಟ್ಟಿಸುವಂತೆ ಮಹಾನಗರ ಪಾಲಿಕೆಯನ್ನು ಒತ್ತಾಯಿಸಿದ್ದರು. ಅದಕ್ಕೆ, ಪಾಲಿಕೆಯ ಕಮೀಷನರ್ ಡಾ.ಅಜಯ್ ನಾಗಭೂಷಣ್ ಕೂಡ ಒಪ್ಪಿಕೊಂಡಿದ್ದರು. ಈಗ ಉಳಿದಿರುವ ಹದಿಮೂರು ಎಕರೆಯಲ್ಲಿ ಎರಡು ಎಕರೆಯನ್ನು ಜಲ ಸಂಗ್ರಹಣೆಗೂ; ಉಳಿದದ್ದನ್ನು ಮೈದಾನಕ್ಕೆಂದೂ ಬಳಸುವಂತೆ ನಿರ್ಣಯ ಕೈಗೊಳ್ಳಬೇಕೆಂದು ಆಯುಕ್ತರು ಟಿಪ್ಪಣಿ ಕೂಡ ನೀಡಿದ್ದರು (ಟಿಪ್ಪಣಿ ಸಂಖ್ಯೆ: ಹುಧಾಮನಪಾ. 50-01-36-08-09). ಇದೇನಾದರೂ ಜಾರಿಯಾಗಿದ್ದರೆ ಎಸ್.ಎಂ.ಕೃಷ್ಣ ನಗರ, ಈಶ್ವರ ನಗರ, ಶಿವಸೋಮೇಶ್ವರ ನಗರ, ರಣದಮ್ಮ ಕಾಲೋನಿ, ಹೂಗಾರ ಪ್ಲಾಟ್, ಜನ್ನತ್ ನಗರ, ಅಲ್ತಾಫ್ ಕಾಲೊನಿಗಳನ್ನೂ ಒಳಗೊಂಡಂತೆ ಹಳೇ ಹುಬ್ಬಳ್ಳಿಯ ಜನರ ನೀರಿನ ಬವಣೆಯೂ ತೀರುತ್ತಿತ್ತಲ್ಲದೇ, ಇಲ್ಲಿರುವ ಸುಮಾರು ಹತ್ತು ಸಾವಿರ ಬಡಮಕ್ಕಳಿಗೊಂದು ಆಟದ ಮೈದಾನವಾದರೂ ಸಿಗುತ್ತಿತ್ತು. ಆದರೆ, ರಾಧಕ್ಕ-ಜಾಧವ್ ಜೋಡಿ ಇಂತಹದೊಂದು ಒಳ್ಳೆಯ ಕೆಲಸ ಆಗಲು ಬಿಡಬೇಕಲ್ಲ?


ಅಲ್ತಾಫ್

ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಹಳೇ ಹುಬ್ಬಳ್ಳಿಯ ಹದಿಮೂರು ಎಕರೆ ಜಾಗ ಈ ರೀತಿ ಉಪಯೋಗವಾಗುತ್ತಿದೆ ಎಂದು ಗೊತ್ತಾಗಿದ್ದೇ ತಡ ಸಭಾನಾಯಕ ಅಶೋಕ್ ಜಾಧವ್‌ನನ್ನೂ ಒಳಗೊಂಡಂತೆ ರಿಯಲ್ ಎಸ್ಟೇಟ್ ಖದೀಮರ ಹೊಟ್ಟೆಯಲ್ಲಿ ಕಿಚ್ಚು ಹಚ್ಚಿದಂತಾಗಿತ್ತು.

ಜಾಧವ್ ರಾಧಕ್ಕನ ತಲೆತಿಕ್ಕಿದ. ಅದೂ ಅಲ್ಲದೇ ಈ ಆಟದ ಮೈದಾನ, ನೀರಿನ ಟ್ಯಾಂಕ್ ನಿರ್ಮಿಸುವುದರಿಂದ ತಮ್ಮ ಪಕ್ಷಕ್ಕೇನೂ ಲಾಭವಿಲ್ಲ, ಬದಲಾಗಿ ಅದಕ್ಕಾಗಿ ಓಡಾಡುತ್ತಿರುವ ಜೆಡಿಎಸ್‌ನ ಕಾರ್ಪೋರೇಟರ್ ಅಲ್ತಾಫ್ ಪತ್ತಾರನಿಗೆ ಅದರ ಕ್ರೆಡಿಟ್ ಸಲ್ಲುತ್ತದೆ ಎಂದಲ್ಲಾ ಪುಸಿ ಹೊಡೆದ. ಈಗ ಜಾಧವ್ ಮತ್ತು ರಾಧಕ್ಕ ಸೇರಿಕೊಂಡು ಇಲ್ಲಸಲ್ಲದ ಕ್ಯಾತೆ ತೆಗೆಯಲಾರಂಭಿಸಿದ್ದಾರೆ.

ಕಳೆದ ಡಿಸೆಂಬರ್ 5ರಂದು ನಡೆದ ಪಾಲಿಕೆ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗುತ್ತಿದ್ದಂತೆಯೇ ಮೊದಲು ಕ್ಯಾತೆ ತೆಗೆದವನೇ ಅಶೋಕ ಜಾಧವ್. "ಅಕ್ಕಪಕ್ಕದ ಸ್ಲಮ್ಮುಗ... ಅಧಿಕೃತವೇ ಅದನ್ನು ಮೊದಲು ಹೇಳಿ" ಎಂದು ... ಎತ್ತಿದ. ಅಲ್ಲಿದ್ದ ಅಧಿಕಾರಿಗಳಿಂದ "ಅನಧಿಕೃತ" ಎಂ... ಉತ್ತರ ಬರುತ್ತಿದ್ದಂತೆಯೇ "ಪ್ರತಿಷ್ಠಿತ ಅಧಿಕ... ಬಡಾವಣೆಗಳಿಗೇ ಮೂಲಭೂತ ಸೌಲಭ್ಯಗಳಿಲ್ಲ, ಅನಧಿಕೃತ ಬಡಾವಣೆಗಳಿಗೇಕೆ ಸೌಲಭ್ಯ ಕೊಡಬೇಕು... ಎಂಬ ತರ್ಕ ಮುಂದಿಟ್ಟು ಆಟದ ಮೈದಾನ ಮ... ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಅಡ್ಡಗಾಲಿಟ್ಟ.

ಈಗ ಶಾಲಾ ಸುಧಾರಣಾ ಸಮಿತಿಯ... ನೇತೃತ್ವದಲ್ಲಿ ಈ ಭಾಗದ ಸಾವಿರಾರು ವಿದ್ಯಾರ್ಥಿಗ... ಬೀದಿಗಿಳಿದಿದ್ದಾರೆ. ಈ ಪ್ರತಿಭಟನೆಯನ್ನು ಮುರಿಯ... ಸಲುವಾಗಿ ಅಶೋಕ್ ಜಾಧವ್ ಶ್ರೀರಾಮ ಸ್ಪೋ... ಕ್ಲಬ್ ಎಂಬ ಚಡ್ಡಿ ಸಂಘಟನೆಯನ್ನು ಮುಂದೆಬಿಟ್ಟು 'ಶಾಲಾ... ಮಕ್ಕಳನ್ನು ಪ್ರತಿಭಟನೆ... ಎಳೆತಂದಿದ್ದು ಸರಿಯಲ್ಲ... ಎಂದು ಬೊಬ್ಬೆ ಹೊಡೆಯಲಾರಂಭಿಸಿದ...


ಅಜಯ್

ಸಾರಾಂಶೀಕರಿಸಿ ಹೇ...ವುದಾದರೆ, ಮೇಯ... ರಾಧಕ್ಕ ಮತ್ತು ಸಭಾನಾಯಕ ಅಶೋಕ್ ಜಾಧ... ಅವರ ಕಮೀಷನ್ನಿನಾಸೆಗಾಗಿ ಹಳೇ ಹುಬ್ಬಳ್ಳಿ... ಮಕ್ಕಳಿಗೊಂದು ಆಟದ ಮೈದಾನ, ಜನರಿಗೊಂ... ನೀರಿನ ಟ್ಯಾಂಕ್ ಬರುವುದು ತಪ್ಪುತ್ತಿದೆ. ಜನ ... ತಾಳ್ಮೆಯಿಂದ ನೋಡುತ್ತಿದ್ದಾರೆ. ಇದು ಹಿ... ಮುಂದುವರೆದರೆ ಇಡೀ ಹಳೇ ಹುಬ್ಬಳ್ಳಿಯ ... ನಿವಾಸಿಗಳು ಮಹಾನಗರ ಪಾಲಿಕೆಗೆ ಆಟಕಾ... ಕೊಂಡರೆ ಆಶ್ಚರ್ಯವಿಲ್ಲ.

■ ಹುಬ್ಬಳ್ಳಿಯಾ...

ಕೊಡಗು: ಕೋಮುವಾದಿ ಕಪಿಗಳ ಮುಷ್ಟಿಯಲ್ಲಿ

ಕೊಡಗಿನ ನಿಷ್ಕ್ರಿಯ ಕಾಂಗ್ರೆಸ್ಸಿಗರ ಅವ್ಯವಹಾರಿಕ ...ದಲ್ಲಿ ಇಂದು ಕಮಲ ಸಮೃದ್ಧವಾಗಿ ಅರಳುತ್ತಿದೆ. ...ಧ ಕಾಂಗ್ರೆಸ್ ಎಂಬ ರಾಷ್ಟ್ರೀಯ ರಾಜಕೀಯ ಪಕ್ಷ, ...ಸಿ.ನಾಣಯ್ಯ ಎನ್ನುವ ವಿವಿಧ ಮುಖದ ...ಘಾನ್ವಿತ ನಾಯಕ, ತಾವು ಜಾತ್ಯತೀತರೆನ್ನುತ್ತಿರುವ ...ದೆ ವಾಸ್ತವದಲ್ಲಿ ಅದನ್ನು ಅನುಸರಿಸದ ಜೆಡಿಎಸ್ ...ಲಿ ಪ್ಯಾಕ್, ಪರಿಸರ ರಕ್ಷಣೆ ಮತ್ತು ಬುಡಕಟ್ಟು ...ರ ಏಳಿಗೆಯ ಹೆಸರಲ್ಲಿ ಅಂತರರಾಷ್ಟ್ರೀಯ ...ಪ್ಪದಲ್ಲಿ ಮುಕ್ಕುತ್ತಿರುವ ಪರಿಸರವಾದಿಗಳು, ...ತವರ ಮೂಗಿಗೆ ತುಪ್ಪ ಸವರಿ ತಮ್ಮ ಜೇಬು ... ಮಾಡಿಕೊಳ್ಳುತ್ತಿರುವ ಪ್ರತ್ಯೇಕತಾವಾದಿ ಗಳು... ...ರೆಲ್ಲ ಒಂದಲ್ಲ ಒಂದು ರೀತಿ ಕೋಮುವಾದಿ ...ತೀಯ ಜನತಾ ಪಕ್ಷ ಮತ್ತು ಅದರ ತಂದೆ ...ಮ ಅಣ್ಣ ತಂಗಿ ಸಂಘಟನೆಗಳ ಬೆಳವಣಿಗೆಗೆ ...ರಕವಾಗಿಯೇ ತಮ್ಮನ್ನು ...ತಗಿಸಿಕೊಂಡಿದ್ದಾರೆ. ಈ ಹೊತ್ತು ...ಡಗಿನಲ್ಲಿ ಪ್ರಜಾಪ್ರಭುತ್ವ ದೀರ್ಘ ...ಸಿರಿಟ್ಟು ಅಂಗಾತ ಮಲಗಿದೆ. ...ಮುವಾದಿಗಳ ಹೊಡೆತ ಹಾಗಿದೆ. ... ಜನರ ಮಧ್ಯೆ ವರ್ಚಸ್ಸನ್ನು ...ಸಿಕೊಳ್ಳುತ್ತಿರುವ ಸ್ಥಳೀಯ ಸಂಸ್ಥೆಗಳ ...ಸ್ಯರನ್ನು ಪರಿಶಿಷ್ಟ ಜಾತಿ ಮತ್ತು ...ಶಿಷ್ಟ ಪಂಗಡ (ದೌರ್ಜನ್ಯ ...ರೋಧಿ) ಕಾಯಿದೆಯ ಕೆಳಗೆ ಸುಳ್ಳು ...ರೋಪಕ್ಕೆ ಗುರಿ ಮಾಡಿ ಹಿಂಸಿಸು ...ಮ ದೀನದಲಿತರ ಬಗ್ಗೆ ಯಾವುದೇ ...ಮಾಜಿಕ ಕಾಳಜಿ ಇರದ ಬಿಜೆಪಿಯ ...ಸ ತಂತ್ರಗಾರಿಕೆಯಾಗಿದೆ. ಕೊಡಗಿ... ಇತ್ತೀಚಿನ ದಿನಗಳಲ್ಲಿ ಇಂತಹ ...ರು ಕೇಸುಗಳು ದಾಖಲಾಗಿವೆ. ...ಡ್ಡೆಹೊಸೂರು ಕ್ಷೇತ್ರ ಜಿಲ್ಲಾ ಪಂಚಾ...ತ್ ಸದಸ್ಯರಾದ ವಿ.ಪಿ. ಶಶಿಧರ್ ...ಗ ಬಿಜೆಪಿಯ ಇಂತಹ ವಿಕೃತ ತಂತ್ರಕ್ಕೆ ...ಯಾಗಿದ್ದಾರೆ.

ಕೊಡಗಿನ ಎರಡೂ ವಿಧಾನಸಭಾ ಕ್ಷೇತ್ರಗಳು ...ರುವುದು ಬಿಜೆಪಿಯ ಕೈಯಲ್ಲಿ, ಅದೇ ರೀತಿ ...ಯ ಸಂಸ್ಥೆಗಳಿಂದ ಆಯ್ಕೆಗೊಂಡ ವಿಧಾನ ...ಷತ್ತು ಸದಸ್ಯರು ಸಹ ಇದೇ ಪಕ್ಷಕ್ಕೆ ಸೇರಿದ್ದಾರೆ. ...ಖಿಕೇಳಿ ಬಿಜೆಪಿಯ ರಾಜ್ಯಾಧ್ಯಕ್ಷ 'ಮಂಕಿ ಪಾರ್ಕ್' ...ತಿಯ ಡಿ.ವಿ.ಸದಾನಂದ ಗೌಡರನ್ನು ಲೋಕಸಭೆಗೆ ...ಸಿ ಕಳಿಸಿದ ಕ್ಷೇತ್ರ ಇದು. ಹೀಗಿದ್ದೂ ಜಿಲ್ಲಾ ...ಚಾಯತನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ...ಪಿಗೆ ಇಲ್ಲಿಯತನಕ ಸಾಧ್ಯವಾಗಿಲ್ಲ, ಆದ್ದರಿಂದ ...ಲ್ಲೂ ಈಗ ಆಪರೇಷನ್ ಕಮಲವನ್ನು ಚಾಲ್ತಿಗೆ ...ಲಾಗಿದೆ. ವಿ.ಪಿ.ಶಶಿಧರ್ ವಿರುದ್ಧ ದೌರ್ಜನ್ಯದ ...ರು ಕೊಟ್ಟಿರುವ ಕೂಡಿಗೆ ಕ್ಷೇತ್ರದ ಸದಸ್ಯ ...ಎನ್. ರಾಜಾರಾವ್ ಸದ್ಯ ಆಪರೇಷನ್ ...ಲದ ಸ್ಥಳೀಯ ಫಲಾನುಭವಿ.

ಕಳೆದ ವಿಧಾನಸಭಾ ಚುನಾವಣೆಗೆ ಕೊಂಚ ...ದಲು ಈತ ಬಿಜೆಪಿ ಸೇರಿದ್ದರು. ಆದರೆ ತಮ್ಮ ...ಸ್ಯತ್ವ ರದ್ದಾಗುತ್ತದೆ ಎಂಬ ಭಯದಿಂದಾಗಿ ಆ ...ವನ್ನು ಅಧಿಕೃತವಾಗಿ ಸೇರದಿದ್ದರೂ ಚುನಾವಣೆ ...ಲ್ಲಿ ಬಿಜೆಪಿ ವೇದಿಕೆಯಿಂದ ಕಾಂಗ್ರೆಸ್ ಅಭ್ಯರ್ಥಿ ...ವಿಜಯ ವಿರುದ್ಧ ತನ್ನ ಹೊಲಸಾತಿ ಹೊಲಸು ...ಬಗೆಯನ್ನು ಝಳಪಿಸಿದ್ದರು. ಇಂತಹ ವಿದೂಷಕ ...ಬ್ಬ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಇದ್ದರೆ ...ಪನೆ ಇರುತ್ತದೆಂದು ಇತರ ಪಕ್ಷದ ಜನ ಭಾವಿಸಿದ್ದ ...ನೋ?! ಈತನಲ್ಲದೆ ಇತ್ತೀಚೆಗೆ ಬೇರೆ ಕೆಲವು ...ಸ್ಯರು – ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ...ಕ್ಕೆ ಸೇರಿದ ಸದಸ್ಯರು – ಮಡಿಕೇರಿಯ ಶಾಸಕ ...ಪ್ಪಚ್ಚು ರಂಜನ್ ಮತ್ತಾತನ ಸಹೋದರರ ದುಡ್ಡಿಗೆ, ...ೀಳ್ಯಲಕ್ಕೆ ಶರಣಾಗಿರುವ ವದಂತಿಗಳಿವೆ. ಬಿಜೆಪಿಯ ...ತಹ ಅಡ್ಡದಾರಿಗಳಿಗೆ ತಡೆಯೊಡ್ಡಬಲ್ಲ ವಿ.ಪಿ. ...ಧರ್‌ರನ್ನು ನಿಗ್ರಹಿಸಿದರೆ ಉಳಿದ ವಿರೋಧಿಗಳು ...ದೋ ತಮ್ಮ ಜೊತೆ ಸೇರುತ್ತಾರೆ, ಇಲ್ಲದಿದ್ದರೆ ...ನವಾಗಿರುತ್ತಾರೆ ಎನ್ನುವುದು ಬಿಜೆಪಿಗಳ ಗ್ರಹಿಕೆ. ... ಕಾರಣಕ್ಕಾಗಿ ಸರಿಯಾಗಿಯೇ ವ್ಯೂಹ ರಚಿಸಿ ...ಧರ್ ಅವರನ್ನು ಕೆಡವಿದ್ದಾರೆ.

ಜನವರಿ 7ರಂದು ಕೊಡಗು ಜಿಲ್ಲಾ ...ಚಾಯತ್ ಸಭಾಂಗಣದಲ್ಲಿ 'ಮೊರಾರ್ಜಿ ಶಾಲೆಗಳ ...ರ್ವಹಣಾ ಸಮಿತಿಯ' ಸಭೆಯನ್ನು ...ಯೋಜಿಸಲಾಗಿತ್ತು, ಈ ಸಮಿತಿಯ ವ್ಯಾಪ್ತಿಗೆ ...ರುವ ನಾಲ್ಕು ಶಾಲೆಗಳು ಕೊಡಗಿನಲ್ಲಿವೆ. ...ಯಮಗಳ ಪ್ರಕಾರ ಯಾವ ಸದಸ್ಯರ ಕ್ಷೇತ್ರದೊಳಗೆ ಈ ತರಹದ ಶಾಲೆಗಳಿರುತ್ತವೋ ಅವರು ಸಮಿತಿಯ ...ಸ್ಯರಾಗಿರುತ್ತಾರೆ. ಅವರೊಂದಿಗೆ ಪದನಿಮಿತ್ತ (ಎಕ್ಸ್ ...ಫಿಶಿಯೋ) ಸದಸ್ಯರಾಗಿ ಜಿಲ್ಲಾ ಪಂಚಾಯತ್ ಅಧ್ಯಕ್ಷರು ಇರುತ್ತಾರೆ. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕರು ಸಮಿತಿಯ ಸಭೆಗಳ ಅಧ್ಯಕ್ಷರಾಗಿರು ತ್ತಾರೆ.

ಈ ರೀತಿ ಕೊಡಗಿನ ಸಮಿತಿಗೆ ಗುಡ್ಡೆಹೊಸೂರು ಕ್ಷೇತ್ರದ ವಿ.ಪಿ.ಶಶಿಧರ್, ಕೂಡಿಗೆ ಕ್ಷೇತ್ರದ ಎಸ್.ಎನ್. ರಾಜಾರಾವ್, ಬಟ್ಟಂಗಾಲ ಕ್ಷೇತ್ರದ ಶ್ರೀಮತಿ ಅನಿತಾ ಮತ್ತು ಆಲೂರು-ಸಿದ್ದಾಪುರ ಕ್ಷೇತ್ರದ ಸದಸ್ಯರೂ ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷರೂ ಆದ ರಾಜಮ್ಮ ರುದ್ರಯ್ಯ ಇವರುಗಳು ಸದಸ್ಯರಾಗಿದ್ದು ಜಿಲ್ಲಾ ಪಂಚಾಯತ್ ಅಧ್ಯಕ್ಷ ರಾದ ವಿ.ದೀರ್ಘಕೇಶಿ ಶಿವಣ್ಣ ಪದನಿಮಿತ್ತ ಸದಸ್ಯರಾಗಿದ್ದಾರೆ. ಸಮಿತಿಯ ಅಧೀನದ ಶಾಲೆಗಳ ಅಗತ್ಯತೆಯನ್ನು ಪೂರೈಸಲು ಸರಕಾರದಿಂದ ಈ ಮೊದಲೇ 70 ಲಕ್ಷ ಅನುದಾನ ಬಂದಿತ್ತು. ಆದರೆ ಈ ಹಿಂದೆ ಕರೆದಿದ್ದ ಮೂರು ಸಭೆಗಳು ಬೇರೆಬೇರೆ ಕಾರಣಗಳಿಗಾಗಿ ಮುಂದೂಡಲ್ಪಟ್ಟಿದ್ದವು. ಅಂತೆಯೇ ಹಣ ಖರ್ಚು ಮಾಡದೆ ಹಾಗೇ ಉಳಿದಿತ್ತು, ಮಾರ್ಚ್ ಅಂತ್ಯದೊಳಗೆ ಅದನ್ನು ವೆಚ್ಚ ಮಾಡದಿದ್ದಲ್ಲಿ ಸರಕಾರಕ್ಕೆ ಆ ಅನುದಾನದ ಮೊತ್ತ ಹಿಂದಿರುಗಿ ಹೋಗುವ ಸಾಧ್ಯತೆ ಇದ್ದ ಕಾರಣ 7ನೇ ತಾರೀಕಿನ ಸಭೆಗೆ ಮಹತ್ವವಿತ್ತು.


ಬಿಜೆಪಿಗಳ ವಿರುದ್ಧ ನಡೆದ ಪ್ರತಿಭಟನೆ

ಆ ದಿನದ ಸಭೆ ಆರಂಭಗೊಂಡ ಕೂಡಲೇ ಎಸ್.ಎನ್. ರಾಜಾರಾವ್ ಅಡ್ಡಿಪಡಿಸಲು ಆರಂಭಿಸಿದರು. ಸಮಿತಿಯ ಸಭೆ ಜಿಲ್ಲಾ ಪಂಚಾಯತ್‌ನ ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಬೇಕು, ಮುಖ್ಯ ಕಾರ್ಯ ನಿರ್ವಾಹಕರ ಅಧ್ಯಕ್ಷತೆಯಲ್ಲಿ ಅಲ್ಲ ಎಂಬ ವಾದವನ್ನು ಮುಂದಿಟ್ಟರು. ತಮಾಷೆಯೆಂದರೆ ಈತನೇ ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷ! ತನ್ನ ಅಧ್ಯಕ್ಷತೆಯಾದರೆ ಮುಕ್ಕುವ ಕಾರ್ಯಕ್ರಮ ಸುಗಮ ಎನ್ನುವುದೊಂದೇ ದೇಶ ಪ್ರೇಮಿಗಳ ಪಕ್ಷದ ಈತನ ಮಹದೋದ್ದೇಶ. ಆದರೆ ಸಭೆ ಸರಕಾರದ ನಿಯಮಗಳ ಅಡಿಯಲ್ಲೇ ನಡೆಯುತ್ತದೆ ಎಂದು ಸಭಾಧ್ಯಕ್ಷರಾದ ಮುಖ್ಯ ಕಾರ್ಯ ನಿರ್ವಾಹಕ ರಾಮಚಂದ್ರಪ್ಪ ಮತ್ತು ಉಳಿದ ಸದಸ್ಯರು ಎಷ್ಟು ಹೇಳಿದರೂ ಅದನ್ನು ಗಣನೆಗೆ ತೆಗೆದುಕೊಳ್ಳದೆ ಈತ ಸಭಾತ್ಯಾಗ ಮಾಡಿ ಹೊರಟುಹೋದರು.

ಹೀಗೆ ಹೊರಹೋದ ರಾಜಾರಾವ್ ನೇರವಾಗಿ ಶಾಸಕರ ಕೊಠಡಿಗೆ ಹೋಗಿ ಮುಂದಿನ ಕಾರ್ಯತಂತ್ರದ ಬಗ್ಗೆ ಅಲ್ಲಿದ್ದವರೊಂದಿಗೆ ಚರ್ಚಿಸಿ ಅರ್ಧ ಗಂಟೆಯ ನಂತರ ಸಭೆಗೆ ಹಿಂದಿರುಗಿ ಮತ್ತೆ ಏರಿದ ಸ್ವರದಲ್ಲಿ ಬೊಬ್ಬಿಡುತ್ತಾ ಆಕ್ಷೇಪ ವ್ಯಕ್ತಪಡಿಸತೊಡಗಿದರು. ಆ ಸಮಯದಲ್ಲಿ "ನೀವು ನಿಯಮಾವಳಿಯಂತೆ ನಡವಳಿಕೆಗಳನ್ನು ನಿರ್ವಹಿಸಿ" ಎಂದು ಸಭಾಧ್ಯಕ್ಷರನ್ನು ಕೋರಿದ ಶಶಿಧರ್ "ಸಭೆ ನಡೆಯದೇ ಹೋದರೆ ಅನುದಾನ ನಿರುಪಯುಕ್ತವಾಗುತ್ತದೆ. ದಯವಿಟ್ಟು ಸಹಕರಿಸಿ" ಎಂದು ರಾಜಾರಾವ್ ಅವರನ್ನೂ ವಿನಂತಿಸಿದರು. ಇದಕ್ಕೆ ಉಳಿದ ಸದಸ್ಯರೂ ದನಿಗೂಡಿಸಿದರು. ಆದರೆ ಇದಕ್ಕೆ ಬಗ್ಗದ ರಾಜಾರಾವ್ ತಕ್ಷಣ ಶಶಿಧರ್ ವಿರುದ್ಧ ಹರಿಹಾಯ್ದು ಕೆಳಮಟ್ಟದ ಭಾಷೆಯಿಂದ ನಿಂದಿಸತೊಡಗಿ ದರು. ಇದರಿಂದ ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಉಳಿದ ಸದಸ್ಯರು ಮಧ್ಯ ಪ್ರವೇಶಿಸಿ ಜಗಳವನ್ನು ನಿಲ್ಲಿಸಲು ಪ್ರಯತ್ನಿಸಿದರು. ಆಗ ರಾಜಾರಾವ್ ಜೋರಾಗಿ ಅರಚಾಡುತ್ತಾ ಅಲ್ಲಿಂದ ನಿರ್ಗಮಿಸಿದರು. ನಂತರ ತನ್ನ ಹಿಂಬಾಲಕ ಮುಂಬಾಲಕರೊಂದಿಗೆ ಸೇರಿ ಕಂಪ್ಯೂಟರ್ ಮುದ್ರಿತ ದೂರನ್ನು ಸಿದ್ಧಪಡಿಸಿಕೊಂಡು ಪೊಲೀಸ್ ಸ್ಟೇಶನ್‌ಗೆ ಹೋಗಿ ಶಶಿಧರ್ ತನ್ನ ಮುಖಕ್ಕೆ ಮತ್ತು ಬೆನ್ನಿಗೆ ಹೊಡೆದು ಕನ್ನಡಕ ಒಡೆದು ಹಾಕಿ ಅವಾಚ್ಯ ಶಬ್ದಗಳ ಮೂಲಕ ಜಾತಿನಿಂದನೆ ನಡೆಸಿದರೆಂದು ದೂರು ಕೊಟ್ಟರು. ಮಾತ್ರವಲ್ಲ ಅಲ್ಲಿಂದ ನೇರವಾಗಿ ಆಸ್ಪತ್ರೆಗೆ ದಾಖಲಾದರು. ಈ ಬಗ್ಗೆ ಮರುದಿನ 'ಕನ್ನಡ ಪ್ರಭ' ಪತ್ರಿಕೆಯು ಶಶಿಧರ್‌ರಿಂದ ಹಲ್ಲೆಗೊಳಗಾದ ರಾಜಾರಾವ್ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆಂದು ವರದಿ ಮಾಡಿತು. ಸಂಘ ಪರಿವಾರದ ಹಿನ್ನೆಲೆ ಹೊಂದಿರುವ ಆ ಪತ್ರಿಕೆಯ ವರದಿ ಗಾರ ಜಿಲ್ಲಾ ಪಂಚಾಯತ್ ಸದಸ್ಯರಿಗೆ ನೀತಿಸಂಹಿತೆ ಬೋಧಿಸಿದ್ದೂ ಪ್ರಕಟ ಗೊಂಡಿತು.

ಸಮಿತಿಯ ಸಭೆ ಮುಗಿದ ನಂತರ ಶಶಿಧರ್ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಕೊಠಡಿಯಲ್ಲಿ ಕುಳಿತು ಯಾವುದೋ ವಿಚಾರ ಚರ್ಚಿಸುತ್ತಿದ್ದರು. ಆಗ ಜಿಲ್ಲಾ ಪಂಚಾಯತ್ ಆವರಣದ ಸುತ್ತಮುತ್ತ ಮಡಿಕೇರಿಯ ಇಡೀ ಪೊಲೀಸ್ ದಳವೇ ಜಮಾವಣೆಗೊಂಡಿತು. ಜೆ.ಡಿ.ಪ್ರಕಾಶ್ ಎಂಬ ಡಿವೈಎಸ್‌ಪಿ ನೇರವಾಗಿ ಅಧ್ಯಕ್ಷರ ಕಚೇರಿಗೆ ನುಗ್ಗಿ ಘಟನೆ ಬಗ್ಗೆ ಅಧ್ಯಕ್ಷೆ ಶ್ರೀಮತಿ ವಿ.ದೀರ್ಘಕೇಶಿ ಶಿವಣ್ಣರವರ ಹೇಳಿಕೆಯನ್ನು ದಾಖಲಿಸಿಕೊಂಡರು. ನಂತರ ಮುಖ್ಯ ಕಾರ್ಯ ನಿರ್ವಾಹಕ ರಾಮಚಂದ್ರಪ್ಪನವರ ಹೇಳಿಕೆಯನ್ನೂ ಈ ದೊಡ್ಡ ಅಧಿಕಾರಿ ಪಡೆದುಕೊಂಡರು.

ಅವರೆಲ್ಲರ ಪ್ರಕಾರ ಅಂತಹದೊಂದು ಘಟನೆ ನಡೆದಿಲ್ಲವೆಂಬುದು ಖಚಿತವಾದರೂ ಅನ್ನದ ಋಣ ದೊಡ್ಡದಲ್ಲವೇ? ಜೆ.ಡಿ.ಪ್ರಕಾಶ್ ಬಡಪಟ್ಟಿಗೆ ಬಗ್ಗಲಿಲ್ಲ. ತಾನು ತನಿಖೆ ನಡೆಸಲು ಬಂದ ಸ್ಥಳ ಜಿಲ್ಲಾ ಮಟ್ಟದ ಅತ್ಯುನ್ನತ ಪ್ರಜಾತಾಂತ್ರಿಕ ಸಂಸ್ಥೆ ಎಂಬ ಅರಿವೂ ಇಲ್ಲದಂತೆ ಈ ಮಹಾತ್ಮ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ವಿ.ದೀರ್ಘಕೇಶಿ ಶಿವಣ್ಣರವರ ಸಮ್ಮುಖದಲ್ಲೇ ಕೇಸ್ ದಾಖಲಿಸಲು ತನಗೆ ಅನುಕೂಲವಾಗುವ ರೀತಿಯಲ್ಲಿ ಹೇಳಿಕೆ ಕೊಡಬೇಕೆಂದು ರಾಮಚಂದ್ರಪ್ಪನವರನ್ನು ಗದರಿಸಿದನು. ಒಬ್ಬ ಉನ್ನತ ಹುದ್ದೆಯ ಅಧಿಕಾರಿಯ ಜೊತೆಯೇ ಈತ ಈ ರೀತಿ ಒರಟಾಗಿ ನಡೆದುಕೊಂಡಿದ್ದಾನೆ. ಅಲ್ಲಿಂದ ಈ ಡಿವೈಎಸ್‌ಪಿ ಶಶಿಧರ್ ಅವರನ್ನು ಏಕವಚನದಲ್ಲಿ ಸಂಬೋಧಿಸುತ್ತಾ ದೈಹಿಕವಾಗಿ ತಳ್ಳಾಡುತ್ತಾ ತನ್ನ ಜೀಪಿನ ಹಿಂಭಾಗದಲ್ಲಿ ಕುಳ್ಳಿರಿಸಿಕೊಂಡು ಠಾಣೆಗೆ ಕರೆದೊಯ್ದಿದ್ದಾನೆ. ಇದೆಲ್ಲ ಗಮನಿಸಿದರೆ ಇದೊಂದು ಪೂರ್ವ ನಿಯೋಜಿತ ತಂತ್ರ ಎಂಬುದು ಸ್ಪಷ್ಟವಾಗುತ್ತದೆ.

ಬಿಜೆಪಿ ಈಗ ತನ್ನ ರಾಜಕೀಯ ವಿರೋಧಿಗಳನ್ನು ಮಣಿಸಲು ಆಡಳಿತ ಯಂತ್ರವನ್ನು ಸ್ವೇಚ್ಛೆಯಿಂದ ಬಳಸಿ ಕೊಳ್ಳುತ್ತಿರುವುದಕ್ಕೆ ಇದೊಂದು ನಿದರ್ಶನವಾಗಿದೆ. ಕೊಡಗು ಜಿಲ್ಲೆಯ ಜಾತ್ಯತೀತ ಶಕ್ತಿಗಳ ಒಕ್ಕೂಟವು ಹಿರಿಯ ರಾಜಕಾರಣಿ ಮತ್ತು ಚಿಂತಕ ಎ.ಕೆ.ಸುಬ್ಬಯ್ಯನವರ ನೇತೃತ್ವದಲ್ಲಿ ಈ ಅನ್ಯಾಯದ ವಿರುದ್ಧ ತೀವ್ರ ಪ್ರತಿಭಟನೆಯಲ್ಲಿ ತೊಡಗಿದೆ. ಜಿಲ್ಲೆಯ ಬೇರೆಬೇರೆ ಕಡೆ ಧರಣಿಗಳು, ಮೆರವಣಿಗೆಗಳು ನಡೆದಿವೆ. ಜನವರಿ 15ನೇ ತಾರೀಕಿನಂದು ಕೊಡಗು ಬಂದ್ ನಡೆದಿದೆ. ಈ ವಿರೋಧವನ್ನು ಕಂಡು ಗಾಬರಿಗೊಂಡ ಬಿಜೆಪಿಗಳು ಈಗ ಪ್ರಜಾಪ್ರಭುತ್ವವಾದಿಗಳ ವಿರುದ್ಧ ಕತ್ತಿ ಮಸೆಯುತ್ತಿದೆ. ಅದಕ್ಕೆ ತಕ್ಕಂತೆ ಪೊಲೀಸ್ ಪಡೆಯೂ ತನ್ನ ಚಡ್ಡಿ ಧಣಿಗಳನ್ನು ಕಾಪಾಡುವ ಕಾಯಕದಲ್ಲಿ ತೊಡಗಿರುವುದು ಹಾಸ್ಯಾಸ್ಪದವಾಗಿದೆ.

■ ವರದಿಗಾರ


ಶಶಿಧರ್ v/s ರಾಜಾರಾವ್

ಕೊಡಗಿನಲ್ಲಿ ಸಮರ್ಥ ಮತ್ತು ಕ್ರಿಯಾಶೀಲ ಕಾರ್ಯಕರ್ತರ ಅತಿ ದೊಡ್ಡ ತಂಡ ಹೊಂದಿರುವ ನಾಯಕನೆಂದರೆ ವಿ.ಪಿ.ಶಶಿಧರ್. ಇವರು ಈಗ ಎರಡನೇ ಅವಧಿಗೆ ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದಾರೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ವ್ಯಕ್ತಿತ್ವ ಹೊಂದಿರುವ ಶಶಿಧರ್ ಜಿಲ್ಲಾ ಪಂಚಾಯತ್‌ನಲ್ಲಿ ನಡೆಯುವ ಚರ್ಚೆಗಳಲ್ಲಿ ಹೋಮ್‌ವರ್ಕ್ ಮಾಡಿಕೊಂಡು ಭಾಗವಹಿಸುತ್ತಾರೆ.


ಶಶಿಧರ್

ತನ್ನ ಜವಾಬ್ದಾರಿಯನ್ನು ಚೆನ್ನಾಗಿ ಅರಿತಿರುವ ಶಶಿಧರ್ ಜಿಲ್ಲಾ ಪಂಚಾಯತ್‌ನಲ್ಲಿ ನಡೆಯುತ್ತಿರುವ ಹಲವಾರು ಅವ್ಯವಹಾರಗಳಿಗೆ ತಡೆಯೊಡ್ಡಿದ್ದಾರೆ. ಪಕ್ಷಾತೀತವಾಗಿ ಅನ್ಯಾಯವನ್ನು ಪ್ರತಿಭಟಿಸುವ ಅವರ ಗುಣದಿಂದಾಗಿ ಅವರ ಪಕ್ಷದಲ್ಲೇ ಅವರಿಗೆ ಹಲವಾರು ಶತ್ರುಗಳು ಸೃಷ್ಟಿಯಾಗಿದ್ದಾರೆ. ಆದರೆ ಇವರೊಬ್ಬರ ಕಾರಣದಿಂದ ಕಾಂಗ್ರೆಸ್ ಪಕ್ಷವು ಜಿಲ್ಲಾ ಪಂಚಾಯತ್ ಅನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ.

ಕೊಡಗಿನಲ್ಲಿ ಸಂಘ ಪರಿವಾರ ತನ್ನ ಕಪಿಚೇಷ್ಟೆ ಆರಂಭಿಸಿದಾಗಲೆಲ್ಲ ಅದರ ವಿರುದ್ಧ ಶಶಿಧರ್ ಸಶಕ್ತವಾಗಿ ಧ್ವನಿಯೆತ್ತುತ್ತಾರೆ; ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದ್ದಾರೆ. ಇತ್ತೀಚೆಗೆ ಹೊಸ್ತೋಟ ಎಂಬಲ್ಲಿ ಭಜರಂಗಿಗಳು ಭಗವಾಧ್ವಜವನ್ನು ತಾವೇ ಕಿತ್ತು ಮುಸ್ಲಿಮರ ವಿರುದ್ಧ ರಂಪಾಟಕ್ಕೆ ತೊಡಗಿದಾಗ ವಿವಿಧ ಪಕ್ಷಗಳನ್ನು ಮತ್ತು ಜಾತ್ಯತೀತ ಶಕ್ತಿಗಳನ್ನು ಒಟ್ಟು ಸೇರಿಸಿ ಸೋಮವಾರಪೇಟೆ, ಕೊಡ್ಲಿಪೇಟೆಗಳಲ್ಲಿ ಜನಜಾಗೃತಿಯ ಸಮಾವೇಶಗಳನ್ನು ಸಂಘಟಿಸಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಕೊಡ್ಲಿಪೇಟೆಯ ಜಿಲ್ಲಾ ಪಂಚಾಯತ್ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಹೆಚ್.ಬಿ.ಜಯಮ್ಮನವರನ್ನು ಗೆಲ್ಲಿಸಿ ಶಾಸಕ ಅಪ್ಪಚ್ಚು ರಂಜನ್‌ಗೆ ಮುಖಭಂಗವಾಗುವಂತೆ ಮಾಡಿದ್ದರು. ಇದೆಲ್ಲ ಬಿಜೆಪಿ ಕಣ್ಣಲ್ಲಿ ಅಪರಾಧವಾಗಿ ಕಂಡಿದೆ.


ರಾಜಾರಾವ್

ಕೊಡಗಿನಲ್ಲಿ ಮೂರು ವಿಧಾನ ಸಭಾ ಕ್ಷೇತ್ರಗಳಿದ್ದಾಗ ವಿರಾಜಪೇಟೆ ಗಿರಿಜನ ಮೀಸಲು ಕ್ಷೇತ್ರವಾಗಿತ್ತು, ಆಗ ಸುಮಾ ವಸಂತ್ ಮತ್ತು ಹೆಚ್.ಡಿ.ಬಸವರಾಜು ತರಹದ ನಕಲಿ ಗಿರಿಜನ ಶಾಸಕರನ್ನು ಕೊಡಗು ಹೊಂದಿತ್ತು. ಈಗ ಕ್ಷೇತ್ರ ಪುನರ್ವಿಂಗಡಣೆಯಾಗಿ ಕೊಡಗು ಎರಡು ಕ್ಷೇತ್ರಗಳನ್ನು ಮಾತ್ರ ಹೊಂದಿದೆ. ಆದರೆ ಅವುಗಳಲ್ಲಿ ಒಂದು ಕೊಡವರಿಗೆ ಮತ್ತೊಂದು ಒಕ್ಕಲಿಗರಿಗೆ ಎಂಬ ಅಲಿಖಿತ ಒಪ್ಪಂದವಾಗಿರುವಂತೆ ಕಾಣುತ್ತದೆ.

ಈಗ ಬುಡಕಟ್ಟು ಜನರನ್ನು ದೊಡ್ಡ ಸಂಖ್ಯೆಯಲ್ಲಿ ಹೊಂದಿರುವ ಕೊಡಗಿನ ಜಿಲ್ಲಾ ಪಂಚಾಯತ್ ಸದಸ್ಯತ್ವಕ್ಕೆ ರಾಜಾರಾವ್ ತರಹದ ಡೋಂಗಿ ಗಿರಿಜನರು ಪ್ರಕ್ಕರಿಸಿರುವುದು ದುರಂತ. ಈತನ ವಿರುದ್ಧ ಚುನಾವಣೆಯಲ್ಲಿ ಸೋತಿದ್ದ ಕೆ.ಡಿ.ಸುರೇಶ್ ಎನ್ನುವವರು ಚುನಾವಣಾ ಸಮಯದಲ್ಲಿ ರಾಜಾರಾವ್ ಹಾಜರು ಪಡಿಸಿದ್ದ ಜಾತಿ ದೃಢೀಕರಣ ಪತ್ರವನ್ನು ಪ್ರಶ್ನಿಸಿದ್ದಾರೆ. ಈ ಸಂಬಂಧ ಸೋಮವಾರಪೇಟೆ ತಾಲೂಕು ತಹಸೀಲ್ದಾರ್ 2006ರ ಜೂನ್ 23 ರಂದು ಜಿಲ್ಲಾಧಿಕಾರಿಗಳಿಗೆ ವರದಿಯನ್ನು ನೀಡಿದ್ದರು. ಅದರಲ್ಲಿ "1996ರಿಂದಲೂ ಎಸ್.ಎನ್. ರಾಜಾರಾವ್ ತಾವು ಗಿರಿಜನ ಎಂಬುದಾಗಿ ಜಾತಿ ದೃಢೀಕರಣ ಪತ್ರವನ್ನು ಪಡೆಯುತ್ತಾ ಬಂದಿರುತ್ತಾರೆ. ಆದರೆ ಅವರ ಪ್ರಾಥಮಿಕ ಶಾಲಾ ಹಂತದ ದಾಖಲಾತಿಗಳನ್ನು ಪರಿಶೀಲಿಸಿದಾಗ ಅವರ ಜಾತಿ ಮರಾಠಿ ಎಂದು ನಮೂದಿಸಲ್ಪಟ್ಟಿರುವುದರಿಂದ ಪರಿಶಿಷ್ಟ ಪಂಗಡದ ಜಾತಿ ದೃಢೀಕರಣ ಪತ್ರವನ್ನು ಪಡೆದುಕೊಳ್ಳುವುದು ತಪ್ಪು ಎಂಬುದಾಗಿ ವರದಿ ನೀಡಿ ತಮ್ಮ ಅವಗಾಹನೆಗೆ ಸಲ್ಲಿಸಿದ್ದೆ" ಎಂದು ಸ್ಪಷ್ಟವಾಗಿ ಬರೆದಿದ್ದಾರೆ.

ರಾಜಾರಾವ್ ವಂಚನೆ ಇಷ್ಟಕ್ಕೇ ನಿಲ್ಲುವುದಿಲ್ಲ. ಕೂಡಿಗೆಯ ತೋಟಗಾರಿಕೆ ಇಲಾಖೆಗೆ ಸೇರಿದ ಬೆಲೆಬಾಳುವ ಆಸ್ತಿಯನ್ನು ಸಹ ಈತ ಅತಿಕ್ರಮಿಸಿಕೊಂಡಿದ್ದಾರೆ. ಈ ಎಲ್ಲವನ್ನೂ ಶಶಿಧರ್ ನಿರಂತರವಾಗಿ ಪ್ರಶ್ನಿಸುತ್ತಿರುವುದೇ ಅವರ ಮೇಲೆ ರಾಜಾರಾವ್‌ಗೆ ಸಿಟ್ಟು ತಂದಿದೆ. ಈ ಹಿಂದೆ ಮಹಿಳಾ ಸದಸ್ಯರೊಂದಿಗೆ ರಾಜಾರಾವ್ ಅಸಭ್ಯವಾಗಿ ವರ್ತಿಸಿದ್ದಕ್ಕೆ ಕೊಡಗು ಜಿಲ್ಲಾ ಪಂಚಾಯತ್‌ನ ಖಂಡನಾ ನಿರ್ಣಯಕ್ಕೆ ಆತ ಒಳಗಾಗಿದ್ದ.

ಚಡ್ಡಿ ಚತುರ ರಾಜಾರಾವ್ ಇಂತಹ ಒಂದು ಅನರ್ಘ್ಯ ರತ್ನ! ■

ಉಡುಪಿಯ ನಾಶ...

ನಪುಂಸಕ ನೆನಪುಗಳು



ಉಡುಪಿಯ ರಥಬೀದಿ

ವಿಶೇಷ ಲೇಖನ

■ಕೆ.ಫಣಿರಾಜ್

“ಇದನ್ನು ಹೀಗೆಯೇ ಹೇಳಬೇಕು. ಹೀಗೆ ಹೇಳಬದ್ದಷ್ಟೆ [illegible]ವ ಸಂಗತಿಗಳ ಅರ್ಥ ಕಳೆದುಹೋಗ [illegible] ಹೇಳಿದರೂ ಅರ್ಥ ಹೀನವಾಗಬಹುದೆಂಬ ಆತಂಕದಲ್ಲಿ. ಹೇಗೂ ಉಡುಪಿ ಹೀಗಿರುವುದೇ ಹಾಗೇ ಎಂಬ ಭಂಡತನದಲ್ಲಿ.

ಉಡುಪಿ ವಿಶಿಷ್ಟವಾದ ಊರಾಗಿತ್ತು. ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದು, ಹಲವಾರು ಚಳವಳಿಗಳ ಸಖನಾಗಿದ್ದು, 1990ರಲ್ಲಿ ಈ ಊರಿಗೆ ಬಂದಾಗ, ನನಗೆ [illegible] ಹಾಗೇ [illegible]. ನಾನು ಉಡುಪಿಗೆ ಬಂದ ವರ್ಷವೇ, 1990ರಲ್ಲಿ, ಅಡ್ವಾನಿಯ ಹಿಂಸಾತ್ಮಕ ರಥ ಯಾತ್ರೆಯ ಬೆನ್ನಿಗೇ ಅದಕ್ಕೆ ಪ್ರತಿಭಟನೆಯಾಗಿ ಉಡುಪಿಯ ರಥಬೀದಿಯಲ್ಲಿ ಒಂದು ಸಭೆ ನಡೆಯಿತು. ಅಷ್ಟಮಠಗಳಿಂದ ಸುತ್ತುವರೆದಿರುವ ಈ ರಥಬೀದಿಯು ಸರಕಾರದ ಸುಪರ್ದಿನ ರಸ್ತೆಯಾಗಿದ್ದು, ಸಾರ್ವಜನಿಕ ಸ್ಥಳವಾಗಿತ್ತು. ಅಲ್ಲಿ ಸಭೆ ನಡೆಸಲು ಸಾಂವಿಧಾನಿಕ ಅಧಿಕಾರವಿರುವ ಸಂಸ್ಥೆಗಳಿಂದ, ನಾಗರಿಕ ಹಕ್ಕುಗಳ ಆಧಾರದಲ್ಲಿ ಪರವಾನಗಿ ಪಡೆದು ಸಭೆ ನಡೆಸಬಹುದಾಗಿತ್ತು ಅದಕ್ಕೆ ಮಠಗಳ ದೊಣ್ಣೆನಾಯಕರ ಅಪ್ಪಣೆ ಅಗತ್ಯವೇ ಇರಲಿಲ್ಲ. ಪ್ರಸ್ತುತ ಸಭೆ ಅದೇ ಬಗೆಯ ಹಕ್ಕಿನ ಚಲಾವಣೆಯ ಸ್ವಾಧಿಕಾರದ ಸ್ವಾಭಿಮಾನಿ ಸಭೆಯಾಗಿತ್ತು. ಈ ಸಭೆಯನ್ನು ಆಯೋಜಿಸಿದ ಸಂಘಟನೆಗಳ ಒಕ್ಕೂಟವೂ ವೈವಿಧ್ಯಮಯವಾಗಿತ್ತು. ‘ರಥಬೀದಿ ಗೆಳೆಯರು’ ಎಂಬಂಥ ಸಾಂಸ್ಕೃತಿಕ ಸಂಘಟನೆಯಿಂದ ಹಿಡಿದು, ಸಿ.ಐ.ಟಿ.ಯು.ನಂಥ ಎಡಪಂಥೀಯ ಕಾರ್ಮಿಕ ಸಂಘಟನೆಯವರೆಗೆ ವಿವಿಧ ಸಂಘಟನೆಗಳು ಈ ಪ್ರತಿಭಟನೆಯಲ್ಲಿ ಒಗ್ಗೂಡಿದ್ದವು. ಆ ದಿನದ ಸಭೆಯಲ್ಲಿ ಹಿಂದೂ ಧಾರ್ಮಿಕತೆಯ ಅರ್ಥವಿಶ್ಲೇಷಣೆ, ಹಿಂದು ಸಮಾಜದ ಜಾತಿ ಭೇದ ನೀತಿ, ಸಾಂವಿಧಾನಿಕ ನ್ಯಾಯದ ಪರಿಕಲ್ಪನೆ, ಬಂಡವಾಳಶಾಹಿ ಯಜಮಾನಿಕೆಯ ವಿಕೃತ ರೂಪ- ಈ ಎಲ್ಲ ನೆಲೆಗಳಿಂದಲೂ ಅಡ್ವಾನಿಯ ರಥಯಾತ್ರೆಯು ಬಿತ್ತಲು ಶುರುಮಾಡಿದ ಹಿಂದೂತ್ವದ ಓನಾಮಕ್ಕೆ ಕಡುವಿರೋಧ ವ್ಯಕ್ತವಾಯಿತು. ಆ ಸಭೆಯಲ್ಲಿ ಕೆ.ವಿ.ಸುಬ್ಬಣ್ಣ ತಮ್ಮ ಎಂದಿನ ಸಂಯಮದಲ್ಲಿ ಮಾತನಾಡುತ್ತಿದ್ದಾಗ, ಮಠ ಒಂದರ ಅಂಗಣದಿಂದ ಕಲ್ಲುಗಳು ತೂರಿ ಬಂದವು. ಅದನ್ನು ಕಂಡು ಸುಬ್ಬಣ್ಣ ಎಷ್ಟು ಕೃದ್ಧರಾದರೆಂದರೆ, “ನೀವಲ್ಲವೋ ನಿಜವಾದ ಹಿಂದೂಗಳು! ನಾವು! ಇಲ್ಲಿ ನಮ್ಮ ಬದುಕಿಗೆ ಒದಗಿರುವ ಆಪತ್ತನ್ನು ಅರಿಯಲು ಪ್ರಯತ್ನಿಸುತ್ತಿರುವ ನಾವು ಹಿಂದೂಗಳು” ಎಂಬರ್ಥದ ಮಾತುಗಳನ್ನಾಡಿದ್ದು ಕಂಡು ನಾನು ದಂಗಾಗಿ ಹೋದೆ; ಸುಬ್ಬಣ್ಣ ಅಷ್ಟು ತೀವ್ರವಾಗಿ ಮಾತನಾಡಿದ್ದನ್ನು ನಾನೆಂದೂ ಕಂಡಿರಲಿಲ್ಲ.

ಈ ಸಭೆಯ ನಂತರ, ಮುಂದಿನ ಎಂಟು ವರ್ಷಗಳ ಕಾಲದಲ್ಲಿ ರಥಬೀದಿಯಲ್ಲಿ ನಡೆದ ಹಲವಾರು ಪ್ರತಿಭಟನಾ ಸಭೆಗಳಲ್ಲಿ ನಾನು ಒಂದೋ ಸಕ್ರಿಯವಾಗಿ ಭಾಗವಹಿಸಿದ್ದೆ ಇಲ್ಲವೇ ವೀಕ್ಷಕನಾಗಿದ್ದೆ. ಆ ಅವಧಿಯ ಕರಪತ್ರಗಳಲ್ಲಿ, “ಮೆರವಣಿಗೆಯು ತಾಲ್ಲೂಕು ಕಚೇರಿಯಿಂದ ಪ್ರಾರಂಭವಾಗಿ, ಸಿಟಿ ಬಸ್‌ಸ್ಟ್ಯಾಂಡ್, ಕಲ್ಸಂಕ, ಬಡಗುಪೇಟೆ ಮಾರ್ಗವಾಗಿ ರಥಬೀದಿಯಲ್ಲಿ ಸಭೆ ಸೇರುವುದು” ಎಂಬ ಒಕ್ಕಣೆ ಸಾಮಾನ್ಯವಾಗಿತ್ತು, ಆದರೆ, 1999ರ ಮಧ್ಯ ಭಾಗದಲ್ಲಿ, ರಥಬೀದಿಯಲ್ಲಿ ‘ರಾಜಕೀಯ ಸಭೆ’ಗಳನ್ನು ನಡೆಸುವುದನ್ನು ರದ್ದುಪಡಿಸಲಾಯಿತು. ಈ ಆಜ್ಞೆಯ ಬೆನ್ನಿಗೇ ‘ಲಂಕೇಶ್ ಪತ್ರಿಕೆ’ಯಲ್ಲಿ ಅಷ್ಟಮಠಗಳನ್ನು ಕುರಿತ ವರದಿ ಪ್ರಕಟವಾಯಿತು. ಸಂಘಪರಿವಾರದವರು ಹಾಡುಹಗಲೇ, ಅಂಗಡಿಗಳಿಂದ ಪತ್ರಿಕೆಗಳನ್ನು ಬಲಾತ್ಕಾರದಿಂದ ಕಿತ್ತುಕೊಂಡು ಸುಟ್ಟರು ಹಾಗು ಪತ್ರಿಕೆಯ ವಿರುದ್ಧ ಇದೇ ರಥಬೀದಿಯಲ್ಲಿ ಪ್ರತಿಭಟನಾ ಸಭೆ ನಡೆಸಿದರು. ಆ ಸಭೆಯಲ್ಲಿ, ಉಡುಪಿಯ ಸರ್ವ ಕಾನೂನು ಪಾಲಕರ ಸಮಕ್ಷಮದಲ್ಲಿ, ಯಾವ ಕಾನೂನಿಗೂ ಅಂಜದೆ ಸಂಘಪರಿವಾರದ ವಿರೋಧಿಗಳನ್ನು ಕೊಚ್ಚಿ ಹಾಕಬೇಕೆಂಬ ವೀರಾವೇಶದ ಆಜ್ಞೆಗಳನ್ನೂ ನೀಡಲಾಯಿತು. ಈ ನಂತರದಲ್ಲಿ ಇದೇ ಬಗೆಯ 'ಧಾರ್ಮಿಕ ಸಭೆಗಳು' ರಥಬೀದಿಯಲ್ಲಿ ನಿರಂತರವಾಗಿ ನಡೆದುಕೊಂಡು ಬರುತ್ತಿವೆ. ಈ ವಿದ್ಯಮಾನಗಳು ನಡೆಯುವ ಹೊತ್ತಿಗೆ, ಉಡುಪಿ ಎಂಬ ಊರಿನಲ್ಲಿ ಸಾಧ್ಯವಿರಬಹುದಾದ ಲಿಬರಲ್ ಪ್ರಜ್ಞೆಯ ಅತ್ಯುತ್ತಮ ಮಾದರಿಯಾಗಿದ್ದ ಕು.ಶಿ.ಹರಿದಾಸ ಭಟ್ಟರು ಇನ್ನೂ ಬದುಕಿದ್ದರು. ಆಗ ಅವರು ತಮಗೆ ಆಪ್ತರಾದವರ ಬಳಿ ತಮ್ಮ ಬಾಲ್ಯಕಾಲದ ಘಟನೆಯೊಂದನ್ನು ನೆನಪಿಸಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಒಬ್ಬ ಕ್ರೈಸ್ತ ಮಿಷನರಿ ದಿನವೂ ಸಾಯಂಕಾಲ ರಥಬೀದಿಯಲ್ಲಿ ನಿಂತು, ಹಿಂದೂ ಧಾರ್ಮಿಕ ನಂಬಿಕೆಗಳ ಜಾತಕ ಜಾಲಾಡಿ, ಕ್ರೈಸ್ತ ಧರ್ಮದ ಮೇಲ್ಮೆಯನ್ನು ಸಾರುತ್ತಿದ್ದನಂತೆ. ಆತನ ವಾಗ್ಝರಿಯನ್ನು ರಥಬೀದಿಯಲ್ಲಿ ಆ ಹೊತ್ತಿಗೆ ಬರುವ ಜನ ಆಸಕ್ತಿಯಿಂದ ನಿಂತು ಆಲಿಸಿ, ನಂತರ ತಮ್ಮ ಪಾಡಿಗೆ ತಾವು ಹೋಗಿಬಿಡುತ್ತಿದ್ದರಂತೆ. ಆಗ 1990-2000. ಇದೇನೂ ಗತ ಕಾಲವಲ್ಲ.

ನಂತರದಲ್ಲಿ 'ಪ್ರತಿಭಟನೆ' ಮಾಡುವವರಿಗೆ ಉಳಿದ ಸಾರ್ವಜನಿಕ ಸ್ಥಳಗಳೆಂದರೆ - ಉಡುಪಿ ತಾಲ್ಲೂಕು ಕಚೇರಿ ಎದುರಿನ ಕಿರಿದಾದ ರಸ್ತೆಬದಿಯ ಆವರಣ, ಉಡುಪಿಯ ಬಸ್‌ಸ್ಟ್ಯಾಂಡ್ ಬಳಿ ಇರುವ ಕ್ಲಾಕ್ ಟವರ್/ಗಾಂಧಿ ಪ್ರತಿಮೆಯ ಎದುರಿನ ಪುಟ್ಟದಿ ಜಾಗ, ಉಡುಪಿ-ಮಂಗಳೂರು ಮುಖ್ಯ ರಸ್ತೆಗೆ ಸಮಾನಾಂತರದಲ್ಲಿ ಒಂದು ಹತ್ತೆಚ್ಚೆ ಒಳಗಿರುವ ಚಿತ್ತರಂಜನ್ ಸರ್ಕಲ್ ಹಾಗು ಒಂದು ಬೀದಿ ನಾಯಿಯೂ ನಿಮ್ಮ ಪ್ರತಿಭಟನೆಯ ಅಹವಾಲು ಕೇಳದಂತಹ ಜಾಗ ದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರಿನ ಆವರಣ. ಸರ್ವಿಸ್ ಬಸ್‌ಸ್ಟ್ಯಾಂಡ್ ಮತ್ತು ತಾಲ್ಲೂಕು ಕಚೇರಿಯ ಎದುರಿನ ಆವರಣಗಳು ಪ್ರತಿಭಟನೆಗೆ ಹೇಳಿಮಾಡಿಸಿದ ಜಾಗಗಳು. ಉಡುಪಿ ಎಂಬುದು ಹತ್ತಾರು ಹಳ್ಳಿ ಪ್ರದೇಶಗಳ ಒಕ್ಕೂಟವಾಗಿರುವುದರಿಂದ, ಎಲ್ಲೆಡೆಗಳಿಂದ ಹೊಟ್ಟೆಪಾಡಿಗೆ ಬರುವ ಜನ 'ಇಲ್ಲಿ ಸಿಗುತ್ತಾರೆ ಮತ್ತು ಬೇಕಾದರೂ, ಬೇಡವಾದರೂ ಪ್ರತಿಭಟನಾಕಾರರ ಮಾತುಗಳು ಕಿವಿಗೆ ತಾಗುತ್ತವೆ. ಆದರೆ, ಈ ಎರಡೂ ಆಯಕಟ್ಟಿನ ಜಾಗಗಳು 'ಅಭಿವೃದ್ಧಿ'ಯ ಕಾರಣವಾಗಿ ಕಳೆದ ಒಂದು ತಿಂಗಳಿಂದ 'ಪ್ರತಿಭಟನೆ'ಗಳಿಗೆ ಅಲಭ್ಯವಾಗಿವೆ. ಈ ಕಥೆಯನ್ನು ಸ್ವಲ್ಪ ವಿವರಿಸಬಹುದು.

ಉಡುಪಿಯ ತಾಲ್ಲೂಕು ಕಚೇರಿ ಎದುರಿನ ರಸ್ತೆ ಹಾಗು 'ಪ್ರತಿಭಟನೆ'ಗಳು ನಡೆಯುತ್ತಿದ್ದ ರಸ್ತೆ ಬದಿಯ ಆವರಣಗಳು 'ಉಡುಪಿಯದಾಗಿದ್ದವು'- ಅಂದರೆ, ದೊಡ್ಡ ದೊಡ್ಡ ಮರಗಳ ಸಾಲುಗಳಿಂದ ಈ ಜಾಗಕ್ಕೆ ಒಂದು ವಿಶಿಷ್ಟತೆ ಒದಗಿಬಂದಿತ್ತು. ಆದರೆ ಹೋದ ವರ್ಷ, ತಾಲ್ಲೂಕು ಕಚೇರಿಗಿಂತ ಸ್ವಲ್ಪ ಮುಂದೆ ಒಂದು ಬಹುಮಹಡಿ ಕಟ್ಟಡ ನಿರ್ಮಾಣವಾದದ್ದು ಮತ್ತು ಅಲ್ಲಿ 'ಬಿಗ್ ಬಜಾರ್' ತನ್ನ ಮಳಿಗೆಯನ್ನು ಶುರುಮಾಡಿದ್ದು ತಾಲ್ಲೂಕು ಕಚೇರಿ ಎದುರಿನ ರಸ್ತೆಯ ಸ್ವರೂಪವನ್ನೇ ಬದಲಿಸಿತು. ಈ ಮಳಿಗೆ ಪ್ರಾರಂಭವಾದದ್ದೇ ಜಿಲ್ಲಾಡಳಿತ ಏಕಾಏಕಿ ಎಚ್ಚರಗೊಂಡು, ಉಡುಪಿ-ಮಂಗಳೂರಿನ ನಡುವಿನ ಸಂಚಾರಕ್ಕೆ ಮುಖ್ಯ ನಾಡಿಯಾಗಿರುವ ಈ ರಸ್ತೆಯಲ್ಲಿನ ವಾಹನಗಳ ಸಂಚಾರಕ್ಕೆ ಈ ಮರಗಳು ಅಡ್ಡಿಯಾಗಿವೆ ಎಂದು ನಿರ್ಧರಿಸಿ, ರಾತ್ರೋರಾತ್ರಿ ಅವುಗಳನ್ನು ಬುಡಸಮೇತ ಕಿತ್ತು ಹಾಕಿ, ಆ ಜಾಗಗಳಲ್ಲಿ ಆಕರ್ಷಕ ವಸ್ತುಗಳನ್ನು ಕೊಂಡುಕೊಳ್ಳುವಂತೆ ಜನರನ್ನು ಮರಳುಮಾಡುವ ಝಗಮಗ ಜಾಹಿರಾತು ಸಹಿತವಾದ ಇಕ್ಕಟ್ಟಿನ ಬಸ್ ನಿಲ್ದಾಣಗಳು ಹುಟ್ಟಿಕೊಂಡವು. ಆದರೂ ಉಡುಪಿಯ 'ಪ್ರತಿಭಟನಾಕಾರರು' ಇದ್ದುಬದ್ಧ ದ್ದನ್ನು ಹೊಂದಿಸಿಕೊಂಡೇ ಇಲ್ಲಿ ಪ್ರತಿಭಟನೆ ನಡೆಸುತ್ತಿದ್ದರು. ಆದರೆ ಇತ್ತೀಚಿನ ವಾರಗಳಲ್ಲಿ ರಸ್ತೆಯ ಬದಿಯನ್ನು ಅಗೆದು ಮಣ್ಣಿನ ಗುಡ್ಡೆ ಹಾಕಿದ್ದಾರೆ- ಅದು ಯಾವ ‘ಅಭಿವೃದ್ಧಿ’ ಕಾರ್ಯವೋ- ಸಾರ್ವಜನಿಕ ಸಭೆಗೆ ಅಲ್ಲಿ ಪರವಾನಗಿ ನಿರಾಕರಿಸಲಾಗುತ್ತಿದೆ. ಇನ್ನು ಸರ್ವಿಸ್ ಬಸ್‌ಸ್ಟ್ಯಾಂಡಿನದ್ದು ಮತ್ತೊಂದು 'ಅಭಿವೃದ್ಧಿ' ಕಥನ; ಸಿಟಿ ಬಸ್‌ಸ್ಟ್ಯಾಂಡಿನಿಂದ ರಾಷ್ಟ್ರೀಯ ಹೆದ್ದಾರಿಗೆ ಹೋಗುವ ಮಾರ್ಗದಲ್ಲಿ ಒಳಚರಂಡಿ ವ್ಯವಸ್ಥೆ ನಡೆಯುತ್ತಿದೆ, ಸಿಟಿಬಸ್‌ಗಳನ್ನೆಲ್ಲ ಸರ್ವಿಸ್ ಸ್ಟ್ಯಾಂಡಿನ ಹತ್ತಿರ ನಿಲ್ಲಿಸಲಾಗುತ್ತಿದೆ, ಹಾಗಾಗಿ 'ಟ್ರಾಫಿಕ್ ಪ್ರಾಬ್ಲಮ್' ಆಗುವುದರಿಂದ ಪ್ರತಿಭಟನಾ ಸಭೆಗೆ ಪರವಾನಗಿ ಇಲ್ಲ.

ಇದೆಲ್ಲ ತಾತ್ಕಾಲಿಕವಾದದ್ದು; 'ಅಭಿವೃದ್ಧಿ' ಕಾರ್ಯದಲ್ಲಿ ಮಗ್ನವಾಗಿರುವ ನಗರಸಭೆಯು, ಕೆಲಸ ಪೂರ್ಣವಾಗಿ ಈ ಸಾರ್ವಜನಿಕ ಜಾಗಗಳು ತೆರವಾದಲ್ಲಿ ನಾಗರಿಕ ಹಕ್ಕನ್ನು ಗೌರವಿಸಿ, ಸಭೆಗಳಿಗೆ ಅವಕಾಶ ಮಾಡಿಕೊಡುತ್ತದೆ ಎಂದು ಪ್ರಾಮಾಣಿಕವಾಗಿ ನಂಬಬಹುದಿತ್ತು. ಆದರೆ ಅಂಥ ಸದ್ಭಾವನೆಗಳೇ ಈ ಊರಿಗೆ ಅಪಥ್ಯವಾದ ಹಾಗೆ ಕಾಣುತ್ತದೆ. 'ಕರಾವಳಿ ಅಲೆ' ಪತ್ರಿಕೆ ಮೇಲೆ ಕಳೆದ ಎರಡು ತಿಂಗಳಿಂದ ನಡೆಯುತ್ತಿದ್ದ ಫ್ಯಾಸಿಸ್ಟ್ ದಾಳಿಗಳು, ಈ ಪತ್ರಿಕೆಯ ಸಂಪಾದಕರ ಉದ್ದೇಶಪೂರ್ವಕ ಬಂಧನ, ಅವರನ್ನು ಸಾರ್ವಜನಿಕವಾಗಿ ಕೈಕೋಳ ತೊಡಿಸಿ ನ್ಯಾಯಾಲಯಕ್ಕೆ ಎಳೆದು ತಂದ ಘಟನೆ, ಮಂಗಳೂರು ಜೈಲಿನಲ್ಲಿ ತಮಗೆ ಅಪಾಯ ಕಾದಿದೆ ಎಂದು ಅವರು ಸಕಾರಣ ವಾಗಿಯೇ ನ್ಯಾಯಾಲಯದಲ್ಲಿ ಮೊರೆಯಿಟ್ಟದ್ದು, ಇಷ್ಟಾದರೂ ಅವರ ಅನಾರೋಗ್ಯದ ಸ್ಥಿತಿಯನ್ನು ನಗಣ್ಯ ಮಾಡಿ ಅವರನ್ನು ಮಂಗಳೂರು ಜೈಲಿಗೆ ಎತ್ತಿಕೊಂಡು ಹೋದದ್ದು- ಇವೆಲ್ಲ ವಿದ್ಯಮಾನಗಳೂ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದನಂತರ ಹಿಂದೂತ್ವದ ಆಟಾಟೋಪವನ್ನು ವಿರೋಧಿಸುವವರನ್ನು ಬಲವಂತದಿಂದ ಬಾಯ್ಮುಚ್ಚಿಸುವ ಅಧಿಕಾರದ ವರಸೆ ಎನ್ನುವುದು ಸ್ಪಷ್ಟವಾಗಿತ್ತು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ಈ ಅಧಿಕಾರ ಬೆಂಬಲಿತ ದಾಳಿಯನ್ನು ಪ್ರತಿಭಟಿಸಲು ಕಾಂಗ್ರೆಸ್, ಜನತಾ ದಳ, ಉಡುಪಿ ಕಾರ್ಯನಿರತ ಪತ್ರಕರ್ತರ ಸಂಘಗಳೂ ಸೇರಿದ ಹಾಗೆ ಉಡುಪಿಯ ಸಕಲ ಹಿಂದೂತ್ವ ವಿರೋಧಿ ಸಂಘಟನೆಗಳು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ನೇತೃತ್ವದಲ್ಲಿ ಜನವರಿ 10, ಶನಿವಾರ ಸಂಜೆ 4 ಗಂಟೆಗೆ ಒಂದು ಸಭೆಯನ್ನು ನಡೆಸುವ ನಿರ್ಧಾರವಾಗಿತ್ತು. ಸಾರ್ವಜನಿಕರಿಗೆ ಪ್ರಸ್ತುತ ವಿದ್ಯಮಾನಗಳನ್ನು ತಿಳಿಸುವುದು ಈ ಪ್ರತಿಭಟನಾ ಸಭೆಯ ಮುಖ್ಯ ಉದ್ದೇಶವಾಗಿದ್ದರಿಂದ ಹೆಚ್ಚು ಜನ ಅನಾಯಾಸವಾಗಿ ಗಮನಿಸುವಂತಹ ಸ್ಥಳ ಒಂದನ್ನು ಆಯ್ದುಕೊಳ್ಳಬೇಕಿತ್ತು. ಉಡುಪಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಪಕ್ಕ ಇರುವ ಹಳೆಯ ಹೂವಿನ ಮಾರುಕಟ್ಟೆಯು ಪ್ರಶಸ್ತವಾಗಿದ್ದು, ಅಲ್ಲಿ ಹಲವಾರು ಸಾರ್ವಜನಿಕ ಸಭೆಗಳು ನಡೆದಿದ್ದರಿಂದ ಆ ಸ್ಥಳದಲ್ಲಿ ಸಭೆ ನಡೆಸಲು ತೀರ್ಮಾನಿಸಿ, ಪರವಾನಗಿ ಕೋರಿ ನಗರಸಭೆಗೆ ಅರ್ಜಿ ಸಲ್ಲಿಸಲಾಗಿ, ನಗರ ಸಭೆ ಜನವರಿ 9 ರಂದು ತನ್ನ ಒಪ್ಪಿಗೆಯನ್ನೂ ನೀಡಿತ್ತು. ಆದರೆ ಅದೇ ದಿನ ರಾತ್ರಿ, 9 ಗಂಟೆಗೆ, ಹಳೆ ಹೂವಿನ ಮಾರುಕಟ್ಟೆಯಲ್ಲಿ ಸಭೆ ನಡೆಸಲು ನೀಡಿದ್ದ ಪರವಾನಗಿಯನ್ನು ಹಿಂಪಡೆಯಲಾಗಿದ್ದು, ಅಲ್ಲಿ ಸಭೆ ನಡೆಸಕೂಡದೆಂದು ನಗರ ಸಭೆ ಆಯುಕ್ತರು ಆಯೋಜಕರಿಗೆ ನೋಟಿಸು ಕಳಿಸಿದರು! ಕಾರಣ: ಆ ಸ್ಥಳದ ಸುತ್ತ ಇರುವ ಅಂಗಡಿಗಳಿಗೂ ಮತ್ತು ಅಲ್ಲಿಗೆ ಬರುವ ಗ್ರಾಹಕರಿಗೂ ತೊಂದರೆಯಾಗುತ್ತದೆ! ಇದಾದ ಎರಡು ದಿನಗಳ ನಂತರ, ಜನವರಿ 13ರ ಸಂಜೆ, [illegible] ಇಸ್ಲಾಮಿಕ್ ಆರ್ಗನೈಜೇಷನ್ (ಎಸ್.ಐ.ಒ.) ಸಂಘಟನೆಯು ಗಾಜಾಪಟ್ಟಿಯ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಪ್ರತಿಭಟಿಸಲು ಒಂದು ಸಭೆಯನ್ನು ಆಯೋಜಿಸಿತ್ತು. ಅವರು ತಾಲ್ಲೂಕು ಆಫೀಸಿನ ಮುಂಭಾಗದಲ್ಲಿ ಸಭೆ ನಡೆಸಲು ಪರವಾನಗಿ ಇಲ್ಲದಿದ್ದರಿಂದ ಚಿತ್ತರಂಜನ್ ವೃತ್ತದಲ್ಲಿ ಪರವಾನಗಿ ಕೇಳಿದ್ದರು; ಆದರೆ ಅವರಿಗಿಂತ ಮುಂಚಿತವಾಗಿ ಬೇರೆ ಸಂಸ್ಥೆಗೆ 'ಸಂಕ್ರಾಂತಿ ಸಾಂಸ್ಕೃತಿಕ ಕಾರ್ಯಕ್ರಮ'ಕ್ಕೆ ಅದೇ ವೇಳೆಗೆ ಪರವಾನಗಿ ನೀಡಲಾಗಿತ್ತು; ಎಸ್.ಐ.ಒ.ನವರು ಉಳಿದಿರುವ ಒಂದೇ ಸಾರ್ವಜನಿಕ ಸ್ಥಳವಾದ ಹಳೆ ಹೂವಿನ ಮಾರುಕಟ್ಟೆ ಬೇಡಿದರು; ನಗರ ಸಭೆ ಯಾವುದೇ ಸ್ಪಷ್ಟ ಕಾರಣವನ್ನು ನೀಡದೆ ಅನುಮತಿ ನೀಡದ ಕಾರಣ ಸಭೆಯೇ ರದ್ದಾಯಿತು.

ಹಾಗಂತ ಉಡುಪಿಯಲ್ಲಿ ಸಾರ್ವಜನಿಕ ಸಭೆಗಳು ನಡೆಯುವುದಿಲ್ಲವೆಂದಲ್ಲ; ಹಾಗೆಯೇ ಎಲ್ಲ ಸಭೆಗಳಿಗೂ ಕಾನೂನುರೀತ್ಯಾ ನಗರಸಭೆ, ಪೋಲಿಸ್ ಪರವಾನಗಿ ಇರುತ್ತದೆ ಎಂದೇನೂ ಇಲ್ಲ. ಉದಾಹರಣೆಗೆ ಆದಿ ಉಡುಪಿ ಬೆತ್ತಲೆ ಪ್ರಕರಣದಲ್ಲಿ ಸಂಘಪರಿವಾರದ ಆರೋಪಿಗಳನ್ನು ನ್ಯಾಯಾಲಯ ಖುಲಾಸೆಗೊಳಿಸಿದ ಮರುಕ್ಷಣದಲ್ಲಿ ನ್ಯಾಯಾಲಯದ ಆವರಣದಲ್ಲಿ ಪಟಾಕಿ ಹಾರಿಸಿ ಸಂಭ್ರಮಾಚರಣೆ ನಡೆಯಿತು; ಬಿನಾ ಪರವಾನಗಿ, ಉಡುಪಿ ನ್ಯಾಯಾಲಯದಿಂದ ಸರ್ವೀಸ್ ಬಸ್‌ಸ್ಟ್ಯಾಂಡಿನ ಕ್ಲಾಕ್ ಟವರ್ ತನಕ ಮೆರವಣಿಗೆ ನಡೆಸಿ, ಅಲ್ಲಿ ಕೋರ್ಟಿನ ತೀರ್ಪನ್ನೇ ಅಣಕಿಸುವ ರೀತಿಯ 'ವಿಜಯೋತ್ಸವ ಸಭೆ' ನಡೆಯಿತು. ಬಿಡಿ, ಸಂಘಪರಿವಾರದ ಸಂಘಟನೆಗಳು ಯಾವ ಕ್ಷಣದಲ್ಲೂ, ಎಂಥಾ ಜಾಗದಲ್ಲೂ ಸಭೆ ನಡೆಸುತ್ತೇವೆ ಎಂದು ಅಪ್ಪಣೆ ಹೊರಡಿಸಿದರೆ ನಗರಸಭೆಯೂ, ಪೋಲಿಸ್ ಇಲಾಖೆಯೂ ಅನುಮತಿ ನಿರಾಕರಿಸುವ ಪ್ರಶ್ನೆಯೇ ಇಲ್ಲ; ಹೀಗಿರುವಾಗ ಈ 'ಪರವಾನಗಿ' ಅಂತ ಅವರು ಕಾಗದದ ಚೂರು ಬಳಸಿ, ಆ ಮೂಲಕ ದೇಶದ ಅಪೂರ್ವ ಸಂಪನ್ಮೂಲವನ್ನು ಯಾಕೆ ಹಾಳುಗೆಡವಬೇಕು!


ಉಡುಪಿಯ ನಾಗರಿಕರಿಗೆ ಯಾವ ಭೇದಭಾವವಿಲ್ಲದೆ ಒದಗಬೇಕಾದ ಸಾರ್ವಜನಿಕ ಸ್ಥಳಗಳ ಕಥೆಯೇ ಇಂತಿದ್ದ ಮೇಲೆ ಖಾಸಗಿ ಸಭಾಂಗಣಗಳ ಕಥಾನಕ ಭಿನ್ನವಾಗಿರಲು ಸಾಧ್ಯವೇ? ಉಡುಪಿಯಲ್ಲಿ ಆಯಕಟ್ಟಿನ ಸ್ಥಳದಲ್ಲಿ ಟಿ.ಎ.ಪೈ ಹಿಂದಿ ಭವನವೆಂಬ ಚಿಕ್ಕ ಚಿಕ್ಕ ಕೊಠಡಿಗಳನ್ನುಳ್ಳ ಕಟ್ಟಡವಿದೆ; ಅಲ್ಲಿ ಲಾಗಾಯ್ತಿನಿಂದಲೂ ಸಾರ್ವಜನಿಕ ಸಭೆಗಳಿಗೆ ಬಾಡಿಗೆಯ ಮೇಲೆ ಸ್ಥಳಾವಕಾಶ ಒದಗಿಸಲಾಗುತ್ತದೆ. ಉಡುಪಿಯ ಅನೇಕ ಪ್ರಗತಿಪರ ಸಂಘಟನೆಗಳ ಸಭೆ ಸಮಾರಂಭಗಳು ಇಲ್ಲಿ ನಡೆದಿವೆ. ಆದರೆ, ಉಡುಪಿಯಲ್ಲಿ ಇಂದು ರಾತ್ರಿ ಇದ್ದ ವಾಸ್ತವ ನಾಳೆ ಬೆಳಗ್ಗೆ ಇರುತ್ತದೆ ಎಂದು ಊಹಿಸುವುದು ಅಸಾಧ್ಯ- ಇಲ್ಲಿ ರಾತ್ರೋರಾತ್ರಿ ಯುಗಪಲ್ಲಟಗಳಾಗುತ್ತವೆ. ಇದೇ ಟಿ.ಎ.ಪೈ ಹಿಂದಿ ಸಭಾಭವನದಲ್ಲಿ ಉಡುಪಿಯ 'ವಿಚಾರವಾದಿ ವೇದಿಕೆ' ಮತ್ತು 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ'ಯ ಅನೇಕ ಸಭೆಗಳು ನಡೆಯುತ್ತಲೇ ಇದ್ದವು. ಕ.ಸಾ.ಪ.ದ ವತಿಯಿಂದ ಉಡುಪಿಯಲ್ಲಿ ನಡೆದ 74ನೇ ಸಾಹಿತ್ಯ ಸಮ್ಮೇಳನಕ್ಕೆ ಪ್ರತಿಭಟನೆಯಾಗಿ ಉಡುಪಿಯ ಪ್ರಗತಿಪರ ಸಂಘಟನೆಗಳು ಒಗ್ಗೂಡಿ 'ಸೌಹಾರ್ದ ಸಾಹಿತ್ಯ ಸಮ್ಮೇಳನ'ವನ್ನು ಈ ಕಟ್ಟಡದಲ್ಲಿ ನಡೆಸಿದ್ದು ಓದುಗರಿಗೆ ನೆನಪಿರಬಹುದು. ಈ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಹಿರಿಯ ಚಿಂತಕರಾದ ಗೋಪಾಲ ಶೆಟ್ಟರ ಮುಂದಾಳತ್ವದಲ್ಲಿ 'ಸೌಹಾರ್ದ ಸಂಗಮ'ವೆಂಬ ಪುಸ್ತಕವಾಗಿ ಪ್ರಕಟಿಸಲಾಯಿತು. ಈ ಪುಸ್ತಕದ ಬಿಡುಗಡೆ ಕಾರ್ಯಕ್ರಮವನ್ನು 2008ರ ಜುಲೈ ತಿಂಗಳಲ್ಲಿ ನೆರವೇರಿಸಲು ಇಚ್ಛಿಸಿ, ಸಮ್ಮೇಳನದ ಸ್ವಾಗತ ಸಮಿತಿಯು ಟಿ.ಎ.ಪೈ ಸಭಾಂಗಣವನ್ನು ಬಾಡಿಗೆಗೆ ಕೋರಿದರೆ, ವ್ಯವಸ್ಥಾಪಕರು ಮುಲಾಜಿಲ್ಲದೆ 'ಇನ್ನು ಮುಂದೆ ನಿಮ್ಮಂಥವರಿಗೆ ಸಭಾಂಗಣ ನೀಡಬಾರದೆಂದು ನಿರ್ಧರಿಸಿದ್ದೇವೆ' ಎಂದುಬಿಟ್ಟರು. ಹಾಗಂತ ಸಮಾರಂಭವೇನೂ ರದ್ದಾಗಲಿಲ್ಲ; ಆದರೆ ಉಡುಪಿಯಲ್ಲಿ ಪೂರ್ವ ಸೂಚನೆ ಇಲ್ಲದೆ ಯಾವಾಗ ಯಾವ ಬಾಗಿಲುಗಳು ಮುಚ್ಚಿಕೊಳ್ಳುತ್ತವೆ ಎಂದು ಹೇಳುವುದು ಕಷ್ಟವಾಗಿದೆ. ಈ ಕ್ಷಣದಲ್ಲಿ ನಾವು ನಿಂತಿರುವ ನಮ್ಮ ಕಾಲಡಿಯ ನೆಲದ ಬಗ್ಗೆ ಖಾತ್ರಿ ಇಲ್ಲದಾಗ, ದೇಶ-ರಾಜ್ಯದ ಸನ್ನಿವೇಶ ಅಂತಿರಲಿ, ನಮ್ಮೂರಿನ ಬಗ್ಗೆಯೂ ಒಟ್ಟಾರೆ ಒಂದು ಅಭಿಪ್ರಾಯವನ್ನು ಖಚಿತವಾಗಿ ಹೇಳುವ ಪರಿಸ್ಥಿತಿ ಇಲ್ಲ.

ಇವನ್ನೆಲ್ಲ ನಪುಂಸಕ ನೆನಪು ಎಂದೆ. ನಪುಂಸಕವೆನ್ನುವುದು ನಕಾರ ಅರ್ಥದ ಶಬ್ದವೇನೂ ಅಲ್ಲ. ಒಂದು ಊರಿನ ಬಗ್ಗೆ ನವಿರಾದ ಹಳಹಳಿಕೆಯೂ (ನಾಸ್ಟಲ್ಜಿಯ), ಎಲ್ಲಾ ಸರಿ ಹೋಗುತ್ತದೆ ಎಂಬ ವೀರಸಂಕಲ್ಪವೂ ಸಾಧ್ಯವಾಗದೆ ಈ ಹೊತ್ತನ್ನಷ್ಟೇ ಅವಚಿ ಹಿಡಿದುಕೊಂಡಿರುವ ಸ್ಥಿತಿ ಇದು.

ಉದಯವಾಣಿ ಹೊಸ ದಾಖಲೆ!
ಮುಖಪುಟದಲ್ಲೇ ಹಸಿ ಸುಳ್ಳು

ಪತ್ರಿಕೆಗಳು ಉದ್ದೇಶಪೂರ್ವಕವಾಗಿ ಸುಳ್ಳು ಹೇಳಬಾ ...ಅದು ಪತ್ರಿಕಾ ವ್ಯವಸಾಯದ ವೃತ್ತಿಧರ್ಮ. ಸುಳ್ಳು ...ದರೂ ಅದು ಪೂರ್ತಿ ಸುಳ್ಳಾಗಿರಬಾರದು; ತುಸು ...ೂ ಸತ್ಯವಿದ್ದರೆ ಅಷ್ಟರಮಟ್ಟಿಗೆ ವೃತ್ತಿ ಧರ್ಮವೂ ...ಯುತ್ತದೆ; ಹೇಳಿದ ಸುಳ್ಳು ಕೂಡ ಸತ್ಯದ ಹಾಗೇ ...ತ್ತದೆ. ಇದು ಆ ಕ್ಷೇತ್ರದ ವೃತ್ತಿ ಕೌಶಲ. ಬಹುತೇಕ ...ಯ ಪತ್ರಿಕೆ ಮತ್ತು ಬಿಬಿಸಿಯಂತಹ ಸುದ್ದಿ ಸಂಸ್ಥೆಗಳು ... ವಿಶ್ವಾಸ ಗಳಿಸಿರುವುದರ ಹಿಂದಿನ ರಹಸ್ಯವೂ ...ಸತ್ಯ ಮತ್ತು ಸುಳ್ಳಿನ ಹದವರಿತ ಮಿಶ್ರಣ. ಆದರೆ ...ಳು ತಮ್ಮ ಒಳಪುಟದ ಬರಹಗಳಲ್ಲಿ, ಸಂಪಾದಕೀಯ ... ಕಡೆಗೆ ವಾಚಕರವಾಣಿಯ ಪತ್ರಗಳಲ್ಲಿ ಕೂಡ ...ದಗಲ್ಬಾಜಿ ಮಾಡಲಿ, ಮುಖಪುಟದ ವರದಿಗಳಲ್ಲಿ ... ನೂರಕ್ಕೆ ನೂರು ಹಸಿ ಹಸಿ ಸುಳ್ಳು ಹೇಳುವುದಿಲ್ಲ, ...ಗಳ ನಡುವೆ ತಮ್ಮ ಅಭಿಪ್ರಾಯಗಳನ್ನು ತೂರಿಬ ...ಕರಾಮತ್ತನ್ನೂ ನಡೆಸುವುದಿಲ್ಲ, ಕನ್ನಡದ ಜನಪ್ರಿಯ ...ತ್ರಿಕೆಗಳೂ ಈವರೆಗೆ ಈ ಮರ್ಯಾದೆಯನ್ನು ಉಳಿಸಿ ...ದ್ದವು. ಆದರೆ ಈಗ ಉದಯವಾಣಿ ತನ್ನ ಮುಖ ... ಮೇಲಿನ ಅರ್ಧದಲ್ಲೇ ಒಂದು ಅಪ್ಪಟ ಸುಳ್ಳು ಪ್ರಕಟಿಸಿ, ಕನ್ನಡ ಪತ್ರಿಕೆಗಳ ಪ್ರತಿಷ್ಠೆಗೆ ಅಕ್ಷರಶಃ ...ಬಳಿದಿದೆ.

...ಉದಯವಾಣಿ ಸುಳ್ಳು ಹೇಳುತ್ತದೆ ಎನ್ನುವುದು ... ಸುದ್ದಿಯೇ ಅಲ್ಲ, ಆದರೆ ಉದಯವಾಣಿಯಂತಹ ...ಯುವಾಣಿಯ ಮಟ್ಟಕ್ಕೂ ಮೊನ್ನೆ ಜನವರಿ 14ರ ...ಯ (ಮಣಿಪಾಲ ಆವೃತ್ತಿ) ಮುಖಪುಟದ ಮೇಲಿನ ...ದಲ್ಲೇ ಪ್ರಕಟವಾದ "ಶಬರಿಮಲೆ: ಉಗ್ರರು" ಎಂಬ ...ಷಕದ ವರದಿ ಒಂದು ದಾಖಲೆಯೇ ಸರಿ! ಮೊದಲೇ ...ಯೋತ್ಪಾದನೆಯ ಕುರಿತು ... ಆತಂಕ ತುಂಬಿರುವಾಗ, ...ಪದಲ್ಲಿ ಇನ್ನಷ್ಟು ಆತಂಕ ... "ಅನ್ಯಮತೀಯ"ರ ... ಓದುಗರು ಇನ್ನಷ್ಟು ...ಪಡುವಂತಹ ವಾತಾ...ವನ್ನು ಸೃಷ್ಟಿಸುವ ಉದ್ದೇಶ ...ಒಂದೇ ಉದಯವಾಣಿ ...ವರದಿಯನ್ನು ಪ್ರಕಟಿಸಿದೆ. ...ಕ ಮುಗ್ಧ ಓದುಗನಿಗೂ ...ಒಂದು ಕಟ್ಟುಕತೆ ಎಂದು ... ತಕ್ಷಣ ಹೊಳೆದುಬಿಡು ... ಉದಯವಾಣಿ ಒಂದು ...ಪತ್ರಿಕೆ ಮಾತ್ರವಲ್ಲ; ತನ್ನ ...ರನ್ನು ಶತದಡ್ಡರು ಎಂದು ...ಸಿರುವ ಮೂರ್ಖ ...ಯೂ ಹೌದು.


ಶಬರಿಮಲೆ: ಉಗ್ರರು

...ಶಬರಿಮಲೆಯ ಉಗ್ರರ ... ಈ ವರದಿಯಲ್ಲಿ ತರ್ಕಕ್ಕೆ ನಿಲುಕದ ಅಸಂಬದ್ಧಗಳು ...ವಿಷದಲ್ಲ, ವರದಿಯಲ್ಲಿ ಹೇಳಿರುವಂತೆ ಶಬರಿಮಲೆಯ ...ನದ ಮೆಟ್ಟಲು ಹತ್ತುವಾಗ ಉಗ್ರನೊಬ್ಬನ ಕಾಲು ... ಅವನ ಕೈಯಲ್ಲಿದ್ದ ಕಟ್ಟನಿಂದ ಬಾಂಬು ಜಾರಿ ...ಬಿದ್ದಿತು; ಪೊಲೀಸರು ಅವನನ್ನು ಹಿಡಿದರು. ಬಂಧಿತ ... ಆ ಕೂಡಲೆ ಸಯನೈಡ್ ಕ್ಯಾಪ್ಸೂಲ್ ನುಂಗಿದನಂತೆ; ...ೂ ಪೊಲೀಸರು ಇತರ ಉಗ್ರರ ಬಗ್ಗೆ ಅವನಿಂದ ...ತಿ ಸಂಗ್ರಹಿಸಿದರು! ಮತ್ತು ತಮ್ಮ ತಪಾಸಣೆ ...ಭಿಸಿದರು. ಪೊಲೀಸರ ಸೈರನ್ ಮೊಳಗಿತು. ಅದನ್ನು ... ಮರ ಹತ್ತಿ ಕುಳಿತಿದ್ದ ಮತ್ತೊಬ್ಬ ಉಗ್ರ ಜಾರಿ ...ಬಿದ್ದನಂತೆ. ಈ ಉಗ್ರ ಪೊಲೀಸರ ಸಮವಸ್ತ್ರದಲ್ಲಿದ್ದ. ... ಅದರಲ್ಲಿ ಒಂದು ತಪ್ಪು ಮಾಡಿದ್ದ; ಕಾಲಿಗೆ ಬಿಳಿ ...ಹಾಕಿಕೊಂಡಿದ್ದ. ಈ ಸುಳಿವನ್ನು ಅನುಸರಿಸಿಕೊಂಡು ...ಗಿ ಪೊಲೀಸರು, ತಮ್ಮದೇ ಸಮವಸ್ತ್ರದಲ್ಲಿದ್ದ ಆದರೆ ...ಶೂ ಹಾಕಿಕೊಂಡಿದ್ದ ಏಳು ಮಂದಿ ಉಗ್ರರನ್ನು ...ಸರಂತೆ. ಆದರೆ ಉದಯ ವಾಣಿ ತನ್ನ ಮುಖಪುಟ ...ಪ್ರಕಟಿಸಿದ ಆ ಕುರಿತ ವರದಿಗೆ ಸಂಬಂಧಿಸಿದ ... ನಡೆದಿರುವುದು ಶಬರಿಮಲೆ ಯಾದರೂ ವರದಿಯ ...ಲೈನ್‌ನಲ್ಲಿ ಕಾಣಿಸಿರುವುದು ಮಾತ್ರ ಶಬರಿಮಲೆಯಲ್ಲ ...ು ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ.

...ಹಾಗೆಯೇ ಶಬರಿಮಲೆಯಲ್ಲಿ ಪೊಲೀಸ್ ದಿರಿಸಿನಲ್ಲಿ ...ಉಗ್ರರು ನೈಜ ಪೊಲೀಸರಿಗೆ ಸಿಕ್ಕಿಬಿದ್ದ ಘಟನೆ ನಡೆ... ಜನವರಿ 12 ರ ಬೆಳಿಗ್ಗೆ 8 ಗಂಟೆಗಾದರೂ ...ಯವಾಣಿಯಲ್ಲಿ ಅದು ಪ್ರಕಟವಾದದ್ದು ಜನವರಿ ... ಸಂಚಿಕೆಯಲ್ಲಿ; ಭಯೋತ್ಪಾದನೆಯ ಘಟನೆಗಳ ...ಆ ಕ್ಷಣದಲ್ಲೇ ಜಗತ್ತಿನಾದ್ಯಂತ ಪ್ರಚಾರವಾಗುವ ಈ ದಿನಗಳಲ್ಲಿ ಯಾಕೆ ಈ ವಿಳಂಬ? ಅದೂಅಲ್ಲದೆ ಇಷ್ಟು ಗಂಭೀರವಾದ ಸುದ್ದಿಯೊಂದು ಬೇರೆ ಯಾವ ಪತ್ರಿಕೆ, ಟೀವಿ ಚಾನೆಲ್ಲು ಇತ್ಯಾದಿ ಮಾಧ್ಯಮಗಳಿಗೂ ಸಿಗದೆ, ಉದಯವಾಣಿಗೆ ಮಾತ್ರ ಸಿಕ್ಕಿರುವುದರ ರಹಸ್ಯವೇನು? ಉತ್ತರ, ಶಬರಿಮಲೆ ಕುರಿತ ಆ ವರದಿಯಲ್ಲೇ ಇದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಿಂದ ಅಯ್ಯಪ್ಪ ಭಕ್ತರ ಒಂದು ತಂಡ ಒಂದು ಸ್ಕಾರ್ಪಿಯೋ ಬುಕ್ ಮಾಡಿ ಶಬರಿಮಲೆಗೆ ಯಾತ್ರೆ ಹೋಗಿತ್ತು, ಬಂಟವಾಳದ ಚಾಮಿಗಳು ಒಂದು ಟಾಟಾಸುಮೋದಲ್ಲಿ ಹೋಗಿದ್ದರು. ಉದಯವಾಣಿ ವರದಿ ಪ್ರಕಾರ ಈ ಎರಡೂ ವಾಹನಗಳ ಅಡಿಯಲ್ಲಿ ಬಾಂಬ್ ಅಳವಡಿಸಲಾಗಿತ್ತು, ಪೊಲೀಸರು ಅದನ್ನು ಪತ್ತೆಹಚ್ಚಿ ಈ ವಿಷಯವನ್ನು ಪ್ರಚಾರ ಮಾಡದಂತೆ ಈ ಭಕ್ತರಿಗೆ ತಿಳಿಸಿ 'ಮಕರ ವಿಳಕ್ಕು ಇನ್ನೊಂದು ಸಲ ನೋಡಬಹುದು' ಎಂದು ಸಮಾಧಾನ ಹೇಳಿ ವಾಪಸ್ಸು ಕಳುಹಿಸಿದರು. ಈ ಪ್ರಕಾರವಾಗಿ ತಮ್ಮ ವಾಹನಗಳ ಅಡಿಯಲ್ಲಿ ಬಾಂಬು ಇಟ್ಟಿದ್ದರೂ, ಶಬರಿಮಲೆ ಅಯ್ಯಪ್ಪ ಮತ್ತು ಕೇರಳ ಪೊಲೀಸರ ಕೃಪೆಯಿಂದ ಜೀವ ಉಳಿಸಿಕೊಂಡು ಊರಿಗೆ ಮರಳಿದ ಅಯ್ಯಪ್ಪ ಭಕ್ತರು ಉದಯವಾಣಿಗೆ ಈ ವಿಷಯ ತಿಳಿಸಿದರು. ಅಂದರೆ ಶಬರಿಮಲೆಯಲ್ಲಿ ಆ ಘಟನೆ ನಡೆದ ದಿನ ನೆರೆದಿದ್ದ ಲಕ್ಷಲಕ್ಷ ಭಕ್ತರಲ್ಲಿ (ಒಂದು ವರದಿ ಪ್ರಕಾರ 30 ಲಕ್ಷ!) ಯಾರ ಗಮನಕ್ಕೂ ಬಾರದ ಈ ಘಟನೆ, ಬಂಟವಾಳದ ಭಕ್ತರು ಮತ್ತು ಉದಯವಾಣಿಯಿಂದಾಗಿ ಈಗ ಲೋಕಕ್ಕೆ ಗೊತ್ತಾಗುವಂತಾಯಿತು! ಆದರೆ ಉದಯವಾಣಿಯನ್ನು ಕಂಡರೆ ಆಗದವರು ಹೇಳುವ ಪ್ರಕಾರ ಕಿಡಿಗೇಡಿಗಳ ಮೊಬೈಲುಗಳಲ್ಲಿ ಹರಿದಾಡಿದ ಎಸ್.ಎಂ.ಎಸ್. ಮೆಸೇಜುಗಳನ್ನು ಉದಯವಾಣಿ ಹಾಗೆ ಹಾಗೇ ಎತ್ತಿ ಹಾಕಿತು!

ಉದಯವಾಣಿ ನೀಚತನ ಬಲ್ಲವರಿಗೆ, ಈ ಸುದ್ದಿಯ ಮೂಲ ಉದಯವಾಣಿಯೇ ಆಗಿ ದ್ದರೂ ಆಶ್ಚರ್ಯವಿಲ್ಲ, ಯಾಕೆಂದರೆ ಆ ಪತ್ರಿಕೆಯ ಆರ್.ಎಸ್.ಎಸ್. ನಿಷ್ಠೆ **"More loyal than the king"** ಎಂಬ ರೀತಿಯದ್ದು. ಬಿಜೆಪಿ ಸರ್ಕಾರ ಬಗ್ಗೆ ಎಂದರೆ ಉದಯವಾಣಿ ಕಾಲಿಗೇ ಡೈವ್ ಮಾಡಿ ಹೊರಳಾಡುವಂತಹ ಹುಳಪತ್ರಿಕೆ.

ರಾಜ್ಯ ಸರ್ಕಾರ ಈಗ ವಿದ್ಯಾರ್ಥಿಗಳಿಗೆ, ಭಯೋತ್ಪಾದ ನೆಯ ವಿರುದ್ಧ ಅಭಿಯಾನದ ಒಂದು ರಾಜ್ಯವ್ಯಾಪೀ ಕಾರ್ಯಕ್ರಮವನ್ನು ಪ್ರಾಯೋಜಿಸಿದ್ದು, ಅದರ ಜಾಹೀರಾತು ಗಳಿಗೇನೆ ಲಕ್ಷಗಟ್ಟಲೆ ಹಣವನ್ನು ವೆಚ್ಚ ಮಾಡಿದೆ. ಈ ಅಮೇಧ್ಯದಲ್ಲಿ ರಾಜ್ಯದ ಇತರ "ಗೌರವಾನ್ವಿತ" ಪತ್ರಿಕೆಗಳ ಜೊತೆ ಉದಯವಾಣಿಯೂ ತನ್ನ ಪಾಲನ್ನು ಪಡೆದುಕೊಂಡಿದೆ. ಭಯೋತ್ಪಾದನೆಯನ್ನು ನಿಗ್ರಹಿಸುವುದರಲ್ಲಿ ವಿದ್ಯಾರ್ಥಿಗಳಿಗೇ ಆಗಲಿ, ಜನಸಾಮಾನ್ಯರಿಗೇ ಆಗಲಿ ಏನು ಕೆಲಸವಿದೆ? ಎಂದು ಈ ಸರ್ಕಾರ ಸ್ಪಷ್ಟಪಡಿಸುತ್ತಿಲ್ಲ; ಯಾರೂ ಈ ಸರ್ಕಾರವನ್ನು ಆ ಬಗ್ಗೆ ಪ್ರಶ್ನಿಸುತ್ತಲೂ ಇಲ್ಲ. ಭಯೋತ್ಪಾದನೆಯನ್ನು ನಿಗ್ರಹಿಸುವುದು, ಎದುರಿಸು ವುದು ಹಾಗೂ ಆ ಕುರಿತು ಮಾಹಿತಿಯನ್ನು ಮೊದಲೇ ಕಲೆ ಹಾಕುವುದು, ಅದಕ್ಕೆಂದೇ ತರಬೇತು ಪಡೆದ ಸಶಸ್ತ್ರ ಪಡೆಗಳವರ ಕೆಲಸವೇ ಹೊರತು ಜನಸಾಮಾನ್ಯರದ್ದಲ್ಲ; ವಿದ್ಯಾರ್ಥಿಗಳದ್ದೂ ಅಲ್ಲ.

ರಾಜ್ಯ ಬಿಜೆಪಿ ಸರ್ಕಾರ ಈ ಅಭಿಯಾನವನ್ನು ನಡೆಸುತ್ತಿರುವುದು ಭಯೋತ್ಪಾದನೆಯ ವಿರುದ್ಧ ಜನರನ್ನು ಇನ್ನಷ್ಟು ಭಯಭೀತಗೊಳಿಸಿ, ಅನ್ಯಮತೀಯರ ವಿರುದ್ಧ ಅವರ ದ್ವೇಷವನ್ನು ಇನ್ನಷ್ಟು ಕೆರಳಿಸುವ ಉದ್ದೇಶದಿಂದ. ಭಯೋತ್ಪಾದನೆಗೆ ಈ ನಾಡಿನ ಮುಸ್ಲಿಮ್‌ರನ್ನು ಸಾರಾಸಗಟಾಗಿ ಉತ್ತರದಾಯಿಯನ್ನಾಗಿ ಮಾಡುವ ಹುನ್ನಾರ ಸರ್ಕಾರದ ಈ ಕಾರ್ಯಕ್ರಮದ ಹಿಂದೆ ಅಡಗಿದೆ. ಈ ನಿಟ್ಟಿನಲ್ಲಿ ಉದಯವಾಣಿ ಮೇಲೆ ಕಾಣಿಸಿದಂತಹ ವರದಿಗಳ ಮುಖಾಂತರ, ತಾನು ಸರ್ಕಾರದಿಂದ ತಿಂದ ಅಮೇಧ್ಯದ ಋಣ ಸಂದಾಯ ಮಾಡುತ್ತಿದೆ. ಹಾಗಾಗಿ, ತನ್ನ ಓದುಗರಿಗೆ ಮುಖಪುಟದಲ್ಲೇ ಹಸಿಹಸಿ ಸುಳ್ಳು ಹೇಳಿ, ಅವರು ಪತ್ರಿಕೆಯ ಮೇಲೆ ಇಟ್ಟ ವಿಶ್ವಾಸಕ್ಕೆ ದ್ರೋಹ ಬಗೆದಿರುವುದಕ್ಕೆ ಉದಯವಾಣಿ ಓದುಗರ ಕ್ಷಮೆ ಕೋರುತ್ತದೆ ಎಂದು ನಿರೀಕ್ಷಿಸಲಾಗದು.

ಉದ್ದೇಶಪೂರ್ವಕವಾಗಿ ಮಾಡಿದ ಪಾಪಕೃತ್ಯಕ್ಕೆ ಪಶ್ಚಾತ್ತಾಪವೆಲ್ಲಿಯದು?

■ ಜಿ. ರಾಜಶೇಖರ

ಸೋಫಾಸೆಟ್ ಬೇಡ ಎಂದ ಮೇಷ್ಟ್ರು!

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು



ಅಕ್ಷರ ರೂಪ: **ಅಕ್ಷತಾ ಕೆ.**

ಅನಂತಮೂರ್ತಿಯವರು ಇಂಗ್ಲೆಂಡಿನಿಂದ ಬಂದ ನಂತರ ಮೈಸೂರಿನ ವಿ.ವಿ ಪುರಂ ಪೊಲೀಸ್ ಸ್ಟೇಷನ್ ಹತ್ತಿರದ ಔಟ್‌ಹೌಸ್ ಒಂದರಲ್ಲಿ ಬಾಡಿಗೆಗಿದ್ದರು. ಮನೆ ಓನರ್ ಪುಟ್ಟಸ್ವಾಮಿಯವರ ಹೆಂಡತಿ ಸುಶೀಲಮ್ಮ ನನಗೆ, ತೇಜಸ್ವಿಗೆ ಹತ್ತಿರದ ಸಂಬಂಧಿಕರಾಗಿದ್ದು ಈ ಮನೆಯನ್ನು ಮೇಷ್ಟ್ರಿಗೆ ನಾವೇ ಬಾಡಿಗೆಗೆ ಕೊಡಿಸಿದ್ದೆವು. ಈ ಸಂದರ್ಭದಲ್ಲಿ ನಾನು ಮಹಾರಾಜ ಕಾಲೇಜಿನ ನನ್ನ ಸಹಪಾಠಿಯಾಗಿದ್ದ ಕೊಳಲುವಾದಕ ಗುಣಸಿಂಗ್ ಬಳಿ ಆಗಾಗ ಕೊಳಲು ಕಲಿಯಲು ಹೋಗುತ್ತಿದ್ದವನು ಅದೇ ದಾರಿಯಲ್ಲಿದ್ದ ಮೇಷ್ಟ್ರ ಮನೆಗೂ ಹೋಗಿ ಅವರೆದುರಿಗೆ ನಾನು ಕಲಿತ ಆಯಾ ದಿನದ ಪಾಠವನ್ನೂ ಒಪ್ಪಿಸುತ್ತಿದ್ದೆ. ಅವರು ಪಾಪ ನನ್ನಿಂದ ಈ ರೀತಿ ತೊಂದರೆಯಾದರೂ ನಗುನಗುತ್ತಲೇ ಸಹಿಸಿಕೊಂಡು "ಏ ಶಾಮಣ್ಣ, ಸತ್ಯವಾಗಿ ಹೇಳ್ತಿದೀನಿ ನಿನ್ನ ಕೈಲಿ ನಾದ ಇದೆ ಕಣೋ, ಯಾವುದಾದರೊಂದು ವಾದ್ಯವನ್ನು ಮಾತ್ರ ಇಟ್ಕೊಂಡು ಅದನ್ನೆ ಸರಿಯಾಗಿ ಅಭ್ಯಾಸ ಮಾಡು" ಎಂದು ಉತ್ತೇಜನದ ಮಾತುಗಳನ್ನು ಆಡುತ್ತಿದ್ದರು. ಆದ್ದರಿಂದ ಮತ್ತೆ ಮತ್ತೆ ಅವರ ಮನೆಗೆ ಹೋಗಿ ನಾನು ಕಲಿತ ಸಂಗೀತದ ಪಾಠಗಳನ್ನು, ನನ್ನ ಸಂಗೀತ ಪ್ರೌಢಿಮೆಯನ್ನು ಅವರೆದುರಿಗೆ ಪ್ರದರ್ಶಿಸುತ್ತಾ ಅವರಿಗೆ ತೊಂದರೆ ಕೊಡುತ್ತಿದ್ದೆ. ಹೀಗೊಮ್ಮೆ ಅವರ ಮನೆಗೆ ಹೋದಾಗ ಅವರು ಮತ್ತು ಎಸ್ತರ್ ಇಬ್ಬರೂ "ಒಂದು ಒಳ್ಳೆಯ ಕಾರು ಎಲ್ಲಾದರೂ ಮಾರಾಟ ಕ್ಕಿದ್ದರೆ ಹೇಳು ಶಾಮಣ್ಣ. ಸೆಕೆಂಡ್ ಹ್ಯಾಂಡಾದ್ರೂ ಪರವಾಗಿಲ್ಲ, ನಮಗೆ ಕಾರಿನ ಅವಶ್ಯಕತೆ ಬಹಳ ಇದೆ" ಎಂದರು.



ಮೈಸೂರಿನ ರೈಲ್ವೆ ಸ್ಟೇಷನ್‌ಗೆ ಹೊಂದಿಕೊಂಡಂತೆ ಹಳೆಯದೊಂದು ಮಾಂಸಾಹಾರಿ ಹೋಟೇಲ್ ಇತ್ತು, ಬಿ.ಎಸ್. ಶ್ರೀರಾಮ್ ಮತ್ತು ನಾನು ಆ ಹೋಟೇಲಿನ ಕಾಯಂ ಗಿರಾಕಿಗಳಾಗಿದ್ವಿ, ಯಾಕೆಂದರೆ ಬೇರೆ ಕಡೆಗೆ ಹೋಲಿಸಿದರೆ ಇಲ್ಲಿ ಊಟ ಚೆನ್ನಾಗೂ ಇರ್ತಿತ್ತು ಮತ್ತು ಕಡಿಮೆ ಬೆಲೆಗೂ ಸಿಕ್ತಿತ್ತು. ಈ ಹೋಟೆಲ್‌ನ ಮಾಲೀಕರ ಹತ್ತಿರ ಮಾರೀಸ್8 ಕಾರು



ಮಾರಾಟಕ್ಕಿದೆ ಎಂದು ತಿಳಿದಾಗ ಮೇಷ್ಟ್ರು ಹೇಳಿದ್ದು ನೆನಪಾಗಿ ಹೋಗಿ ವಿಚಾರಿಸಿದೆ. ನನ್ನ ತಂದೆಯವರ ಬಳಿಯು ಇದೇ ಮಾರಿಸ್8 ಕಾರೇ ಇದ್ದಿದ್ದರಿಂದ ಅದನ್ನು ಓಡಿಸಿ ಅಭ್ಯಾಸವಿತ್ತು. ಕಾರಿನ ಮಾಲೀಕರು ಕಾರಿನ ಬಾಗಿಲು ಸ್ವಲ್ಪ ಅಲುಗಾಡುತ್ತಿದೆ ಜೊತೆಗೆ ಸಣ್ಣಪುಟ್ಟ ರಿಪೇರಿ ಇದೆ ಅದನ್ನೆಲ್ಲ ಮಾಡಿಸಿಕೊಡುವುದಾಗಿ ತಿಳಿಸಿದರೂ ಅದನ್ನು ಆಮೇಲೆ ಮಾಡಿಸಿ ನಾನು ಮೊದಲು ಕಾರಿನ ಟ್ರಯಲ್ ತೋರಿಸಿಕೊಂಡು ಬರ್‍ತೀನಿ ಎಂದು ಕಾರನ್ನು ಗ್ಯಾರೇಜಿಂದ ಹೊರ ತೆಗೆಸಿಕೊಂಡು ಹೊರಟೆ. ಕಾರಿನ ಒಂದು ಬಾಗಿಲು ಕಿತ್ಕಂಡು ಬಂದಿತ್ತು. ಅದನ್ನು ಹಗ್ಗ ಬಿಗಿದು ಕಟ್ಟಿದ್ದರು. ಅದೆಲ್ಲ ಆಮೇಲೆ ಸರಿ ಮಾಡಿಸಿದ್ರೆ ಆಯಿತು ಎಂದು ಯೋಚಿಸಿದೆ. ಮೇಷ್ಟ್ರಿಗೆ ಟ್ರಯಲ್ ತೋರಿಸಿ ಈ ಕಾರನ್ನು ಅವರಿಗೆ ಕೂಡಲೆ ಖರೀದಿಗೆ ಕೊಡಿಸಬೇಕೆಂಬ ಆಸೆ ನನ್ನದು. ಮೇಷ್ಟ್ರ ಮನೆಗೆ ಹೋಗಿ ಅವರು ಮತ್ತು ಎಸ್ತರ್ ಇಬ್ಬರನ್ನು ಹಿಂದಿನ ಸೀಟಿನಲ್ಲಿ ಕೂರಿಸಿಕೊಂಡು ಟ್ರಯಲ್ ತೋರಿಸಲು ಸಯ್ಯಾಜಿ ರಾವ್ ರಸ್ತೆ ಕಡೆಗೆ ಹೊರಟೆ.

ಹೀಗೆ ಕರೆದುಕೊಂಡು ಹೊರಟ ಸಂದರ್ಭದಲ್ಲಿ ಫೌಂಟನ್ ವ್ಯೂ ಹೋಟೇಲ್ ಎದುರಿನ ಸರ್ಕಲ್‌ನಲ್ಲಿ ರಾಂಗ್ ಸೈಡಿಂದ ಬಂದ ಎರಡು ಟಾಂಗಾ ಗಾಡಿಗಳು ಒಮ್ಮೆಲೆ ನಮ್ಮ ಕಾರಿಗೆ ಡಿಕ್ಕಿ ಹೊಡೆದವು. ಇದರ ಪರಿಣಾಮವಾಗಿ ಕಾರಿನ ಮುಂಭಾಗದ ಎರಡು ಬಾಗಿಲುಗಳು ಹಾಗೂ ಮಡ್ ಗಾರ್ಡ್ ಕಿತ್ತು ಕೊಂಡು ಬಿದ್ದವು. ಬಾಗಿಲಂತೂ ಟಾಂಗಾದ ಕಡಾಣಿಗೆ ಸಿಲುಕಿಕೊಂಡು ಎಳೆದುಕೊಂಡು ಹೋಗ್ತಾ ಇತ್ತು. ಯಾವ ಮುನ್ಸೂಚನೆಯೂ ಇಲ್ಲದೆ ನಡೆದ ಈ ಅಪಘಾತದಿಂದ ಕಂಗಾಲಾಗಿ ಹೋಗಿದ್ದ ನಾನು ಬೇರೇನೂ ಉಪಾಯ ಹೊಳೀದೆ ಸ್ಟೇರಿಂಗ್ ಗಟ್ಟಿಯಾಗಿ ಹಿಡಿದು ಕೊಂಡು ನಡುಗುತ್ತಾ ಕೂತಿದ್ದರೆ, ಹಿಂದೆ ಕೂತಿದ್ದ ಎಸ್ತರ್ ಮತ್ತು ಮೇಷ್ಟ್ರು ಇಬ್ಬರೂ ಹಿಂದ್ಗಡೆ ಬಾಗಿಲು ತೆಕ್ಕಂಡು ರಸ್ತೆಗೆ ಜಿಗಿದು ನಿಂತಿದ್ದರು. ಸುತ್ತಮುತ್ತಲ ಜನರೆಲ್ಲ ಏನಾಯ್ತೋ ಎಂದು ಗಾಬರಿಯಿಂದ ಓಡಿ ಬಂದು ನಮ್ಮ ಸುತ್ತ ನೆರೆದರು.

ಇಷ್ಟೆಲ್ಲಾ ನಡೆದಿದ್ದು ಟಾಂಗಾದವರ ತಪ್ಪಿನಿಂದಲೇ ಆಗಿದ್ದರೂ ಅವರಿಬ್ಬರೂ ಒಂದಾಗಿ ನನ್ನದೇ ತಪ್ಪು ಅಂತ ಜಗಳಕ್ಕೆ ಬಂದರು. ಜೊತೆಗೆ ಸರ್ಕಲ್‌ನಲ್ಲಿ ನಿಂತಿದ್ದ ಪೊಲೀಸನವನಿಗೆ ನನ್ನ ಬಗ್ಗೆ ದೂರು ನೀಡಿದರು. ನಮ್ಮ ಸುತ್ತ ಗುಜುಗುಜು ವಾತಾವರಣ ಸೃಷ್ಟಿಯಾಯಿತು. ಅಷ್ಟೊತ್ತಿಗೆ ಫೌಂಟನ್ ವ್ಯೂ ಮಾಲೀಕ ಮೇಷ್ಟ್ರಿಗೆ ಪರಿಚಿತನಾದ ಬೆಳ್ಳಿಯಪ್ಪ ಜನರ ಗುಂಪಿನಲ್ಲಿದ್ದವರು ಮುಂದೆ ಬಂದು ವಿಚಾರಣೆ ಮಾಡಿ ಟಾಂಗಾದವನಿಗೆ ಬೈದು, ಪೊಲೀಸರಿಂದ ನನ್ನನ್ನು ಬಿಡಿಸಿದರು. ಜೊತೆಗೆ ಬಿದ್ದು ಹೋದ ಬಾಗಿಲುಗಳನ್ನು ಕಾರೊಳಗೆ ಇಟ್ಟುಕೊಂಡು ಮೊದಲು ಇಲ್ಲಿಂದ ಜಾಗ ಖಾಲಿ ಮಾಡಿ ಎಂದು ನನಗೆ ಎಚ್ಚರಿಕೆ ನೀಡಿದರು. ನನ್ನನ್ನು ಮತ್ತು ನಾನು ತಂದ ಕಾರಿನ ಸ್ಥಿತಿಯನ್ನು ನೋಡುತ್ತಾ ನಿಂತಿದ್ದ ಮೇಷ್ಟ್ರು ನಗುತ್ತಾ "ಶಾಮಣ್ಣ ನಾನು ಕಾರು ಬೇಕಂತ ಕೇಳಿದರೆ ನೀನು ಸೋಫಾ ಸೆಟ್ ತಗಂಬಂದಿದೀಯಲ್ಲ, ತುಂಬಾ ಚೆನ್ನಾಗಿರೋ ಸೋಫಾ ಸೆಟ್ ನಮ್ಮನೇಲಿ ಇದೆ. ಇನ್ನೊಂದು ಇಡಕ್ಕೆ ಜಾಗ ಇಲ್ಲ, ಮೊದಲು ಇದನ್ನು ಇದರ ಮಾಲೀಕರಿಗೆ ವಾಪಾಸ್ ಕೊಟ್ಟು ಬಾ. ನಾನು ಎಸ್ತರ್ ನೀ ಬರೋವರೆಗೆ ಕಾಫಿ ಹೌಸ್‌ನಲ್ಲಿ ಕಾದಿರ್‍ತೇವೆ" ಎಂದರು. ನಾನು ಕಾರಿಂದ ಇಳಿದು ಕಾರನ್ನು ಹತ್ತಿರದಿಂದ ನೋಡಿದಾಗ ಮೇಷ್ಟ್ರು ಹೇಳಿದಂತೆಯೆ ಮಡ್‌ಗಾರ್ಡ್ ಮತ್ತು ಬಾಗಿಲುಗಳನ್ನು ಕಳೆದುಕೊಂಡು ಕಾರು ಥೇಟ್ ಸೋಫಾಸೆಟ್ಟಿನಂತೆಯೇ ರಸ್ತೆಯ ನಡು ಮಧ್ಯದಲ್ಲಿ ನಿಂತಿತ್ತು, ಅಲ್ಲ ಕುಳಿತಿತ್ತು.

(ಮುಂದುವರೆಯುವುದು)

ಮಾದೇಗೌಡ್ರಿಗೆ ವಡದವ್ರು ಭಜರಂಗದವಂತೆ ನಿಜವೆ?

ಕೌಳಮಾವ ತಲೆಗೆ ರುಮಾಲು ಬಿಗಿದು ರಗ್ಗು ಹೊದ್ದಿದ್ದರೂ ಚಳಿ ಅವನ ದೇಹವನ್ನೇ ಗೊಗ್ಗರಿಸಿತ್ತು. ಹೊತ್ತು ಆಳುದ್ದ ಬಂದರೂ ಹೋಟೆಲಿನ ಹೊರಗೇ ಬಿಸಿಲಿಗೆ ಹಾತೊರೆದು ಕುಳಿತಿದ್ದವನು ಉಗ್ರಿ ಮತ್ತು ಜುಮ್ಮಿ ಬಂದ ನಂತರ ಒಳಗೆದ್ದು ಬರುತ್ತಾ

"ಮಾದೇಗೌಡ ಮುಖ್ಯಮಂತ್ರಿ ಮೇಲೆ ಕೇಸಾಕಿದ್ದನಂತೆ?" ಎಂದ.

"ಊ ಕಣ ಮಾವ."

ಬಯಲು ಸೀಮೆಯ
ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಅವುನಪ್ಪ ಗಂಡು ಅಂದ್ರೆ" ಎಂದು ಸೀರ ಮೆಚ್ಚಿ ಮಾತನಾಡಿದ.

"ಅಂಗಾಕಬವುದೇನ್ಲ?" ಎಂದಳು ಜುಮ್ಮಿ.

"ಯಂಗೇ?"

"ಮಾದೇಗೌಡರಿಗೆ ವಡದಿರೋರೆ ಯಾರೊ. ಎಡೂರಪ್ಪನ ಮ್ಯಾಲೆ ಯಂಗೆ ಕೇಸು ಮಾಡಿದ್ರು?"

"ಅದು ಹಿಂಗೆ ಕಣೆ. ವಡದಿರೋರು ತಮ್ಮಣ್ಣನ ಕಡಿಯೋರು. ಅದ್ಕೆ ಮಾದೇಗೌಡ್ರು ತಮ್ಮಣ್ಣನ ಮ್ಯಾಲೆ ಕೇಸು ಕೊಟ್ರು. ಅವುನ್ನ ಹೋಂ ಮಿನಿಸ್ಟ್ರಾದೋನು ಅರೆಸ್ಟು ಮಾಡುಸ್ದೆ ಜ್ವತೆಲೆ ಕೂರಿಸಿಗಂಡು ಕುಂತಿದ್ನಂತೆ. ಅದೂ ಎಡೂರಪ್ಪನ ಜ್ವತೆ. ಅದ್ಕೆ ಮಾದೇಗೌಡ್ರು 'ಪೊಲೀಸ್‌ನೋರಿಗೆ ಬೇಕಾದ ವ್ಯಕ್ತಿ ಜ್ವತೆ ನೀವ್ಯಂಗೆ ಕುಂತಿದ್ರಿ? ಅದ್ಕೆ ನೀವೂ ಅಪರಾಧಿಗಳು' ಅಂತ ಕೇಸು ಮಾಡ್ಯವುನೆ."

"ಮುಂದುಕೇನಾಗಬವುದು?"

"ಮುಂದಕ್ಕೇನು? ಎಡೂರಪ್ಪ ತಮ್ಮಣ್ಣ ಯಲ್ಲಾ ಜಾಮೀನು ತಗಬೇಕಾಯ್ತದೆ."

"ವಳ್ಳೆ ಕಲಸ ಮಾಡಿದ ಸುಮ್ಮನಿರು ಮಾದೇಗೌಡ" ಎಂದು ಸೀರ ನಕ್ಕ.

"ಅವುನೊಂದು ಸತಿ ಇಂಜಿನಿಯರ್‌ಗೆ ವಡದಿದ್ದ ಅಲವೆ?" ಎಂದ ಕಾಳಮಾವ.

"ಊ ಕಣ ಮಾವ, ತಗುದು ಬಾರಸಿದ್ದ"

"ಇಂಜನೀರ್‌ಗೆ ವಡದಿದ್ನೆ?" ಎಂದು ಜುಮ್ಮಿ ಬಾಯಿ ಮೇಲೆ ಕೈಯಿಟ್ಟಳು.

"ಊ ಕಣೇ. ನೀರಿಲ್ದೆ ಗದ್ಯಲ್ಲ ವಣಗತಾಯಿದ್ದೊ. ಆಗ ಇದೇ ಮಾದೇಗೌಡ ಇಂಜಿನಿಯರ್ ಬರೇಲಿ ಅಂದ. ಅವುನು ಮನೆಲಿದ್ದು ಇಲ್ಲ ಅನ್ನಿಸಿಗಂಡ. ಆಗ ಮಾದೇಗೌಡ ಮನೆತಕ್ಕೆ ವೋದ. ಮನಿನಿದ್ದ ಇಂಜಿನಿಯರು ಎದ್ದೀಚೆಗೆ ಬಂದ. ಇವುನು ತಗುದು ಬುಟ್ಟ ಒಂದ ಕಪಾಲಕೆ. ಆಗ ನನಮಗ ಅಯ್ಯಯ್ಯಪ್ಪೊ ನಾನು ದಲಿತ ಬನಪ್ಪಾ ಅಂತ ಕೂಗಿದ."

"ಒಹೊ ದಲಿತೋನೊ ಅವುನು?"

"ಊ ದಲಿತೋನು. ಸರಿ ದಲಿತರಲ್ಲ ಸೇರಿ ಮಾದೇಗೌಡ ನಮ್ಮ ಇಂಜಿನಿಯರ್ ಗ್ಗಡದವುರೆ. ಅವರು ಕೂಡ್ಲೆ ರಾಜೀನಾಮೆ ಕೊಡಬೇಕು ಅಂತ ಕೂಗಾಡಿದ್ರು. ಆಗ ಮಾದೇಗೌಡ ಅವುನು ದಲಿತ ಅಂತ ಹಣೆಮ್ಯಾಲೆ ಬೋರ್ಡಾಯ್ಕಂಡಿರಲಿಲ್ಲ ಅದ್ಕೆ ವಡದೆ ಅಂದ. ಆಗ್ಯಲ್ಲ ಸುಮ್ಮನಾದ್ರು."

"ಸರಿಯಾಗೇಳವುನೆ ಬುಡು."

"ಸರಿ, ಅಂಥಾ ಸಿಟ್ಟಿನ ಮನ್ಸ ಯಾವೊ ಪೋಲಿ ಬಡ್ಡೆತ್ತವು ಕೈಲಿ ವದೆ ತಿಂದು ಕೋರ್ಟಿಗೋಗಂಗಾಯ್ತಲ್ಲ ಹೇಳು?"

"ಮಾದೇಗೌಡನಿಗೆ ವಡದವು ಭಜರಂಗದವಂತಲ್ಲಾ, ನಿಜವೆ?"

"ಮಾದೇಗೌಡನ ಮುಟ್ಟೊ ಬೀಜ ಭಜರಂಗದವುಕೆಲ್ಲದೇ ಮಾವ? ಅವೇನಿದ್ರು ಸಾಬರಮ್ಯಾಲ ಬೀಳ್ತವೆ. ಅದೂ ಬಡಸ್ಥನದ ಸಾಬರ ಮ್ಯಾಲೆ ಬೀಳ್ತವೆ."



"ನಿಜ ಕಂಡ್ಳ ಉಗ್ರಿ. ಬಂಡಿಗನೂಲಿಗಂಟ ಬಂದಿದ್ದರಂತೆ ಭಜರಂಗದೋರು" ಎಂದಳು ಜುಮ್ಮಿ.

"ಅವೇನು ದೇಸದಿಂದ ಬಂದಿಲ್ಲ ಕಣೇ. ಇಲ್ಲೆ ಹುಟ್ಟಿಗಂಡವೆ. ನೋಡಾಗ್ನೆ ಸಾಬರಂಗಡಿಗ್ಯಲ್ಲ ಹೋ... ದಾನ್ಲಿ ಮಾಡ್ತವಂತೆ. ಅವುರ ಕೈಲಿದ್ದ ಕಾಸ ಕಿತಗತ್ತವಂತೆ. ಇಂಗಾದ್ರೆ ಯಂಗೆ ಮಾವ?"

"ಅವ ಹಿಡಕಂಡು ಯಕ್ಕತ್ತಿನ ಮ್ಯಾಲೆ ಏಧಿಬೇಕ... ಕಂಡ್ಳ." ಪೊಲೀಸೇನು ಮಾಡ್ತಯಿದ್ದರೂ?" ಎಂದ ಕಾಳಮಾವ.

"ಅಂತ ಮಾದೇಗೌಡನ... ಮ್ಯಾಲೆ ಕೈ ಮಾಡಿದೊರನೆ ಹಿಡಿಯಕ್ಯಾಗದ ಪೊಲೀಸ್‌ನೋರು ಇನ್ನ ಸಾಬರ ಮನಿಗೆ ನುಗ್ಗಿದೋರ... ಹಿಡದರೆ ಮಾವ?"

"ಅಂಗರೆ ಪೊಲೀಸ್ಯಾಕೆ ಅಂತಿನಿ?"

"ಅಂಗೆ ಆಗ್ಯದಪ್ಪ ನಿನ್ನಂಥೋರ ಮುಂದಿಟಗಂಡು ವಸಿ ಜನ... ಜ್ವತಿಯಾಗಿ ಭಜರಂಗದೋರ... ಬಂದೇಟಿಗೆ ಬುರುಡೆ ಮ್ಯಾ... ಬುಡಬೇಕು, ಆಗ್ಲೆ ಸರಿಯಾಗದಿದು."

"ಸಾಬರಿಗೇಳ್ಳ ಅಂಗಂತವು."

"ನೀನೆ ಹೇಳ್. ನಿನಿಗೂ ..."

ಯಾರದ್ದೋ ಹೆಸರು ಯಾರದ್ದೋ ಬಸಿರು

ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲಿತ್ತು ಅನ್ನುವ ಗಾದೆ ಮಾತು ಇದೆ. ಗರತಿ ಅನ್ನೋಳು ಹೆಪ್ಪು ಹಾಕುವಾಗ ಗಂಡನ ಮೇಲಿನ ಸಿಟ್ಟಿಗೆ ಒಂದೆರಡು ಕಲ್ಲನ್ನೂ ಸೇರಿಸಿದ್ದರೆ; ಊಟ ಮಾಡುವಾಗ ಆ ಕಲ್ಲುಗಳು ಅನ್ನೋವು ಗಂಡನಿಗೆ ಸಿಕ್ಕಿ 'ಏನೇ ಮೊಸರಲ್ಲೂ ಕಲ್ಲು' ಅಂತ ರೇಗಿದರೆ; ಊರು ಕೇರಿ ಎಲ್ಲ ಒಂದಾಗುವಂತೆ ಸಾಧ್ವೀಮಣಿ ಅರಚಾಡಿ ಪುಗಸಟ್ಟೆ ಮನರಂಜನೆ ಪಡೆಯಲು ನೆರೆದ ಜನರ ಎದುರು 'ನೋಡ್ರಪಾ ಈ ಹಾಳಾದ ನನ್ನ ಗಂಡನಿಗೆ ಏನು ಬಂದದೆ ಅಂತೀನಿ. ಉಣ್ಣೋ ಮೊಸರಲ್ಲೂ ಕಲ್ಲು ಅದೆ ಅಂತಾನಲ್ಲ' ಎಂದೆಲ್ಲ ಕೂಗಾಡಿ ಗಂಡ ಎಂಬ ಪ್ರಾಣಿಯ ಮಾನವ ಮೂರು ಕಾಸಿಗೆ ಹರಾಜು ಮಾಡುವ ಗಟಾಣಿ ಹೆಂಗಸಾಗಿದ್ದರೆ ಅನ್ನುವ ಕುಹಕಿಗಳ ಮಾತು ಒತ್ತಟ್ಟಿಗಿರಲಿ. ಆ ಗಾದೆಯ ಮಾತಿನಂತೆ ಮಾನ್ಯ ಮುಖ್ಯಮಂತ್ರಿ ಯಡ್ಯೂರಪ್ಪನವರು ಯಾವುದೇ ಕೆಲಸಕ್ಕೆ ಕೈಹಾಕಿದರೂ ವಿರೋಧ ಪಕ್ಷಗಳು ಅದರಲ್ಲಿ ಏನಾದರೂ ಒಂದು ತೂತು ಕಾಣ್ತಿದಾರಂತೆ. ಜನರ ಅಭಿವೃದ್ಧಿಗೆ ಅಂತ ಒಂದು ಯೋಜನೆ ಹಾಕಿದರೆ ಸಾಕು. ಅದನ್ನ ಹಾಕಕ್ಕೆ ಇದು ಕಾರಣ ಅಂತಾರಂತೆ. ಹಿಂಗೆ ಯೋಜನೆ ಅಂತ ಹಾಕಿ ಅವಿವರ ಕೈಲಿ ಯಾಕೆ ಬಯ್ಯಿಸ್ಕೊಳ್ಳಬೇಕು ಅಂತ ಸುಮ್ಮನಿದ್ದರೆ ಆ ಯೋಜನೆ ಯಾಕೆ ಹಾಕಿಲ್ಲ ಅಂತ ಕಟಾಯಿಸುತ್ತಾರಂತೆ. ಇದನ್ನ ಅವರೇ ನೊಂದುಕೊಂಡು ಹೇಳಿದ್ದಾರೆ.



ಹೀಗೆ ಎಲ್ಲಾ ಯೋಜನೆಗಳಿಗೂ ಅಡ್ಡಗಾಲು ಹಾಕುತ್ತಿದ್ದರೆ ಯಡ್ಯೂರಪ್ಪನವರಿಗೆ ಸಿಟ್ಟು ಸಹಜವಾಗಿ ಬರುತ್ತೆ ಅಂತಹ ಸಂದರ್ಭಗಳಲ್ಲಿ ವಿಪಕ್ಷ ನಾಯಕರು ಮನುಷ್ಯರಾಗಿ ಗೋಚರಿಸುವುದಿಲ್ಲವಂತೆ. ಕಾಡುಪ್ರಾಣಿಗಳಾಗಿ ಕಾಣುತ್ತಾರೆ ಅಂತ ಮೈಸೂರಿನಲ್ಲಿ ಹೇಳಿದ್ದರು. ಈಗ ಒಂದು ಹೆಜ್ಜೆ ಇನ್ನೂ ಮುಂದೆ ಹೋಗಿದ್ದಾರೆ. ಅವರೆಲ್ಲ ಬ್ರಹ್ಮರಾಕ್ಷಸರಾಗಿ, ದೆವ್ವ ಪೀಡೆ, ಪಿಶಾಚಿಗಳಾಗಿ ಗೋಚರಿಸುತ್ತಿದ್ದಾರಂತೆ!

ಇದರಲ್ಲಿ ಏನೂ ಅತಿಶಯ ಇಲ್ಲ ಅನ್ನಿ. ಮಹದಾಯಿ ಯೋಜನೆ ಅನ್ನೋದು ಇದೆಯಲ್ಲ ಅದು ಸುಮಾರು 250 ಕೋಟಿ ರೂಪಾಯಿ ಯೋಜನೆ ಅಂತೆ. ಈಗಿನ ವಿಪಕ್ಷ ನಾಯಕರು ಹಿಂದೆ ಅಧಿಕಾರದ ಸವಿ ಅನುಭವಿಸಿದವರು. ಒಂದು ಹೊಸ ಯೋಜನೆಗೆ ಹಣ ಮಂಜೂರು ಮಾಡಿದರೆ ಎಷ್ಟು ಗಿಟ್ಟುತ್ತೆ ಅಂತ ತಿಳಿದವರು. ಯೋಜನೆ ಮುಗಿಯುವವರೆಗೂ ಕಾಯುತ್ತಾ ಕುಳಿತರೆ ತಮ್ಮ ಖರ್ಚಿನಲ್ಲಿ ಮತ್ತೆ ಯಾರಾದರೂ ಬಂದು ಕುಳಿತು ತಮ್ಮ ಶ್ರಮದ ಫಲ ಅನುಭವಿಸುತ್ತಾರೋ ಅನ್ನೋ ಅನುಮಾನ ಸಹಜ. ಅದಕ್ಕೆ ಈಗ ಹೊಸ ಪದ್ಧತಿ ಜಾರಿಯಲ್ಲಿದೆಯಂತೆ. ಕಾಮಗಾರಿ ಮಂಜೂರು ಆಗುತ್ತಿದ್ದ ಹಾಗೆ ಅಂದಾಜು ಖರ್ಚಿನ ಶೇಕಡ ಇಂತಿಷ್ಟು ಅಂತ ಮುಡಿಪು ಇಡಬೇಕಂತೆ. ಎಷ್ಟು ಅನ್ನೋದು ಸಮಯ ಸಂದರ್ಭಕ್ಕೆ ಬದಲಾವಣೆಯಾಗಬಹುದಾದರೂ ಶೇಕಡ ಹತ್ತಕ್ಕಿಂತ ಮೋಸ ಇಲ್ಲವಂತೆ. ಅನುಭವಿ ವಿಪಕ್ಷ ನಾಯಕರಿಗೆ ಈ ಯದ್ವಿ ಬದ್ವೀ ಮಗ ಇಷ್ಟೊಂದು ಹೊಡೀತಾನಲ್ಲ ಅನ್ನೋದು ನೆನಸಿಕೊಂಡರೆ ಹೊಟ್ಟೆಗೆ ಬೆಂಕಿ ಬಿದ್ದ ಹಾಗೆ ಆಗುತ್ತೆ ಅದಕ್ಕೆ ಏನೇನೋ ತಾಂತ್ರಿಕ ಅಡಚಣೆಗಳನ್ನು ಮುಂದೆ ಇಟ್ಟು ಹೋರಾಡ್ತಾರೆ. ಯಡ್ಯೂರಪ್ಪನವರಿಗೋ ಕಂಡಂಗೆ ಇಷ್ಟೊಂದು ಹಣ ಕೈಬಿಟ್ಟು ಹೋಗುತ್ತಲ್ಲ ಅನ್ನೋ ಚಿಂತೆ. ಯಾವುದೇ ತಾಂತ್ರಿಕ ತೊಂದರೆ ಇಲ್ಲ ಬಹುಜನರಿಗೆ ಉಪಯೋಗವಾಗಿ ಕೆಲವರು ಕಷ್ಟ ಅನುಭವಿಸಲೇಬೇಕು ಅಂತ ಆಧ್ಯಾತ್ಮಿಕತೆ ಬೋಧಿಸಿ ಹಣ ಬರುವುದನ್ನು ಗ್ಯಾರಂಟಿ ಮಾಡಿಕೊಳ್ತಿದ್ದಾರೆ.

ಹಿಂಗಾಗಿ ಈ ಮಹದಾಯಿ ಅನ್ನೋದು ಪ್ರತಿಷ್ಠೆ ಕಣವಾಗಿ ಕುಂತಿದೆ. ಏನಾದರೂ ಯೋಜನೆ ಮಾಡಲು ಬಿಡಲ್ಲ ಅಂತ ಅವರು, ಮಾಡೇ ಮಾಡ್ತೀವಿ ಅಂತ ಇವರು ಕುಂತವೆ. ಈ ನಡುವೆ ಯಾವನೋ ಬಡಪಾಯಿ ರೈತ ಆತ್ಮಹತ್ಯೆ ಮಾಡಿಕೊಂಡ. ಅದನ್ನೇ ಮುಂದೆ ಮಾಡಿಕೊಂಡು ರೈತರು ಪ್ರತಿಭಟನೆಗಿಳಿದರು. ಕನಿಷ್ಠ ಇಪ್ಪತ್ತೈದು ಕೋಟಿ ಕಣ್ಣಮುಂದೆ ಕುಣೀತಿತ್ತಲ್ಲ. ಯಡ್ಯೂರಪ್ಪನವರು ಯೋಜನೆ ಉದ್ಘಾಟಿಸಿಯೇ ಬಿಟ್ಟರು. ಸತ್ತ ರೈತನನ್ನೂ ಮರೆಯಲಿಲ್ಲ ಅನ್ನಿ. ಅವನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ ಘೋಷಿಸಿದರು. ಹೀಗೆ ಮಾಡುವಾಗ ಈ ಬ್ರಹ್ಮರಾಕ್ಷಸ ಅಂಬೋದು ಅವರ ಮೈಮುಂಬರಬೇಕು. ಇಲ್ಲದಿದ್ದರೆ ಯಾಕೆ ಸತ್ತ ಏನು ಕತೆ ಅಂತೆಲ್ಲ ವಿಚಾರಿಸದೆ ಏಕದಂ ಹಿಂಗೆ ಪರಿಹಾರ ಘೋಷಿಸುತ್ತಿದ್ದರೇ? ಮೈಮುಂಬಿದ್ದ ಬ್ರಹ್ಮರಾಕ್ಷಸ ಬಿಟ್ಟ ಮೇಲೆ ಅವರಿಗೆ ಜ್ಞಾನೋದಯ ಆಯಿತು. ಅರೆರೆ ಆ ರೈತ ಯಾಕಾಗಿ ಸತ್ತ ಅನ್ನೋದನ್ನ ವಿಚಾರಿಸಲೇ ಇಲ್ಲವಲ್ಲಾ ಅಂತ ಕೈಕೈ ಹಿಸುಕಿಕೊಂಡರು. 'ಕೊಟ್ಟ ಮಾತಿಗ್ಯೆ ತಪ್ಪಲಾರೆನು' ಅನ್ನುವುದಕ್ಕೇನು ಅವರು ಗೋವಿನ ಹಾಡಿನ ಗೋವು ಕೆಟ್ಟು ಹೋದರೆ. 'ಪರಿಹಾರ ಈಗ ಕೊಡಲ್ಲ ತನಿಖೆ ನಡ್ಸ್ತೀನಿ. ವರದಿ ಬಂದ ನಂತರ ನೀಡ್ತೀನಿ' ಅಂತ ಹೊಸ ರಾಗ ಹಾಡಿದರು.

ಅಲ್ಲಿಗೆ ಏನಾಯಿತು, ರೈತನ ಪರಿವಾರಕ್ಕೆ ಪರಿಹಾರ ಅನ್ನೋದು ಕನ್ನಡಿ ಒಳಗಿನ ಗಂಟು. ಯಾಕೆ ಅಂದರೆ ಅವನು ಮಹದಾಯಿ ಯೋಜನೆಗೆ ಮನೆ ಮಠ ಕಳ್ಕೊಳ್ಳೀನಿ ಅಂತಲೇ ಆತ್ಮಹತ್ಯೆ ಮಾಡಿಕೊಂಡಿದ್ದರೂ ತನಿಖಾಧಿಕಾರಿಗಳು ಮೇಲಿನವರ ಮನಸ್ಸಿನ ವಿರುದ್ಧ ವರದಿ ನೀಡುವ ಸಂಪ್ರದಾಯದವರಲ್ಲ! ಇಷ್ಟಕ್ಕು ನಾಲ್ಕು ಗಂಟೆಯಾದರೂ ಲಕ್ಷದ ಕನಸು ಕಂಡನಲ್ಲ ಅಷ್ಟು ಸಾಕು!

ಇಲ್ಲಿ ಈ ರೀತಿ ಅಭಿವೃದ್ಧಿ ಯೋಜನೆಗೆ ಕಲ್ಲು ಹಾಕಿದರಾ. ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿಗೆ ಭಾರತೀಯ ಜನತಾ ಪಕ್ಷದ ಕೀರ್ತಿ ಪತಾಕೆಗೆ ಮಸಿ ಬಳಿಯುತ್ತಿರುವವರು ಮುಸ್ಲಿಂ ಭಯೋತ್ಪಾದಕರು ಎಂದು ಗೊತ್ತಾಗಿದೆ. ಅವರ ವಿರುದ್ಧ ವಿದ್ಯಾರ್ಥಿಗಳನ್ನು ಜಾಗೃತಗೊಳಿಸುವುದು ಉನ್ನತ ಸಚಿವನಾಗಿ ತನ್ನ ಕರ್ತವ್ಯವೆಂದು ಭಾವಿಸಿದ್ದಾರೆ. ಈ ಉದ್ದೇಶ ಸಫಲತೆಗಾಗಿ ರಾಜ್ಯಾದ್ಯಂತ 'ಭಯೋತ್ಪಾದನೆ ವಿರೋಧಿ ವಿದ್ಯಾರ್ಥಿ ಜಾಗೃತಿ ಅಭಿಯಾನ' ನಡೆಸಲು ತೀರ್ಮಾನಿಸಿದ್ದು ಅದರ ಉದ್ಘಾಟನೆಯನ್ನು ಮಂಗಳೂರಿನಲ್ಲಿ ಮಾಡಿದ್ದಾರೆ.

ಅನಾಕ್
ಎಚ್.ಎಲ್. ಕೇಶವಮೂರ್ತಿ

ಆದರೆ ಒಂದು ಯಡವಟ್ಟು ಕೆಲಸ ಆಗಿಹೋಗಿತ್ತು. ಧಾರವಾಡದ ಕೋರ್ಟ್ ಆವರಣದಲ್ಲಿ ಸಿಡಿಸಿದ್ದ ಮಾಲೆಗಾಂವ್ ಪ್ರಕರಣದ ರೂವಾರಿಗಳಾದವರಿಗೆ ಅರವತ್ತು ಲಕ್ಷ ರೂಪಾಯಿ ನೀಡಿದ್ದ ಭಯೋತ್ಪಾದಕರು ಬಾಗಲಕೋಟೆಯಲ್ಲಿ ಸಿಕ್ಕಿಬಿದ್ದಿದ್ದರು. ಅಕಟಕಟಾ ಏನೆಂಬೆನು ಈ ಅರವಿಂದ ಲಿಂಬಾವಳಿಯ ದುರಂತವನ್ನು–ಅವರು ಹಿಂದೂ ಭಯೋತ್ಪಾದಕರಾಗಿರಬೇಕೆ! ಆದರೂ ಈ ಹಿಂದೂ ವೀರ ಇದರಿಂದ ಎದೆಗುಂದಲಿಲ್ಲ. ಇಂತಹ ಸಂಗತಿಗಳನ್ನು ಬಹು ನಾಜೂಕಾಗಿ ಮುಚ್ಚಿಹಾಕುವ ಮಾಧ್ಯಮ ವೀರರಂತೆಯೇ ನಡೆದುಕೊಂಡರು. ಉದ್ಘಾಟನಾ ಸಮಾರಂಭದಲ್ಲಿ ಪ್ರತಿಧ್ವನಿಸಿದ್ದು ಮುಸ್ಲಿಂ ಭಯೋತ್ಪಾದನೆ ಮಾತ್ರ. ಹಿಂದೂ ಭಯೋತ್ಪಾದನೆಯ ಗಾಳಿಯೂ ಆ ಕ... ಬೀಸದಂತೆ ಎಚ್ಚರಿಕೆ ವಹಿಸಲಾಯಿತು. ಅಭಿಯಾನವನ್ನು ಉದ್ಘಾಟಿಸಿದವರು ಸ್ವಯಂಘೋಷಿತ ಆಧ್ಯಾತ್ಮ ಗುರು; ಮಾಲೆಗಾಂವ್ ಸ್ಫೋಟದಲ್ಲಿ ಶಂಕಿತರಾಗಿರುವ ಶ್ರೀ ರವಿಶಂಕರ ಗುರೂಜಿ ಅವರು! ಅಂದಮೇಲೆ ಕೇಳಬೇಕೆ. ಹಿಂದೂ ಭಯೋತ್ಪಾದನೆಯ ಸೊಲ್ಲು ಇರಲಿಲ್ಲ ಎಂದು ಪ್ರತ್ಯೇಕ ವಿವರಿಸಬೇಕಿಲ್ಲ.

ಈ ಹಿಂದೂತ್ವವಾದಿಗಳಿಗೆ ಯಾಕೋ ಏನೋ ಮನುಷ್ಯರು ಮನುಷ್ಯರ ತರಹಾನೆ ಕಾಣಿಸುವುದಿಲ್ಲ...

ನುಕ್ಕಬೂಲ, ಜಲೀಲ, ನಜೀರ ಯಲ್ಲ
ಲವೆ, ನೀನೆ ಹೇಳು."

ಲ್ಲಿಂಗಸು ನಾನೇಳಕ್ಯಾದತ್ಲ?"

ಚಾತಿ ಮೆಂಬರಲವೆ ನೀನು? ನಿನ್ನ ಪಂಚಾತಿ
ಜರಂಗ ಗಿಜರಂಗೆ ಅಂತ ಬಂದ್ರೆ ಕಂಬುಕ್ಕಟ್ಟುಸ್ತಿನಿ
ಅಂತ ಮಾಯಾವತಿನೆ ಸಮಾಜವಾದಿ ಪಾರ್ಟಿ
ಲಾಟಿಲಿ ಬಾರುಸ್ತ ಕುಂತವ್ರುಳೆ, ಅಂತದ್ರಲ್ಲಿ
ದೂರುತ್ತೀಯಾ?" ಎಂದ ಉಗ್ರಿ.

ಂಗರೆ ಅವ್ರುನ್ಯಾವನು ತೋರ್ಲ ಸೂಳೆಮಗನೆ
ಅಪ್ಪನುಗುಟ್ಟಿದ್ದಿಯೋ, ಆದರಕ್ಕುಟ್ಟಿದ್ದಿಯೋ
ೕಳ್ತೀನಿ" ಎಂದು ಜುಮ್ಮಿ ರಾಂಗಾದಳು.

ವ್ರು ಮಾಡೋ ಕ್ಯಲಸಕ್ಕೆ ಅವುರಪ್ಪ, ಅವುನ್ನ
ಬ್ಯಾಡ ಕಣೆ."

ಗಂದ್ಯಂಗ್ಲ? ಹೆತ್ತೋರು ಹುಟ್ಟಸಿದೋರು
ಬುದ್ದಿ ಹೇಳಬೇಕು."

ಭಜರಂಗಿಗಳ ನೋಡಿದ್ರೆ ಅವುಕೆ ಅಂಥೋ
ಇದ್ದಂಗೆ ಕಾಣ್ತಯಿಲ್ಲ. ಅದರ್ವಳಗೆ ಹುಡುಕಿದ್ರೂ
ಂಚೊನಿಲ್ಲ ಕಣಮಾವ. ಯಲ್ಲ ನಮ್ಮೊರು,
ಬರೀ ಕಿವಿ ಕಿತ್ತ ಮೂಗರಕತೆಯ" ಎಂದು

ತಿಯಲ್ಲ, ಪಾಪ ಸಾಬರ ಕಷ್ಟ ಸಾಬರಗಾಗ್ಯದೆ."

ಗೆ ಆಗ್ಯದೆ ಕಣಮಾವ. ಪಾಪ ಆ ಮುನೀರಸಾಬ
ಕಣಮಾವ. ಭಜರಂಗದೋರು ಹದಿನ್ಯೆದು
ಗಂಡೋದರಂತೆ, ಯಂಗಪ್ಪ ಬದುಕದು ಅಂತಿದ್ದ.
ಟ್ಟುಲ್ಲ ಉರಿತು. ಮದ್ದಾಗಿದ್ರೆ ಮಂಡ್ಯದಿಂದ
ಮೂರ್ತಿ ಬರೋರು, ಮೈಸೂರಿಂದ ರಾಮದಾಸ್
ಬೆಂಗಳೂರಿನಿಂದ ಲ್ಯಂಕೇಶ್ ಬರೋನು.
ಧೈರ್ಯ ಹೇಳೋರು. ಇವತ್ತಾರು ಇಲ್ಲ
ದ" ಎಂದು ಉಗ್ರಿ ಹೇಳುವಾಗ ಒಳಗಣ್ಣಾದ
ವ.

ಮ್ಮೆಲ್ಲೆ ಏನು ಮಾಡ್ತ ಅವುನೆ?"

"ಅವುನು ಚುಂಚನಗಿರಿ ಸ್ವಾಮಿಗೆ ಅರವತ್ತೈದೊರ್ಸ ಆಯ್ತು ಅಂತ ಹಬ್ಬ ಮಾಡದ್ರಲ್ಲಿ ಮುಳುಗ್ಯವುನೆ."

"ಚುಂಚನಗಿರಿ ಸ್ವಾಮಿಗಾಗ್ಲೆ ಅರವತ್ತೈದೆ? ಅಂಗರೆ ನನಿಗಿಂತ ಐದೊರ್ಸ ಚಿಕ್ಕೋರು" ಎಂದ ಸೀರ.

"ನಿನಿಗಿಂತ ಚಿಕ್ಕೋರಿಗೆ ಆರೋಗ್ಯ ಕೈಕೊಟ್ಟದೆ ನೋಡು. ನಿನಿಗೆ ಮಾತ್ರ ಯಾವ ಕಾಯ್ಲನೂ ಇಲ್ಲ."

"ಅಂಗರೆ ಸ್ವಾಮಿಗಳ ಆರಗ್ಯ ಚನಾಗಿಲವೆ?"

"ಚನಾಗಿಲ್ಲ ಅಂತ್ಲೆ ಅಲವೇನೊ ಅದ್ದೂರಿ ಹುಟ್ಟದಬ್ಬ ಯಲ್ಲ ನ್ಯಡಿತಾಯಿರದು."

"ಅಲ್ಲಪ್ಪ, ನಾವೇನೊ ಕುಡಿತಿವಿ, ತಿಂತಿವಿ, ಬೀಡಿ ಸೇತ್ತಿವಿ, ಬೇಕಾದ್ನೆ ಮಾಡ್ತಿವಿ. ಅಂತಾದ್ರಲ್ಲೂ ನಮ್ಮ ಸರೀಳ ಚನ್ನಾಗೆ. ಅದೆ?"

"ಎಲ್ಲಿ ಚನಾಗ್ಯದೊ? ಅವತ್ತು ನೀನು ಹುಚ್ಚ ಊದು ಬಂದ ಜಾಗ ನೋಡಿದೆ. ಗ್ವದ್ದ ಮುತ್ರಗಂಡಿದ್ದೊ ಕಣೊ, ನಿನಿಗೂ ಸುಗರ್ರಿರಬೇಕು."

"ನನಿಗೆ ಸುಗರ್ರು ಬಂದು ಬಾಳಾದಿನಾಯ್ತು ಕಂದ್ಯ. ತಲೆ ಕೆಡಿಸಿಗಳದಂಗೆ ಸುಮ್ಮನಿದ್ದಿನಿ. ಅದೋಗ್ಲಿ, ಸ್ವಾಮಿ ಯಾಕೆ ಕಾಯ್ಲ ತಂದುಕಂದ್ರು ಹೇಳ್ಳ."

"ಅವ್ರುರು ಹುಚ್ಚ ಬಂದಾಗ ಊದಿಲ್ಲ, ಬೆಂಗಳೂರಿಂದ ವಂಟ್ರೆ ಮಠಕ್ಕೆ ಬಂದು ಹುಯ್ಕಬೇಕು. ಇನ್ನ ಸಭೆ ಸಮಾರಂಭದಲ್ಲಿ ಗಂಟೆಗಟ್ಲೆ ಕೂತಗಬೇಕು. ಆಗ್ಲ ತಡಕಂಡವ್ರುರೆ. ಏನ್ನೇ ಆಗ್ಲಿ ತಡಿಬಾರದು. ಬಂದೇಟಗೆ ಬುಡಬೇಕತ್ತಗೆ. ಸ್ವಾಮಿ ತಡದೂ ತಡದೂ ಕಾಯ್ಲ ತಂದುಕಂಡವ್ರುರಂತೆ ಕಣೊ."

"ಅಂಗಂತಿಯಾ?"

"ಅಂಗಂತರಪ್ಪ ಯಿವೇಕಾನಂದರೂ ಹಿಂಗೆ ಯಲ್ಲಾನು ತಡದು ತಡದೂ ಮುವ್ವತೊಂಬತ್ತಕ್ಕೆ ಹೋದರಂತೆ. ನಮ್ಮ ಸ್ವಾಮಿ ಅರವತ್ತೈದಣಾರ ಮುಟ್ಟದರಲ್ಲ ಹೇಳು."

"ಯಲ್ಲ ಬೈರವುನ ದಯ ಬುಡು."

"ನೀವಿನ್ನೆನಂದಿರೀ?" ■

ಪ್ಪನವರಿಗೆ ವಿಪಕ್ಷ ನಾಯಕರು
ಗಳಂತೆ, ಬ್ರಹ್ಮರಾಕ್ಷಸರಂತೆ, ದೆವ್ವ ಪೀಡೆ
ಅಂತೆ ಗೋಚರಿಸಿರುವುದನ್ನು ಈಗಾಗಲೇ
ದೆ. ಈ ಸ್ವಯಂಘೋಷಿತ ಆಧ್ಯಾತ್ಮಗುರುವಿಗೆ
ಸ್ಲಿಂ ಭಯೋತ್ಪಾದಕರು ಹುಚ್ಚು ನಾಯಿಗಳ ತರಹ
ರೆ. 26/11 ರಂದು ನಡೆದ ಮುಂಬಯಿ
ಲ್ಲಿದ್ದ ಈ ಹುಚ್ಚುನಾಯಿಗಳ ಸಂಖ್ಯೆ ಮುವ್ವತ್ತು
ದಕ್ಕೆ ಅವರ ಹತ್ತಿರ ಅಧಿಕೃತವಾಗಿ
ಯೊಬ್ಬ ತಿಳಿಸಿದನಂತೆ. ಅಲ್ಲ ಈ ಗುರ್‌ಗುರ್
ಗುರೂಜಿ ಅನ್ನೋ ಮನುಷ್ಯನ್ನ ಒದ್ದು ಒಳಗಾಕಿ
ರ ಏನೇನು ದಾಖಲೆಗಳಿದಾವ್ರೋ ಅವನ್ನೆಲ್ಲ
ಸಮಡಿಸು ಎಂದು ಕೇಳಬಾರದಾ ಅಂತ.
ಮು ದ್ವೇಷವೇ ಉಸಿರಾಗಿರುವ ಇಂತಹ
ನಕ್ಕೆ ಸ್ವಾಮಿ ವಿವೇಕಾನಂದರ ಹೆಸರನ್ನು
ಕೆ ಮಾಡಿಕೊಳ್ಳಲಾಗುತ್ತಿದೆ. ಅವರ ಜನ್ಮ
ಇದು ಆರಂಭಿಸಲಾಗಿದೆ. ಮಣ್ಣು ಮಸುಕು
ಪಕ್ಷಗಳ ನಾಯಕರು ಕೂಗಾಡ್ತಿದಾರೆ. ಅದ್ಯಾಕೆ
ದಾರೋ ತಿಳೀವಲ್ದು. ಅಲ್ಲ ಬುದ್ಧ ಬಸವ,
ಅಂಬೇಡ್ಕರ್, ವಿವೇಕಾನಂದ ಇಂತಹವರ
ದೆ ಗುರು ಗೋಲ್ವಾಲ್ಕರ್ ಅಂತಾನೋ ವೀರ
ಹೆಸರು ಹೇಳಿದರೆ ಜನ ಮಕ್ಕೆ ಕ್ಯಾಕರಿಸಿ
ತ್ತೀನ್ರಿ... ಯಾರದ್ದೋ ಹೆಸರು ಯಾರದ್ದೋ
ಅನ್ನೋದೆ ಅವರು ಲಾಗಾಯ್ತಿನಿಂದಲೂ
ಂದು ಬಂದಿರೋ ಪದ್ಧತಿ ಅಲ್ವಾ....!

* * * * * *

ದು ಲಕ್ಷ ರೂಪಾಯಿ ಕೊಡ್ತೀನಿ ಅಂತ ಮೈಕಿನ
ಅರಚಿದ ನಂತರ ಇಲ್ಲ ಇಲ್ಲ ಸಾವಿನ ಕಾರಣ
ದು ನಂತರ ನೀಡ್ತೀವಿ ಎಂದೆಲ್ಲ ಪೆದ್ದು ಪೆದ್ದಾಗಿ,
ದ್ದನಂಗೆ ಆಡಿದ್ದರಲ್ಲ ಯಡ್ಯೂರಪ್ಪನವರು. ಇದು
ಮಾತ್ರ ಸೀಮಿತ ಆಗಿಲ್ಲ. ಸತ್ಯಂ ಕಂಪನಿ
ಏಳೋ ಎಂಟೋ ಸಾವಿರ ಕೋಟಿಗೆ
ಡಿ ಮೇತಗೆ ಒಳಿಯಿತಲ್ಲ, ಅದು ತಿಳೀತ್ತಿದ್ದಂಗೆ
ಕನ್ ಸಿಂಗ್‌ಜೀ ಐವತ್ತು ಮೂರು ಸಾವಿರ
ರ ಯೋಗಕ್ಷೇಮ ವಿಚಾರಿಸಿಕೊಳ್ಳಬೇಕು
ಎರಡು ಸಾವಿರ ಕೋಟಿ ಹಣ ನೀಡ್ತೀನಿ
ಯಾರೋ ಉಗಿದಿರಬೇಕು. ಅವನು ತಿಂದು
ಹೆಂಡ್ತಿ ಮಕ್ಕಳು ಮರಿನೆಲ್ಲ ದುಂಡು ಮಾಡವ್ನೆ
ಹೆಸರಲ್ಲೂ ಸಾಕಷ್ಟು ಕಮಾಯಿಸಿಟ್ಟವ್ನೆ
ಮುಟ್ಟುಗೋಲು ಹಾಕ್ರೊ, ಸಾರ್ವಜನಿಕರ
ಂದ್ರೆ ನಿಮ್ಗೇನು ಕಷ್ಟ ಪೆಟ್ರೋಲ್ಯಾ ಕೆಟ್ರೋಯ್ತ

ಅಂತ ಜಾಡಿಸಿರಬೇಕು. ಅದಕ್ಕೇ ಈಗ ಎರಡು ಸಾವಿರ ಕೋಟಿ ಹಣ ನೀಡಲ್ಲ ಆದರೆ ನೌಕರರ ಕ್ಷೇಮ ನೋಡ್ಕೊಳ್ಳೋ ಜವಾಬ್ದಾರಿ ನಮ್ದು ಅಂತಿದಾರೆ!

ಸತ್ಯಂ ಕರ್ಮಕಾಂಡ ಬರ್‍ತಿದ್ದಾಗ ನಾನು ಒಂದು ಟೀ ಅಂಗಡಿಗೆ ಹೋಗಿ ಟೀ ಕುಡಿದು ಸಿಗರೇಟು ಸೇದುತ್ತಾ ಕುಳಿತಿದ್ದೆ.

'ಅಲ್ಲ ಕಣಯ್ಯ ತಿನ್ನಿ, ಅಷ್ಟೋ ಇಷ್ಟೋ ತಿನ್ನಿ, ತಿಂತೀನಿ ತಿಂತೀನಿ ಅಂತಾವ ಎಂಟು ಸಾವಿರ ಕೋಟಿ ತಿನ್ನಾನೆ ಅಂದ್ರೇನಯ್ಯ ಕತೆ.'

'ಅದಿರ್‍ಲಿ ಕಣಪ್ಪ ನಾನು ಕೇಳ್ತಿಲ್ಲ ಹೇಳು.'

'ಅವನೂ ನಿನ್ಗೂ ಏನ್ಲ ಸಂಬಂಧ?'


'ಸಾಫ್ಟ್‌ವೇರ್ ಇಂಜಿನಿಯರ್ ಆಗವ್ನೆ ಆ ಕಂಪ್ನೀಲಿ ಅಂತಾವ ಕಾಲು ಕೇಜಿ ಚಿನ್ನ ಹಾಕಿ ಮದ್ವೆ ಮಾಡಿ ಕೊಟ್ಟಿಲ್ವೋ'

'ಅದ್ಬುಡು. ಈ ಬಡ್ಡೆತ್ತವು ಪೆಪರ್‍ನಲ್ಲೇ ಏನ್ ಬುದ್ಧಿ ಇದ್ದಿತ್ತೆ ಮೊದ್ಲು ಅವ್ನ ಹೆಂಗೆ ಬದುಕ್ತಿದ್ದ ಅಂತ ಅವುನ್ನ ಕೇಳಿದ್ರ. ನೋಡಿಲ್ವಿ... ಕೋಟ್ಯಾಧೀಶನಿಗೆ ಟೂತ್‌ಬ್ರಷ್ ಇಲ್ಲ ಅಂತ ಬರ್‍ದಾವಲ್ಲ, ಸಕಲೆಂಟು ಜನವ್ರಾ ಬ್ರಷ್ಲೇ ಹಲ್ಲುಜ್ಜಾರಾ. ಈ ಬಡ್ಡೆತ್ತವು ಹಿಂಗ್ ಬರ್‍ದು ಬರ್‍ದು ಹುಲಿಯ ಇಲಿ ಮಾಡ್ತವೆ, ಇಲಿಯ ಹುಲಿ ಮಾಡ್ತವೆ.'

ಅವರ ಮಾತಿನಲ್ಲೂ ನ್ಯಾಯ ಇದೆ ಅನ್ನಿಸಿತು.

ಇಂಜಿನಿಯರಿಂಗು, ಮೇನೇಜ್‌ಮೆಂಟು ಕೋರ್ಸ್‌ಗಳಲ್ಲಿ **work study** ಎಂಬ ವಿಷಯ ಇರುತ್ತೆ, ಅದರಲ್ಲಿ ಬೆರಳುಗಳ ಚಲನೆಯನ್ನು ಸೂಕ್ಷ್ಮವಾಗಿ ವಿವರಿಸಲಾಗುತ್ತದೆ. ಪ್ರತಿಯೊಂದು ಚಲನೆಗೂ ಒಂದೊಂದು ಹೆಸರು ನೀಡಲಾಗುತ್ತದೆ. ಇದನ್ನು ಕಂಡುಹಿಡಿದವನು **Gilbreth** ಅನ್ನುವವನು. ಈ ಚಲನೆಗಳ ಸಂಕೇತಗಳನ್ನೆಲ್ಲ ಒಟ್ಟಿಗೆ ಸೇರಿಸಿ **Therbligs** ಅಂತ ಕರೀತಾರೆ. **Gilbreth** ಅನ್ನ ಹಿಂದಿನಿಂದ ಓದಿದರೆ ಬರುವ ಹೆಸರು ಇದು.


ಇದನ್ನು ಯಾಕೆ ಹೇಳಬೇಕಾಯಿತು ಅಂದರೆ ಈ **Sathyam** ಅನ್ನೋ ಕಂಪನಿಯವನು ತನ್ನ ಮಕ್ಕಳ ಹೆಸರಿನಲ್ಲಿ ಕಂಪನಿಗಳನ್ನು ಪ್ರಾರಂಭಿಸಿದನಲ್ಲ ಅವುಗಳ ಹೆಸರು **Maythas** ಅಂತೆ! ಅಂದರೆ ಗಿಲ್ಬೆತ್‌ನ ಅರೆದು ಕುಡಿದಿದಾನೆ ಮನುಷ್ಯ ಅಂದ ಹಾಗಾಯಿತು. ಆದರೆ ಒಂದು ವ್ಯತ್ಯಾಸ. ಅವನು ಹೆಸರು ಉಲ್ಟಾ ಮಾಡಿ ಕೈಗಾರಿಕೆಗಳಿಗೆ ವರದಾನ ಆದ; ಇವನು ಹೆಸರನ್ನು ಉಲ್ಟಾ ಮಾಡಿ ನಂಬಿದವರ ಕತ್ತು ಕೊಯ್ದ. ■



ಹಳ್ಳಿಗಳಿಗೆ ನುಗ್ಗುತ್ತಿರುವವರು

ಆಗ ಸಿನಿಮಾ, ಈಗ ಸಿನಿಮಾದೊಂದಿಗೆ ಟಿ.ವಿ.

ನಾನು ತೀರಾ ಚಿಕ್ಕವನಿದ್ದಾಗಲೇ ಗಮನಿಸಿದ್ದೆ. ಆಗ ಹೆಚ್ಚು ಕನ್ನಡ ಸಿನಿಮಾಗಳಿರಲಿಲ್ಲವಾದರೂ 'ನಾಗ ಕನ್ನಿಕಾ', 'ಭಕ್ತ ಕಬೀರ', 'ಜಗನ್ಮೋಹಿನಿ' ಮುಂತಾದ ಸಿನಿಮಾಗಳಿಂದಲೇ ಹಳ್ಳಿಯ ಹುಡುಗಿಯರು ಹಾಡುಗಳನ್ನು ಕಲಿತು ಹಾಡತೊಡಗಿದ್ದರು. ಇದನ್ನು ನನ್ನ 'ಮುಸ್ಸಂಜೆಯ ಕಥಾಪ್ರಸಂಗ' ಕಾದಂಬರಿಯಲ್ಲಿ ನೀವು ಗಮನಿಸಿರಬಹುದು; ಅಲ್ಲಿಯ ಪ್ರೇಮ, ಕಾಮದ ಪ್ರಸಂಗವೊಂದು ಈ ಹಾಡುಗಳ ಸುತ್ತ ಹೆಣೆದುಕೊಂಡಿದೆ. ಹಾಗೆಯೇ ಹಳ್ಳಿಗಳ ಅಧೋಗತಿಯನ್ನು ಈ ಮೂಲಕವೇ ಸೂಚಿಸಲು ಯತ್ನಿಸಿದ್ದೇನೆ. ಜನಪದ ಹಾಡುಗಳಿಗೂ ಜನಪ್ರಿಯ ಸಿನಿಮಾಗಳ ಹಾಡುಗಳಿಗೂ ಇರುವ ಮುಖ್ಯ ವ್ಯತ್ಯಾಸ ಅಭಿರುಚಿಯದು, ಪ್ರಾಮಾಣಿಕತೆಯದು. ಜನಪ್ರಿಯ ಸಿನಿಮಾಗಳ ಹಾಡುಗಳ ಪ್ರತಿಯೊಂದು ಸಾಲಿನಲ್ಲೂ ಹಣದ ದುರಾಶೆ, ನಿರ್ಲಜ್ಜ ಪ್ರದರ್ಶನ, ಹುಸಿಕಾವ್ಯವಂತಿಕೆ



ಇರುತ್ತದೆ. ಜನಪದ ಹಾಡುಗಳಲ್ಲಿನ ಸೌಂದರ್ಯವಿರುವುದೇ ಅಲ್ಲಿಯ ಅನಾಮಿಕತೆ, ಸರಳತೆ ಮತ್ತು ಅಭಿರುಚಿಯಲ್ಲಿ ಪ್ರತಿಯೊಂದು ಸಂಸ್ಕೃತಿಗೂ ಅದರದೇ ಆದ ಘನತೆ, ಸ್ವಾಭಿಮಾನ ಇರುತ್ತದೆ; ಹಣವನ್ನು ಮೀರಿದ ಸ್ಪಂದನ, ಸ್ನೇಹ, ನಿಷ್ಠೆ ನಿಯಮ ಇರುತ್ತದೆ. ಈ ಸ್ಪಂದನ, ಸ್ನೇಹ, ನಿಷ್ಠೆಯ ಅಭಿವ್ಯಕ್ತಿಯೇ ಸಂಸ್ಕೃತಿ. ಸಂಸ್ಕೃತಿಯ ಆಳದಿಂದ ಬಂದ ಹಾಡು, ಕತೆಯಲ್ಲಿ, ನಾಟಕ, ಗಾದೆಯಲ್ಲಿ ಅಚ್ಚರಿಗೊಳಿಸುವ ಅರ್ಥ, ಆನಂದ ಇರುತ್ತದೆ.

ಈಗ ಯಾಕೆ ಹೇಳುತ್ತಿದ್ದೇನೆಂದರೆ, ಕಳೆದ ಐವತ್ತು ವರ್ಷದಿಂದ ಹಿಂಜರಿಯತೊಡಗಿದ ನಮ್ಮ ಗ್ರಾಮಗಳ ಹಾಡು, ನಾಟಕ, ಕತೆಗಳು ನಿರ್ನಾಮಗೊಳ್ಳುವ ಅಪಾಯದಲ್ಲಿವೆ; ಸಿನಿಮಾ, ಅವುಗಳ ಹಾಡು ಮತ್ತು ಕಂಪನಿ ನಾಟಕಗಳಿಂದ ಹೊಡೆತ ತಿಂದ ಗ್ರಾಮಸ್ಥರು ಈಗ ದೂರದರ್ಶನದ ಆಘಾತಕ್ಕೀಡಾಗಿದ್ದಾರೆ. ಅದು ಅವರಿಗೆ ಗೊತ್ತಿಲ್ಲ ಕೂಡ. ಇದು ದುರಂತ. ಈ ದುರಂತದ ವಿವಿಧ ಮುಖ ನೋಡಬೇಕಾದರೆ ಇವತ್ತು ನಮ್ಮ ಗ್ರಾಮಗಳು ಮತ್ತು ಪಟ್ಟಣಗಳನ್ನು ನಿಯಂತ್ರಿಸುವ ಅಭಿರುಚಿ ಮತ್ತು ಆಶೆಗಳನ್ನು ನೋಡಬೇಕು. ಹಿಂದೆ ಹಾಡುಕಟ್ಟಬಲ್ಲ ಮುದುಕ, ಹಾಡಿ ತಣಿಸಬಲ್ಲ ಹೆಂಗುಸು ವಿಚಿತ್ರ ಪ್ರೀತಿ, ಗೌರವಕ್ಕೆ ಪಾತ್ರರಾಗುತ್ತಿದ್ದರು; ಇವತ್ತು ಟಿವಿ ಇಟ್ಟುಕೊಂಡವ, ಮೋಟಾರು ಬೈಕ್ ಓಡಿಸುವವ, ಪಟ್ಟಣದ ಚಾಕರಿ ಕೊಡಿಸಬಲ್ಲವ, ಮೂರ್ಖ ಮಂತ್ರಿಗಳೊಂದಿಗೆ ಮೆರೆಯಬಲ್ಲವ ಗಣ್ಯ.

ಅಭಿರುಚಿ, ಘನತೆ, ಅನಾಮಿಕತೆಯ ಸಂತೋಷ ಮತ್ತು ಕ್ರಿಯಾಶೀಲತೆಯ ಸಂಭ್ರಮ ಕಳೆದುಕೊಂಡ ಜನ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಾರೆ. ನಮ್ಮ ಹಳ್ಳಿಗಳು ಕೊಳಚೆಗೊಳ್ಳುತ್ತಿದ್ದಂತೆ ಬಿಜೆಪಿಯಂಥವರ 'ಧರ್ಮ' ಕಣ್ಣು ಕುಕ್ಕುತ್ತಿದ್ದರೆ, ಕಾಂಗ್ರೆಸ್ಸಿನ ಭಂಡತನ ಆಮಿಷಗಳನ್ನೊಡ್ಡುತ್ತದೆ. ನಮ್ಮ ಹಳ್ಳಿಗರು ಮುಂದೆ ಆರ್ಥಿಕವಾಗಿ ಶ್ರೀಮಂತವೆನ್ನಿಸಿಕೊಂಡಾಗ ಕೂಡ ತಮ್ಮದೇ ಆದ ಹಾಡು, ನೃತ್ಯ ನಾಟಕಗಳಿಲ್ಲದೆ ಸಂಸ್ಕೃತಿಯನ್ನೇ ಕಳೆದುಕೊಳ್ಳುವ ಅಪಾಯವಿದೆ.

ಹಳ್ಳಿಗಳತ್ತ ತಮ್ಮ ವಿಡಿಯೋ, ಮೈಕ್, ಜೀಪ್, ಕಾರುಗಳೊಂದಿಗೆ ನುಗ್ಗುತ್ತಿರುವ ಸಾಂಸ್ಕೃತಿಕ ಭಿಕಾರಿಗಳಾದ ರಾಜಕಾರಣಿಗಳನ್ನು ನೋಡುತ್ತಾ ಇದನ್ನು ಬರೆಯುತ್ತಿದ್ದೇನೆ.

ಹೆಣ್ಣುಮಗಳ ಉತ್ತರ



'ಪ್ರೈಡ್ ಅಂಡ್ ಪ್ರೆಜುಡೀಸ್' ಬರೆದ ಜೇನ್ ಆಸ್ಟೆನ್.... ಹದಿನೆಂಟನೇ ಶತಮಾನದ ಕೊನೆಯ ಸಂಕೋಚದ, ತಮಾಷೆಯ ಆದರೆ ಮೂಲಭೂತವಾಗಿ ಗಂಭೀರೆಯಾದ ಹೆಣ್ಣುಮಗಳು. ಎಲ್ಲರೂ ರಾಜಮಹಾರಾಜರ ಬಗ್ಗೆ ಸಾಮಾಜಿಕವಾಗಿ ಪ್ರಮುಖರಾದ ವ್ಯಕ್ತಿಗಳ ಬಗ್ಗೆ ಸಮಕಾಲೀನ ಅಭಿರುಚಿಗೆ ತಕ್ಕಂತೆ ಬರೆಯುತ್ತಿದ್ದರೆ ಈಕೆ ತನ್ನ ಸುತ್ತಾ ಬದುಕನ್ನು ನೋಡಿ, ಅಲ್ಲಿಯ ನಾಟಕವನ್ನು ಗ್ರಹಿಸಿ ಸರಳ, ಅರ್ಥಪೂರ್ಣ ಕಾದಂಬರಿ ಬರೆದಳು. ಈಕೆ ಖ್ಯಾತಳಾಗಲಿಲ್ಲ, ಬರವಣಿಗೆಯಿಂದ ಹೆಚ್ಚು ಹಣ ಮಾಡಲಿಲ್ಲ, ಒಮ್ಮೆ ಯಾವುದೋ ದೌರ್ಬಲ್ಯದ ಘಳಿಗೆಯಲ್ಲಿ ದೊರೆಗೆ ತನ್ನ 'ಎಮ್ಮಾ'ಎಂಬ ಕಾದಂಬರಿಯನ್ನು ಕಳಿಸಿದಳು; ಅಭಿಪ್ರಾಯಕ್ಕಾಗಿ ಕಾದಳು. ದೊರೆ ಅದರತ್ತ ಕಣ್ಣು ಕೂಡ ಹಾಕಲಿಲ್ಲ, ಜೇಮ್ಸ್ ಸ್ಟೇನಿಯರ್ ಕ್ಲಾರ್ಕ್ ಎಂಬ ಆತನ ಅಧಿಕಾರಿ ಜೇನ್ ಆಸ್ಟೆನ್‌ಗೆ ಕಾಗದ ಬರೆದ:

"ನೀವು ಕಳಿಸಿದ ಕಾದಂಬರಿಯನ್ನು ದೊರೆಯ ಕೃತಜ್ಞತೆಯೊಂದಿಗೆ ಹಿಂದಿರುಗಿಸುತ್ತಿದ್ದೇನೆ.... ನೀವು ಮುಂದೆ ಕಾದಂಬರಿಗಳನ್ನು ಬರೆದರೆ ಅವು ಐತಿಹಾಸಿಕ ಕಾದಂಬರಿಗಳಾಗಿದ್ದು; ದೊರೆಯ ವಂಶವನ್ನು ಕುರಿತವಾಗಿದ್ದರೆ ಅವುಗಳನ್ನು ನೀವು ದೊರೆಗೆ ಅರ್ಪಿಸಬಹುದು ಎಂದು ತಿಳಿಸಲು ಹರ್ಷಿಸುತ್ತೇನೆ."

ಈ ಕಾಗದವನ್ನು ಜೇನ್ ಆಸ್ಟೆನ್ ನೋಡಿದಳು. ಮಧ್ಯಮವರ್ಗದ ಅಸಹಾಯಕ ಹೆಣ್ಣುಮಗಳಾದ ಆಕೆಗೆ ಮೈ ಉರಿಯಿತು. ಆಕೆ ಸಿಟ್ಟು ತೋರದೆ ತಣ್ಣಗೆ ಉತ್ತರಿಸಿದಳು:

"ತಮ್ಮ ಕಾಗದಕ್ಕಾಗಿ ಮತ್ತು ಅಭಿಪ್ರಾಯಗಳಿಗಾಗಿ ನನ್ನ ಹೃತ್ಪೂರ್ವಕ ವಂದನೆಗಳು.

ತಾವು ಸೂಚಿಸಿರುವಂತೆ ಖ್ಯಾತಿ ಮತ್ತು ಲಾಭಕ್ಕಾಗಿ ನಾನು ದೊರೆಗಳ ವಂಶವನ್ನು ಕುರಿತು ಐತಿಹಾಸಿಕ ಕಾದಂಬರಿ ಬರೆಯಲಾರೆ; ನಾನು ಬರೆಯುವ ಸಾಮಾನ್ಯ ಸಾಮಾಜಿಕ ಕಾದಂಬರಿಗಳೇ ನನ್ನ ವೈಶಿಷ್ಟ್ಯ. ನಾನು ಹೇಗೆ ಮಹಾಕಾವ್ಯ ಬರೆಯಲಾರೆನೋ ಹಾಗೆಯೇ ಐತಿಹಾಸಿಕ ರೊಮಾನ್ಸ್ ಬರೆಯಲಾರೆ. ನಾನು ಯಾವುದೇ ಕೃತಿಯನ್ನು ನನ್ನ ಜೀವ ಉಳಿಸಿಕೊಳ್ಳಲು ಮಾತ್ರ ಬರೆಯುವವಳು. ನಾನು ಬರೆಯುತ್ತಿರುವ, ನನ್ನನ್ನು ನಾನೇ ತಮಾಷೆ ಮಾಡಿಕೊಳ್ಳುವ, ಇತರರನ್ನು ನೋಡಿ ನಗುವ ಕಾದಂಬರಿಗಳಲ್ಲದೆ ಬೇರೆ ಬರೆಯತೊಡಗಿದರೆ ಮೊದಲ ಅಧ್ಯಾಯ ಮುಗಿಯುವಷ್ಟರಲ್ಲೇ ಕುಸಿದುಬೀಳುತ್ತೇನೆ. ಇಲ್ಲ, ನಾನು ನನ್ನಂತೆಯೇ ಬರೆಯಬೇಕು; ಹೀಗೆ ಬರೆದಾಗ ಪೂರ್ತಿ ಯಶಸ್ವಿಯಾಗದಿದ್ದರೂ ಇನ್ನೊಂದು ಬಗೆಯಲ್ಲಿ ಬರೆದಾಗಿನ ಪೂರ್ತಿ ವೈಫಲ್ಯ ನನ್ನದಾಗುವುದಿಲ್ಲ.

ವಂದನೆಗಳೊಂದಿಗೆ,

ಜೇನ್ ಆಸ್ಟೆನ್ ■

ದೇ | ಶ | ಭ | ಕ್ತಿ

ಈ ಮರಳ ಕಣ
ಅರಿತಿದೆ
ಎರೆಹುಳುವಿನ ನೆಲದ ಪ್ರೀತಿ....

ಪುಟ್ಟ ಮಗುವಿನ
ಪ್ರಾಮಾಣಿಕ ಕೈಗಳಲ್ಲಿ
ರಾಷ್ಟ್ರಧ್ವಜ ಖುಷಿಯಾಗಿದೆ

ಈ ಮಣ್ಣಲ್ಲಿ ಮಣ್ಣಾಗಿ
ಬದುಕಿದ ನನ್ನಪ್ಪ
ರಾಷ್ಟ್ರಗೀತೆ ಕಲಿಯಲಿಲ್ಲ

ರಾಷ್ಟ್ರಧ್ವಜದ ದಾರ
ಚಮ್ಮಾರನ ಹೊಲಿಗೆಯನ್ನು
ಆಸಕ್ತಿಯಿಂದ ಗಮನಿಸುತ್ತಿದೆ.


ಅವರ ಕಣ್ಣಲ್ಲಿ ಕೇಸರಿ
ಇವರ ಕೈಯಲ್ಲಿ ಹಸಿರು
ಧ್ವಜದ ಬಣ್ಣಗಳು
ದುಗುಡಗೊಂಡಿವೆ.



■ ಡಾ. ಸಿ. ರವೀಂದ್ರನಾಥ್

ಭೈರಪ್ಪನಿಂದಾಗಿ ಬ್ರಾಹ್ಮಣರಿಗೆ ತಲೆನೋವು

ಇತ್ತೀಚೆಗೆ ಮತಾಂತರ ವಿವಾದದ ಹಿನ್ನೆಲೆಯಲ್ಲಿ ತಮ್ಮ ಧರ್ಮಗಳೇ ಶ್ರೇಷ್ಠವೆಂಬ ಬಗ್ಗೆ ಎಲ್ಲಾ ಬಗೆಯ ಮಾಧ್ಯಮಗಳಲ್ಲೂ ನಡೆಯುತ್ತಿರುವ ಚರ್ಚೆಯನ್ನು ನಾವು ಕಾಣುತ್ತಿದ್ದೇವೆ. ಕೆಲವು ಸಣ್ಣ ಮಟ್ಟದಲ್ಲಿದ್ದರೆ ಕೆಲವಂತೂ ಅತಿರೇಕಕ್ಕೆ ಹೋಗಿದೆ. ಲಂಕೇಶರು ಒಂದು ಕಾಲದ ಜನಸಮುದಾಯದ ಮೇಲೇ ಪ್ರಭಾವ ಬೀರಿದಂತಹ ವ್ಯಕ್ತಿಯಾಗಿದ್ದರು. ಬಹುಶಃ ಅವರು ಇಂದು ಇರುತ್ತಿದ್ದರೆ ತಲೆಬುಡವಿಲ್ಲದ ಇಂತಹ ಚರ್ಚೆ ನಡೆಸುವ ಧೈರ್ಯಕ್ಕೆ ಯಾರೂ ಇಳಿಯುತ್ತಿರಲಿಲ್ಲವೇನೋ. ನಾನೊಬ್ಬ ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬಕ್ಕೆ ಸೇರಿದವನೇ ಆಗಿದ್ದೇನೆಂಬ ಮಾತ್ರಕ್ಕೆ ಭೈರಪ್ಪನಂತವರ ಉತ್ಪ್ರೇಕ್ಷಿತ ಮಾತುಗಳನ್ನೆಲ್ಲ ಒಪ್ಪಬೇಕೆಂದಿಲ್ಲ ತಾನೆ. ನನಗೆ ಆ ಲೇಖನಗಳನ್ನು ಓದುವಾಗೆಲ್ಲ ನನ್ನೊಳಗೇ ನಾನು ಮುಜುಗರಪಡುತ್ತಿದ್ದೆ. ಭೈರಪ್ಪನವರ ಲೇಖನ ಪ್ರಕಟಿಸಿದ ಪತ್ರಿಕೆಯಾಗಲಿ, ಭೈರಪ್ಪನವರಂತೆಯೇ ಬರೆದ ನವರತ್ನರಾಮ್, ಆರ್. ಗಣೇಶ ಮೊದಲಾದವರಾಗಲೀ ಏನೇ ಸಿದ್ಧಾಂತಗಳನ್ನ ಸಾಧಿಸಿ ಹೇಳಿದರೂ ಇತಿಹಾಸದಲ್ಲಿ ಗತಿಸಿಹೋದ ಅಮಾನುಷ ಸಂಗತಿಗಳನ್ನು ಇಲ್ಲ ಅನ್ನಿಸಲಾದೀತೆ? ತಪ್ಪುಗಳನ್ನು ಮುಚ್ಚುವ ಎಂತಹ ತೇಪೆಗಳಿಗೂ ಮಿತಿ ಅನ್ನೋದು ಇದೆಯಲ್ಲ ಅದನ್ನ ಮರೆಸಲಾದೀತೆ?



ಹಿಂದಿನ ಕಾಲಘಟ್ಟದಲ್ಲಿ ವರ್ಣಾಶ್ರಮವನ್ನು ಸ್ವಲಾಭಕ್ಕಾಗಿ ದುರುಪಯೋಗ ಪಡಿಸಿಕೊಂಡ ಒಂದು ವರ್ಗದಿಂದಾಗಿ ಸಮಾಜದಲ್ಲಿ ಸಾಮಾಜಿಕ ಶೋಷಣೆ ನಡೆಯಿತು ಎಂಬುದನ್ನು ಸುಳ್ಳೆಂದು ಸಾಧಿಸುವ ಎದೆಗಾರಿಕೆ ಯಾರಿಗೂ ಇಲ್ಲ. ಪೂರ್ವಜರು ನಡೆಸಿದ ಇಂತಹ ಅಚಾತುರ್ಯಕ್ಕಾಗಿ ಇಂದಿನ ಪ್ರಜಾಪ್ರಭುತ್ವ ಸಮಾಜದಲ್ಲಿ ಬದುಕುತ್ತಿರುವ ಬ್ರಾಹ್ಮಣರು ಬಲಿಪಶುಗಳಾಗಿದ್ದಾರೆ. ಒಂದು ಪ್ರತಿಭೆ ಇದ್ದರೂ ಮೀಸಲಾತಿಯಂತಹ ಸರ್ಕಾರಿ ಕಾರ್ಯಕ್ರಮಗಳನ್ನು ಬಾಯ್ಮುಚ್ಚಿಕೊಂಡು ಸಹಿಸಿಕೊಳ್ಳಬೇಕಾದರೆ, ಇನ್ನೊಂದು ಬೆಂಡಿಗೇರಿ, ಕೈರ್ಲಾಂಜಿ, ಕಂಬಾಲಪಳ್ಳಿ ಮೊದಲಾದೆಡೆ ದಲಿತರ ಮೇಲೆ ಬ್ರಾಹ್ಮಣೇತರರು ನಡೆಸಿದ ದೌರ್ಜನ್ಯಕ್ಕೂ ಬ್ರಾಹ್ಮಣರಿಗೂ ಸಂಬಂಧವೇ ಇಲ್ಲದಿದ್ದರೂ ದಲಿತ ದೌರ್ಜನ್ಯ ಎಂದಾಕ್ಷಣ ಎಲ್ಲರೂ ತೆಗಳುವುದು ಪುರೋಹಿತಶಾಹಿಗಳ ಅಟ್ಟಹಾಸ ಎಂದು ಬ್ರಾಹ್ಮಣರನ್ನೇ. ಈ ದೌರ್ಭಾಗ್ಯವನ್ನೂ ಸಹ ಬಾಯ್ಮುಚ್ಚಿಕೊಂಡು ನಾವು ಸಹಿಸಿಕೊಳ್ಳಬೇಕು. ಚಿಕ್ಕವನಿದ್ದಾಗ ಮುಟ್ಟಿಸಿಕೊಳ್ಳಬಾರದು ಅದೂ ಇದೂ ಅಂತ ನಾನು ಹರಿಜನರ ಬಗ್ಗೆ ನಡಕೊಂಡಿರಬಹುದು. ಆದರೆ ಬುದ್ಧಿ ಬಂದ ಬಳಿಕ ಎಲ್ಲೂ ಆ ರೀತಿಯಾಗಿ ನಾನು ನಡಕೊಂಡಿದ್ದಿಲ್ಲ. ಈ ಕಾರಣಕ್ಕೋ ಏನೋ ಕೆಳವರ್ಗದವರೆನಿಸಿಕೊಂಡ ನನ್ನ ಅನೇಕ ಮಿತ್ರರು ನನ್ನಲ್ಲಿ ಲೆಕ್ಕಕ್ಕಿಂತ ಸ್ವಲ್ಪ ಹೆಚ್ಚೇ ಗೌರವದಿಂದ ವ್ಯವಹರಿಸುತ್ತಾರೆ. ನನಗೆ ಅಂತ ಬಯಕೆಯೇನೂ ಇರದಿದ್ದರೂ ಒಂದು ರೀತಿ ಇದು ಗೀವ್ ಆಂಡ್ ಟೇಕ್ ತತ್ವ ಎನ್ನಬಹುದೇನೋ. ಮೇಲ್ವರ್ಗದವನು ಅಂತ ಕರೆಸಿಕೊಂಡರೂ ಶೋಷಣೆಯ ಕಾರಣದ ಕೀಳರಿಮೆಯಿಂದ ಹೊರಬರಲಾರದೇ ಒದ್ದಾಡುತ್ತಿರುವ ನನ್ನಂತವರಿಗೆ ನೇರವಾಗಿ ನಾವು ಮಾಡದಿದ್ದರೂ ಹಿಂದಿನವರು ನಡೆಸಿದ ಇಲ್ಲಾ ಸಮಾಜದಲ್ಲಿ ಬೆಂಬಲಿಸಿದ ಶೋಷಣೆಯನ್ನ ಆತ್ಮಸಾಕ್ಷಿಗನುಸಾರವಾಗಿ ಒಪ್ಪಿಕೊಳ್ಳೊದಾದಲ್ಲಿ ಒಪ್ಪಿಕೊಂಡು ಇಲ್ಲವಾದಲ್ಲಿ ಸುಮ್ಮನಾದರೂ ಇರಬೇಕೇ ವಿನಃ ಸುಳ್ಳು ಸಮರ್ಥನೆಗಳಿಂದಾಗಲೀ, ಎರಡೂ ವರ್ಗವನ್ನು ಇನ್ನಷ್ಟು ಕೆರಳಿಸ ಹೋಗುವುದು ಸರಿಯಾಗಿ ತೋರದು. ಮೊದಲೇ ಬ್ರಾಹ್ಮಣ ವರ್ಗವನ್ನು ಹಣ್ಣುಗಾಯಿ ನೀರುಗಾಯಿ ಮಾಡಲು ಅನೇಕರು ಈ ಕಾರಣಕ್ಕೇ ತುದಿಗಾಲಲ್ಲಿ ನಿಂತಿರುವಾಗ ಭೈರಪ್ಪನಂತಹ ವಿಶ್ವೇಶ್ವರ ಭಟ್ಟರಂತಹ, ಮಹನೀಯರು ಅದಕ್ಕೆ ಇನ್ನಷ್ಟು ತುಪ್ಪ ಸುರಿಯ ಹೊರಟದ್ದು ಆರಂಭದಲ್ಲಿ ಖುಷಿಕೊಡುವ ಸಂಗತಿಯಂತೆ ತೋರಿದರೂ, ಈಗ ಉಳಿದ ವರ್ಗ ಯಾವುದೂ ಹಿಂದಿನಂತೆ ಕತ್ತಲಲ್ಲಿ ನಿದ್ರಿಸುತ್ತಾ ಕುಂತಿಲ್ಲ ಎಂಬುದನ್ನ ತಿಳಿದುಕೊಂಡರೆ ಈವಾಗಲೇ ಸಾಕಷ್ಟು ಹಳೆಯ (ಪಾಪದ) ಹೊರೆ ಹೊತ್ತು ಜಗ್ಗುತ್ತಿರುವ ನಮ್ಮ ಬ್ರಾಹ್ಮಣ ವರ್ಗಕ್ಕೆ ಇದು ಇನ್ನೊಂದು ತಲೆನೋವಾಗಿ ಪರಿಣಮಿಸಲಿದೆ.

-ರಾಜಗೋಪಾಲ್, ಪಡುಬಿದ್ರಿ

ನಿಮ್ಮ ಪತ್ರಿಕೆ ಬೇರೆಲ್ಲಾ ವಾರಪತ್ರಿಕೆಗಳಿಗಿಂತ ವಿಭಿನ್ನವಾದ ವಿಚಾರಗಳನ್ನು ರೂಢಿಸಿಕೊಂಡಿರುವುದರಿಂದಲೇ ನನಗೂ ಮತ್ತು ಸ್ನೇಹಿತರಿಗೂ ಅಚ್ಚುಮೆಚ್ಚು. ಯಾವುದೇ ಸಾಮಾಜಿಕ ಮತ್ತು ಇತರೆ ಕಾರಣಗಳನ್ನು ಸ್ಪಷ್ಟ ನೋಟದಲ್ಲಿ ಗುರುತಿಸಿ ಅದಕ್ಕೆ ಸಕಾರಣ ಸಹಿತ ಉತ್ತರಿಸಿ ಜನರ ಮುಂದಿಡುವ ನಿಮ್ಮ ತೀಕ್ಷ್ಣತೆ ನಿಮ್ಮ ತಂದೆಯವರಂತೆಯೇ ಇರುವುದು ನಿಮ್ಮ ಹೆಚ್ಚುಗಾರಿಕೆಯೇ ಸರಿ.

ಇಂದು ಈ ರಾಜ್ಯದಲ್ಲಿ ಕೋಮುವಾದಿಗಳು ಆಡಳಿತದ ಚುಕ್ಕಾಣಿ ಹಿಡಿದಿರುವುದು, ಸಾಮಾಜಿಕ ಜೀವನದಲ್ಲಿ ಜನರಿಗೆ ಅಭದ್ರತೆ ಮೂಡಿಸುತ್ತಿರುವುದು, ಇತರೆ ಸಾಮಾಜಿಕ ಸಂಘಟನೆಗಳು ಮತ್ತು ಚಳವಳಿಗಳನ್ನು ನೈತಿಕವಾಗಿ ಪರಿಗಣಿಸದೇ ಕೇವಲ ಆಷಾಡಭೂತಿತನ ಮೆರೆಯುತ್ತಿರುವುದು, ಅದಕ್ಕೆ ತಕ್ಕಂತೆ ಈ ರಾಜ್ಯದ ಹಿಂದುಳಿದ, ಅಲ್ಪಸಂಖ್ಯಾತ ಮತ್ತು ದಲಿತ ಧುರೀಣರು ಮತ್ತು ಸಾಹಿತಿಗಳು ಯಾವುದೇ ದೂರದೃಷ್ಟಿಯಲ್ಲಿ ಚಿಂತಿಸದೆ ಇಡೀ ಸಮುದಾಯಗಳನ್ನು ತಮ್ಮ ತೆವಲುಗಳಿಗೆ ಬಳಸಿಕೊಂಡು ಅವಕಾಶವಾದಿತನ ಮೆರೆಯುತ್ತಿರುವುದು ಇಂದು ನಮ್ಮೆಲ್ಲರ ನಡುವಿನ ಕೆಟ್ಟ ಕಾಲದಂತಿದೆ. ನೆಲ, ಜಲ, ಭಾಷೆಯಲ್ಲಿ ಜಾತಿ ಮತ್ತು ದುಷ್ಟ ಅಜಾಂಡಗಳನ್ನು ಜಾರಿಗೊಳಿಸುತ್ತ ಈ ಬಹುಜನರ ಕನಸು ಮತ್ತು ಜೀವನಗಳನ್ನು ದಿಕ್ಕುತಪ್ಪಿಸುತ್ತ ಕೇಕೆ ಹಾಕುತ್ತಿರುವ ಪಟ್ಟಭದ್ರರಿಗೆ ಧಿಕ್ಕಾರವಿರಲಿ. ಪ್ರತಿ ಸಂಚಿಕೆಯೂ ಹಲವು ವಿಚಾರಗಳೊಂದಿಗೆ ನಮ್ಮಲ್ಲಿ ಚೈತನ್ಯ ತರುವ, ವಿಚಾರವಂತಿಕೆಗೆ ನೆರವಾಗುವ ನಿಮ್ಮ ಸಲಹೆಗಳಿಗೆ ನಾವು ಸದಾ ಋಣಿ.

ಸದಾ ಸಾಮಾಜಿಕ ಜವಾಬ್ದಾರಿಯ ಹೆಗ್ಗುರಿಯತ್ತ ಮುಖ ಮಾಡಿ ಚಿಂತಿಸುತ್ತಾ ಈ ನಾಡಿನ ದೀನ ದಲಿತರ, ಅಸಹಾಯಕರ, ಅಲ್ಪಸಂಖ್ಯಾತರ ಹಿತ ಬಯಸುವ ನಿಮಗೆ ಮತ್ತು ನಿಮ್ಮ ಪತ್ರಿಕೆ ಸಿಬ್ಬಂದಿಗೆ ಹೊಸ ವರ್ಷದ ಶುಭಾಷಯಗಳನ್ನು ಹೇಳುತ್ತಾ ನಿಮ್ಮ ಎಲ್ಲಾ ಸಮಾಜಮುಖಿ ಹೋರಾಟಗಳಲ್ಲಿ ನಮ್ಮ ಬೆಂಬಲ ಸದಾ ಇರುತ್ತದೆ ಎಂದು ಹೇಳುತ್ತಾ ಮುಂದಿನ ನಿಮ್ಮ ಸಂಚಿಕೆಯ ನಿರೀಕ್ಷೆಗಳನ್ನು ಕಾತುರದಿಂದ ಎದುರುಗೊಳ್ಳಲು ಕಾಯುತ್ತಿರುವ,

-ಸಿದ್ದು ಮತ್ತು ಸ್ನೇಹಿತರು, ಅಂಬಾದಿಹಳ್ಳಿ ಚನ್ನಪಟ್ಟಣ


ತೆ ಹೊಗಳಿಕೆ ಳಿ ಕೆ

ಮಂಗಳೂರಿನ 'ಕರಾವಳಿ ಅಲೆ' ಸಂಜೆ ಪತ್ರಿಕೆ ವಿರುದ್ಧ ವಿಜಯ ಕರ್ನಾಟಕ ದೈನಿಕ ಕತ್ತಿ ಮಸೆಯಲು ಅದು ಹಿಂದೂತ್ವವಾದಿಗಳ ವಿರೋಧಿ ಎಂಬುದು ಒಂದು ಕಾರಣವಾದರೆ, ಇನ್ನೊಂದು ಮುಖ್ಯ ಕಾರಣ- ಬೇರೆ ಬೆಳಗಿನ ಪತ್ರಿಕೆಗಳ್ಯಾವವೂ ಸಂಜೆ ಅವತರಣಿಕೆ ಹೊರಡಿಸದಿದ್ದರೂ ವಿ.ಕ. ಮಾತ್ರ ಮಂಗಳೂರಿನಲ್ಲಿ ತನ್ನ ಸಂಜೆ ಆವೃತ್ತಿ ಹೊರಡಿಸಿ ನಷ್ಟ ಅನುಭವಿಸುತ್ತಿದ್ದು, ನುಂಗಲೂ ಆಗದ ಉಗುಳಲೂ ಆಗದ ಸ್ಥಿತಿಯಲ್ಲಿ ಸಿಕ್ಕಿಬಿದ್ದಿದೆ. ಕರಾವಳಿ ಅಲೆಯಿಂದಾಗಿ ವಿ.ಕ.ದ. "ಏರು ಹೊತ್ತಿನ ಆವೃತ್ತಿ" ಎಂದು ಕರೆಯಲಾಗುವ ಸಂಜೆ ಆವೃತ್ತಿಯ ಸರ್ಕ್ಯುಲೇಷನ್ ಹೆಚ್ಚುತ್ತಲೇ ಇಲ್ಲ. ಹಾಗಾಗಿ 'ಕರಾವಳಿ ಅಲೆ'ಗೆ ಪೆಟ್ಟು ಕೊಟ್ಟು ಅದರ ಸ್ಥಾನ ಆಕ್ರಮಿಸಿಕೊಳ್ಳುವುದು ವಿ.ಕ.ದ ಉದ್ದೇಶ.

'ಸತ್ಯಂ-ಮಿಥ್ಯಂ' ಬಗ್ಗೆ ಹೇಳಬೇಕೆಂದರೆ, ಆಂಧ್ರದ ಉದ್ಯಮಗಳೆಲ್ಲವೂ ಮೂರು ಪ್ರಬಲ ಮೇಲ್ಜಾತಿ ಕೈಯಲ್ಲಿ ಸಿಕ್ಕಿಬಿದ್ದಿವೆ. ಅಂದರೆ ರೆಡ್ಡಿ, ಕಮ್ಮಾ ಮತ್ತೂ ರಾಜು (ಕ್ಷತ್ರಿಯ) ಜಾತಿಗಳ ಕೈಯಲ್ಲೇ ಅಲ್ಲಿಯ ಉದ್ಯಮಗಳೆಲ್ಲಾ ಇರುವುದು. ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇವರೇ ಪ್ರಬಲರು. ಹಾಗಾಗಿ ಇವರ ಮೋಸ ಬೇಗ ಹೊರಬರುವುದಿಲ್ಲ.

1970ರ ದಶಕದಲ್ಲಿ ಆಂಧ್ರದ ಕನ್‌ಸ್ಟ್ರಕ್ಷನ್ ಕಂಪನಿಗಳಿಂದಾಗಿ ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆ ಗಬ್ಬೆದ್ದು ಹೋಯಿತು. ಬ್ಲಾಕ್ ಲೀಸ್ಟ್ ಆದ ಈ ಕಂಪನಿಗಳೆಲ್ಲಾ ಬೇರೆ ಹೆಸರಲ್ಲಿ ಇಂದಿಗೂ ಕರ್ನಾಟಕದ ಗುತ್ತಿಗೆ ವಶಪಡಿಸಿಕೊಳ್ಳುತ್ತಲೇ ಇವೆ.


1980ರ ದಶಕದಲ್ಲಿ ಆಂಧ್ರದ ಲೀಸಿಂಗ್ ಮತ್ತು ಫೈನಾನ್ಸ್ ಕಂಪನಿಗಳು ಜನರಿಂದ ಕೋಟ್ಯಂತರ ಕೊಳ್ಳೆ ಹೊಡೆದು ಮಾಯವಾದವು. 1990ರ ದಶಕದಲ್ಲಿ ಗ್ಲೋಬಲ್ ಟ್ರಸ್ಟ್ ಬ್ಯಾಂಕ್, ಕೃಷಿ ಬ್ಯಾಂಕ್, ಚಾರ್‌ಮಿನಾರ್ ಬ್ಯಾಂಕ್‌ಗಳು ಹೂಡಿಕೆದಾರರಿಗೆ ಮತ್ತು ಠೇವಣಿದಾರರಿಗೆ ದೊಡ್ಡದೊಡ್ಡ ನಾಮ ಹಾಕಿ ಮುಳುಗಿದವು. ಪ್ರಾಯೋಜಕರು ಮಾತ್ರ ಇಂದಿಗೂ ವೈಭವಯುತ ಜೀವನ ನಡೆಸುತ್ತಿದ್ದಾರೆ. ಈ ದಶಕದಲ್ಲಿ ಈಗ ಸತ್ಯಂ. ಒಟ್ಟಾರೆ ಆಂಧ್ರ ಉದ್ಯಮಿಗಳು ತಮ್ಮ ವಿಶ್ವಾಸಾರ್ಹತೆ ಕಳೆದುಕೊಂಡಿದ್ದಾರೆ.



ಇದೆಲ್ಲಕ್ಕಿಂತ ಹೆಚ್ಚು ಮುಖ್ಯವಾದುದೆಂದರೆ, ಈಗಿನ ಕರ್ನಾಟಕದ ಬಿಜೆಪಿ ಸರ್ಕಾರ ಸಂಪೂರ್ಣ ತೆಲುಗುಮಯವಾಗಿರುವುದು. ಅವೇ ಆಂಧ್ರದ ಮೂರು ಪ್ರಬಲ ಜಾತಿಗಳು ಕರ್ನಾಟಕ ಸರ್ಕಾರವನ್ನೇ ತಮ್ಮ ಮುಷ್ಠಿಯೊಳಗಿಟ್ಟುಕೊಂಡಿವೆ. ಹಾಗಾಗಿ ಒಳಗೊಳಗೆ ಇಡೀ ಕರ್ನಾಟಕವನ್ನೇ ದುರ್ನಾಟಕ ಮಾಡುವ ಯಾವ ಬೇಳೆ ತೆಲುಗರು ಬೇಯಿಸುತ್ತಿದ್ದಾರೆಯೋ?

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಶಾಮಣ್ಣನವರ ಜೀವನಗಾಥೆ ನಮ್ಮ 'ಲಂಕೇಶ್' ನಲ್ಲಿ ಪ್ರಕಟವಾಗುತ್ತಿರುವುದು ಸಂತೋಷ ತರಿಸಿತು. ಶಾಮಣ್ಣನವರ ಬಾಲ್ಯ, ಕಾಲೇಜು ದಿನಗಳು, ತೇಜಸ್ವಿಯವರೊಂದಿಗಿನ ಒಡನಾಟ ಮತ್ತು ಗೆಳೆತನ, ಸರಳವಾದ ಮಂತ್ರ ಮಾಂಗಲ್ಯ ವಿವಾಹ, ಕುವೆಂಪುರವರನ್ನೂ ಪ್ರತಿಭಟಿಸಿದ ಘಟನೆ, ವ್ಯವಸಾಯದ 'ಸಾಯ' ಕಷ್ಟ ಹಾಗೂ ನಾಯಿಕಡಿತದಿಂದ 'ಇಂಜೆಕ್ಷನ್' ಕೊಡಿಸುವಾಗಿನ ಸ್ವಾರಸ್ಯ... ಮುಂತಾದ ವಿಷಯಗಳು-ಹಲವು ವಿಚಾರಗಳು ಬೌದ್ಧಿಕ ಪ್ರೌಢಿಮೆ ಬೆಳೆಸಿತು.



ಕಳೆದ ಎರಡು ವರ್ಷಗಳಿಂದ ಸಣ್ಣ ಉದ್ಯೋಗದ ನಿಮಿತ್ತ ಕೇರಳದಲ್ಲಿದ್ದರಿಂದ 'ಮಯೂರ'ದ ಕೆಲ ಕಂತುಗಳ ಓದಲಾಗಿರಲಿಲ್ಲ. ಈಗ 'ಲಂಕೇಶ್' ನಲ್ಲಿ ಬರುತ್ತಿರುವುದರಿಂದ ಶಾಮಣ್ಣನವರ 'ಕಾಡು ತೊರೆಯ ಜಾಡು' ಯಾವ ಕಂತೂ ತಪ್ಪುವ ಹಾಗಿಲ್ಲ. ಸಮಾಜವಾದಿ, ರೈತ ಹೋರಾಟಗಾರ ಶಾಮಣ್ಣನವರ ಹಾದಿ ಪ್ರಸ್ತುತ ಯುವ ಜನತೆಗೆ ಅವಶ್ಯ.


ಇದನ್ನು 'ಲಂಕೇಶ್' ವಾರ ಪತ್ರಿಕೆಯ ಮೂಲಕ ನಮಗೆ ಪ್ರತಿವಾರ ಕೊಡುತ್ತಿರುವ ಗೌರಿ ಮೇಡಂ, ಅಕ್ಷತಾ ಮತ್ತು ಪತ್ರಿಕೆಯ ಬಳಗಕ್ಕೆ ತುಂಬ ಧನ್ಯವಾದಗಳು.

- ಡಿ.ಎಲ್. ಮಂಜು, ಹೈದ್ರಾಬಾದ್

ಅಮರ ನಾರಾಯಣ್ ರಾಜೀನಾಮೆ ನೀಡಲಿ

ಐಎಎಸ್ ಹುದ್ದೆಗೇ ಅವಮಾನಕಾರಿಯಾಗಿ ನಡೆದುಕೊಂಡ ದಾವಣಗೆರೆಯ ಜಿಲ್ಲಾಧಿಕಾರಿ ಕೆ. ಅಮರ ನಾರಾಯಣ್‌ರವರಿಗೆ ಕರ್ನಾಟಕ ಉಚ್ಚನ್ಯಾಯಾಲಯದಿಂದ ಸಿಕ್ಕಿರುವಂತಹ ಛೀಮಾರಿಯ (ಇದನ್ನು ಲಾತಾ ಎಂದೇ ಕರೆಯಬಹುದೇನೊ) ಮಟ್ಟ ಇದೆಯಲ್ಲ, ಅದು ಕಳೆದ ಕೆಲವಾರು ವರ್ಷಗಳಿಂದೀಚೆಗೆ ಕಂಡು ಕೇಳರಿಯದಂಥಾದ್ದು.

ಅಮರನಾರಾಯಣ್‌ರವರಿಗೆ ಹೈಕೋರ್ಟ್ ಎತ್ತಿರುವ ಮಂಗಳಾರತಿ ಅವರನ್ನು ಆ ಹುದ್ದೆಯಲ್ಲಿ ಕೂರಿಸಿದವರಿಗೂ ಪರೋಕ್ಷವಾಗಿ ತಟ್ಟುತ್ತದೆ. ಹಿಂದೂತ್ವವಾದಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ಅಮರ ನಾರಾಯಣ್ ತಾನು ಐಎಎಸ್ ಕಲಿಯುವಾಗ ಓದಿದ ಭಾರತದ ಸಂವಿಧಾನವನ್ನು ಮರೆತೇಬಿಟ್ಟಿದ್ದಾರೆ. ಯಾವ ಭಾರತದ ಪ್ರಜೆಗಳು ತಮಗೆ ತಾವೇ ಈ ಸಂವಿಧಾನವನ್ನು ಕೊಟ್ಟುಕೊಂಡರೋ ಅದೇ ದೇಶದ ಪ್ರಜೆಗಳು ಕಟ್ಟಿದ ತೆರಿಗೆಯ ದುಡ್ಡಿನಿಂದ ಸಂಬಳ ಪಡೆದು ಹಿಂದೂತ್ವವಾದಿಗಳ ಸಂವಿಧಾನ ವಿರೋಧಿ ಕೃತ್ಯಗಳಿಗೆ ಕುಮ್ಮಕ್ಕು ನೀಡಿದ ಇಂತಹ ಯಾವನೇ ಭಾರತೀಯ ಪ್ರಜೆ ಸರಕಾರದಲ್ಲಿ ಪೇದೆಯಾಗಲೂ ಸಂಪೂರ್ಣ ಅನರ್ಹ. ಈ ಮಾತು ಕೇವಲ ಐಎಎಸ್ ಅಧಿಕಾರಿಗಳಿಗೆ ಮಾತ್ರವಲ್ಲ, ಐಪಿಎಸ್ ಅಧಿಕಾರಿಗಳಿಗೂ, ಇನ್ನಿತರ ಕೇಡರ್ ಅಧಿಕಾರಿಗಳಿಗೂ ಅನ್ವಯಿಸುತ್ತದೆ.



ವಾಸ್ತವದಲ್ಲಿ ಹಿಂದೂತ್ವವಾದಿಗಳು ನಡೆಸಿದ್ದ ಕ್ರೈಸ್ತರ ಆರಾಧನಾ ಸ್ಥಳಗಳ ಧ್ವಂಸದ ಸಂವಿಧಾನ ವಿರೋಧಿ ಕೃತ್ಯಗಳಿಗೆ ದಾವಣಗೆರೆಯ ಪೋಲೀಸರ ಹಾಗೂ ಇತರ ಸ್ಥಳೀಯಾಡಳಿತಗಳ ಅಧಿಕಾರಿಗಳ ಕುಮ್ಮಕ್ಕೂ ಇತ್ತು. ಆದರೆ ಯಾವಾಗ ಪ್ರಕರಣ ಹೈಕೋರ್ಟಿನ ಮೆಟ್ಟಲೇರಿತೋ ಆಗ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಪೋಲೀಸರೂ ಮತ್ತು ಅಧಿಕಾರಿಗಳೂ ಜಾಗರೂಕರಾದರು. ಹೀಗಾಗಿ ಹೈಕೋರ್ಟಿನ ಗದಾಪ್ರಹಾರ ಕೇವಲ ಜಿಲ್ಲಾಧಿಕಾರಿ ಮೇಲಾಗಿ ಉಳಿದವರೆಲ್ಲ ಸಭ್ಯರು ಎಂದಾಗಿದೆ.

ಮೊದಲ ದಿನ ಕ್ಯಾಸುವಲ್ ಆಗಿ ಬಟ್ಟೆ ಧರಿಸಿಕೊಂಡು ನ್ಯಾಯಾಲಯಕ್ಕೆ ಬಂದ ಜಿಲ್ಲಾಧಿಕಾರಿಗೆ ಕೋರ್ಟಿನಿಂದ ಮಂಗಳಾರತಿಯಾಗಿತ್ತು, ಆದರೆ ಮರುದಿನ ನ್ಯಾಯಾಲಯಕ್ಕೇ ಹಾಜರಾಗದೆ ಖಾಸಗಿ ವಕೀಲರನ್ನು ನೇಮಿಸುವ ಉದ್ಧಟತನ ತೋರಿಸಿದ್ದರು ಅಮರ ನಾರಾಯಣ್. ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಹೈಕೋರ್ಟು ಇದು ರಾಜ್ಯದ ಅಡ್ವೊಕೇಟ್ ಜನರಲ್ ಹುದ್ದೆಗೇ ಮಾಡಿದ ಅವಮಾನ ಎಂದಿದೆ. ದಾವಣಗೆರೆ ಜಿಲ್ಲೆಯಲ್ಲಿರುವ ಚರ್ಚುಗಳ ಸಮೀಕ್ಷೆ ನಡೆಸಬೇಕೆಂದು ಅಮರನಾರಾಯಣ್ ಸುತ್ತೋಲೆ ಹೊರಡಿಸಿದ್ದು ಕೂಡ ತಪ್ಪೆಂದು ಹೇಳಿದ ಹೈಕೋರ್ಟ್ ಅದನ್ನು ತಕ್ಷಣ ಹಿಂದೆಗೆದುಕೊಳ್ಳಲು ಆದೇಶಿಸಿ ಜಿಲ್ಲೆಯಲ್ಲಿ ಕೋಮು ಸೌಹಾರ್ದ ಕಾಪಾಡುವಂತೆ ಸರಕಾರಕ್ಕೆ ತಾಕೀತು ಮಾಡಿದೆ.

ಚರ್ಚುಗಳಿಗೆ ಬೀಗಮುದ್ರೆ ಜಡಿದ ಕ್ರಮದ ವಿರುದ್ಧ ಇತ್ತೀಚೆಗೆ ಪೂರ್ವಾನುಮತಿ ಪಡೆದು ಜಿಲ್ಲಾಧಿಕಾರಿ ಕಚೇರಿ ಎದುರಿನಲ್ಲಿ ಸೌಹಾರ್ದಪ್ರಿಯರು ಪ್ರತಿಭಟನೆ ಹಮ್ಮಿಕೊಂಡಿದ್ದಾಗ ಕೊನೆಗಳಿಗೆಯಲ್ಲಿ ನಿಷೇಧಾಜ್ಞೆ ಹೊರಡಿಸಿ ಅವರನ್ನೆಲ್ಲ ಬಂಧಿಸಿದ 'ಕೀರ್ತಿ'ಗೂ ಭಾಜನರಾಗಿರುವ ದಾವಣಗೆರೆಯ ಜಿಲ್ಲಾಧಿಕಾರಿ ಅಮರ ನಾರಾಯಣ್‌ರಲ್ಲಿ ಮಾನ, ಮರ್ಯಾದೆ, ಲಜ್ಜೆಯ ಲವಲೇಶವಾದರೂ ಉಳಿದಿದೆ ಎಂದಾದರೆ ಅವರು ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಸಂವಿಧಾನವನ್ನು ಮತ್ತೊಮ್ಮೆ ಓದಿಕೊಳ್ಳಬೇಕಾಗಿ ವಿನಂತಿ.

- ಸುರೇಶ ಭಟ್
ಬಾಕ್ರಬೈಲು, ಮಂಗಳೂರು



ವ ಶಿವಾ! ದೆಂಥ ಮಣಿ?

ಮುರುಳಿ ಮತ್ತು ಶರ್ಮಿಳಾ ಮಾಂಡ್ರೆ ಜೋಡಿಯಾಗಿ ಅಭಿನಯಿಸಿರುವ 'ಶಿವಮಣಿ' ಚಿತ್ರದ ಬಗ್ಗೆ ಗಂಭೀರವಾದ ವಿಮರ್ಶೆ ತೀರಾ ಅನಗತ್ಯ ಎಂದೆನಿಸುತ್ತದೆ. ಈ ಚಿತ್ರವನ್ನು ಕೋಟ್ಯಾಂತರ ರೂ. ಸುರಿದು ನಿರ್ಮಿಸಿದ ನಿರ್ಮಾಪಕ ಜಗನ್ನಾಥ ಪೈ ಬಗ್ಗೆ ನಿಜಕ್ಕೂ ಅನುಕಂಪ ಹುಟ್ಟುತ್ತದೆ. ಇಂತಹ ಒಳ್ಳೆಯ ನಿರ್ಮಾಪಕನಿಗೆ ಒಂದು ಉತ್ತಮ ಚಿತ್ರಕೊಡಲಾಗದ ನಿರ್ದೇಶಕ ಅಮರ್‌ನಾಥ್ ಬಗ್ಗೆ ಏನು ತಾನೆ ಹೇಳಲು ಸಾಧ್ಯ? ಈ ಚಿತ್ರದ ಕಥೆ ಹೇಳುವ ಗೋಜಿಗೆ ನಾವು ಕೈ ಹಾಕದಿರುವುದೇ ಸೂಕ್ತ, ಏಕೆಂದರೆ ಕನಿಷ್ಠವೆಂದರೂ 20 ವರ್ಷಗಳ ಹಿಂದೆ ಇಂತಹ ಚಿತ್ರಗಳು ಕನ್ನಡದಲ್ಲಿ ಸಾಕಷ್ಟು ಬಂದಿವೆ. ಹೀಗಾಗಿ ಕನ್ನಡ ಚಿತ್ರರಂಗವನ್ನು 'ಶಿವಮಣಿ' ಚಿತ್ರದ ಮೂಲಕ ಎರಡು ದಶಕ ಹಿಂದಕ್ಕೆ ಕೊಂಡೊಯ್ದ (ಕು)ಖ್ಯಾತಿ ನಿರ್ದೇಶಕ ಅಮರ್‌ನಾಥ್‌ಗೆ ಸಲ್ಲಬೇಕು.

ನಾಯಕ ಮುರುಳಿ ಈ ಚಿತ್ರದ ಮುಖಾಂತರ 'ಆ್ಯಕ್ಷನ್ ಸ್ಟಾರ್' ಎಂಬ ಬಿರುದನ್ನು ಪಡೆದಿದ್ದಾರೆ. ಬೇಸರದ ವಿಷಯವೆಂದರೆ ಮುರುಳಿಯ 'ಆ್ಯಕ್ಷನ್' ನಮ್ಮ ದುನಿಯಾ ವಿಜಿಯ ಆ್ಯಕ್ಷನ್‌ಗೆ ಹೋಲಿಸಿದರೆ ಮಕ್ಕಳಾಟದ ತರಹ ಕಾಣಿಸುತ್ತದೆ. ಇನ್ನು ಚಿತ್ರದ ನಾಯಕಿ ಶರ್ಮಿಳಾ ತನ್ನ ಉಡುಗೆ-ತೊಡುಗೆ-ಆಭರಣಗಳಿಗೆ ಕೊಟ್ಟಂತಹ ಪ್ರಾಮುಖ್ಯತೆಯನ್ನು ನಟನೆಗೆ ಕೊಟ್ಟಿಲ್ಲ, ಹಿರಿಯ ನಟರುಗಳಾದ ಅವಿನಾಶ್, ರಮೇಶ್ ಭಟ್, ವಿನಯಾ ಪ್ರಸಾದ್ ಸ್ವಲ್ಪಮಟ್ಟಿಗೆ ಚಿತ್ರದ ಮಾನ ಉಳಿಸಿದ್ದಾರೆ. ಹಾಡುಗಳೂ ಹಾಗೆ ಬಂದು ಹೀಗೆ ಹೋಗುವುದರಿಂದ ಮನಸ್ಸಿನಲ್ಲಿ ಉಳಿಯುವುದಿಲ್ಲ. ಹೀಗಾಗಿ 'ಶಿವಮಣಿ' ನೋಡಿದಾಗ ತಲೆಚಚ್ಚಿಹಿಡಿದು ಶಿವ.... ಶಿವಾ ಎನ್ನುವಂತಾಗುತ್ತದೆ. ■

ಆರಂಭದಲ್ಲೇ ತೋಪು ತೋಪು!


2009 ಚಿತ್ರರಂಗದ ಪಾಲಿಗೆ ಅದೃಷ್ಟ ತರಬಹುದು ಎಂದು ಕಳೆದ ಸೋತು ಸುಣ್ಣವಾದ ಉದ್ಯಮದ ಜನರು ಆಶಾವಾದ ವ್ಯಕ್ತಪಡಿಸಿದ್ದರು. ರಣಕ್ಕೆ ಅನೇಕ ಜನ ತಮ್ಮ ಚಿತ್ರ ಬಿಡುಗಡೆಯನ್ನು 2009ಕ್ಕೆ ರ್ತ್ ಈ ವರ್ಷಕ್ಕೆ ಮುಂದೂಡಿದ್ದರು.

ಆದರೆ 2009 ಯಾವುದೇ ಕಾರಣಕ್ಕೂ 2008ಕ್ಕಿಂತ ಷ್ಟವಾಗಿರಲು ಸಾಧ್ಯವಿಲ್ಲ ಎಂಬ ಸೂಚನೆ ಈಗಾಗಲೇ ಕಾಣಿಸುತ್ತಿದೆ. ಕೆಂದರೆ ಈ ವರ್ಷದ ಆರಂಭದಲ್ಲಿ ಬಿಡುಗಡೆಗೊಂಡಿರುವ ಗಳೆಲ್ಲ ತೋಪಾಗಿವೆ.









ಮೊದಲು ಬಿಡುಗಡೆಗೊಂಡದ್ದು ಕೋಟಿ ವೀರ ರಾಮು ರ್ಮಾಣದ 'ಗುಲಾಮ'.'ಇದನ್ನು ಸೂರಿ ಶಿಷ್ಯ ತುಷಾರ್ ರಂಗನಾಥ್ ಬ ಹೊಸ ಹುಡುಗ ನಿರ್ದೇಶಿಸಿದ್ದರಿಂದ ಚಿತ್ರದ ಬಗ್ಗೆ ಬಹಳ ಕ್ಷೆ ಇತ್ತು, ಆದರೆ 'ಗುಲಾಮ' ನೋಡಿದ ಜನರು ತಲೆ ಕೊಳ್ಳುವಂತಾಯಿತು. ಯುವ ನಿರ್ದೇಶಕ ತುಷಾರ್ ರಂಗನಾಥ್ ಲೊಬ್ಬ ಸೂರಿಯಾಗುತ್ತಾನೆ ಎಂಬ ನಿರೀಕ್ಷೆಯೂ ಭಗ್ನವಾಯಿತು. ಆದಾದ ನಂತರ ತೆರೆಕಂಡಿದ್ದು 'ಕೆಂಪ'. ಇದನ್ನು ಮತ್ತೊಬ್ಬ ಟ್ಟಿಲ ನಿರ್ದೇಶಕ ಜಗದೀಶ್ ನಿರ್ದೇಶಿಸಿದ್ದ ಈ ಚಿತ್ರದ ನಾಯಕ ನೋಡಲು ಸುಮಾರಾಗಿದ್ದರೂ ಜಗದೀಶ್ 'ಕರಿಯ' ಚಿತ್ರದ ಮ್ ಗರಡಿಯಲ್ಲಿ ಬೆಳೆದವನು ಎಂಬ ಕಾರಣಕ್ಕೆ ಭಾರೀ ಕ್ಷೆಯಿತ್ತು, ಆದರೆ ಈ ಚಿತ್ರವೂ ಬಿದ್ದುಹೋಯಿತು. ಅಂದಹಾಗೆ ಮ್ ಶಿಷ್ಯರಲ್ಲಿ ಯಾರೂ ನಿರ್ದೇಶಕರಾಗಿ ಹೆಸರು ಮಾಡಿಲ್ಲ ುದು ವಿಶೇಷ.

ಈ ಮಧ್ಯೆ ತೆಲುಗಿನಲ್ಲಿ ಸೂಪರ್ ಹಿಟ್ ಆಗಿದ್ದ 'ಅನಸೂಯ' ಚಿತ್ರವನ್ನು ಕನ್ನಡಕ್ಕೆ 'ಅನು' ಎಂದು ರಿಮೇಕ್ ಮಾಡಲಾಯಿತು. ಗಿನ ತರಹ ಕನ್ನಡದಲ್ಲೂ ಈ ಚಿತ್ರ ಬಾಕ್ಸಾಫೀಸ್‌ನಲ್ಲಿ ಹಣವನ್ನು ಕೊಡೆಯುತ್ತದೆ ಎಂಬ ನಿರೀಕ್ಷೆ ಸುಳ್ಳಾಯಿತು. ಮೊದಲ ಚಿತ್ರ ನಿರ್ದೇಶಿಸಿದ ಶಿವಗಣಪತಿ ಎಂಬ ತೆಲುಗು ನಿರ್ದೇಶಕ ದ ಸೋಲು ಕಂಡರು.

ಕಳೆದ ಒಂದೂವರೆ ವರ್ಷದಿಂದ ಮುರುಳಿ ಮತ್ತು ಶರ್ಮಿಳಾ ಂಡ್ರೆಯನ್ನು ಹಾಕಿಕೊಂಡು ಭಾರೀ ಸುದ್ದಿ ಮಾಡಿದ್ದ 'ಶಿವಮಣಿ' ಈ ವಾರ ತೆರೆಕಂಡಿದೆ. ಕಾಕತಾಳೀಯವೋ ಏನೋ, ಈ ದ ನಿರ್ದೇಶಕ ಅಮರ್‌ನಾಥ್ ಕೂಡಾ ಹೊಸಬ. ಮೂಲತಃ ಳಿನವನಾದ ಅಮರ್‌ನಾಥನ ಚಿತ್ರದಲ್ಲಿ ಏನಾದರೂ ಸುತಿರಬಹುದು ಎಂಬ ನಿರೀಕ್ಷೆ ಇತ್ತು, ದುರದೃಷ್ಟವಶಾತ್ ಈ ಸಿನಿಮಾ ಕೂಡಾ ಸೋಲಿನ ಸಾಲಿಗೆ ಸೇರುವುದು ಗ್ಯಾರಂಟಿ.

ವಿಶೇಷವೆಂದರೆ ಮೇಲೆ ತಿಳಿಸಿದ ನಾಲ್ಕೂ ಚಿತ್ರಗಳ ನಿರ್ದೇಶಕರುಗಳು ಉತ್ಸಾಹದ ಚಿಲುಮೆಯಂತಿರುವ ಹೊಸ ತಲೆಮಾರಿನವರು. ಆದರೆ ಅವರ ಚಿತ್ರಗಳನ್ನು ಪ್ರೇಕ್ಷಕರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

ಈ ಮಧ್ಯೆ ಹಳೇ ಹುಲಿ ಜಗ್ಗೇಶ್ ಮತ್ತು ಎಸ್. ನಾರಾಯಣ್ ನಟಿಸಿರುವ 'ಚಿಕ್ಕಪೇಟೆ ಸಾಚಾಗಳು' ಎಂಬ ಕಾಮಿಡಿ ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲಬಹುದು ಎಂದು ನಿರೀಕ್ಷಿಸಲಾಗಿತ್ತು, ಅದಕ್ಕೆ ಕಾರಣ ಮಾಗಡಿ ಪಾಂಡು ಎಂಬ ಯಶಸ್ವಿ ನಿರ್ದೇಶಕ ಇದನ್ನು ನಿರ್ದೇಶಿಸಿದ್ದು. ಆದರೆ ಇಂತಹ ಕಳಪೆ ಅಭಿರುಚಿಯ ಹಾಸ್ಯ ಚಿತ್ರವನ್ನೂ ಪ್ರೇಕ್ಷಕರು ತಿರಸ್ಕರಿಸಿದ್ದಾರೆ.

ಈ ಎಲ್ಲಾ ಚಿತ್ರಗಳ ಸೋಲಿನ ನಂತರ ಭಾರೀ ಸದ್ದಿಯೊಂದಿಗೆ ಬಂದಿದ್ದು ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯದ 'ಸರ್ಕಸ್'. ಈ ಚಿತ್ರ ಗೆದ್ದೇ ಗೆಲ್ಲುತ್ತದೆ ಎಂದೇ ಇದರ ನಿರ್ದೇಶಕ ಕಮ್ ನಿರ್ಮಾಪಕ ದಯಾಳ್ ಆರಂಭದಿಂದಲೂ ಆತ್ಮವಿಶ್ವಾಸದಿಂದ ಬಾಜಾಭಜಂತ್ರಿ ಬಾರಿಸಿದ್ದರು. ಆದರೆ 'ಸರ್ಕಸ್' ಚಿತ್ರದಲ್ಲಿ ಗಣೇಶ್‌ನ ಕ್ರೇಜ್ ವರ್ಕ್‌ಔಟ್ ಆಗಲಿಲ್ಲ. ಈ ಚಿತ್ರ ಕೂಡಾ ತರಗೆಲೆಯಂತೆ ಧರೆಗುರುಳುವುದು ಶತಸಿದ್ಧ.

ಅಂದರೆ ಜನವರಿ ತಿಂಗಳ ಮೊದಲ ಹದಿನೈದು ದಿನಗಳಲ್ಲಿ ಬಿಡುಗಡೆಯಾದ ಎಲ್ಲಾ ಚಿತ್ರಗಳೂ ನೆಲಕಚ್ಚಿವೆ. ಉದ್ಯಮದ ಪಂಡಿತರ ಪ್ರಕಾರ ಈಗಾಗಲೇ ಕನಿಷ್ಠವೆಂದರೂ ಹನ್ನೆರಡು ಕೋಟಿ ರೂಪಾಯಿಗಳನ್ನು ನೀರಿಗೆ ಸುರಿದಂತಾಗಿದೆ. ಆದರೂ ಕೆಲವು ಚಿತ್ರಗಳ ಬಗ್ಗೆ ಬಹಳ ದೊಡ್ಡ ನಿರೀಕ್ಷೆ ಇದೆ.

ರಮ್ಯಾ-ಪ್ರೇಮ್ ಜೋಡಿಯ 'ಜೊತೆಗಾರ', ಪ್ರೇಮ್ ನಿರ್ದೇಶಿಸಿ ಪುನೀತ್ ಅಭಿನಯಿಸುತ್ತಿರುವ 'ರಾಜ್', ವಿಜಯ್-ಅಂದ್ರಿತಾ ರೇ ಜೋಡಿ ಇರುವ ಸೂರಿ ನಿರ್ದೇಶನದ 'ಜಂಗ್ಲಿ', ಶಿವರಾಜ್‌ಕುಮಾರ್ ಅಭಿನಯದ 'ನಂದ', ವಿಷ್ಣು ಅಭಿನಯದ 'ನಂಯಜುಮಾನ್ರು', ಯೋಗೇಶ್ ಅಭಿನಯದ 'ಅಂಬಾರಿ', ದರ್ಶನ್ ಅಭಿನಯದ 'ಬಾಸ್' ಮತ್ತು ರಮೇಶ್ ನಿರ್ದೇಶನದ 'ವೆಂಕಟ್ ಇನ್ ಸಂಕಟ್' ಬಗ್ಗೆ ಉದ್ಯಮದವರಿಗೆ ಭಾರಿ ಭರವಸೆ ಇದೆ.

ಈ ಹತ್ತಾರು ಚಿತ್ರಗಳಲ್ಲಿ ಒಂದೆರಡು ಚಿತ್ರ ಗಲ್ಲಾಪೆಟ್ಟಿಗೆ ದೋಚಿದರೂ ಸಾಕು; ಉದ್ಯಮ ಚೇತರಿಸಿಕೊಳ್ಳುತ್ತದೆ. ಈಗ ಅಂತಹ ಒಂದು ಹಿಟ್ ಚಿತ್ರಕ್ಕಾಗಿ ಇಡೀ ಗಾಂಧಿನಗರ ಕಾದುಕುಳಿತಿದೆ.

ಲೆಟ್ ಅಸ್ ಹೋಪ್ ಫಾರ್ ದ ಬೆಸ್ಟ್.

■ ಶೆಣೈ

ಸಿನಿ Bits


'ಶಿವಾಜಿ' ಪ್ರಭು ದಿ 'ಬಾಸ್'!



ತಮಿಳಿನ ಖ್ಯಾತ ನಟ ಶಿವಾಜಿ ಪ್ರಭು ಕನ್ನಡಕ್ಕೆ ಆಗಮಿಸಿದ್ದಾರೆ.

ರಮೇಶ್ ಯಾದವ್ ನಿರ್ಮಿಸಿ, ಪಿ.ಎನ್ ಸತ್ಯಾ ನಿರ್ದೇಶಿಸುತ್ತಿರುವ ದರ್ಶನ್ ಅಭಿನಯದ 'ಬಾಸ್' ಚಿತ್ರದ ವಿಶೇಷ ಪಾತ್ರವೊಂದರಲ್ಲಿ ಶಿವಾಜಿ ಪ್ರಭು ನಟಿಸುತ್ತಿದ್ದಾರೆ. ಮೈಸೂರಿನಲ್ಲಿ ನಡೆಯುತ್ತಿರುವ ಚಿತ್ರೀಕರಣದಲ್ಲಿ ಈಗಾಗಲೇ ಮೂರು ದಿನದ ಶೂಟಿಂಗೂ ಮುಗಿಸಿದ್ದಾರೆ.

ಹಿಂದೆ 'ಸ್ಕೂಲ್ ಮಾಸ್ಟರ್' ಚಿತ್ರದಲ್ಲಿ ಅವರ ತಂದೆ ಶಿವಾಜಿ ಗಣೇಶನ್ ಸಹ ಒಂದು ಪುಟ್ಟ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈಗ ಮಗ ಪ್ರಭು ಕೂಡಾ ಅಪ್ಪನ ಹಾದಿ ಹಿಡಿದಿರುವುದು ವಿಶೇಷ.



ಸಾಮಾನ್ಯವಾಗಿ ನಮ್ಮ ಕನ್ನಡದ ಪ್ರತಿಭೆಗಳು ಮಾತ್ರ ತಮಿಳಿನಲ್ಲಿ ಮಿಂಚುವುದು ವಾಡಿಕೆ. ಆದರೆ ಅಲ್ಲಿನ ಹೀರೋಗಳೂ ಕನ್ನಡದಲ್ಲಿ ಹೀಗೆ ಬಂದು ಹಾಗೆ ಹೋದರೆ ಎಷ್ಟು ಚೆಂದ ಅಲ್ಲವೇ?!

ಕನ್ನಡದ 'ಕ್ರಾಂತಿ'

ಕನ್ನಡದ ಚಿತ್ರರಂಗದಲ್ಲಿ ಮತ್ತೊಂದು 'ಕ್ರಾಂತಿ'ಯಾಗುತ್ತಿದೆ.


ಈ ನಿರ್ದೇಶಕರುಗಳನ್ನು ನಂಬಿ ಅವರಿಗೆ ಕೆಲಸ ಒಪ್ಪಿಸೋದೇ ಕಷ್ಟ ಎಂದು ಪ್ರೊಡ್ಯೂಸರ್‌ಗಳು ಕೊರಗೋದು ಮಾಮೂಲಿ. ಆದರೆ, ನಿರ್ಮಾಪಕ ಶಂಕರ್ ಗೌಡ ಈ ಬಾರಿ ಯಾವ ನಿರ್ದೇಶಕನನ್ನೂ ನಂಬೋದೇ ಬೇಡ ಎಂದು ಸ್ವತಃ ತಾವೇ ಫೀಲ್ಡಿಗಿಳಿದಿದ್ದಾರೆ.

ಈಗಷ್ಟೇ ಮುರುಳಿ ಅಭಿನಯದ ದ್ವಿಭಾಷಾ ಚಿತ್ರ 'ಯಜ್ಞ'ವನ್ನು ನಿರ್ಮಿಸಿರುವ ಶಂಕರ್ ಗೌಡರು ಅದೇ ಮುರುಳಿಯನ್ನು ನಾಯಕನನ್ನಾಗಿಸಿ 'ಕ್ರಾಂತಿ' ಅನ್ನೋ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಕನ್ನಡದಲ್ಲಿ 'ಕ್ರಾಂತಿ'ಯಾಗಿರುವುದರಿಂದ ಚಿತ್ರದ ಹೆಸರು 'ಹುಲಿ' ಎಂದು ಬದಲಾದರೂ ಆಗಬಹುದಂತೆ.

ಹದಿನಾರು ಲಕ್ಷದ ಫ್ಲೈಟು!

ದರ್ಶನ್ ನಟಿಸುತ್ತಿರುವ 'ಅಭಯ' ಚಿತ್ರಕ್ಕಾಗಿ ರಾಕ್‌ಲೈನ್ ಸ್ಟುಡಿಯೋದಲ್ಲಿ ಹದಿನಾರು ಲಕ್ಷ ರೂಪಾಯಿ ಖರ್ಚು ಮಾಡಿ ವಿಮಾನವೊಂದರ ಅದ್ಭುತ ಸೆಟ್ ನಿರ್ಮಿಸಿದ್ದಾರೆ. ಚಿತ್ರದಲ್ಲಿ ಬರುವ ಫ್ಲೈಟ್ ದೃಶ್ಯವನ್ನು ಹೈದರಾಬಾದಿನ ರಾಮೋಜಿ ಸ್ಟುಡಿಯೋದಲ್ಲಿ ಚಿತ್ರೀಕರಿಸಬೇಕಿತ್ತಂತೆ. ಆದರೆ ರಾಮೋಜಿಯವರ ಏರೋಪ್ಲೇನು ಈಗ ತನ್ನ ರೆಕ್ಕೆಪುಕ್ಕ ಮುರಿದುಕೊಂಡು ಶಿಥಿಲಾವಸ್ಥೆಯಲ್ಲಿದೆಯಂತೆ.

ಹೀಗಾಗಿ ನಿರ್ದೇಶಕ ಮಹೇಶ್ ಬಾಬು ಆ ಮುರುಕಲು ವಿಮಾನದೊಂದಿಗೆ ರಾಜಿಯಾಗದೇ, ಕಲಾ ನಿರ್ದೇಶಕ ಇಸ್ಮಾಯಿಲ್‌ಗೆ ಹೊಸ ವಿಮಾನವನ್ನು ನಿರ್ಮಿಸಿಕೊಡುವ ಜವಾಬ್ದಾರಿ ವಹಿಸಿದ್ದಾರೆ.



ಕರ ಸಾಧಿಸಿದ ಜಯಮಾಲ



ಮಾರ್ಚ್ ಒಂದರಂದು ಆರಂಭವಾಗಿ ಎರಡು ಗಳ ಕಾಲ ನಡೆಯಲಿರುವ ಕನ್ನಡ ಚಿತ್ರೋದ್ಯಮದ ಮೃತಮಹೋತ್ಸವ ಸಮಾರಂಭದಲ್ಲಿ ತಾರೆಯರು ದು ಕುಪ್ಪಳಿಸಿ ಮನರಂಜನಾ ಕಾರ್ಯಕ್ರಮ ಡಲಿದ್ದಾರೆ. ಆ ಕಾರ್ಯಕ್ರಮದ ರೀಹರ್ಸಲ್‌ಗಾಗಿ ನೈದು ದಿನ ಉದ್ಯಮಕ್ಕೆ ರಜೆ ನೀಡಬೇಕಾಗುತ್ತದೆ ಬುದು ಚೇಂಬರ್ ಅಧ್ಯಕ್ಷೆ ಜಯಮಾಲ ಅವರ ತನೆಯಾಗಿತ್ತು, ಆದರೆ ಅನೇಕ ನಿರ್ಮಾಪಕರು ವ್ರವಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರು. ದರೆ ಕೊನೆಗೂ ಜಯಮಾಲ ನಿಲುವಿಗೆ ಗೆಲುವು ಸಿಕ್ಕಿದೆ. ಹೀಗಾಗಿ ಫೆಬ್ರವರಿ ರಿಂದ ಕನ್ನಡ ಚಿತ್ರರಂಗದಲ್ಲಿ ಯಾವುದೇ ಚಿತ್ರೀಕರಣವೂ ನಡೆಯುವುದಿಲ್ಲ. ಹಾಗೆ ನೋಡಿದರೆ ಇದೊಂದು ಮೂರ್ಖ ನಿರ್ಣಯ ಎಂದೇ ಳಬೇಕಾಗುತ್ತದೆ. ಒಂದ್ಹತ್ತು ಜನ ತಾರೆಯರು ಮನರಂಜನೆ ಕಾರ್ಯಕ್ರಮ ಡುವುದಕ್ಕಾಗಿ ಸಾವಿರಾರು ಜನ ಕಾರ್ಮಿಕರು ಕೆಲಸವಿಲ್ಲದೆ ಮನೆಯಲ್ಲಿ ತುಕೊಳ್ಳಬೇಕಾಗಿ ಬಂದಿರುವುದು ದುಃಖದ ವಿಷಯ. ಇದು 'ಹೊಟ್ಟೆಗೆ ಟ್ಟಿಲ್ಲದಿದ್ದರೂ.... 'ಎಂಬ ಗಾದೆಯನ್ನು ನೆನಪಿಸುವಂತಿದೆ. ಅದೂ ಕನ್ನಡ ತ್ರರಂಗ ಅತ್ಯಂತ ಸಂಕಷ್ಟದ ದಿನಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ರ್ಮಿಕರು ಮತ್ತರು ನಿರ್ಮಾಪಕರು ತಾರೆಯರ ಮನರಂಜನಾ ಕಾರ್ಯಕ್ರಮಕ್ಕಾಗಿ ದಿನೈದು ದಿನಗಳನ್ನು ತ್ಯಾಗ ಮಾಡಬೇಕೇ? ಇದರ ಬಗ್ಗೆ ಜಯಮಾಲ ತ್ತೊಮ್ಮೆ ಆಲೋಚಿಸಲಿ.

ಟಿಕೆಟ್ ಟಿಕೆಟ್ ಪೂಜಾ!




ಮೊನ್ನೆ ಪೂಜಾ ಗಾಂಧಿ 'ಅನು' ಚಿತ್ರ ಪ್ರದರ್ಶನಗೊಳ್ಳುತ್ತಿರುವ ಅಭಿನಯ ಥಿಯೇಟರ್‌ನಲ್ಲಿ ಟಿಕೆಟ್ ಕೌಂಟರ್‌ನಲ್ಲಿ ಕುಳಿತು ಪ್ರೇಕ್ಷಕರಿಗೆ ಟಿಕೆಟ್ ಹಂಚಿದಳು.

ಆಫ್‌ಕೋರ್ಸ್, ಇದೂ ಕೂಡಾ ಒಂದು ಪಬ್ಲಿಸಿಟಿ ಗಿಮ್ಮಿಕ್ಕು. ಅಂದು ಪೂಜಾ ಟಿಕೆಟ್ ಕೌಂಟರ್‌ನಲ್ಲಿ ಇರುವುದರ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಕೂಡ ಬಂದಿದ್ದರಿಂದ ಅನೇಕ ಅಭಿಮಾನಿಗಳು ಆಕೆಯಿಂದ ಟಿಕೆಟ್ ಪಡೆಯುವ ಉತ್ಸಾಹದಿಂದ ಥಿಯೇಟರ್ ಮುಂದೆ ಜಮಾಯಿಸಿದ್ದರು. ಮುಂದಿನ ವಾರ ಪೂಜಾ ಮೈಸೂರು, ಮಂಡ್ಯ ಹಾಸನಕ್ಕೂ ಹೋಗಿ ಟಿಕೆಟ್ ಹಂಚಲಿದ್ದಾಳಂತೆ.

ವಿಷಯ ಅದಲ್ಲ, ಚಿತ್ರವೊಂದನ್ನು ಗೆಲ್ಲಿಸಲು ಅದರ ನಾಯಕ ನಟಿ ಎಂತೆಂತಹ ಸರ್ಕಸ್ ಮಾಡಬೇಕು ನೋಡಿ. ಚಿತ್ರದಲ್ಲಿ ನಟಿಸುವುದಲ್ಲದೆ, ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವುದು, ಚಾನೆಲ್‌ಗಳಲ್ಲಿ ಚಿತ್ರವನ್ನು ಪ್ರಮೋಟ್ ಮಾಡುವುದು... ಇದೆಲ್ಲದರ ಜೊತೆ ಈಗ ಟಿಕೆಟ್ ಕೂಡಾ ಮಾರಾಟ ಮಾಡಬೇಕಾಗಿರುವುದು ದುರಂತವೇ ಸರಿ.

ಸಂಕಟದಲ್ಲೂ ವೆಂಕಟ ಹ್ಯಾಪಿ!



ರಮೇಶ್ ಅರವಿಂದ್ ಕಳೆದ ವರ್ಷ ಸಂಪೂರ್ಣವಾಗಿ ತಮ್ಮ ನಿರ್ದೇಶನದ 'ವೆಂಕಟ ಇನ್ ಸಂಕಟ' ಚಿತ್ರದಲ್ಲಿ ಮಗ್ನರಾಗಿದ್ದರು. ಸಾಮಾನ್ಯವಾಗಿ ತನ್ನ ಚಿತ್ರಕ್ಕೆ ಆಗಾಗ್ಗೆ ಪಬ್ಲಿಸಿಟಿ ಕೊಡುವುದರತ್ತ ಗಮನಹರಿಸುವ ರಮೇಶ್ ಈ ಬಾರಿ ಸದ್ದುಗದ್ದಲವಿಲ್ಲದೇ ಚಿತ್ರ ಮುಗಿಸಿದ್ದಾರೆ.

ಮೊನ್ನೆ ಪತ್ರಿಕಾಗೋಷ್ಠಿ ಕರೆದು ಚಿತ್ರ ಮುಗಿದ ಬಗ್ಗೆ ಸಂತೋಷ ವ್ಯಕ್ತಪಡಿಸಿ "ನಾನು ಈ ವರ್ಷದ ಅತ್ಯಂತ ಹ್ಯಾಪಿಯಸ್ಟ್ ಮ್ಯಾನ್. ಈ ತರಹದ ಯಾವುದಾದರೂ ಪ್ರಶಸ್ತಿ ಇದ್ದರೆ ಅದು ನನಗೆ ಸಿಗುತ್ತಿತ್ತು. ನನ್ನ ಚಿತ್ರ ಯಾವುದೇ ಅಡೆತಡೆ ಅಥವಾ ತೊಂದರೆಯಿಲ್ಲದೇ ಸುಸೂತ್ರವಾಗಿ ನಡೆಯಿತು" ಎಂದು ಹರ್ಷದಿಂದ ಹೇಳಿಕೊಂಡರು.

ಈ ಹಿಂದೆಲ್ಲಾ ಚಿತ್ರ ಮುಗಿಸಿದಾಗ ರಮೇಶ್ ಇಷ್ಟೊಂದು ಥ್ರಿಲ್ ಆಗಿರುತ್ತಿರಲಿಲ್ಲ. ಈ ಬಾರಿ ರಮೇಶ್ ಸಂಭ್ರಮವನ್ನು ನೋಡಿದರೆ ಈ ಚಿತ್ರದ ಬಗ್ಗೆ ಅವರಿಗೆ ಭಾರೀ ಆತ್ಮವಿಶ್ವಾಸ ಇದ್ದಂತೆ ಕಾಣಿಸುತ್ತದೆ. ಅದಕ್ಕಿಂತ ಮುಖ್ಯವಾಗಿ ಸುಮಾರು ಏಳೆಂಟು ಹೊಸಮುಖಗಳನ್ನು ರಮೇಶ್ ಈ ಚಿತ್ರದ ಮುಖಾಂತರ ಪರಿಚಯಿಸುತ್ತಿದ್ದಾರೆ. ಅಷ್ಟೇ ಅಲ್ಲ, ಮೊನ್ನಿನ ಪತ್ರಿಕಾ ಗೋಷ್ಠಿಯಲ್ಲಿ ಆ ಹೊಸ ಕಲಾವಿದರ ಬಗ್ಗೆ ಪ್ರೋತ್ಸಾಹದ ಮಾತುಗಳನ್ನು ಆಡಿ ಅವರನ್ನು ಪತ್ರಕರ್ತರಿಗೆ ಪರಿಚಯಿಸಿದರು. ಇತ್ತೀಚಿನ ದಿನಗಳಲ್ಲಿ ನಾಯಕ-ನಾಯಕಿಯರನ್ನು ಮಾತ್ರ ಪರಿಚಯಿಸುವ ಪರಿಪಾಠ ಇರುವಾಗ ರಮೇಶ್ ವಿಭಿನ್ನವಾಗಿ ವರ್ತಿಸುವ ಮೂಲಕ ಎಲ್ಲರಿಗೂ ಇಷ್ಟವಾದರು. ■

R B P LANKESH, Kannada Weekly Price Rs. 12/- 28-01-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lo

ಸದ್ದು ಮಾಡದ ಸರ್ಕಸ್



ಗೋಲ್ಡನ್ ಸ್ಟಾರ್ ಗಣೇಶನ 'ಕದ್ದ ಕತೆ'ಯ 'ಸರ್ಕಸ್' ಆಟ ಈ ವಾರ ಬಿಡುಗಡೆಯಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈಗ ಗಣೇಶ್ ಬಗೆಗಿನ ಕ್ರೇಜ್ ಕಡಿಮೆಯಾಗಿರುವುದರಿಂದ ಸಹಜವಾಗಿಯೇ 'ಸರ್ಕಸ್' ಚಿತ್ರದ ಬಗ್ಗೆ ಚಿತ್ರರಂಗದಲ್ಲಿ ಯಾರೆಂದರೆ ಯಾರಿಗೂ ನಿರೀಕ್ಷೆ ಇರಲಿಲ್ಲ.

ಸ್ವತಃ ಗಣೇಶನೇ ಮಾಧ್ಯಮದವರ ಮುಂದೆ "ಇದುವರೆಗೂ ನಾನು ಮಾಡಿರುವ ಚಿತ್ರಗಳಲ್ಲೇ 'ಸರ್ಕಸ್' ಸಿನೆಮಾ ತುಂಬಾ ಅದ್ಭುತವಾಗಿದೆ, ಸಖತ್ ಮಂದರಘುಲ್ಲಾಗಿದೆ..." ಎಂದೆಲ್ಲಾ ಏನೇ ಬಡಾಯಿ ಬಿಟ್ಟರೂ ಯಾರೂ ಗಣೇಶನ ಮಾತನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ.

ಗಣೇಶ ಹೇಳಿದ್ದು ನಿಜಾನಾ?

■ ಅರುಣ್ ಕುಮಾರ್.ಜಿ

ಹೀಗೆ ಸರ್ಕಸ್ ಆರಂಭವಾದಾಗಿನಿಂದ ಬಿಡುಗಡೆಯ ತನಕ ನಾಯಕನಟ ಗಣೇಶ್ ಮತ್ತು ನಿರ್ದೇಶಕ ದಯಾಳ್ ಪುಂಖಾನುಪುಂಖವಾಗಿ ಹೇಳಿದ್ದೆಲ್ಲಾ ನಿಜವಾ? ನೋಡೇಬಿಡೋಣ ಎಂದು ಹೋದರೆ ಗೊತ್ತಾಗೋದು 'ಸರ್ಕಸ್ಸು' ಕೂಡಾ ಠುಸ್ಸು ಎಂದು!

ಗಣೇಶ್ ಈ ಹಿಂದೆ ಹೇಳಿದ್ದಂತೆ ಈ ಚಿತ್ರ ಆತನ ಹಿಂದಿನ ಚಿತ್ರಗಳಿಗಿಂತ ಪಂಡುರು, ಮೆಂಡುರು ಯಾವುದೂ ಅಲ್ಲ. ಗಣೇಶನ ಮಾತನ್ನೇ ಸ್ವಲ್ಪ ಕರೆಕ್ಷನ್ ಮಾಡಿ ಹೇಳುವುದಾದರೆ, 'ಬೊಂಬಾಟ್', 'ಸಂಗಮ'ದಂಥ ಲಡಾಸು ಸಿನೆಮಾಗಳಿಗೆ ಹೋಲಿಸಿದರೆ 'ಸರ್ಕಸ್' ಸುಮಾರಾಗಿದೆ ಅಷ್ಟೆ.

ಎಲ್ಲಾ ರೈಲುಮಯ!

ಸರ್ಕಸ್ ಕತೆಯ ಥ್ರೆಡ್ಡು ತುಂಬಾ ಸಿಂಪಲ್. ನಾಯಕ ಮತ್ತು ಆತನ ನಾಲ್ಕು ಜನ ತರಲೆ ಸ್ನೇಹಿತರು, ಅವರಲ್ಲೊಬ್ಬ ದಡ್ಡ. ಸಮಾಜಸೇವೆಗೆ ಇವರು ಆಯ್ದುಕೊಳ್ಳುವ ದಾರಿ ಘನಘೋರವಾದಂಥದ್ದು. ಗಬ್ಬೆದ್ದಿರುವ ರೈಲ್ವೇ ಸ್ಟೇಷನ್‌ಅನ್ನು ಕ್ಲೀನ್ ಮಾಡಿಸುವ ಉದ್ದೇಶದಿಂದ ಸ್ಟೇಷನ್ ಮಾಸ್ಟರ್‌ಗೆ ಫೋನ್ ಮಾಡಿ "ಮಿನಿಸ್ಟರ್ ಲಾಲೂಪ್ರಸಾದ್ ಯಾದವ್ ಸರ್‌ಪ್ರೈಸ್ ವಿಸಿಟ್ ಕೊಡುತ್ತಿದ್ದಾರೆ" ಎಂದು ಸುಮ್ಮನೇ ಕಾಗೆ ಹಾರಿಸೋದು, ರೈಲ್ವೇ ಇಲಾಖೆಯ ಅಟೆಂಡರನ ಕಣ್ಣಾಮುಚ್ಚಾಲೆ ಆಟದ ಬಗ್ಗೆ ಆತನ ಹೆಂಡತಿಗೆ ಪತ್ರ ಬರೆದು ಫಿಟ್ಟಿಂಗ್ ಇಡೋದು.... ಈ ರೀತಿ 'ಸಮಾಜೋದ್ಧಾರ' ಮಾಡೋದು ಈ ಹುಡುಗರ ಪಾರ್ಟ್ ಟೈಂ ಜಾಬು.

ಈ ಮಧ್ಯೆ ನಾಯಕ ಗಣೇಶನಿಗೆ ಗೊತ್ತಿಲ್ಲದ ಹಾಗೆ ಆತನ ಮೂವರು ಸ್ನೇಹಿತರು ಓಲ್ಡ್ ಮಾಡಲ್ ರೈಲನ್ನು ಓಡಿಸಿ ಗಿನ್ನಿಸ್ ದಾಖಲೆ ನಿರ್ಮಿಸುವ ರೈಲ್ವೇ ಇಲಾಖೆಯ ಐಡಿಯಾವನ್ನು ತಪ್ಪಿಸಲು "ಆ ರೈಲಿನಲ್ಲಿ ಬಾಂಬ್ ಇಡಲಾಗುವುದು" ಎಂದು ಹುಸಿ ಪತ್ರವೊಂದನ್ನು ಬರೆಯುತ್ತಾರೆ. ಆ ಪತ್ರದಲ್ಲೇನಿದೆ ಎಂದು ತಿಳಿಯದಿರುವ ದಡ್ಡ ಸ್ನೇಹಿತ ಆ ಪತ್ರದ ಮೇಲೆ ಗಣೇಶನ ಫ್ರಮ್ ಅಡ್ರಸ್ ಬರೆದು ಪೋಸ್ಟ್ ಮಾಡಿಬಿಡುತ್ತಾನೆ.

ಅಲ್ಲಿಗೆ ಸರ್ಕಸ್ ಆರಂಭವಾಗುತ್ತದೆ.

ಆ ಪತ್ರ ರೈಲಿನಲ್ಲಿ ಮೈಸೂರಿನಿಂದ ಬೆಂಗಳೂರಿಗೆ ತಲುಪುವ ಹೊತ್ತಿಗೆ ಅದನ್ನು ಅಬೇಸ್ ಮಾಡಲು ಈ ಹುಡುಗರು ನಿರ್ಧರಿಸುತ್ತಾರೆ. ರೈಲು ಪ್ರಯಾಣ ಆರಂಭವಾಗುತ್ತದೆ! ಚಲಿಸುತ್ತಿರುವ ರೈಲಿನಲ್ಲಿ ಗಣೇಶನ ಸರ್ಕಸ್ ಕೂಡಾ ಆರಂಭವಾಗುತ್ತದೆ; ಆತನ ಯತ್ನ ವಿಫಲವೂ ಆಗುತ್ತದೆ. ಅಷ್ಟೊತ್ತಿಗೆ ತಿಳಿಯುವ ಆಘಾತಕಾರಿ ವಿಷಯವೇನೆಂದರೆ ಈ ಹುಡುಗರ ಹುಸಿ ಬೆದರಿಕೆಯಂತೆ ನಿಜಕ್ಕೂ ಉಗ್ರಗಾಮಿಗಳು ಆ 'ಗಂಧದ ಗುಡಿ ಎಕ್ಸ್‌ಪ್ರೆಸ್'ನಲ್ಲಿ ಬಾಂಬ್ ಇಡುವ ವಿಚಾರ ಗಣೇಶನಿಗೆ ಗೊತ್ತಾಗುತ್ತದೆ. ಈ ಮಧ್ಯೆ ಒಂದಷ್ಟು ತಿರುವುಗಳು, ನಾಯಕ-ನಾಯಕಿಯ ಲವ್ ಸ್ಟೋರಿಯ ಟ್ರ್ಯಾಕು, ಕಷ್ಟಪಟ್ಟು ಮುಕ್ಕಿದರೂ ನಗು ಬಾರದ ಕಾಮಿಡಿಯ ಟ್ರಿಕ್ಕು, ಭಿಕ್ಷುಕ ವೇಷಧಾರಿ ದಯಾಳ್ ಗಿಮಿಕ್ಕು... ಎಲ್ಲವೂ ನಡೆಯುತ್ತದೆ.

ಅಷ್ಟೊತ್ತಿಗೆ ಈ ಎಲ್ಲಾ ಸರ್ಕಸ್‌ಗೂ ಕಾರಣವಾದ ಹುಸಿ ಪತ್ರವೂ ಇವರ ಕೈಸೇರುತ್ತದೆ, ಗಣೇಶ ತನ್ನ ಬುದ್ಧಿವಂತಿಕೆಯನ್ನು ಬಳಸಿ ತಳ್ಳುವ ಗಾಡಿಯಲ್ಲಿ ಮಗುವೊಂದರ ಕೆಳಗಿರುವ ಬಾಂಬ್‌ಅನ್ನು ಪತ್ತೆ ಹಚ್ಚಿ ಅದನ್ನು ಹುಸಿಗೊಳಿಸುತ್ತಾನೆ.



ಬಾಂಬ್ ಇಟ್ಟ ಉಗ್ರನನ್ನು ಬೆನ್ನಟ್ಟಿ ಹೋಗಿ ಆತನ ಎಲ್ಲ ಸಹಚರರನ್ನೂ ಉಡೀಸ್ ಮಾಡುತ್ತಾನೆ.

ಕೊನೆಗೆ ರೈಲ್ವೇ ಇಲಾಖೆಯ ಮಹತ್ವವನ್ನು ಸಾರುತ್ತಾ 'ಹುಸಿ ಬಾಂಬ್ ಬೆದರಿಕೆಗಳನ್ನು ಮಾಡಬಾರದು' ಎಂಬ ನೀತಿ ಪಾಠದೊಂದಿಗೆ 'ಸರ್ಕಸ್'ಗೆ ಮಂಗಳಂ!

ಇಷ್ಟೆಲ್ಲಾ ನೋಡಿದ ನಂತರ ಪ್ರೇಕ್ಷಕರಿಗೆ 'ಇಷ್ಟೇನಾ ಸರ್ಕಸ್ಸು' ಎಂದೆನಿಸಿದರೆ ಅದಕ್ಕೆ ನಿರ್ದೇಶಕ ದಯಾಳನೇ ದಿಕ್ಕು.

ಒಂದು ವೇಳೆ ಈ ಚಿತ್ರಕ್ಕೆ ಯೋಗರಾಜ್ ಭಟ್ಟರ ಸ್ಪರ್ಶ ಇಲ್ಲದೇ ದಯಾಳ್ ಮಾತ್ರ ನಿಭಾಯಿಸಿದ್ದರೆ 'ಸರ್ಕಸ್' ಮತ್ತೊಂದು ಡಬ್ಬಾ ಚಿತ್ರಗಳ ಸಾಲಿಗೆ ಸೇರುತ್ತಿದ್ದುದರಲ್ಲಿ ಸಂದೇಹ ವಿಲ್ಲ. ಅಲ್ಲಲ್ಲಿ ಭಟ್ಟರ 'ಹೆಚ್ಚುವರಿ ಸಂಭಾಷಣೆ' ಖುಷಿ ಕೊಡುತ್ತದೆ. ಯುವ ಛಾಯಾಗ್ರಾಹಕ ಶೇಖರ್ ಚಂದ್ರನ ಕ್ಯಾಮೆರಾ ವರ್ಕ್ ಬ್ಯೂಟಿಫುಲ್ ಆಗಿದೆ. 'ಗಾಳಿ ಪಟದ' ನಿರ್ಮಾಪಕ ಸೂರ್ಯಪ್ರಕಾಶ್‌ರ ಖಜಾನೆಯಿಂದ ಹೊಡೆದಿಟ್ಟಿದ್ದ ದುಡ್ಡನ್ನು ದಯಾಳ್ ಧಾರಾಳವಾಗೇ ಖರ್ಚು ಮಾಡಿದ್ದಾರೆ. ಆದರೆ, ಐದೂವರೆ ಕೋಟಿ ಖರ್ಚಾಗಿದೆ ಎಂಬುದು ಮಾತ್ರ ಪಕ್ಕಾ ಬಂಡಲ್!

ಅದೇನೆ ಇದ್ದರೂ ಕೊರತೆ ಇರುವುದು ಕತೆಯಲ್ಲೇ. ಎಸ್. ಮಹೇಂದರ್ ಬತ್ತಳಿಕೆಯಲ್ಲಿದ್ದ ಕತೆಯನ್ನು ಕದ್ದ ನಂತರ ಸ್ವಲ್ಪ ಸಾವಧಾನವಾಗಿ ಕುಳಿತು ಅದನ್ನು ಪಾಲಿಷ್ ಮಾಡಿದಿದ್ದರೆ ದಯಾಳ್ ಕೂಡ 'ಯಶಸ್ವಿ ನಿರ್ದೇಶಕ'ನಾಗಬಹುದಿತ್ತು. ಅನ್‌ಫಾರ್ಚುನೇಟ್ಲಿ ಸರ್ಕಸ್‌ನಲ್ಲಿ ಸರಕೇ ಇಲ್ಲದಂತಾಗಿದೆ. ■

ರಿಮೇಕು ಮಾಡ್ತಾರಂತೆ ರಜನಿ!



ಸೂಪರ್‌ಸ್ಟಾರ್ ರಜನೀಕಾಂತ್ ಮತ್ತು ಅವರ ಮನೆಮಂದಿಯೆಲ್ಲಾ ಕೂತು ಚೆನ್ನೈನಲ್ಲೇ 'ಸರ್ಕಸ್' ಸಿನಿಮಾ ನೋಡಿದ್ದಾರೆ. ಅದನ್ನು ಅವರೆಲ್ಲ ಎಷ್ಟು ಮೆಚ್ಚಿದ್ದಾರೆಂದರೆ ಅದನ್ನು ರಜನೀಕಾಂತ್ ತಮ್ಮ ಅಳಿಯ ಧನುಷ್‌ಗೋಸ್ಕರ ತಮಿಳಿನಲ್ಲಿ ರಿಮೇಕ್ ಮಾಡುತ್ತಿದ್ದಾರೆ... ಎಂದೆಲ್ಲಾ ಸ್ವತಃ ದಯಾಳನೇ ಎಲ್ಲೆಂದರಲ್ಲಿ ಢಂಗೂರ ಬಾರಿಸುತ್ತಿದ್ದಾನೆ.

ತಮಿಳಿನಲ್ಲಿ ಇದಕ್ಕಿಂತಲೂ ಚೆಂದನೆಯ ಎಷ್ಟೋ ಥ್ರಿಲ್ಲಿಂಗ್ ಸಿನೆಮಾಗಳು ಈಗಾಗಲೇ ಬಂದುಹೋಗಿವೆ. ತಮಿಳಿನವರು ದಯಾಳನ ಸಿನಿಮಾವನ್ನು ರಿಮೇಕಿಸುವಷ್ಟು ಗತಿಗೆಟ್ಟಿಲ್ಲ. ಹೀಗಾಗಿ ನಿಜಕ್ಕೂ ರಜನಿ ಈ ಸಿನಿಮಾವನ್ನು ತಮಿಳೀಕರಿಸುತ್ತಾರಾ ಅನ್ನೋದೇ ಡೌಟು!

ಹಂಡ್ರೆಡ್ ಡೇಸ್ ಸ್ಕೀಂ

ಈ ದಯಾಳ್ ಎಂಥ ಚಾಲಾಕಿ ಮನುಷ್ಯ ಗೊತ್ತಾ? ಚಿತ್ರ ಆರಂಭವಾದಾಗಲೇ ಚಲಿಸುವ ರೈಲಿನಲ್ಲೇ ಪತ್ರಿಕಾಗೋಷ್ಠಿ ನಡೆಸಿ "ನನ್ನ ಸರ್ಕಸ್ ಸಿನಿಮಾ ಬಿಡುಗಡೆಯಾಗಿ ಹಂಡ್ರೆಡ್ ಡೇಸ್ ಓಡಿದರೆ 50 ಜನ ಪತ್ರಕರ್ತರಿಗೆ ಬ್ಯಾಂಕಾಕ್ ಟೂರ್ ಅರೇಂಜ್ ಮಾಡ್ತೀನಿ" ಎಂದು ಚುಕುಬುಕು ಮಾತಾಡಿದ್ದ.

ಈಗ ಸರ್ಕಸ್ ನೋಡಿದ ಪತ್ರಕರ್ತರಿಗೆ ಅರಿವಾಗಿರುವುದೇನೆಂದರೆ "ಈ ಸಿನಿಮಾ ಹಂಡ್ರೆಡ್ ಡೇಸ್ ಇರಲಿ, ಫಿಫ್ಟಿ ಡೇ ಓಡೋದೂ ಕಷ್ಟ ಕಷ್ಟ" ಅನ್ನೋದು!

ಅವತ್ತು ದಯಾಳ್ ತನ್ನ ಚಿತ್ರವನ್ನು ವಿಮರ್ಶಿಸುವ ಪತ್ರಕರ್ತರ ಕೈ-ಬಾಯಿ ಕಟ್ಟಿ ಹಾಕುವ ಉದ್ದೇಶದಿಂದಲೇ ಆಮಿಷವೊಡ್ಡಿದ್ದ ಅನ್ನೋದರಲ್ಲಿ ಸಂದೇಹವಿಲ್ಲ. ದಯಾಳ್ ತಲೆ ಕೆಳಗೆ, ಕಾಲು ಮೇಲೆ ಮಾಡಿ ಏನೇ 'ಸರ್ಕಸ್' ಮಾಡಿದರೂ ಚಿ ನೂರು ದಿನ ಪೂರೈಸಲ್ಲ ಅನ್ನೋದು ಗ್ಯಾರಂಟಿ.

ಹೀಗಾಗಿ ಹಂಡ್ರೆಡ್ ಡೇಸ್ ಸ್ಕೀಮು, ಬ್ಯಾಂಕಾಕ್ ಟ್ರಿಪ್ಪು.... ಕನಸು ಕಂಡಿದ್ದ ಪತ್ರಕರ್ತರು ಅದನ್ನು ಗಂಟುಮೂಟೆ ಕ ದಯಾಳ್ ಬಿಟ್ಟಿರುವ ರೈಲಿನಡಿ ಇಡಲೇಬೇಕು!

ಅಮಲಿನಲ್ಲೇ ಅಗಲಿದ ರಾಜು ಅನಂತಸ್ವಾಮಿ



"ಬ್ರಹ್ಮ ನಿಂಗೆ ಜೋಡಿಸ್ತೀನಿ ಹೆಂಡ ಮುಟ್ಟದ ಕೈನ...." ಎಂದು ಅವರು ಹಾಡಲು ಶುರು ಹಚ್ಚಿದರೆ, ಕೇಳುಗರು ನಿಜಕ್ಕೂ ಆನಂದದ ಅಮಲಿನಲ್ಲಿ ತೇಲಾಡುತ್ತಿದ್ದರು.

ಆದರೆ ಅದೇ ಅಮಲು ಅವರ ಜೀವವನ್ನೇ ತೆಗೆದುಕೊಂಡಿದೆ.

ಹೌದು, ಗಾಯಕ, ನಟ ರಾಜು ಅನಂತಸ್ವಾಮಿ ಶನಿವಾರ ಮಧ್ಯಾಹ್ನ 12.30ಕ್ಕೆ ಕೊನೆಯುಸಿರೆಳೆದಿದ್ದಾರೆ.

ಸುಗಮ ಸಂಗೀತ ಲೋಕದ ದಿಗ್ಗಜರಾಗಿದ್ದ ಅವರ ತಂದೆ ಮೈಸೂರು ಅನಂತಸ್ವಾಮಿಯವರ ಅಗಲಿಕೆಯ ನಂತರ ಅವರದೇ ಶೈಲಿಯ ಹಾಡುಗಳನ್ನು, ಅಪ್ಪನ ಕಂಠವನ್ನೇ ಹೋಲುತ್ತಿದ್ದ ದನಿಯಲ್ಲಿ ಹಾಡುತ್ತಿದ್ದ ರಾಜು ಅವರ ನಿಧನ ಸುಗಮ ಸಂಗೀತ ಲೋಕವನ್ನು ಮತ್ತಷ್ಟು ಬಡವಾಗಿಸಿದೆ.

ರಾಜು ಅನಂತಸ್ವಾಮಿಯ ಕಂಠದಂತೆ ನೋಡಲು ಕೂಡ ಆತ ಸ್ಫುರದ್ರೂಪಿ. ಹಾಡಲು ನಿಂತರೆ ತನ್ನನ್ನೇ ತಾನು ಮರೆಯುತ್ತಿದ್ದ ರಾಜು ಅದ್ಯಾವ ಘಳಿಗೆಯಲ್ಲಿ ಕುಡಿತಕ್ಕೆ ದಾಸರಾದರೋ? ಬಿಟ್ಟೂಬಿಡದೆ ಕಾಡಿದ ಚಟ ಕಡೆಗೆ ಅವರ ಪ್ರಾಣವನ್ನೇ ತೆಗೆಯುವ ಮೂಲಕ ಅಂತ್ಯಗೊಂಡಿದೆ.

ಮೊದಲಿನಿಂದಲೂ ರಾಜು ಅನಂತಸ್ವಾಮಿ ಚುರುಕು ಸ್ವಭಾವದ ಹುಡುಗ. ತನ್ನ ತಂದೆಯೊಂದಿಗೆ ಹಾಡಲು ಕುಳಿತುಕೊಳ್ಳುತ್ತಿದ್ದ ರಾಜು ಆನಂತರ ತನ್ನ ತಂಗಿ ಸುನೀತಾಳೊಂದಿಗೂ ಬಹಳಷ್ಟು ವರ್ಷ ಕಛೇರಿ ನಡೆಸಿಕೊಡುತ್ತಿದ್ದರು. ಆದರೆ ಯಾವಾಗ ಅವರ ತಂಗಿಯರಾದ ಸುನೀತಾ ಮತ್ತು ಅನಿತಾ ಇಬ್ಬರೂ ಮದುವೆಯಾಗಿ ಅಮೆರಿಕಕ್ಕೆ ಹೊರಟುಹೋದರೋ ಆಗ ರಾಜುವಿನ ಚಟ ಮತ್ತಷ್ಟು ಹೆಚ್ಚಾಯಿತು.

ಸುಗಮ ಸಂಗೀತದಲ್ಲಲ್ಲದೇ ಚಿತ್ರಗಳಲ್ಲಿ ನಟಿಸಲೂ ಆರಂಭಿಸಿದ್ದ ರಾಜು ಹೇಮಂತ್ ಹೆಗಡೆಯ 'ಊಲಾಲಾ', 'ಜಾಕ್‌ಪಾಟ್', 'ರಿಷಿ', 'ಚಿಗುರಿದ ಕನಸು' ಮತ್ತು ಪುನೀತ್ ಜೊತೆ 'ಅಭಿ' ಚಿತ್ರದಲ್ಲೂ ನಟಿಸಿ ಸೈ ಅನ್ನಿಸಿಕೊಂಡಿದ್ದರು. ಹಾಳಾದ ಕುಡಿತ ರಾಜುವನ್ನು ಅಲ್ಲೂ ಬದುಕಲು ಬಿಡಲಿಲ್ಲ. ನಟನೆಯಲ್ಲಿ ಹೆಸರು ಮಾಡಿ ಉತ್ತುಂಗಕ್ಕೇರುವ ಸಮಯದಲ್ಲೇ ಒಮ್ಮೆ ಕುಡಿತದಿಂದ ಅನಾರೋಗ್ಯಕ್ಕೀಡಾದ ರಾಜು ಮತ್ತೆ ನಟನೆಯತ್ತ ಮುಖ ಮಾಡಲಿಲ್ಲ.

ಸದಾ ಕಾಡುತ್ತಿದ್ದ ಅನಾರೋಗ್ಯದ ಜೊ ಕೌಟುಂಬಿಕ ಕಲಹ ರಾಜುವನ್ನು ಮತ್ತಷ್ಟು ಜರ್ಝರಿ ನನ್ನಾಗಿಸಿತ್ತು. ಈತನ ಕುಡಿತದ ಅಭ್ಯಾಸದಿಂದ ಬೇ ಪತ್ನಿ ವಿನಯಾ ಕೂಡಾ ಈತನಿಗೆ ಡೈವೋರ್ಸ್ ನಿ ಈತನ ಮನೆ ಮತ್ತು ಮನದ ಹೊಸ್ತಿಲಿನಿಂದ ಹೊ ಹೋಗಿದ್ದರು.

ಇತ್ತೀಚೆಗೆ ಅವರ ಆರೋಗ್ಯ ಸ್ವಲ್ಪ ಸುಧಾರಿಸಿ ಆದರೆ ಚಟಗಳು ಮಾತ್ರ ಬಿಟ್ಟಿರಲಿಲ್ಲ. ವೈದ್ಯ ಮತ್ತೆಂದೂ ಕುಡಿಯಬಾರದು ಎಂದು ತಾಕೀ ಮಾಡಿದ್ದರು. ಸ್ನೇಹಿತರೂ ಸಹ ಕುಡಿಯದಂತೆ ಮ ವೊಲಿಸುತ್ತಿದ್ದರು. ಆದರೆ ಎಲ್ಲ ಕುಡುಕರಂತೆ "ಇನ್ನೆಂದ ಕುಡಿಯಲ್ಲ ಬಿಡಿ" ಎಂದು ಭರವಸೆ ಕೊಡುತ್ತಿ ರಾಜು ಯಾವತ್ತೂ ತಾವು ಆಡಿದ ಮಾತನ್ನು ಉಳಿ ಕೊಳ್ಳಲಿಲ್ಲ.

ಮೈಸೂರು ಅನಂತಸ್ವಾಮಿಯವರ ಹಾಡುಗಳನ ರೀ ರೆಕಾರ್ಡ್ ಮಾಡಿಕೊಡಬೇಕೆಂದು ಕನ್ನಡ ಮ ಸಂಸ್ಕೃತಿ ಇಲಾಖೆಯು ರಾಜು ಅನಂತಸ್ವಾಮಿ ಹೆಗಲ ದೊಡ್ಡ ಜವಾಬ್ದಾರಿಯನ್ನು ನೀಡಿತ್ತು. ಅದೀಗ 7 ಪರ್ಸೆಂಟ್ ಮಾತ್ರ ಮುಗಿದು ಅಪೂರ್ಣಗೊಂಡಿ ಆದರೆ ರಾಜು ಮಾತ್ರ ತನ್ನ ಬದುಕನ್ನು ಪೂರ್ಣಗೊ ಹೋಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, B